ಹೈದ್ರಾಬಾದ ಕರ್ನಾಟಕ

ತಳ ಸಮುದಾಯದ ಶಿಲ್ಪಕಲಾವಿದರು

ರ್ನಾಟಕ ಶಿಲ್ಪಕಲಾ ಅಕಾಡೆಮಿಯ 2015-16ನೇ ಸಾಲಿನ ವಿಶೇಷ ಘಟಕ ಯೋಜನೆಯಡಿಯಲ್ಲಿ
ಸಂಶೋಧನಾ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ಡಾ. ಪರಶುರಾಮ ಪಿ.

ಮಾರ್ಗದರ್ಶಕರು

ಕೆ.ವಿ. ಸುಬ್ರಹ್ಮಣ್ಯಂ

ದೃಶ್ಯಕಲಾ ಇತಿಹಾಸಕಾರರು ಮತ್ತು ವಿಮರ್ಶಕರು, ಬೆಂಗಳೂರು







ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು

ಹೈದ್ರಾಬಾದ ಕರ್ನಾಟಕ ತಳ ಸಮುದಾಯದ ಶಿಲ್ಪಕಲಾವಿದರು

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೨೦೧೫-೧೬ನೇ ಸಾಲಿನ ವಿಶೇಷ ಘಟಕ ಯೋಜನೆಯಡಿಯಲ್ಲಿ
ಸಂಶೋಧನಾ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ಡಾ.ಪರಶುರಾಮ. ಪಿ.

ಮಾರ್ಗದರ್ಶಕರು

ಕೆ.ವಿ.ಸುಬ್ರಹ್ಮಣ್ಯಂ

ದೃಶ್ಯಕಲಾ ಇತಿಹಾಸಕಾರರು ಮತ್ತು ವಿಮರ್ಶಕರು

ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ ಮೇಲ್ಮನೆ, ಚಾಲುಕ್ಯ ವಿಭಾಗ

ಜೆ.ಸಿ.ರಸ್ತೆ, ಬೆಂಗಳೂರು

ಪರಿವಿಡಿ

ಅಧ್ಯಾಯ-೧

ಕಲೆ ಮತ್ತು ತಳ ಸಮುದಾಯಗಳು: ಅಧ್ಯಯನದ ಉದ್ದೇಶ ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರಸ್ತಾವನೆ:

ದಕ್ಷಿಣ ಭಾರತದ ಇತಿಹಾಸದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶವು ಶಿಲ್ಪ, ವಾಸ್ತುಶಿಲ್ಪ ಮತ್ತು ಚಿತ್ರಕಲೆಯಲ್ಲಿ ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ಹೊಂದಿದೆ. ಈ ಪ್ರದೇಶದಲ್ಲಿ ರಾಷ್ಟ್ರಕೂಟರು, ಚಾಲುಕ್ಯರು, ಬಹಮನಿ ಅರಸರ ರಾಜ ಮನೆತನಗಳು ಹಾಗೂ ಜೈನ, ವೀರಶೈವ ಧರ್ಮಗಳ ಸಾಂಸ್ಕೃತಿಕ ಪರಂಪರೆಯನ್ನು ಕಾಣುತ್ತೇವೆ.

ಹೈದ್ರಾಬಾದ-ಕರ್ನಾಟಕ ಪ್ರದೇಶದ ಶೈಕ್ಷಣಿಕ ಇತಿಹಾಸವನ್ನು ತಿಳಿಸುವ ಸ್ಥಳವೆಂದರೆ, ಇಂದಿನ ಚಿತ್ತಾಪುರ ತಾಲೂಕಿನ ನಾಗಾಯಿ, ಹಾಳುಬಿದ್ದ ಈ ಊರಲ್ಲಿ ರಾಷ್ಟ್ರಕೂಟ ಅರಸರ ಗತವೈಭವ ಸಾರುವ ಅನೇಕ ಶಿಲಾಶಾಸನಗಳು ಮತ್ತು ಶಿಲ್ಪಗಳು ದೊರೆತಿವೆ. ಇದರಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ಲಭ್ಯವಾಗಿವೆ. ನಾಗಾಯಿ ವಿಶ್ವವಿದ್ಯಾಲಯ ಮಟ್ಟದ ಜ್ಞಾನ ಪ್ರಸಾರದ

ಸಂಸ್ಥೆಯಾಗಿತ್ತು. ನಾಗಾಯಿ ೮ ನೆಯ ಶತಮಾನದ ಉತ್ತರಾರ್ಧ ಮತ್ತು ೯ನೆಯ ಶತಮಾನದ ಪೂರ್ವಾರ್ಧದಲ್ಲಿ ಉತ್ಕೃಷ್ಟ ಶಿಕ್ಷಣ ಸಂಸ್ಥೆಯಾಗಿತ್ತೆಂದು ತಿಳಿದುಬರುತ್ತದೆ.

ಸಂಪ್ರದಾಯ ಮತ್ತು ಸಮಕಾಲೀನ ಪ್ರಜ್ಞೆಯೊಂದಿಗೆ ಹೈದ್ರಾಬಾದ-ಕರ್ನಾಟಕ ಪ್ರದೇಶವು ಚಿತ್ರ-ಶಿಲ್ಪ ಮತ್ತು ವಾಸ್ತುಶಿಲ್ಪಗಳಲ್ಲಿ ತನ್ನದೇ ಆದ ನೆಲದ ಕಲ್ಪನೆ ನಿರೂಪಿಸಿಕೊಂಡಿದೆ. ಹಲವಾರು ಕ್ರಾಂತಿ, ದಾಳಿಗಳ ಪ್ರಭಾವಗಳಿಂದ ಬರಗಾಲ, ಬಡತನ, ಎದುರಿಸುತ್ತ ನಿರಂತರವಾಗಿ ತನ್ನ ನೋವನ್ನು ಚಿತ್ರಕಲೆ, ಶಿಲ್ಪ ಮತ್ತು ವಾಸ್ತುಕಲೆಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಹಲವಾರು ಚಿತ್ರ-ಶಿಲ್ಪಕಲಾಕೃತಿಗಳಿಗೆ ಶಾಶ್ವತವಾಗಿ ಯಾವುದೇ ರೀತಿಯ ಪೋಷಣೆ ಸಿಗದೇ ನೂರಾರು ರೀತಿಯ ಅನಾಹುತಗಳಿಗೆ ತುತ್ತಾಗಿ ಅಳಿದುಳಿದ ಕಲಾಕೇಂದ್ರಗಳು ಈಗಲೂ ನೋಡಲು ಸಿಗುತ್ತವೆ. ಇವುಗಳಲ್ಲಿ ಹಂಪಿ, ಸನ್ನತಿ, ಬೀದರ, ಬಸವಕಲ್ಯಾಣ, ಇಟಗಿ, ಕಾಳಗಿ, ಜಲಸಂಗಿ, ಸಿರಿವಾಳ, ಸುರಪುರ, ಬಳಿಚಕ್ರ, ರಾಯಚೂರು, ದೇವದುರ್ಗ, ಕಿನ್ನಾಳ, ಆನೆಗೊಂದಿ, ಐವೂರು, ಕಿರಣಗಿ, ಮಣ್ಣೂರು, ಮಳಖೇಡ, ಹರಸೂರದಂತಹ ಹಲವಾರು ಗ್ರಾಮಗಳು ಒಂದಾನೊಂದು ಕಾಲಕ್ಕೆ ಮೆರೆದ ಐತಿಹಾಸಿಕ ಕಲಾಕೇಂದ್ರಗಳಾಗಿದ್ದವು. ರಾಷ್ಟ್ರಕೂಟರ, ಹೊಯ್ಸಳರ, ಜೈನ, ಶೈವ, ಮುಸ್ಲಿಂರ ವಿವಿಧ ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ, ಜೀವನದ ಬೆಳವಣಿಗೆಗಳ ವಿಕಾಸವನ್ನು ಅಳಿದುಳಿದ ಚಿತ್ರ-ಶಿಲ್ಪಗಳಿಂದ ತಿಳಿಯಬಹುದಾಗಿದೆ.

ವಚನ ಸಾಹಿತ್ಯದ ಮೂಲಕ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಆಧ್ಯಾತ್ಮಿಕ ಇತ್ಯಾದಿ ಕ್ರಾಂತಿಗಳನ್ನು ಕೈಗೊಂಡು ರಾಷ್ಟ್ರಕ್ಕೆ ಮತ್ತು ಮನುಕುಲಕ್ಕೆ ಸರ್ವವಿಧದಿಂದಲೂ ಸಮಾನತೆಯನ್ನು ಬೋಧಿಸಿದ ಬಸವಾದಿ ಶರಣರ, ದಾಸ ಸಾಹಿತ್ಯದ ಮೂಲಕ ಸಮಗ್ರ ಜೀವನ ದರ್ಶನ ಮಾಡಿಸಿ ಆಧಾತ್ಮ ಬೋಧಿಸಿದ ದಾಸವರೇಣ್ಯರ ಸೂಫಿ-ಸಂತರ ಮತ್ತು ಉತ್ತಮ ಆಡಳಿತ ನಡೆಸಿ ಇತಿಹಾಸ ಸೃಷ್ಟಿಸಿದ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರಂತಹ ಸಾಮ್ರಾಟರು ಆಳಿದ ನಾಡೆನಿಸಿದ ಹೈದ್ರಾಬಾದ ಕರ್ನಾಟಕ ಎಂಬುದು ಇಂದಿನ ಕರ್ನಾಟಕ ರಾಜ್ಯದ ಬೀದರ, ಕಲಬುರಗಿ, ಯಾದಗಿರ, ರಾಯಚೂರ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಿಂದ ಕೂಡಿದ ಪ್ರದೇಶ. ಇದು

೧೯೪೮ ರಿಂದ ಭಾರತ ಸರಕಾರದ ಒಕ್ಕೂಟದಲ್ಲಿ ಸೇರುವರೆಗೆ ನಿಜಾಮರ ಆಡಳಿತದಲ್ಲಿದ್ದ ಭಾಗವಾಗಿತ್ತು. ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ಸೇರಿದ ಈ ಜಿಲ್ಲೆಗಳು ಸದಾ ಬರದಿಂದ ತತ್ತರಿಸುತ್ತಿದ್ದರೂ ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ನಿರಂತರವಾದ ಹಸಿರನ್ನು ತನ್ನೊಡಲೊಳಗಿಟ್ಟುಕೊಂಡಿದೆ. ಈ ಪ್ರದೇಶದಲ್ಲಿ ಹಿಂದೆ ಆಗಿ ಹೋದ ಶರಣರು-ದಾಸರು, ತತ್ವಪದಕಾರರು, ಚಿತ್ರ-ಶಿಲ್ಪಕಲಾವಿದರು ಭವ್ಯ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ.

ಹೈದ್ರಾಬಾದ ಕರ್ನಾಟಕ ಪ್ರದೇಶದ ಶಿಲ್ಪಕಲಾ ಪರಂಪರೆಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆದುಕೊಂಡು ಬಂದದ್ದು, ತಳ ಸಮುದಾಯದ ವರ್ಗಗಳಲ್ಲಿ ತಮ್ಮ ವೃತ್ತಿ ವೈವಿಧ್ಯತೆಗಳಿಂದ ಬಡಿಗ, ಕಂಬಾರ, ಕುಂಬಾರ, ಚಮ್ಮಾರ, ಕೃಷಿಕ, ನೇಕಾರರು ತಮ್ಮ ಮಣ್ಣಿನ ಸಂಬಂಧಗಳಿಗೆ ಕುಟುಂಬ ಜೀವನಗಳಿಗೆ ಪರಿಶುದ್ಧ ಮನಸ್ಸಿನಿಂದ ಕ್ರಿಯಾಶೀಲತೆಗಳಿಂದ ಬದುಕನ್ನು ಕಲಾತ್ಮಕವಾಗಿ ರೂಪಿಸಿಕೊಂಡಿದ್ದಾರೆ. ಮೂಲತಃ ಶ್ರಮ ಜೀವಿಗಳಾದ ಈ ವರ್ಗದ ಜನ ತಮ್ಮ ದುಡಿಮೆಯ ಮಧ್ಯದಲ್ಲಿ ಶ್ರಮ ಪರಿಹಾರಕ್ಕಾಗಿ ರಚಿಸಿಕೊಂಡು ಬಂದ ಶಿಲ್ಪಸೃಷ್ಟಿ ಅಪಾರವಾಗಿದೆ. ಜೋಕುಮಾರ ಶಿಲ್ಪ, ಗುಳ್ಳವ್ವನ ಶಿಲ್ಪ, ಗೊಗ್ಗವ್ವನ ಶಿಲ್ಪ, ಬೀಸುವ ಕಲ್ಲು, ಗಣೇಶನ ಶಿಲ್ಪ, ಮಣ್ಣೆತ್ತಿನ ಶಿಲ್ಪಗಳು, ಜೇಡಿಮಣ್ಣಿನ ಶಿಲ್ಪಗಳು, ದೇವಿ ಶಿಲ್ಪಗಳು, ದೇವರ ಪಲ್ಲಕ್ಕಿಯಲ್ಲಿನ ಶಿಲ್ಪಗಳು, ಬಾಗಿಲುವಾಡಗಳಲ್ಲಿನ ಶಿಲ್ಪಗಳು, ಕೀಲು ಕುದುರೆ ಶಿಲ್ಪಗಳು, ಚೌಡಮ್ಮನ ಶಿಲ್ಪಗಳು, ಮದ್ದಿನ ಹುಲಿಯ ಶಿಲ್ಪಗಳು, ಕಿಸಗಾಲು ಗೊಂಬೆ ಶಿಲ್ಪಗಳು, ಗಾರುಡಿಕೊಂಬೆ ಶಿಲ್ಪಗಳು, ಗಾಜರಕೋಟದ ಶಿಲ್ಪಗಳು, ಕಿನ್ನಾಳ ಶಿಲ್ಪಗಳು, ಮುಖವಾಡ ಶಿಲ್ಪಗಳು, ಬಿದರಿ ಕರಕುಶಲ ವಸ್ತುಗಳು, ರಾಶಿ ಹುಲು ಸಾಗಿಸುವ ಬೂದಗಶಿಲ್ಪ, ಹೋಳಿ ಹಬ್ಬದ ಕಾಮಣ್ಣ-ರತಿಶಿಲ್ಪಗಳು, ಶೀಗಿ, ಗೌರಿ ಮೂರ್ತಿ ಶಿಲ್ಪಗಳು, ಜೋಕುಮಾರ ಶಿಲ್ಪ, ಗಣೇಶನ ಶಿಲ್ಪ, ನಾಗಶಿಲ್ಪಗಳು ಹೀಗೆ ಜನಪದ ಪ್ರಕಾರದ ಯಾವ ಶಿಲ್ಪಗಳನ್ನು ಹೆಸರಿಸಿದರೂ ಸಾಕು, ಇವೆಲ್ಲ ತಳ ಸಮುದಾಯ ವರ್ಗದ ಸೃಷ್ಟಿ ಎನ್ನುವುದು ಸ್ಪಷ್ಟವಾಗುತ್ತದೆ.

ತಳ ಸಮುದಾಯ ವರ್ಗದ ಜನರ ಮಧ್ಯ ಬೆಳೆದು ಬಂದ ಜನಪದ ಶಿಲ್ಪಗಳ ಪ್ರಕಾರಗಳನ್ನು ಇನ್ನುಳಿದ ವರ್ಗದ ಜನ ಅಭಿಮಾನದಿಂದ ಬೆಳೆಸಿಕೊಂಡು, ಅದರಲ್ಲಿ ಅಭಿರುಚಿ ಮೂಡಿಸಿಕೊಂಡು ಬಂದುದು ಅಷ್ಟೇ ಮುಖ್ಯ ಇದರಿಂದಾಗಿ ಒಬ್ಬನ ಸೃಷ್ಟಿ ಸಮಷ್ಟಿಯಾಗುವಂತಾಯಿತು.

ಬೇಟೆಯಾಡುವ ದೃಶ್ಯ, ವ್ಯವಸಾಯ, ಹಸಿವು, ನೋವು, ನಿರಾಶೆ ಹೀಗೆ ಹಲವು ಸಂಗತಿಗಳನ್ನು ತಿಳಿಸುವ ಚಿತ್ರ–ಶಿಲ್ಪಗಳಿಂದ ದಲಿತ ಸಂವೇದನೆಯ ಪರಿಕಲ್ಪನೆ ನಮಗೆ ಉಂಟಾಗುತ್ತದೆ. ದಲಿತ (ತಳ ಸಮುದಾಯ) ಎಂಬ ಪದವನ್ನು ಯಾವುದೇ ಸೀಮಿತ ವಲಯದ ಜಾತಿ ವಿಶ್ಲೇಷಣೆ ಮಾಡುವ ಕಾರ್ಯವಲ್ಲ. ಅದರ ವ್ಯಾಪ್ತಿ ಮಾನವನ ಬದುಕಿನ ತೊಳಲಾಟಗಳ ಸಾಂದರ್ಭಿಕ ಸನ್ನಿವೇಶಗಳಿಗೆ ಅನುಗುಣವಾಗಿ ದಲಿತಪ್ರಜ್ಞೆ ಮೂಡುತ್ತದೆ. ಯಾವುದೇ ಸಮುದಾಯವಿರಲಿ ಅದರಲ್ಲಿ ನೋವಿನ ಆಕ್ರಂದನವನ್ನು ಪ್ರತಿಬಿಂಬಿಸಿದರೆ ಅದು ದಲಿತ ಸಂವೇದನೆಯನ್ನು ಪ್ರತಿಪಾದಿಸುತ್ತದೆ. ಸಾಹಿತ್ಯ ವಲಯದಲ್ಲಿ ದಲಿತರ ಚಳುವಳಿಯ ಭಾಗವಾಗಿ ಬಂಡಾಯತ್ವ ಹುಟ್ಟಿಕೊಂಡು ತನ್ನ ಸ್ವರೂಪವನ್ನು ಹೇಗೆ ಪಡೆದುಕೊಂಡಿತು. ಹಾಗೆಯೇ ದೃಶ್ಯಕಲಾ ಕ್ಷೇತ್ರದಲ್ಲೂ ಸಹ ಅನೇಕ ಚಿತ್ರ–ಶಿಲ್ಪಕಲಾ ಕೃತಿಗಳಲ್ಲಿ ದಲಿತ ಸಂವೇದನಾನುಭವನ್ನು ನೀಡುವ ಕಲಾಕೃತಿಗಳು ರಚನೆಗಳು ಒಳಗೊಂಡಿವೆ.[1] ಆದಿಮಾನವನ ಪ್ರಾಗೈತಿಹಾಸಿಕ ಕಾಲದ ಚಿತ್ರಕಲೆಯಿಂದ ಇಂದಿನ ಪ್ರಸ್ತುತ ಸಮಕಾಲೀನ ದೃಶ್ಯಕಲೆಯವರೆಗೂ ಮುಂದುವರೆದಿದೆ. ಅದನ್ನು ಪ್ರತ್ಯೇಕ ವಿಭಾಗವನ್ನಾಗಿ ವಿಶ್ಲೇಷಿಸುವ, ವಿಮರ್ಶಿಸುವ ಕೆಲಸ ನಿರ್ವಹಿಸಬೇಕಾಗಿದೆ.

ಅಧ್ಯಯನದ ಉದ್ದೇಶ:

ಹೈದ್ರಾಬಾದ ಕರ್ನಾಟಕವು ಸಾಹಿತ್ಯ, ಸಂಸ್ಕೃತಿ, ಜಾನಪದ, ಚಿತ್ರ–ಶಿಲ್ಪಕಲೆಗಳಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದೆ. ಇಲ್ಲಿಯ ಕಲೆ, ಜಾನಪದ, ಇತಿಹಾಸ, ಪುರಾತತ್ವ, ದೃಶ್ಯಕಲೆ,

1 ದೃಶ್ಯಬೆಳಕು ತ್ರೈಮಾಸಿಕ ಪತ್ರಿಕೆ, ಲೇ: ಬಸವರಾಜ ಕಲೆಗಾರ, ಪು.ಸಂ. ೧೮

ಇವೆಲ್ಲಾ ಅಧ್ಯಯನ ಯೋಗ್ಯವಾಗಿವೆ. ಇಲ್ಲಿನ ದೃಶ್ಯಕಲಾ ಸಂಸ್ಕೃತಿ ವಿಶಿಷ್ಟವಾದದ್ದು. ಹೈದ್ರಾಬಾದ ಕರ್ನಾಟಕದ ಜನರ ಬದುಕು ಹೋರಾಟಮಯವಾದುದು ಅಷ್ಟೇ ಅಲ್ಲ, ವರ್ಣರಂಜಿತವಾದುದು ಕೂಡ. ನಾಡಿನ ಸಾಹಿತ್ಯ, ಸಂಸ್ಕೃತಿ ಮತ್ತು ದೃಶ್ಯಕಲೆ ಇವುಗಳಿಗೆಲ್ಲಾ ಇಲ್ಲಿಯ ಜನ ನೀಡಿರುವ ಕೊಡುಗೆ ಅಪೂರ್ವವಾದುದು. ಈ ಭಾಗದಲ್ಲಿ ಹಲವಾರು ತಳ ಸಮುದಾಯದ ಕಲಾವಿದರು ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನೃತ್ಯ, ನಾಟಕ, ತತ್ವಪದಕಾರರು, ಲಾವಣಿಕಾರರು, ಶಾಹಿರರು, ಸಣ್ಣಾಟ, ದೊಡ್ಡಾಟ, ಕವಿ-ಕಲಾವಿದರು ಈ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಈ ಭಾಗದ ಕೆಲವು ತಳ ಸಮುದಾಯಗಳ ಸಾಂಸ್ಕೃತಿಕ ಸಂಗತಿಗಳು ಅತ್ಯಂತ ಕೂತುಹಲಕಾರಿಯಾಗಿವೆ. ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟರೂ ಕೂಡಾ ಇಂದಿನವರೆಗೂ ತನ್ನತನವನ್ನು ಉಳಿಸಿಕೊಂಡು ಬಂದಿರುವ ಇಲ್ಲಿಯ ಜನ, ಅವರ ಸಂಸ್ಕೃತಿ, ಕಲೆ ಇವೆಲ್ಲಾ ದಾಖಲಾಗುವುದು ಅಗತ್ಯ. ತಳ ಸಮುದಾಯದ ಅನೇಕ ಕಲಾ ಪ್ರಕಾರಗಳು ಮರೆಯಾಗುತ್ತಿವೆ. ಈ ಸಂದರ್ಭದಲ್ಲಿ ಈ ಭಾಗದ ತಳಸಮುದಾಯದ ಶಿಲ್ಪಕಲಾ ಪರಂಪರೆಯನ್ನು ದಾಖಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೆ ನಡೆದ ಅಧ್ಯಯನಗಳು.

ಹೈದ್ರಾಬಾದ-ಕರ್ನಾಟಕ ಪ್ರದೇಶದ ಶಿಲ್ಪಕಲಾ ಕ್ಷೇತ್ರದಲಿ ತಳಸಮುದಾಯದ ಶಿಲ್ಪಕಲಾವಿದರು ಕುರಿತು ಅಧ್ಯಯನಗಳು ಸಾಕಷ್ಟು ನಡೆದಿಲ್ಲ. ಕೆಲವು ವಿದ್ವಾಂಸರು ವೈಯಕ್ತಿಕ ನೆಲೆಯಲ್ಲಿ ಬಿಡಿ ಲೇಖನಗಳನ್ನು ರಚಿಸಿದ್ದುಂಟು. ಆದರೆ ಸಮಗ್ರವಾಗಿ ಮತ್ತು ಸಮಪರ್ಕವಾಗಿ ಈ ನಿಟ್ಟಿನಲ್ಲಿ ಅಧ್ಯಯನ, ಸಂಶೋಧನೆಗಳು ನಡೆದು, ಅವು ದಾಖಲಾಗುವುದು ಅಗತ್ಯವಾಗಿದೆ.

ಇದುವರೆಗೆ ತಳಸಮುದಾಯದ ಶಿಲ್ಪಕಲಾ ಪರಂಪರೆಯ ಕುರಿತು ಹೊರ ಬಂದಿರುವ ಸಂಶೋಧನ ಪ್ರಬಂಧಗಳು, ಗ್ರಂಥಗಳು, ಕ್ಯಾಟಲಾಗ್‌ಗಳು ಮತ್ತು ಲೇಖನಗಳ ಕುರಿತು ಮಾಹಿತಿಯನ್ನು ಈ ಕೆಳಗಿನಂತೆ ಒದಗಿಸಲಾಗಿದೆ.

ಸಂಶೋಧನಾ ಪ್ರಬಂಧಗಳು:

ತಳಸಮುದಾಯದ ಶಿಲ್ಪಕಲಾ ಪರಂಪರೆ ಕುರಿತು ಪ್ರತ್ಯೇಕವಾಗಿ ಯಾವುದೇ ಸಂಶೋಧನಾ ಪ್ರಬಂಧಗಳು ಮಂಡನೆಯಾಗಿಲ್ಲ. ಆದರೆ ತಳಸಮುದಾಯಕ್ಕೆ ಸೇರಿದ ಖ್ಯಾತ ಶಿಲ್ಪಕಲಾವಿದ ದಿ.ಧನಂಜಯ ಶಿಲ್ಪಿಯವರ ಕುರಿತು ಸೂರ್ಯಕಾಂತ ಮಂಟಗಿ ಅವರು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಮಹಾ ಪ್ರಬಂಧವನ್ನು ಸಲ್ಲಿಸಿದ್ದಾರೆ. ಈ ಪ್ರಬಂಧದಲ್ಲಿ ಧನಂಜಯ ಶಿಲ್ಪಿ ಅವರು ರಚಿಸಿದ ವಿವಿಧ ಮಾಧ್ಯಮದ ಶಿಲ್ಪಕಲಾಕೃತಿಗಳ ಕುರಿತು ಮತ್ತು ಅವರ ವೈಯಕ್ತಿಕ ಪರಿಚಯವನ್ನು ಮಾಡಿಕೊಡಲಾಗಿದೆ. ಇದೇ ವಿಷಯವಾಗಿ ಜಗನ್ನಾಥ ಜಕ್ಕೆಪಲ್ಲಿ ಅವರು ತಮ್ಮ ಸ್ನಾತಕೋತ್ತರ ಪದವಿಯ ಅವಶ್ಯಕತೆಗಾಗಿ ಎಂ.ಎಂ.ಕೆ ಕಾಲೇಜ್ ಆಪ್ ವಿಜ್ಯುವಲ್ ಆರ್ಟಗೆ ಲಘು ಸಂಶೋಧನ ಪ್ರಬಂಧವನ್ನು ಸಲ್ಲಿಸಿದ್ದಾರೆ.

ಡಾ.ಶಿವಾನಂದ ಎಚ್ ಬಂಟನೂರ್ ಅವರ ಕರ್ನಾಟಕ ಜನಪದ ಶಿಲ್ಪಕಲೆ ಅಧ್ಯಯನ(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು, ಉತ್ತರ ಕರ್ನಾಟಕದಲ್ಲಿರುವ ವಿವಿಧ ಪ್ರಕಾರದ ಜನಪದ ಶಿಲ್ಪಗಳ ಕುರಿತು ಸಾಕಷ್ಟು ವಿವರಣೆ ನೀಡಿದ್ದಾರೆ. ಡಾ.ಎ.ವಿ.ಪಾಟೀಲರ ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ ಮತ್ತು ವಿಧಿಕ್ರಿಯೆ ಎಂಬ ಅಪ್ರಕಟಿತ ಮಹಾಪ್ರಬಂಧದಲ್ಲಿ ಅನೇಕ ಗ್ರಾಮದೇವತಾ ಶಿಲ್ಪಗಳ ರಚನೆ, ಆಚರಣೆ ಮತ್ತು ವಿಧಿಕ್ರಿಯೆಗಳ ಬಗ್ಗೆ ವಿವರಣೆ ಇದೆ. ಡಾ.ಸಿದ್ದಲಿಂಗಯ್ಯ ಅವರ 'ಗ್ರಾಮ ದೇವತೆಗಳು' ಎಂಬ ಮಹಾಪ್ರಬಂಧದಲ್ಲಿ ನೂರಾರು ಗ್ರಾಮ ದೇವತೆಗಳ ಹುಟ್ಟು ಅವುಗಳ ವ್ಯಾಪ್ತಿ ಮತ್ತು ಸ್ಥಾನ, ಮಹತ್ವ ಇತ್ಯಾದಿ ವಿಷಯಗಳನ್ನು ವಿಸ್ತಾರವಾಗಿ ಚರ್ಚಿಸಲಾಗಿದೆ. ಡಾ.ಎಸ್.ಸಿ.ಪಾಟೀಲರವರ 'ಕರ್ನಾಟಕ ಜನಪದ ಚಿತ್ರಕಲೆ' ಮಹಾಪ್ರಬಂಧದಲ್ಲಿ ಜನಪದ ಚಿತ್ರಕಲೆಯನ್ನು ಅಧ್ಯಯನ ಮಾಡುವಾಗ ಪ್ರಾಸಂಗಿಕವಾಗಿ ಜನಪದ ಶಿಲ್ಪಕಲೆಯ ಬಗ್ಗೆಯೂ ಸಾಕಷ್ಟು ವಿಷಯಗಳನ್ನು ಹೇಳಲಾಗಿದೆ. ಡಾ.ಚೆನ್ನಣ್ಣ ವಾಲೀಕಾರರವರ 'ಹೈದ್ರಾಬಾದ ಕರ್ನಾಟಕ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ' ಮಹಾಪ್ರಬಂಧದಲ್ಲಿ ಸ್ತ್ರೀ ಗ್ರಾಮದೇವತೆಗಳ

ಕುರಿತು ಹಲವಾರು ವಿಷಯಗಳ ಚರ್ಚೆಯಿದೆ. ದೇವತಾ ಶಿಲ್ಪಗಳ ರಚನೆ, ಮಾಧ್ಯಮ, ವೈಶಿಷ್ಟ್ಯ, ರಚನಾಕಾರರು ಇತ್ಯಾದಿ ವಿಷಯಗಳ ವಿವರಣೆಯೂ ಇದರಲ್ಲಿದೆ.

ಗ್ರಂಥಗಳು:

ಹೈದ್ರಾಬಾದ ಕರ್ನಾಟಕ ಪ್ರದೇಶದ ತಳಸಮುದಾಯದ ಶಿಲ್ಪಕಲಾವಿದರ ಕುರಿತಾಗಿ ಇದುವರೆಗೆ ಸಮಗ್ರವಾಗಿ ಅಧ್ಯಯನಗಳು ನಡೆದಿರುವುದು ಅಪರೂಪ. ಆದರೆ ಅಲ್ಲಲ್ಲಿ ಕೆಲವು ಸಣ್ಣಪುಟ್ಟ ಬಿಡಿ ಲೇಖನಗಳು, ಪುಸ್ತಕಗಳು, ಪ್ರಕಟಣೆಗೊಂಡಿವೆಯಾದರೂ ಅವುಗಳಲ್ಲಿ ತಳ ಸಮುದಾಯದ ಶಿಲ್ಪಕಲಾ ಪರಂಪರೆ ಮತ್ತು ಶಿಲ್ಪಕಲಾವಿದರ ಕುರಿತು ಸಮಗ್ರವಾದ ದೃಶ್ಯಾತ್ಮಕ ಅಧ್ಯಯನ ಮಾಡಿರುವುದಿಲ್ಲ.

ಇದುವರೆಗೂ ನಡೆದ ಸಂಶೋಧನೆಗಳಲ್ಲಿ ಸಂಶೋಧಕರು, ತಳಸಮುದಾಯಗಳ ಆಚರಣೆ, ಹಾಡು, ಒಗಟು, ಗಾದೆ, ಸಂಪ್ರದಾಯ, ಉಡುಗೆ–ತೊಡುಗೆ, ಸಾಹಿತ್ಯ ಹಾಗೂ ಜನಪದ ಪ್ರದರ್ಶನ ಕಲೆಗಳಾದ ದೊಡ್ಡಾಟ, ಬಯಲಾಟ, ಗೊಂಬೆಯಾಟದ ಕಲೆಗಳ ಕುರಿತು ಅಧ್ಯಯನ ಮಾಡಿದ್ದಾರೆ. ಅದಲ್ಲದೇ ಹಬ್ಬ ಹರಿದಿನ, ಜಾತ್ರೆ, ಉತ್ಸವಗಳು ಹಾಗೂ ಅವುಗಳ ಆಚರಣೆಗಳು, ಹಿನ್ನೆಲೆ, ನಂಬಿಕೆಗಳ ಕುರಿತು ಸಾಕಷ್ಟು ಅಧ್ಯಯನ ಮಾಡಿದ್ದಾರೆ.

ಆದರೆ ತಳಸಮುದಾಯದ ದೃಶ್ಯಕಲೆಯ ಬಗ್ಗೆ ಅದರಲ್ಲೂ ಶಿಲ್ಪಕಲೆಯ ಕುರಿತು ಅದರ ವಿವಿಧ ಮಾದ್ಯಮಗಳು, ರಚನೆ, ಸ್ವರೂಪ, ವೈವಿಧ್ಯ ಪರಿಣಾಮ ಇತ್ಯಾದಿ ದೃಶ್ಯಾತ್ಮಕ ಅಧ್ಯಯನ ಗಮನಾರ್ಹ ರೀತಿಯಲ್ಲಿ ನಡೆದಿಲ್ಲವೆಂದು ಹೇಳಬೇಕಾಗುತ್ತದೆ. ಹಾಗೆಂದರೂ ಕೆಲವು ವಿದ್ವಾಂಸರು ತಮ್ಮ ಅಧ್ಯಯನದ ಪರಿಮಿತಿಯಲ್ಲಿ ತಳಸಮುದಾಯದ ಶಿಲ್ಪಕಲಾವಿದರು ರಚಿಸಿದ ಶಿಲ್ಪಗಳ ಕುರಿತು ಅಲ್ಲಲ್ಲಿ ಅಂಶಿಕವಾಗಿ ಅಧ್ಯಯನ ಮಾಡಿರುವ ಬಗ್ಗೆ ಕಂಡು ಬರುತ್ತದೆ.

ಡಾ.ಚೆನ್ನಕ್ಕ ಎಲಿಗಾರರ 'ಮಾಸ್ತಿ ಕಲ್ಲುಗಳು' ಡಾ.ಎಂ.ಎಂ. ಕಲಬುರ್ಗಿಯವರ ಸಮಾಧಿ ಬಲಿದಾನ ವೀರ ಮರಣ ಸ್ಮಾರಕಗಳು' ಡಾ.ಆರ್.ಶೇಷಶಾಸ್ತ್ರಿ ಅವರ 'ಕರ್ನಾಟಕದ

ವೀರಗಲ್ಲುಗಳು' ಮುಂತಾದ ಗ್ರಂಥಗಳಲ್ಲಿ ಶಿಲಾ ಮಾಧ್ಯಮದ ಶಿಲ್ಪಗಳ ಬಗ್ಗೆ ಸ್ವಲ್ಪ ಮಟ್ಟಿನ ಚರ್ಚೆ ಇದೆ. ಕನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸಿದ 'ಶಿಲ್ಪಕಲಾ ಪ್ರಪಂಚ'ದಲ್ಲೂ ಶಿಲ್ಪಕಲೆಯ ಕುರಿತು ವಿದ್ವಾಂಸರ ಕೆಲವು ಲೇಖನಗಳಿವೆ. ಯಾವುದೇ ಪ್ರಕಾರದ ಶಿಲ್ಪಕಲೆಯನ್ನು ತಿಳಿದುಕೊಳ್ಳುವವರಿಗೆ, ಅಧ್ಯಯನ ಮಾಡುವವರಿಗೆ ಇದೊಂದು ಪ್ರಮುಖ ಆಕರ ಗ್ರಂಥವಾಗಿದೆ. ಪ್ರೊ. ಪಿ.ಕೆ.ಖಂಡೋಬಾ ಮತ್ತು ಡಾ.ಎಸ್.ಸಿ.ಪಾಟೀಲ್ ಅವರು ಸಂಪಾದಿಸಿದ 'ಹೈದ್ರಾಬಾದ ಕರ್ನಾಟಕ ಲಲಿತಕಲಾ ವಿಷಯಕೋಶ'ದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ತಳ ಸಮುದಾಯದ ಚಿತ್ರ-ಶಿಲ್ಪಕಲಾವಿದರ ಕುರಿತು ಪರಿಚಯಾತ್ಮಕ ಲೇಖನಗಳು ಪ್ರಕಟಣೆಗೊಂಡಿವೆ.

ಡಾ. ರಹಮತ್ ತರೀಕೆರೆ ಅವರ 'ಸಾಂಸ್ಕೃತಿಕ ಅಧ್ಯಯನ' ಎಂಬ ಗ್ರಂಥದಲ್ಲಿ ತಳಸಮುದಾಯಗಳ ಅಧ್ಯಯನ ಕುರಿತು ವಿವರಣೆ ದೊರೆಯುತ್ತವೆ. ಕೆ.ವಿ.ಸುಬ್ರಹ್ಮಣ್ಯಂ ಅವರ ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ' ಎಂಬ ಗ್ರಂಥದಲ್ಲಿ ದಲಿತ ಸಂವೇದನೆವುಳ್ಳ ಶಿಲ್ಪ ಇನ್ಸ್ಟಾಲೇಷನ್‌ಗಳ ಕುರಿತು ಮಾಹಿತಿ ಸಿಗುತ್ತದೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಗಾಗಿ ಡಾ.ಚೂಡಾಮಣಿ ನಂದಗೋಪಾಲ ಸಂಪಾದಿಸಿರುವ 'ಕರ್ನಾಟಕ ಶಿಲ್ಪಕಲಾವಿದರು' ಎಂಬ ಪುಸ್ತಕದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಶಿಲ್ಪಕಲಾವಿದರ ಕುರಿತು ಸಂಕ್ಷಿಪ್ತವಾದ ಪರಿಚಯ ಇದೆ. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ಜನಪದ ಕಲೆಗಳ ಕೋಶ' ದಲ್ಲಿ ಕೆಲವು ಜನಪದ ಶಿಲ್ಪಗಳ ಕುರಿತು ಅನೇಕ ವಿಷಯಗಳು ಪ್ರಸ್ತಾಪಿಸಲ್ಪಟ್ಟವೆ. ಇವು ಮಾತ್ರವಲ್ಲದೇ ಶಿಲ್ಪಗಳ ಐತಿಹಾಸಿಕ ಮಹತ್ವ, ಪ್ರಾದೇಶಿಕ ಭಿನ್ನತೆ, ವೈಶಿಷ್ಟ್ಯ, ನಂಬಿಕೆ, ಆಚರಣೆ ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ. ಡಾ.ವಿರೇಶ ಬಡಿಗೇರರ ಗುಳ್ಳವ್ವ ಆಚರಣೆ ವಿಶ್ಲೇಷಣೆ' ಎಂಬ ಕಿರು ಪುಸ್ತಕದಲ್ಲಿ ಉತ್ತರ ಕರ್ನಾಟಕದಲ್ಲಿ ಆಚರಿಸಲ್ಪಡುವ ಜನಪದರ ದೇವತೆ ಗುಳ್ಳವ ಶಿಲ್ಪ ಹಾಗೂ ಅದರ ಮಾಧ್ಯಮ ಮತ್ತು ರಚನೆ, ಅಲಂಕಾರಗಳ ಕುರಿತು ಸಾಕಷ್ಟು ವಿಶ್ಲೇಷಣೆ ಇದೆ. ಆದರೆ ಹೈದ್ರಬಾದ ಕರ್ನಾಟಕದ ವ್ಯಾಪ್ತಿಗೆ ಸಂಬಂಧಪಟ್ಟಂತೆ ತಳ ಸಮುದಾಯ ಶಿಲ್ಪ ಕಲಾವಿದರ ಬಗ್ಗೆ ನಿಖರವಾದ

ಅಧ್ಯಯನಗಳು ಆಗಿಲ್ಲದೆ ಇರುವುದರಿಂದ ಪ್ರಸ್ತುತ ಹೈದ್ರಾಬಾದ ಕರ್ನಾಟಕ ಪ್ರದೇಶದ ತಳ ಸಮುದಾಯದ ಶಿಲ್ಪಕಲಾವಿದರ ಕುರಿತಾಗಿ ಈ ಅಧ್ಯಯನವನ್ನು ರೂಪಿಸಲಾಗಿದೆ.

ಅಧ್ಯಯನದ ಸ್ವರೂಪ:

ಶಿಲ್ಪಕಲೆ ತಳ ಸಮುದಯಗಳ ಮೂಲ ಸಂವೇದನೆಗಳಿಗೆ, ತೀರ ಹತ್ತಿರವಾದ ಕಲೆಗಳಲ್ಲಿ ಒಂದು ಮತ್ತು ಜನಪದರ ಬದುಕಿನಷ್ಟೇ ಈ ಕೆಲಗಳು ವೈವಿಧ್ಯಮಯವಾದುವುಗಳಾಗಿವೆ. ಮನುಷ್ಯನರು ತನ್ನ ಹಿತಾನುಭವಗಳಿಗೆ ರೂಪಗಳನ್ನು ನೀಡಿದುದ, ಆಕಾರಗಳನ್ನು ಕೊಟ್ಟಿದ್ದು, ಬಣ್ಣಬಳಿದು ಜೀವ ತುಂಬಿದ್ದು, ಇಂತಹ ಶಿಲ್ಪಗಳ ಮೂಲಕವೇ ಅಂದರೆ ತಪ್ಪಾಗಲಾರದು.

ತಳಸಮುದಾಯಗಳ ಜೀವನಾನುಭವ, ಧಶ್ಯಪರಂಪರೆ, ಹೃದಯ ಶ್ರೀಮಂತಿಕೆಯನ್ನು ಚಿತ್ರ–ಶಿಲ್ಪಕಲೆಗಳಲ್ಲಿ ಕಂಡುಕೊಳ್ಳುವುದು ಸಾಧ್ಯವಾಗಿದೆ. ಹೈದ್ರಾಬಾದ–ಕರ್ನಾಟಕ ಪ್ರದೇಶದ ಕೆಲವು ಜನ ಪದ ಶಿಲ್ಪಗಳು ಸಾಮಾನ್ಯವಾಗಿ ಆಯಾ ಪ್ರದೇಶದ ಜನಾಂಗಿಯ ಧಾರ್ಮಿಕ ಹಿನ್ನೆಲೆಯನ್ನು, ಬೌಗೋಳೀಕ ಪರಿಸರವನ್ನು ಆಧರಿಸಿ, ಅವುಗಳ ಸ್ಪಷ್ಟ ಚಿತ್ರಣದ ರೂಪವನ್ನು ಪಡೆದಿರುವುದಕ್ಕೆ ಕ್ಷೇತ್ರಾಧ್ಯನದ ಅನುಭವದ ಮೂಲಕ ಕ್ರೋಢಿಕರಿಸಲಾಗಿದೆ.

ಹೈದ್ರಾಬಾದ–ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳನ್ನು ಒಳಗೊಂಡಿರುವ ಈ ಅಧ್ಯಯನವನ್ನು ಆರು ಆದ್ಯಾಯಗಳಲ್ಲಿ ವಿಂಗಡಿಸಿಕೊಂಡು ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸಲ್ಪಟ್ಟಿರುವ ವಿವರಣೆಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಕುರಿತು ಅಧ್ಯಯನ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕಲೆ ಮತ್ತು ತಳ ಸಮುದಾಯಗಳ ಐತಿಹಾಸಿಕ ಹಿನ್ನೋಟವನ್ನು ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಜನಪದ ಶಿಲ್ಪಕಲೆ ಆಯಾ ಪ್ರದೇಶಗಳಿಗನುಗುಣವಾಗಿ ತಳಸಮುದಾಯಗಳ ಆಚರಣೆಗಳಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತವೆ ಎಂಬುದನ್ನು ವಿವರಣೆಗಳೊಂದಿಗೆ ವಿವಿಧ ಪ್ರಕಾರದ ಜನಪದ ಶಿಲ್ಪಗಳ ಮಹತ್ವದ ಅಂಶಗಳನ್ನು ವಿಶ್ಲೇಷಿಸಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಸಂಪ್ರದಾಯ, ಜನಪದ ಮತ್ತು ಸಮಕಾಲೀನ ಶಿಲ್ಪಕಲಾವಿದರ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಹೈದ್ರಾಬಾದ ಕರ್ನಾಟಕ ತಳಸಮುದಾಯದ ಶಿಲ್ಪಕಲೆಯಲ್ಲಿ ಸಮಕಾಲೀನ ಪ್ರಸ್ತುತೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು ಐದು ಅಧ್ಯಾಯಗಳ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಅಧ್ಯಯನವು ಹೈದ್ರಾಬಾದ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಾದ ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ತಳ ಸಮುದಾಯ ಶಿಲ್ಪಕಲಾವಿದರು ರಚಿಸಿದ ಶಿಲ್ಪಗಳಿಗೆ ಸೀಮಿತವಾಗಿದ್ದರೂ ಕರ್ನಾಟಕ ಹಾಗೂ ಕರ್ನಾಟಕೇತ್ತರ ಪ್ರದೇಶದ ತಳ ಸಮುದಾಯದ ಶಿಲ್ಪಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ:

ಈ ಕಿರು ಸಂಶೋಧನಗೆ ಮುಖ್ಯವಾಗಿ ಎರಡು ರೀತಿಯ ಆಕಾರಗಳನ್ನು ಬಳಸಿಕೊಳ್ಳಲಾಗಿದೆ.

೧) ಮೂಲ ಆಕರ ಸಾಮಗ್ರಿ (Primary Source)

೨) ಅನುಷಂಗಿಕ ಆಕರ ಸಾಮಗ್ರಿ (Secondary Source)

ಈ ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದ್ದು, ಇವುಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಳ್ಳಲಾಗಿದೆ.

೧) ಮೂಲ ಆಕರ ಸಾಮಗ್ರಿ (Primary Source):

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದುದು ಕ್ಷೇತ್ರಕಾರ್ಯ (Field Work) ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರಕಾರ್ಯ ಅತ್ಯಂತ ಮಹತ್ವಪೂರ್ಣವಾಗಿದ್ದು, ಕ್ಷೇತ್ರಕಾರ್ಯವಿಲ್ಲದೆ ತಳ ಸಮುದಾಯಗಳ ಚಿತ್ರ–ಶಿಲ್ಪಕಲಾ ಪರಂಪರೆಗಳ ಅಧ್ಯಯನವನ್ನು ಊಹಿಸಿಕೊಳ್ಳಲು ಅಸಾಧ್ಯ. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಭೌಗೋಳಿಕ ಪ್ರದೇಶವೇ ಪ್ರಮುಖ ಕ್ಷೇತ್ರವಾಗಿತ್ತು. ಈ ಅಧ್ಯಯನದ ಆಕರ ಮತ್ತು ಕ್ಷೇತ್ರಾಧ್ಯಯನದಿಂದಲೇ ಸ್ಪಷ್ಟವಾದ ಉದ್ದೇಶವನ್ನು ಗುರಿಮುಟ್ಟಲು ಸಾಧ್ಯವಾಯಿತು.

ಈ ಕ್ಷೇತ್ರಕಾರ್ಯವನ್ನು ಈ ಕೆಳಕಂಡ ಹಂತಗಳಲ್ಲಿ ನಿರ್ವಹಿಸಲಾಯಿತು.

೧) ತಳ ಸಮುದಾಯಕ್ಕೆ ಸೇರಿದ ಶಿಲ್ಪಕಲಾವಿದರ ಸಂದರ್ಶನ.

೨) ತಳ ಸಮುದಾಯದ ಶಿಲ್ಪಕಲಾವಿದರ ಸಂಭಾಷಣೆನ್ನು ದಾಖಲೀಕರಣ

೩) ಶಿಲ್ಪಕಲಾವಿದರ ಮತ್ತು ಶಿಲ್ಪ ಕಲಾಕೃತಿಗಳ ಛಾಯಾಗ್ರಹಣ.

೪) ಶಿಲ್ಪಕಲಾಕೃತಿಗಳ ಮತ್ತು ಪ್ರಾತ್ಯಕ್ಷಿಕೆಗಳ ವಿಡಿಯೋ ಚಿತ್ರಣ.

೫) ಶಿಲ್ಪಗಳ ರಚನೆಗೆ ಬಳಸುವ ಮಾಧ್ಯಮಗಳ ವಿವರದ ದಾಖಲೀಕರಣ

೬) ಶಿಲ್ಪಗಳ ರಚನೆಗೆ ಮೂಲ ವಸ್ತುಗಳ, ಸ್ಥಳಗಳ ಪರಿಶೋಧನೆ.

೭) ಸಂಗ್ರಹಿತ ವಿಷಯಗಳ ಪಟ್ಟಿಕೆಗಳನ್ನು ಸಿದ್ಧಪಡಿಸಿಕೊಂಡು ಕ್ರೋಢೀಕರಿಸಿಕೊಳ್ಳುವುದು.

ಹೀಗೆ ವಿವಿಧ ಸ್ವರೂಪಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗಿತ್ತು.

೨) ಅನುಷಂಗಿಕ ಆಕರ ಸಾಮಗ್ರಿ (Secondary Source):

ಅನುಷಂಗಿಕ ಆಕರ ಸಾಮಗ್ರಿಯಾಗಿ ಸಂಶೋಧನಾ ಸಾಮಗ್ರಿಗಳು, ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯ ಕೃತಿಗಳು, ಇತಿಹಾಸ ಕೃತಿಗಳು, ಗ್ರಾಮೀಣವಾಗಿ ಆಚರಣೆಯಲ್ಲಿರುವ ಜನಪದೀಯ ಕಲಾ ಪ್ರಕಾರಗಳು, ವಾರ್ತಾ ಸಂಚಿಕೆಗಳು, ಅನುವಾದ ಗ್ರಂಥಗಳು, ಪತ್ರಿಕೆಗಳು, ಲೇಖನ ಸಂಗ್ರಹಗಳು, ದೇಶಿಯ ಹಾಗೂ ವಿದೇಶ ಪ್ರವಾಸಿಗರ ಬರವಣಿಗೆಗಳು, ಗೆಝೆಟಿಯರ್‌ಗಳು, ಹಸ್ತಪ್ರತಿಗಳು, ಗ್ಯಾಲರಿ ಸಂಗ್ರಹ ಮಾಹಿತಿಗಳು, ಗ್ರಂಥಾಲಯಗಳು, ಮತ್ತು ಸಂಗ್ರಹಾಲಯಗಳೂ, ಹೈದ್ರಾಬಾದ ಕರ್ನಾಟಕ ಪ್ರದೇಶದ ಕಲಾ ಕಾಲೇಜ್‌ಗಳಿಗೆ ಭೇಟಿ ನೀಡಿ ವಿಷಯ ಸಂಗ್ರಹಿಸಿಕೊಂಡು ಅಧ್ಯಯನ ಮಾಡಿ ಪ್ರಸ್ತುತ ಅಧ್ಯಾಯದಲ್ಲಿ ಕ್ರೋಢಿಕರಿಸಲಾಗಿದೆ.

ಅಧ್ಯಾಯ-೨

ಕಲೆ ಮತ್ತು ತಳ ಸಮುದಾಯಗಳು: ಒಂದು ಐತಿಹಾಸಿಕ ನೋಟ

ಭಾರತೀಯ ಸಮಾಜವು ಜಗತ್ತಿನಲ್ಲೇ ಅತ್ಯಂತ ಹೆಚ್ಚು ಪಾರಂಪರ್ಯ ಶ್ರೇಣಿಗಳನ್ನುಳಂಥ ಸಮಾಜವಾಗಿದೆ. ಬದುಕಿನ ಎಲ್ಲಾ ಮುಖಗಳನ್ನು ಆವರಿಸಿದ ಶ್ರೇಣಿಗಳು ಮತ್ತು ತಾರತಮ್ಯಗಳ ಅತ್ಯಂತ ಸಂಕೀರ್ಣವಾದ ಪದ್ಧತಿಗಳಿಂದ (ಇಂದಿಗೂ ಉಳಿದುಕೊಂಡು ಬಂದಿರುವ ಪದ್ಧತಿಗಳಿಂದ) ಕೂಡಿದಂಥ ಸಮಾಜವಾಗಿದೆ. ಇದರಿಂದಾಗಿಯೇ ಎಲ್ಲ ದುರದೃಷ್ಟಕಾರಕ ಪರಿಣಾಮಗಳು ಉಂಟಾದದ್ದು. ಇದು ಆರ್ಥಿಕ ವಿಕಾಸದ ಗತಿ ಅಸಮಾನತೆಯ ನಿಟ್ಟಿನಲ್ಲಿ ಸಾಗುವಂತೆ ಮಾಡಿದೆ. ಮಾನವ ವಿಕಾಸದ ಉತ್ಸಾಹ ಶೂನ್ಯ ಮೌಲ್ಯಗಳು ಆರ್ಥಿಕ ವಿಸ್ತರಣೆಯ ಕಾಲಘಟ್ಟಗಳಲ್ಲೂ ಹೆಚ್ಚು ನರಕಸದೃಶ್ಯವಾಗಿ ಮುಂದುವರಿದುಕೊಂಡು ಬರುವಂತೆ ಮಾಡಿದೆ; ಎಲ್ಲ ಪ್ರಜೆಗಳ ಮಾನವ ಹಕ್ಕುಗಳಿಗೆ, ಆತ್ಮಗೌರವಕ್ಕೆ ಸಾರ್ವಜನಿಕ ಮತ್ತು ಸಾಮಾಜಿಕ ಮಾನ್ಯತೆ ದೊರಕದಂತೆ ಮಾಡಿದೆ; ವಿಭಿನ್ನ ಪಂಗಡಗಳನ್ನು, ವ್ಯಕ್ತಿಗಳನ್ನು ಸಮಾಜದಿಂದ ಹೊರಗಿಡುವಂಥ ರೂಢಿಗಳ ಮೂಲಕ ಸಂಸ್ಕೃತಿ ಹಾಳಾಗುವಂತೆ ಮಾಡಿದೆ.

ಈ ಕಾರಣದಿಂದಾಗಿಯೇ ಲೆಕ್ಕಕ್ಕಿಲ್ಲದ್ದು, ಗೋಚರಕ್ಕೆ ಬಾರದ್ದು ಎಂಬುದು ಭಾರತದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಾಸ್ತವತೆಯ ಬಗೆಗಿನ ಮುಖ್ಯ ನೆಲೆ–ನಿಲುವುಗಳ ಒಂದು ವ್ಯತಿರಿಕ್ತ ಲಕ್ಷಣವಾಗಿ ಬಿಟ್ಟಿದೆ. ಈ ಲೆಕ್ಕಕ್ಕಿಲ್ಲದೆಂಬ ಅಗೋಚರ ಸ್ವರೂಪವು ಗೌಣ, ನಗಣ್ಯವೆನ್ನಲ್ಪಡುವ ತಳಸಮುದಾಯಗಳನ್ನು ಮಾತ್ರವಲ್ಲ, ಪ್ರಬಲವಾದ ಅಥವಾ ಮುಖ್ಯವಾಹಿನಿಯಲ್ಲಿರುವ ಸಮುದಾಯವನ್ನು ಕೂಡ ಬಾಧಿಸುತ್ತದೆ. ಆರ್ಥಿಕ ಪರಿಭಾಷೆಯಲ್ಲಿ ಹೇಳುವುದಾದರೆ, ಭಾರೀ ಮೊತ್ತದ ಆದಾಯಕ್ಕೆ ಸಮವಾಗುವಂಥ ದಿನಗಟ್ಟಲೆ ಮಾಡಲಾದ ಕೆಲಸವು ಎಂದರೆ ಸಾಮಾಜಿಕ ಉತ್ಪಾದನೆ ಮತ್ತು ಹಣಕಾಸಿನ ಕಾರ್ಯಗಳ್ಲಿ ತಡಗಿಸಲಾದ ಶ್ರಮವು, ಮನೆಮಾರುಗಳ ಅಥವಾ ಸಮುದಾಯಗಳ ಸದಸ್ಯರಾದವರು ಮಾಡಿದಂಥ ಉತ್ಪಾದನಾ ಶ್ರಮವು ಲೆಕ್ಕಕ್ಕೆ ಬಾರದೆ ಹೋಗುತ್ತದೆ. ಪ್ರತಿಫಲವಿಲ್ಲದ ಈ ಕೆಲಸದ ಹೆಚ್ಚಿನ (ಎಲ್ಲ ಅಲ್ಲದಿದ್ದರೂ) ಪಾಲು ಮಹಿಳೆಯರು ಮತ್ತು ಯುವತಿಯರೇ ಮಾಡಿದ್ದಾಗಿರುತ್ತದೆ. ಈ ಉತ್ಪಾದನಾ ಶ್ರಮ ಲೆಕ್ಕಕ್ಕೆ ಬಾರದೇ ಇರುವುದು, ಸಾಮಾಜಿಕ ಮಾನ್ಯತೆ ಪಡೆಯದೇ ಇರುವುದು ಸಮಾಜದಲ್ಲಿ ಕೆಳಸ್ತರದ ಸಮುದಾಯಗಳ ಮಹಿಳೆಯರ ಸ್ಥಾನಮಾನ ಎಷ್ಟು ಕೆಳಮಟ್ಟದಲ್ಲಿದೆ ಎಂಬುದಕ್ಕೆ ಹಿಡಿದ ಕನ್ನಡಿಯಂತಿದೆ. ಅದೇ ರೀತಿ, ಭಾರತದಲ್ಲಿ ಮಾಡಲ್ಪಡುವ ಅತ್ಯಂತ ಕಠಿಣವಾದ, ಕಷ್ಟದಾಯಕವಾದ ಅಥವಾ ಅಪಾಯಕರವಾದ ಕೆಲಸಕ್ಕೆ ದೊರಕುವ ಪ್ರತಿಫಲವೂ ತೀರ ಕಮ್ಮಿ, ಏಕೆಂದರೆ ಇಂಥ ದುಡಿಮೆಗಳಲಿ ತೊಡಗಿರುವವರು ಅತ್ಯಂತ ದಮನಿತ ಮತ್ತು ತಾರತಮ್ಯ ಮಾಡಲ್ಪಟ್ಟ ತಳ ಸಮುದಾಯಗಳಿಂದ ಬಂದವರಾಗಿರುತ್ತಾರೆ. ಆರ್ಥಿಕ ಶೋಷಣೆಗಳಿಂದ ತುಂಬಿಕೊಂಡಿರತಕ್ಕಂಥ ಸಾಮಾಜಿಕ ತಾರತಮ್ಯದ ಸ್ವರೂಪಗಳು ಹಾಗೂ ಇದನ್ನು ಗಮನಕ್ಕೆ ತೆಗೆದುಕೊಳ್ಳುವ ಆರ್ಥಿಕ ನೀತಿಗಳು ನಿಜವಾಗಿಯೂ ಧನಾತ್ಮಕವಾದ ಫಲಿತಾಂಶ ಲಭ್ಯವಾಗುವಂತೆ ಮಾಡುತ್ತವೆ. ದಮನಿತ ಅಥವಾ ದೂರವಿಡಲ್ಪಟ್ಟ ಪಂಗಡಗಳ ಶ್ರಮಿಕ ಕೊಡುಗೆಗಳ ಅಗೋಚರ ಸ್ಥಿತಿಯು ಸಾಂಸ್ಕೃತಿಕವಾಗಿಯೂ ನಮ್ಮನ್ನು ದುರ್ಬಲಗೊಳಿಸಿದೆ. ಈ ಪರಿಸ್ಥಿತಿಯ ಒಂದಿಷ್ಟು ಅಂಶವು ಸ್ವಲ್ಪಮಟ್ಟಿಗಾದರೂ ಈಗಷ್ಟೇ ಅರಿವಿಗೆ ಬರಲಾರಂಭಿಸಿದೆ. ಕನಿಷ್ಟ

ಪಕ್ಷ ಸಾಹಿತ್ಯ ಕ್ಷೇತ್ರದಲ್ಲಿ ಲೇಖಕಿಯರ ಕೃತಿಗಳು ಈಗ ಮೊದಲಿಗಿಂತ ಹೆಚ್ಚಿಗೆ ದೊರಕುತ್ತಿವೆ. ಆದಾಗ್ಯೂ ಪರಿಶಿಷ್ಟ, ಬುಡಕಟ್ಟು ಜನಾಂಗಗಳವರ ಸಾಹಿತ್ಯ, ಚಿತ್ರಕಲೆ ಮತ್ತು ಶಿಲ್ಪಗಳು ಇನ್ನು ಅಷ್ಟಾಗಿ ಬಂದಿಲ್ಲ.

ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಮಹಾತ್ಮ ಜ್ಯೋತಿಬಾ ಫುಲೆ ಅವರ ಪ್ರೇರಣೆಯಿಂದಾಗಿ ೧೯೫೦ರ ದಶಕದಲ್ಲಿ ವಿಶೇಷವಾಗಿ ಮಹಾರಾಷ್ಟ್ರದಲ್ಲಿ ನಡೆದ ಚಳವಳಿಯ ಸಂದರ್ಭದಲ್ಲಿ ದಲಿತ ಸಾಹಿತ್ಯ ಹೆಚ್ಚು ಸ್ಪಷ್ಟವಾಗಿ ಮಾನ್ಯತೆ ಪಡೆಯಿತು. ಕೆಳವರ್ಗದ ಜಾತಿಗಳ ದುರ್ಭರ ಪರಿಸ್ಥಿತಿಯನ್ನು ಕಡೆಗಣಿದ್ದಂಥ, ಸಾಹಿತ್ಯವನ್ನು ಸಾರ್ವತ್ರಿಕವಾದದ್ದೆಂದು ಅಥವಾ ಇಡೀ ಸಮಾಜದ ಸ್ಥಿತಿಯ ವಿವರಣೆಯೆಂದು ಬಿಂಬಿಸುವಾಗ ಬಡತನದ, ಶೋಷಣೆಯ ಅಂಶಗಳನ್ನು ಬದಿಗೊತ್ತಿ ಸಮಾಜದ ಅತ್ಯಂತ ಸಣ್ಣ ವಿಭಾಗದ ಕಾಳಜಿಗಳನ್ನಷ್ಟೇ ಎತ್ತಿ ತೋರಿಸುತ್ತಿದ್ದಂಥ ಹಿಂದೂ ಕುಲೀನರ ಮುಖ್ಯ ಸಾಹಿತ್ಯದ ವಿರುದ್ಧ ನಡೆದ ಪ್ರತಿರೋಧದ ಪರಿಣಾಮವಾಗಿ ಇದು ಒಂದಿಷ್ಟು ಕಾಲದಿಂದ ಉತ್ಪತ್ತಿಯಾದಂಥ ಸಾಮಾಜಿಕ ಪ್ರಜ್ಞೆಯುಳ್ಳ ದಲಿತ ಸಾಹಿತ್ಯವನ್ನು ಹೊರತಂದು ದಲಿತ ಲೇಖಕರ ಮಧ್ಯೆ ಪ್ರಸಾರ ಮಾಡುವಂಥ ಹಾಗೂ ಸ್ವತಃ ದಲಿತ ಲೇಖಕರೂ ಅದರ ಪ್ರಸಾರದಲ್ಲಿ ತೊಡಗುವಂತೆ ಮಾಡುವ ಪ್ರಯತ್ನಗಳು ಕೂಡ ನಡೆದಿವೆ. ಇಂದು, ಉದಾಹರಣೆಗೆ ಹೇಳುವುದಾದರೆ, ಮರಾಠಿ, ಹಿಂದಿ, ಕನ್ನಡ, ತಮಿಳು ಮತ್ತು ತೆಲುಗು ಭಾಗಗಳಲ್ಲಿ ರೋಮಾಂಚಕಾರಿ ದಲಿತ ಸಾಹಿತ್ಯ ದೊರಕುತ್ತಿದೆ. ಹಾಗೂ ದೇಶಾದ್ಯಂತ ಹೆಚ್ಚು ಹೆಚ್ಚು ತಳಸ್ತರದ ಸಮುದಾಯಗಳ ಪರವಾದ ಧ್ವನಿಗಳು ಕೇಳಿ ಬರಲಾರಂಭಿಸಿವೆ.

ಸಾಂಸ್ಕೃತಿಕ ಕೃತಿಗಳು (ಸಾಹಿತ್ಯ, ಸಿನೆಮಾ, ಸಂಗೀತ, ನಾಟಕ, ಚಿತ್ರ–ಶಿಲ್ಪಕಲೆ ಇತ್ಯಾದಿ) ಸಾರ್ವತ್ರಿಕ ಅಜ್ಞಾತ ಕರ್ತೃತ್ವದ ಪರಿಕಲ್ಪನೆಯ ಫಲವಾಗಿ ಬಂದಂಥ ಅಭಿವ್ಯಕ್ತಿಗಳೆಂದು, ಆದರೆ ಅವು ಉದ್ಭವಿಸಿದ ಹಿನ್ನೆಲೆಯ ಸಾಮಾಜಿಕ ವಾಸ್ತವತೆಯಲ್ಲಿ ಅಂಥ ಅಜ್ಞಾತ ಕರ್ತೃತ್ವತೆಗಾಗಲಿ, ಅಂಥ ಸಾರ್ವತ್ರಿಕತೆಗಾಗಲಿ ಅವಕಾಶವಿರದಂಥ ಪರಿಸ್ಥಿತಿಯಲ್ಲಿ ಗಮನಿಸಿದಾಗ ನಾವು ಏನೆಲ್ಲಾ ಕಳೆದುಕೊಂಡಿದ್ದೇವೆಂಬುದು ಈ ಸಾಂಸ್ಕೃತಿಕ ಕೃತಿಗಳಿಂದ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಈ

ಪಂಗಡಗಳ ಅಸ್ತಿತ್ವದ ನಿರ್ದಿಷ್ಟ ಸ್ಥಿತಿಗತಿಗಳು ದಮನದ ಅಥವಾ ಪರಾವಲಂಬನೆಯ ಸ್ಪಷ್ಟ ಅನುಭವವನ್ನುಂಟು ಮಾಡುವವು ಮಾತ್ರವಲ್ಲ, ಇದು ಯಾರ ದೈನಂದಿನ ಬದುಕಿನ ಭಾಗವಾಗಿರುವುದಿಲ್ಲವೋ ಅವರು ಸಮರ್ಪಕವಾಗಿ ವಿವರಿಸಲಾಗದಂಥ ವಿಭಿನ್ನ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಕೂಡ ದಲಿತ ಬರವಣಿಗೆಯು–ವಾಸ್ತವವಾಗಿ ಸ್ತ್ರಿ ಸ್ವಾತಂತ್ರ್ಯ ಪರವಾದಂಥ ಬರವಣಿಗೆಯಂತೆ ತೋರಿಸಿಕೊಡುತ್ತದೆ.

ಆದರೆ ತಳ ಸಮುದಾಯಗಳ ಪರಂಪರೆಯಲ್ಲಿ ದೃಶ್ಯಕಲೆಯನ್ನು ಬಹುಮಟ್ಟಿಗೆ ಉಪೇಕ್ಷಿಸಲಾಗಿದೆ. ಇಂಥ ಕಲಾ ಪ್ರಕಾರಗಳ ಬಗ್ಗೆ ಅಧ್ಯಯನ ಅಷ್ಟಾಗಿ ನಡೆದದ್ದಿಲ್ಲ. ಈ ಹಿನ್ನೆಲಯಲ್ಲಿ ಗ್ಯಾರಿ ಮೈಕೇಲ್ ತರ್ಸ್‌ಕೋವ್ ಅವರು ಸಂವಾದಿಸಿದ ಹೊಸ ಗ್ರಂಥ (ದಲಿತ ಆರ್ಟ್ ಅಂಡ್ ವಿಜುವಲ್ ಇಮೇಜರಿ", ಆಕ್ಸ್‌ಫರ್ಡ ಯುನಿವರ್ಸಿಟಿ ಪ್ರೆಸ್, ೨೦೧೨) ಈ ಮುಖ್ಯವಾದ ಕೊರತೆಯನ್ನು ನೀಗಿಸಲು ಆರಂಭಿಸಿದೆ. ಈ ಗ್ರಂಥವು ಜಾತಿ ತಾರತಮ್ಯಗಳ ಕೇವಲ ದಲಿತರ ಪುರುಷರು ಮತ್ತು ಸ್ತ್ರೀಯರು ಮಾತ್ರವಲ್ಲ, 'ಇತರರ' ಬದುಕಿನ ನಿರ್ಣಾಯಕ ಅಂಶವಾಗಿ ಇನ್ನೂ ಉಳಿದುಕೊಂಡು ಬಂದಿರತಕ್ಕಂಥ ತಾರತಮ್ಯಗಳ ಪ್ರಿಸ್‌ಮನ ಮುಖಾಂತರ ದೃಶ್ಯಚಿತ್ರ ಹಾಗೂ ಸಮಾಜ ನಡುವೆ ಇರುವ ಸಂಬಂಧವನ್ನು ಬೆಳಕಿಗೆ ತರುತ್ತದೆ. ಭಾರತದಲ್ಲಿ ಈವರೆಗೂ ಅತ್ಯಂತ ಕಮ್ಮಿ ಪ್ರಮಾಣದಲ್ಲಿ, ಸೀಮಿತವಾದ ರೀತಿಯಲ್ಲಿ ಮಾತ್ರ, ವಿಭಿನ್ನ ಸಾಮಾಜಿಕ ವಾಹಿನಿಗಳನ್ನು ಒಳಗೊಂಡಿರತಕ್ಕಂಥ ದೃಶ್ಯಕಲೆ ಕುರಿತು ಆರಂಭವಾಗಿರುವ ಅಧ್ಯಯನಕ್ಕೆ, ಸಂಶೋಧನೆಗೆ ಈ ಗ್ರಂಥ ಮಹತ್ವದ ಕೊಡುಗೆಯನ್ನು ನೀಡಿದೆ.

ಈ ಗ್ರಂಥದಲ್ಲಿ ವಿಭಿನ್ನ ಪರಂಪರೆಗಳನ್ನು ಪ್ರತಿನಿಧಿಸುವಂಥ ಪ್ರಬಂಧಗಳಿವೆ. ಈ ಪ್ರಬಂಧಗಳಲಿ ಮುಖ್ಯವಾಗಿ ಚಿತ್ರಾತ್ಮಕ, ಸೌಂದರ್ಯೋಪಾಸಕ ಪರಿಕಲ್ಪನೆಗಳನ್ನು ಹಾಗೂ ಹೆಚ್ಚು ಐತಿಹಾಸಿಕ, ಮಾನವ ಶಾಸ್ತ್ರೀಯ, ಸಮಾಜ ಶಾಸ್ತ್ರಿಯ ಅರ್ಥವಿವರಣೆಗಳನ್ನು ಕಾಣಬಹುದು. ಹಲವು ಪ್ರಬಂಧಗಳಲ್ಲಿ ಸಮಕಾಲೀನ ದಲಿತ ದೃಶ್ಯಕಲಾ ನಿರೂಪಣೆಗಳನ್ನು ಅಂಬೇಡ್ಕರರ ಭಾವಚಿತ್ರಗಳು ಮತ್ತು ಪ್ರತಿಮೆಗಳ ಕುರಿತಾದ ಕಲಾ ನಿರೂಪಣೆಗಳನ್ನು ಕುರಿತು ವಿವರಿಸಲಾಗಿದೆ.

ಅಂಬೇಡ್ಕರರ ಚಿತ್ರಣವನ್ನು ನೀಡುವಾಗ ಬಳಸಲಾಗುವಂಥ ಸಾಂಕೇತಿಕತೆ ಎಷ್ಟು ನಿಷ್ಠುರವಾಗಿರುತ್ತದೆ. ನಿಷ್ಠಾಪೂರ್ವಕವಾಗಿರುತ್ತದೆ ಎಂಬುದನ್ನು ಚೆನ್ನಾಗಿ ತಿಳಿಸಲಾಗಿದೆ. ಯಾವಾಗಲೂ ಸಾಖ್ಯಮುನಿ ಬುದ್ಧನನ್ನು ಕಿತ್ತಳೆವರ್ಣದ ನೀಳವಾದ ಉಡುಪಿನಲ್ಲಿಯೇ ಚಿತ್ರಿಸಿ ತೋರುವಂತೆ ಅಂಬೇಡ್ಕರರನ್ನು ನೀಲಿ ಬಣ್ಣ ಸೂಟುಧಾರಿಯನ್ನಾಗಿಯೇ ತೋರಿಸಲಾಗುತ್ತದೆ. ಯಾವತ್ತೂ ಅಂಬೇಡ್ಕರರ ಕೈಯಲ್ಲಿದ್ದಂತೆ ತೋರಿಸಲಾಗುವ ಗ್ರಂಥ (ಬಹುಮಟ್ಟಿಗೆ) ಭಾರತದ ಸಂವಿಧಾನವೆಂದೇ ಗುರುತಿಸಲ್ಪಡುವಂಥ ಗ್ರಂಥ) ಅವರು ಆಧುನಿಕ ಶಿಕ್ಷಣವನ್ನು ಪಡೆದ, ಜಾತ್ಯತೀತ ತತ್ವಗಳನ್ನು ಮತ್ತು ಶಿಕ್ಷಣವನ್ನು ನೆಚ್ಚಿಕೊಂಡಿರುವ ಎಂಥ ಮಹಾನ್ ವ್ಯಕ್ತಿ ಎಂಬುದನ್ನು ಸೂಚಿಸುತ್ತದೆ.

ಅದೇ ರೀತಿ ಡಾ.ಬಿ.ಆರ್.ಅಂಬೇಡ್ಕರ್‌ರ ಕುರಿತಾದ ಸ್ಮಾರಕಗಳಲ್ಲಿ ಆಧುನಿಕ ಅಗತ್ಯಗಳಿಗೆ ತಕ್ಕಂತೆ ಮಾರ್ಪಡಿಸಲಾದ ಪರಂಪರಾಗತ ಅಂಶಗಳನ್ನು ಸಾಂಚಿಯ ಬೌದ್ಧ ಸ್ತೂಪದ, ದೇಶದ ದಕ್ಷಿಣ ಮತ್ತು ಮಧ್ಯಭಾಗದ ಪಾರಂಪರಿಕ ಮಂದಿರಗಳ ದ್ವಾರಬಾಗಿಲುಗಳು ಹಾಗೂ ಬೌದ್ಧ ವಿಹಾರಗಳನ್ನು ಹೋಲುವಂಥ ಸಭಾಭವನಗಳ ಕಟ್ಟಡ ರಚನೆಯನ್ನು ಚಿತ್ರಿಸುವಂಥ ಅಂಶಗಳನ್ನು ಕಾಣಬಹುದು. ಇದು ಅಂಬೇಡ್ಕರರು ರೂಢಿಗೆ ತಂದ ಸಮಾಜಮುಖಿ ನವಯಾನ ಬೌದ್ಧಮತದ ಕಲೆ ಮತ್ತು ರಚನೆ ಕುರಿತು ವಿಶ್ಲೇಷಣೆ ಮಾಡುವುದಕ್ಕೆ ಇಂಬುಗೊಡುತ್ತದೆ. ("ನಿಮ್ಮ ಬದುಕನ್ನು ಬದಲಿಸಿಕೊಳ್ಳಬೇಕಾದರೆ ನಿಮ್ಮ ಧರ್ಮವನ್ನು ಬದಲಿಸಿಕೊಳ್ಳಿ" ಎಂದು ಅಂಬೇಡ್ಕರರು ತಮ್ಮ ಅನುಯಾಯಿಗಳಿಗೆ ಹೇಳಿದ್ದರು) ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಸಾಂಕೇತಿಕ ರಾಜಕಾರಣದಲ್ಲಿ ಇತ್ತೀಚೆಗೆ ಅಂಬೇಡ್ಕರರ ಪ್ರತಿಮೆಯನ್ನು ಅಧಿಕವಾಗಿ ಬಳಸುತ್ತಿರುವ ಬಗ್ಗೆ ಹಾಗೂ ದಲಿತರ ಮಧ್ಯೆ ಸಾಮಾಜಿಕ ಆಕಾಂಕ್ಷೆಗಳನ್ನು ಪುನಃ ಮೊಳಗಿಸಲು ಅದರ ಪ್ರಯೋಜನ ಪಡೆಯುತ್ತಿರುವ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ.

ಹೆಚ್ಚಾಗಿ ಆಗ್ರಾದಲ್ಲಿ ತಾಟವಗಳು ಸಂಘಟಿಸುವ ವಾರ್ಷಿಕ ಅಂಬೇಡ್ಕರ್ ಜಯಂತಿ ಮೆರವಣಿಗೆಯಲ್ಲಿ ಆಗುವ ಸಾರ್ವಜನಿಕ ಪ್ರತಿಮೆಗಳ ಬಳಕೆ ಹಾಗೂ 'ದರ್ಶನ'ದ ಪ್ರಭಾವ ಸೃಷ್ಟಿ

ಇವು ಜಾತಿಪದ್ಧತಿಯಿಂದ ನಡೆಯುತ್ತಿರುವ ಶೋಷಣೆಯ ಬಗ್ಗೆ ದಲಿತರಲ್ಲಿರುವ ಕಲ್ಪನೆಗಳು, ಪ್ರಶ್ನೆಗಳು ಮತ್ತು ಅನಿಸಿಕೆಗಳನ್ನು ಯಾವ ರೀತಿ ಬಹಿರಂಗಗೊಳಿಸುತ್ತವೆ ಎಂಬ ಬಗ್ಗೆ ಪರಾಮರ್ಶೆ ಮಾಡಲಾಗುತ್ತಿದೆ. ಮೆರವಣಿಗೆಯಲ್ಲಿ ಹಾರಾಡುವ ಘೋಷಣಾ ಪಟಗಳು ಕೌತುಕಕಾರಿಯಾಗಿರುತ್ತವೆ, ಎಚ್ಚರಗೊಳಿಸುವಂಥವಾಗಿರುತ್ತವೆ. ಮನಕಲಕುಂಥವುಗಳಾಗಿರುತ್ತವೆ. ಅವು ಸಮಕಾಲೀನ ಜಾತಿ ಶ್ರೇಣಿಗಳ ಬಗ್ಗೆ ದಲಿತರಲ್ಲಿರುವಂಥ ಪರಿಕಲ್ಪನೆಗಳನ್ನು ಅಭಿವ್ಯಕ್ತಿಗೊಳಿಸುತ್ತವೆ. ಸಾಮಾಜಿಕ ಬದುಕಿನಲ್ಲಿ ಅವು ಹೇಗೆ ಪರಿಣಾಮ ಉಂಟು ಮಾಡುತ್ತವೆ ಎಂಬುದನ್ನು ಮಾತ್ರವಲ್ಲ, ಭಾರತದ ಜನ ಸಂಸ್ಕೃತಿಗೆ ಯಾವ ರೀತಿ ಮುಖ್ಯ ಕೊಡುಗೆಗಳಾಗಬಲ್ಲವು ಎಂಬುದನ್ನು ಕೂಡ ಅವುಗಳಿಂದ ಗುರುತಿಸಬಹುದು. ಅವು ಯಾರೋ ಹೊರಗಿನವರು ಚಿತ್ರಿಸಿದಂಥ ದಲಿತ ವಾಸ್ತವತೆಯ ಕೃತಿಗಳಾಗಿರದೆ, ದಲಿತ ಕಲಾವಿದರು ಚಿತ್ರಿಸುತ್ತಿರುರಂಥ ಅವರದೇ ಆದ ವಾಸ್ತವಿಕತೆಯ ಕೃತಿಗಳಾಗಿವೆ.

ಅನುಕೂಲಕರ ಅಂಶಗಳಿಗೆ ಗಮನ ಕೊಡುವ ಪ್ರವೃತ್ತಿಯಿಂದಾಗಿ ಪ್ರಾಚೀನ ಭಾರತದ ತಳಸಮುದಾಯಗಳ ಸ್ಥಿತಿಗತಿಯ ಬಗ್ಗೆ ಹೆಚ್ಚಿನ ಕೃತಿಗಳು ಕಾಣಸಿಗವವು. ಐರೋಪ್ಯ ಬರಹಗಾರರು ಸಹ ಹಿಂದೂ ಸಮಾಜದ ಮೇಲ್ವರ್ಗಗಳ ಅಧ್ಯಯನದ ಬಗ್ಗೆ ಮಾತ್ರ ಗಮನಹರಿಸಿದರು. ಹಾಪಕಿನ್ಸ (೧೮೮೯) ಫಿಕ್ (೧೮೯೭) ಮುಂತಾದವರು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ (ಗ್ರಹಪತಿ) ವರ್ಣದವರ ಬಗ್ಗೆಯೇ ಹೆಚ್ಚು ಹೆಚ್ಚಾಗಿ ಬರೆದರು. ಕೆಳವರ್ಗದವರ ಬಗ್ಗೆಯೇ ಹೆಚ್ಚು ಹೆಚ್ಚಾಗಿ ಬರೆದರು. ಕೆಳವರ್ಗದವರ ಬಗೆಗಿನ ಈ ವಿದ್ವಾಂಸರ ಉಪೇಕ್ಷೆಗೆ ಕಾರಣವನ್ನು ನಿಖರವಾಗಿ ಗುರುತಿಸುವುದು ಕಷ್ಟ. ಬಹುಶಃ ಅವರ ಕಾಲದ ಪ್ರಮುಖ ವರ್ಗದ ದೃಷ್ಟಿಕೋನವು ಅವರ ಆಸಕ್ತಿಯನ್ನು ಏಮ್ಮುಖವಾಗಿ ಬೆಳೆಸಿದ್ದಿರಬೇಕು.[1]

ಪ್ರಾಚೀನ ಕಾಲದಲ್ಲೂ ಯೋಧರು, ಪುರೋಹಿತರಲ್ಲದೆ. ಹಲವು ರೀತಿಯ ಕೆಲಸ ನಿರ್ವಾಹಕರೂ, ಕುಶಲ ಕರ್ಮಿಗಳು ಇದ್ದರು. ಇದನ್ನು ಇಂಡೋ–ಯುರೋಪಿಯನ್

1 ಪ್ರಾಚೀನ ಭಾರತದಲ್ಲಿ ಶೂದ್ರರು, ಲೇ: ಆರ್.ಎಸ್.ಶರ್ಮ, ಪ್ರ: ನವಕರ್ನಾಟಕ ಪ್ರಕಾಶನ ಪು.ಸಂ. ೬

ಮೂಲದಲ್ಲಿನ ನೇಕಾರ, ಚಮ್ಮಾರ, ಬಡಗಿ, ಉಪ್ಪಾರರ ಸಮನಾರ್ಥಕ ಪದಗಳು ಸೂಚಿಸುತ್ತವೆ. ಆ ಪೈಕಿ ಇಂಡೋ-ಯುರೋಪಿನ ರಥಕಾರ ಋಗ್ವೇದದಲ್ಲಿಲ್ಲ; ಬದಲು ಬಡಗಿ (ತ್ವಷ್ಟ, ತಕ್ಷನ್)ಯ ಹೆಸರು ಅನೇಕ ಸಲ ಬಂದಿದೆ. ಅಥರ್ವವೇದದಲ್ಲಿ ರಥಕಾರ, ಕಮ್ಮಾರ (ಕರ್ಮಾರ)ರಿಗೆ ಪ್ರಾಮುಖ್ಯತೆ ಇತ್ತು.

ಕೌಶಲ್ಯದ ಕೆಲಸಗಳನ್ನು ಮಾಡುತ್ತಿದ್ದವರು ಆರ್ಯ ಜನರೇ, ಅವರನ್ನು ಸಾಮೂಹಿಕವಾಗಿ 'ವಿಶ್' ಎನ್ನಲಾಗುತ್ತಿತು. ಮತ್ತು ಈ ವ್ಯಕ್ತಿಗಳಿಗೆ ಸಾಮಾಜಿಕ ಹೀಯಾಳಿಕೆಯೇನ್ನು ಇರಲಿಲ್ಲ. ಋಗ್ವೇದದಲ್ಲಿ (I.105.18) ಬಡಗಿಯನ್ನು ಕುರಿತ ಒಂದು ಮಾತಿದೆ- ಕೆಲಸ ಮಾಡುವಾಗ ಬಗ್ಗಿ ಕುಳಿತು ಬೆನ್ನುನೋವು ಬರಿಸಿಕೊಂಡಿರುವವನು ಎಂದು. ಇದು ಅವನ ಕೆಲಸದ ಕಷ್ಟವನ್ನು ಕುರಿತ ಮಾತೇ ವಿನಾಃ ಅವನನ್ನು ನಿಕೃಷ್ಟವಾಗಿ ಕಾಣುವ ಉದ್ದೇಶ ಹೊಂದಿಲ್ಲ. ತಳಸ್ತರದ ಸಮುದಾಯದ ಜನರು ಸಾಮಾನ್ಯವಾಗಿ ಮಾಡಬಹುದಾದ ಕಸುಬುಗಳಲ್ಲಿ ಕೈ ಕಸುಬಗಳನ್ನು ಸೇರಿಸಲಾಯಿತು. (ಕಾಮಂದಕ ನೀತಿಸಾರ, II ೩; ಮಾರ್ಕಾಂಡೇಯ ಪುರಾಣ ೨೮.೩.೮; ವಿಷ್ಣುಸ್ಮೃತಿ III. ೫; ಶೂದ್ರಸ್ಯ.. ಸರ್ವಶಿಲ್ಪಾನಿ, ಬ್ರಹಸ್ಪತಿಸ್ಮೃತಿ ೫೩೦ ಇತ್ಯಾದಿ). ಬೃಹಸ್ಪತಿ ಪ್ರಕಾರ (XIII.33) ಈ ಕೈಕಸುಬುಗಳು ಹೀಗಿವೆ: ಚಿನ್ನ ಹಾಗೂ ಕ್ಷುದ್ರ ಲೋಹಗಳ ಕೆಲಸ, ಮರ, ನೂಲು, ಕಲ್ಲು ಮತ್ತು ಚರ್ಮದ ಕೆಲಸಗಳು, ಅಮರಕೋಳದ ಶೂದ್ರ ವರ್ಗದಲ್ಲಿ ಕಂಡುಬರುವ ಕೈಕಸುಬುಗಳ ಪಟ್ಟಿಯಲ್ಲಿ ಸಾಮಾನ್ಯ ಕೈಕಸುಬಿಗಳು, ವೃತ್ತಿ ಸಂಘಗಳ ಮುಂದಾಳುಗಳು, ಮಾಲೆ ಕಟ್ಟುವವರು, ನೇಯ್ಕಾರರು, ದರ್ಜಿಗಳು, ಚಿತ್ರಕಾರರು, ಚರ್ಮಕಾರರು, ಕಮ್ಮಾರರು, ಕಪ್ಪೆಚಿಪ್ಪು ಕೊರೆಯುವವರು ಹಾಗೂ ತಾಮ್ರದ ಕೆಲಸಗಾರರು ಇರುವರು; ಈ ಪ್ರತಿಯೊಂದು ಬಗೆಯ ಕೈಕಸುಬಿಯನ್ನು ಎರಡು ಹೆಸರುಗಳಿಂದ ಅಲ್ಲಿ ಕರೆಯಲಾಗಿದೆ. (II.10.5-10) ಇದೇ ಪಟ್ಟಿಯು ಸೋನಗಾರರಿಗೆ ನಾಲ್ಕು ಹೆಸರುಗಳನ್ನು ಬಡಗಿಗಳಿಗೆ ಐದು ಹೆಸರುಗಳನ್ನು ಕೊಡುತ್ತದೆ. ತಮಟೆ, ಜಲತರಂಗ, ಕೊಳಲು ಹಾಗೂ ವೀಣೆ ನುಡಿಸುವವರು, ನಟರು, ನಾಟ್ಯಗಾರರು ಮತ್ತು ಲಾಗ ಹಾಕುವವರು ಇವರನ್ನು

ಸಹ ಶೂದ್ರ ವರ್ಗದಲ್ಲಿಯೇ ಸೇರಿಸಲಾಗಿದೆ. ಆದ್ದರಿಂದ ಶೂದ್ರರು ಎಲ್ಲ ಬಗೆಯ ಕಲೆ ಹಾಗೂ ಕೈಕಸುಬುಗಳಲ್ಲಿ ಭಾಗವಹಿಸುತ್ತಿದ್ದರೆಂದು ಹೇಳಬಹುದು.

ಕೊನೆಯದಾಗಿ ಇಟ್ಟಿಗೆ ಜೋಡಿಸುವವರು, ಗಾರೆ ಕೆಲಸದವರು, ನಿರ್ಮಾಪಕರು, ಶಿಲ್ಪಿಗಳು ಭಾರಿ ಸಂಖ್ಯೆಲ್ಲಿದ್ದರೆಂಬುದಕ್ಕೆ, ಸುಟ್ಟ ಇಟ್ಟಿಗೆಯಿಂದ ಮಾಡಲ್ಪಟ್ಟ ಅಂದಿನ ಕಟ್ಟಡಗಳು ದೇಶಾದ್ಯಂತ ಸಾಕ್ಷ್ಯ ಒದಗಿಸುತ್ತವೆ. ನಗರಾಭಿವೃದ್ಧಿ ಗರಿಷ್ಟಮಟ್ಟ ತಲುಪಿದ್ದ ಕಾಲ ಇದಾಗಿದ್ದರಿಂದ ಇವರೆಲ್ಲ ಕೈಕಸುಬುಗಾರರ ವರ್ಗಗಳಾಗಿ ರೂಪುಗೊಂಡಿರಬಹುದಾದ ಸಾಧ್ಯತೆ ಇದೆ. ಆದರೆ ಇವರಲ್ಲಿ ಕೆಲವರು ಅಂದಿನ ಸಾಹಿತ್ಯಿಕ ದಾಖಲೆಗಳಲ್ಲಿ ಕಾರ್ಯರ್ಥಕ ಗುಂಪುಗಳಾಗಿ ಕಾಣಿಸಿಕೊಳ್ಳುವುದಿಲ್ಲ. ಅದು ಹೇಗೆ ಇರಲಿ, ಕುಂಬಾರರು, ನಿರ್ಮಾಪಕರು, ಇಟ್ಟಿಗೆ ಜೋಡಿಸುವವರು, ಹರಳು ಕತ್ತರಿಸುವವರು, ಆಭರಣಕಾರರು, ಸೋನಗಾರರು, ಕಮ್ಮಾರರು, ಹಿತ್ತಾಳೆ ಕೆಲಸ ಮಾಡುವವರು, ಕಾಂಸ್ಯಗಾರರು, ಶಿಲ್ಪಿಗಳು, ಆಟಿಕೆ ಮಾಡುವವರು, ಗಾಜು ಕೆಲಸದವರು ಮತ್ತು ದಂತರಕಾರರು ಸಾಕಷ್ಟು ಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬಂದಿದ್ದರು ಎಂಬುದನ್ನು ಆಗಿನ ಕಾಲದಲ್ಲಿ ನಡೆಯುತ್ತಿದ್ದ ವ್ಯಾಪಾರ, ನಗರ ಹಾಗೂ ಕೈಕಸುಬುಗಳ ಬಗ್ಗೆ ಸಿಗುವ ಪ್ರಾಕ್ತನ ಪುರಾವೆಗಳು ಸೂಚಿಸುತ್ತವೆ.

ದೇವತಾ ಪ್ರತಿಮೆಗಳನ್ನು ಮಾಡುವ ವಿಚಾರ ಬಂದಾಗ ಶೂದ್ರರ ಧಾರ್ಮಿಕ ಸ್ಥಾನಮಾನಗಳು ಕೊಂಚಮಟ್ಟಿಗೆ ಉತ್ತಮಗೊಳ್ಳುವಂತಹ ಕೆಲವು ನಿಯಮಗಳು ಈ ಕಾಲದಲ್ಲಿ ಬಂದಿವೆ. ಪ್ರತಿಮೆ ಮಾಡಲು ಜೇಡಿಮಣ್ಣನ್ನು ಕಲಸುವುದನ್ನು ಪ್ರಸ್ತಾಪಿಸುತ್ತಾ ಎಲ್ಲ ಜಾತಿಯವರೂ ಪ್ರತಿಮೆಗಳನ್ನು ಮಾಡಬಹುದೆಂದು ವೈಷ್ಣವ ಗ್ರಂಥವಾದ 'ಹರಿಭಕ್ತಿ ವಿಲಾಸ' (ವಿಲಾಸ ೧೮) ಹೇಳುತ್ತದೆ. ಅಂದರೆ, ತಳಸ್ತರದ ಸಮುದಾಯದವರು ಮಾಡುತ್ತಿದ್ದ ಪ್ರತಿಮೆಗಳ ಸಾಮಾಗ್ರಿಯು ಬೇರೆ ವರ್ಣದವರು ಬಳಸುತ್ತಿದ್ದುದೇ ಆಗಿತ್ತು. ಪ್ರತಿಮೆಗಳು ಮರದಿಂದ ಮಾಡಿದ್ದಾರೆ. ನಾಲ್ಕು ವರ್ಣದವರಿಗೆ ನಾಲ್ಕು ಬೇರೆ ಬೇರೆ ಮರದ ಪ್ರಭೇದಗಳನ್ನು ಬ್ರಹತ್ ಸಂಹಿತೆ ಸೂಚಿಸಿದೆ. ಗುಪ್ತೋತ್ತರ ಕಾಲದ ಒಂದು ವೈಷ್ಣವ ಉಪಪುರಾಣವೂ ಇಂಥದೇ ನಿಯಮವನ್ನು ಹೇಳಿದೆ.

ಅದರ ಪ್ರಕಾರ ಬ್ರಾಹ್ಮಣರಿಗೆ ಬಿಳಿಯ ಮರ ಪ್ರಶಸ್ತವಾದದ್ದು, ಕ್ಷತ್ರಿಯರಿಗೆ ಕೆಂಪು, ವೈಶ್ಯರಿಗೆ, ಹಳದಿ ಮತ್ತು ಶೂದ್ರರಿಗೆ ಕಪ್ಪು (ವಿಷ್ಣುಧರ್ಮೋತ್ತರ ಮಹಾಪುರಾಣ ಪು.ಸಂ. III ೧೨) ಕಲ್ಲಿನಿಂದ ಮಾಡುವಾಗಲು ಇವೇ ಬಣ್ಣಗಳು ಪ್ರಸ್ತುತ. ಈ ೧೯ ವರ್ಣಭೇಧಗಳೇನೇ ಇರಲಿ ಶಿಲ್ಪಕಲೆಯಲ್ಲಿ ಶೂದ್ರರಿಗೆ ಸಂಪೂರ್ಣ ಪ್ರವೇಶವಿತ್ತೆಂಬುದು ಶಿಲ್ಪಶಾಸ್ತ್ರ ಗ್ರಂಥಗಳಿಂದಲೇ ತಿಳಿಯುತ್ತದೆ.

ತಳ ಸಮುದಾಯಗಳ ಅಧ್ಯಯನ:

ಕರ್ನಾಟಕದಲ್ಲಿ ನೂರಾರು ಜಾತಿ ಸಮುದಾಯಗಳ ಅಧ್ಯಯನಗಳು ನಡೆದಿದೆ. ಅದರಲ್ಲಿ ಬರಗೂರರು ರಾಮಚಂದ್ರಪ್ಪನವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ರೂಪಿಸಿ ಮಾಡಿಸಿದ ಉಪಸಂಸ್ಕೃತಿ ಅಧ್ಯಯನಗಳು ಸೇರಿವೆ. ಅವು ನಡೆದ ಮೇಲೆಯೇ ಕೆಲವರಿಗೆ ಇಂತಹ ಸಮುದಾಯಗಳೆಲ್ಲ ಕರ್ನಾಕಟದಲ್ಲಿವೆ ಎಂಬ ಸಂಗತಿ ಗಮನಕ್ಕೆ ಬಂದಿತ್ತು. ನಟುವರು, ಪಾತರದವರು, ಗೊಂಬೆರಾಮರು, ಕಪ್ಪೆಹೊಲೆಯರು, ಸಿಂದ್ ಮಾದಿಗರು, ಮಾಸ್ತಿಕರು, ಇವು ಅಧ್ಯಯನಕಾರರ ಪಾಲಿಗೆ ಹೊಸಲೋಕಗಳಾಗಿದ್ದವು.

೭೦ರ ದಶಕದಿಂದಲೇ ದಲಿತ ಪ್ರಜ್ಞೆಯ ವೈಚಾರಿಕತೆ ಬಂದಿತು. ತಮ್ಮನ್ನು ದಮನಿಸಿರುವ ವ್ಯವಸ್ಥೆಯ ವಿರುದ್ಧ ಸಂಘಟನೆ ಹಾಗೂ ಹೋರಾಟಕ್ಕೆ ಬೇಕಾದ ಅರಿವನ್ನು ಪಡೆಯುವುದು ಈ ವೈಚಾರಿಕತೆಯ ಮೊದಲ ಘಟ್ಟ. ಈ ವೈಚಾರಿಕತೆಯು ದಲಿತ ಸಂಸ್ಕೃತಿಯು ಸಂವೇದನೆಯ ಪ್ರಶ್ನೆಯಾಗಿದ್ದು ಎರಡನೆಯ ಘಟ್ಟ, (ಈ ಘಟ್ಟಗಳನ್ನು ದೇವನೂರರ 'ದ್ಯಾವನೂರು' ಹಾಗೂ 'ಕುಸುಮ ಬಾಲೆ' ಕಾದಂಬರಿಗಳಲ್ಲಿ ಕ್ರಮವಾಗಿ ಕಾಣಬಹುದು) ದಲಿತರಲ್ಲಿ ಹಾಗೂ ಕೆಳಸ್ತರದವರಲ್ಲಿ ಹುಟ್ಟಿದ ಮೊದಲ ಘಟ್ಟದ ವೈಚಾರಿಕತೆಯು ಸಂಘರ್ಷಮುಖಿಯಾದ ರಾಜಕೀಯ ಪ್ರಜ್ಞೆ ಬೆಳೆಸಿತು. ಎರಡನೆಯ ಘಟ್ಟದ ದಲಿತ ಸಂವೇದನೆಯು ಚಿಂತನೆ ಮತ್ತು ಜಿಜ್ಞಾಸೆಯನ್ನು ಮೂಡಿಸಿತು. ದಲಿತ ಚಿಂತಕರು, ದೃಶ್ಯಕಲಾವಿದರು 'ಆಧುನಿಕ ವೈಚಾರಿಕತೆ

ಮೂಲಕ ಮಾಡುವ ಹೋರಾಟವು ನಮ್ಮನ್ನು ಪೂರ್ಣವಾಗಿ ಬಿಡುಗಡೆ ಮಾಡದು. ಅದು ಶತ್ರುವನ್ನು ವಿಶ್ಲೇಷಿಸುತ್ತ ಹುಟ್ಟುವ ತಂತ್ರಗಾರಿಕೆ. ಈ ರಾಜಕಾಣವು ಸಾಂಸ್ಕೃತಿಕ ಆಯಾಮವಿಲ್ಲದೆ ಅನೈತಿಕವಾಗುತ್ತದೆ. ಮತ್ತು ಅರ್ಥಪೂರ್ಣ ಆಗುವುದಿಲ್ಲ. ರಾಜಕೀಯ ಎಚ್ಚರಕ್ಕೆ ಸಮುದಾಯದ ಸಾಂಸ್ಕೃತಿಕ ಲೋಕಗಳ ಜತೆಗಿನ ಆಪ್ತವಾದ ಸಂಬಂಧಬೇಕು. ಅದಕ್ಕಾಗಿ ಸಮುದಾಯಗಳ ಚೈತನ್ಯಶೀಲ ನಂಬಿಕೆ ಆಚರಣೆಗಳ ಜಗತ್ತನ್ನು ಆವಾಹನೆ ಮಾಡಬೇಕು.[೧] ಎಂದು ಅವರು ಭಾವಿಸತೊಡಗಿದರು. ಇದಕ್ಕಾಗಿ ದಲಿತ ಸಾಂಸ್ಕೃತಿಕ ಪರಂಪರೆಯನ್ನು ಕಂಡುಕೊಳ್ಳಲು ಗಂಭೀರ ಯತ್ನ ಶುರುವಾಯಿತು. ದಲಿತ ಕೆಲಸ್ತರದ ಸಮುದಾಯಗಳ ಸಂಸ್ಕೃತಿಯು ಉಚ್ಚಜಾತಿಗಳ ಅಸಮಾನತಾವಾದಿ ಸಂಸ್ಕೃತಿಗಿಂತಲೂ ಜನಪರವೂ ವಿಶಾಲತೆಯಿಂದಲೂ ಕೂಡಿದೆ.

ಮಾನವನ ಸಾಂಸ್ಕೃತಿಕ ಬೆಳವಣಿಗೆಯ ಇತಿಹಾಸದಲ್ಲಿ ಚಿತ್ರ-ಶಿಲ್ಪಗಳ ಸೃಷ್ಟಿ ಒಂದು ಪ್ರಮುಖ ಸಾಧನೆಯಾಗಿದೆ. ಆ ದೃಷ್ಟಿಯಿಂದ ದೃಶ್ಯಕಲೆಯನ್ನು ಒಂದು ರಾಷ್ಟ್ರದ ಜನಾಂಗದ ಸಾಂಸ್ಕೃತಿಕ ಸಾಧನೆಗಳ ಔನತ್ಯದ ಪ್ರತೀಕವೆಂದು ಪರಿಗಣಿಸಬಹುದು. ಮಾನವನ ಮನಸ್ಸು ತನ್ನ ಬದುಕಿನ ಹೋರಾಟದ ಅನುಭವಗಳನ್ನು ಅಭಿವ್ಯಕ್ತಿಗೊಳಿಸಲು ಪ್ರಯತ್ನಿಸಿದಾಗಲೇ ಕಲೆಯ ಉಗಮವಾಯಿತೆನ್ನಬಹುದು. ಸಾಮಾನ್ಯವಾಗಿ ನಿತ್ಯ ಬದುಕಿನ ಅವಶ್ಯಕತೆಗಳು ಪೂರೈಕೆಯಾದ ಅನಂತರ ಸಂತೃಪ್ತ ಜೀವನದ ಸಂಕೇತವಾಗಿ ಮನಸ್ಸು ಸಾಂಸ್ಕೃತಿಕ ರಂಗದತ್ತ ಹೊರಳುವುದು ಸ್ವಾಭಾವಿಕ. ಈ ಸಾಂಸ್ಕೃತಿಕ ಜೀವನದ ವಿವಿಧ ಮುಖಗಳಲ್ಲಿ ಸಾಹಿತ್ಯ, ಸಂಗೀತ ಮತ್ತು ಚಿತ್ರ-ಶಿಲ್ಪಕಲೆ ಮುಖ್ಯವಾಗಿವೆ. ಇಂಥ ಕಲಾಪ್ರಕಾಗಳು ಒಂದು ಜನಾಂಗ, ರಾಷ್ಟ್ರದ ಭವ್ಯ ಪರಂಪರೆಯ ಪ್ರತೀಕಗಳಾಗಿ ಆ ನೆಲದ ಸಾಂಸ್ಕೃತಿಕ ಐಸಿರಿಯನ್ನು ಮುಂದಿನ ಪೀಳಿಗೆಗೆ ಸಾರುತ್ತ ಉಳಿದು ಬರುತ್ತವೆ.

---

1 ಸಾಂಸ್ಕೃತಿಕ ಅಧ್ಯಯನ –ರಹಮತ್ ತರೀಕೆರೆ, ಪ್ರಕಾಶನ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಪು.ಸಂ. ೧೧೫

ಆದಿಮ ಸತ್ವ:

ಕಲಾಸೃಷ್ಟಿಯ ಪ್ರಕ್ರಿಯ ಮೊದಲ್ಗೊಂಡದ್ದು ಶಿಲಾಯುಗ ಕಾಲದಲ್ಲಿ. ಪ್ರಾಚೀನ ಮಾನವ ತನ್ನ ಸಂತೋಷ, ದುಃಖ ಮುಂತಾದ ಉದ್ವೇಗಗಳನ್ನು ವ್ಯಕ್ತಪಡಿಸುವ ಸಲುವಾಗಿ ತನ್ನ ಆಶ್ರಯ ತಾಣಗಳಾಗಿದ್ದ ಗುಹೆಗಳ, ಶಿಲಾಶ್ರಯಗಳ ಗೋಡೆ, ಛಾವಣಿಗಳ ಮೇಲೆ ಬಣ್ಣದಿಂದ ಬರೆಯಲಾರಂಭಿಸಿದ ಪರಿಣಾಮವಾಗಿ ಚಿತ್ರಕಲೆ ಸೃಷ್ಟಿಯಾಯಿತು. ಶಿಷ್ಟ ಪ್ರಕಾರವಲ್ಲದ ಈ ಆದಿಮ ಕಲಾ ಪ್ರಕಾರಕ್ಕೆ ಶಿಲಾಯುಗದ ಕಾಲದ ಅಥವಾ ಪ್ರಾಗೈತಿಹಾಸಿಕ ಕಾಲದ ಕಲೆ ಎಂದು ಕರೆಯಲಾಗಿದೆ.

ಹೈದ್ರಾಬಾದ-ಕರ್ನಾಟಕ ಪ್ರದೇಶದ ಕಲಬುರಗಿ ಹಾಗೂ ಬೀದರ ಜಿಲ್ಲೆಗಳನ್ನು ಹೊರತುಪಡಿಸಿ ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾಗೈತಿಹಾಸ ಕಾಲದ ಗವಿವರ್ಣ ಹಾಗೂ ಬಯಲು ಬಂಡೆ ಚಿತ್ರಗಳು ಸಾಕಷ್ಟು ಸಂಖ್ಯೆಯಲ್ಲಿ ಕಂಡುಬಂದಿವೆ. ಯಾದಗಿರಿ ಜಿಲ್ಲೆಯ ಬಳಿಚಕ್ರದಲ್ಲಿನ ಗುಡ್ಡವೊಂದರ ವಿಶಾಲವಾದ ಬಂಡೆಯ ಮೇಲೆ ಮನುಷ್ಯ, ಪ್ರಾಣಿಗಳ ಚಿತ್ರಗಳೊಂದಿಗೆ, ಕಮಲದ ಹೂ ಹಾಗೂ ವಿವಿಧ ಸಂಕೇತಗಳು ಚಿತ್ರಣಗೊಂಡಿವೆ. ಹಾಗೇಯೇ ಬಳ್ಳಾರಿ ಜಿಲ್ಲೆಯ ಹಂಪಿ ಪರಿಸರದ ಚಿತ್ರಗಳು, ರಾಯಚೂರು ಜಿಲ್ಲೆಯ ಅತನೂರು, ಮಾನ್ವಿ, ಬೈಲ್ ಮರ್ಚೇಡ್, ಶಿರವಾರ, ಪಿಕ್ಲಿಹಾಳ ಮತ್ತಿರರೆಡೆ ಚಿತ್ರಿತ ಕಲ್ಲಾಸರೆಗಳು ಕಂಡು ಬಂದರೆ ಕಲ್ಲೂರು, ಭಿಲ್ಲಮರಾಯನ ಗುಡ್ಡ, ಪಿಕ್ಲಿಹಾಳ, ಮಸ್ಕಿ ಮತ್ತು ಗಬ್ಬೂರುಗಳಲ್ಲಿ ಕುಟ್ಟು ಇಲ್ಲವೆ ಕೊರೆದ ಚಿತ್ರಗಳಿವೆ ಲಿಂಗಸ್ಗೂರು ತಾಲೂಕಿನ ಮಸ್ಕಿಯನ್ನು ನವಶಿಲಾಯುಗ ಕಾಲದ ಕುಟ್ಟು ಚಿತ್ರಗಳ ಶ್ರೀಮಂತ ನೆಲೆ ಎಂದು ಹೇಳಲಾಗುತ್ತದೆ. ಇಲ್ಲಿನ ಬೆಟ್ಟ-ಗುಡ್ಡಗಳಲ್ಲಿನ ದುಂಡು ಶಿಲೆಗಳಲ್ಲಿ ಎತ್ತುಗಳು, ಮನುಷ್ಯರು, ಹುಲಿಗಳು, ನವಿಲುಗಳು ಮತ್ತಿತರ ಪ್ರಾಣಿ-ಪಕ್ಷಿಗಳು ಚಿತ್ರಣಗೊಂಡಿವೆ. ಕರ್ನಾಟಕದಲಿ ಕೊಪ್ಪಳ ಜಿಲ್ಲೆಯನ್ನು ಪ್ರಾಗೈತಿಹಾಸ ಕಾಲದ ಚಿತ್ರಗಳ ತವರು ಎನ್ನಲಾಗುತ್ತದೆ. ಜಿಲ್ಲೆಯ ಕೊಪ್ಪಳ ಬಿಳೇಭಾವಿ, ಇಂದರಗಿ, ನಾರಾಯಣಪೇಟೆ, ಬಂಡಿ ಹರ್ಲಾಪುರ ಹಾಗೂ ಗಂಗಾವತಿ ತಾಲೂಕಿನ ತುಂಗಭದ್ರಾ ನದಿತೀರದ ಏಳುಗುಡ್ಡದ ಆಸುಪಾಸಿನ

ಗ್ರಾಮಗಳ ಬೆಟ್ಟ-ಗುಡ್ಡಗಳಲ್ಲಿ ಆದಿಮಾನವರ ನೆಲೆಗಳನ್ನು ಶೋಧಿಸಲಾಗಿದೆ. ಇದೇ ತಾಲೂಕಿನ ಹಿರೇಬೇಣಕಲ್, ಚಿಕ್ಕಬೆಣಕಲ್ ಎಮ್ಮಿಗುಡ್ಡ, ಆನೆಗುಂದಿ, ಮಲ್ಲಾಪುರ, ತಿರುಮಲಾಪುರ, ಚಿಕ್ಕರಾಂಪುರ ಮುಂತಾದ ಕಡೆಗಳಲ್ಲಿ ವರ್ಣಚಿತ್ರಗಳು ಮತ್ತು ಮಲ್ಲಾಪುರ, ಬಸವಾಪಟ್ಟಣ, ಸಿದ್ದಿಕೇರಿಗಳಲ್ಲಿ ಕೊರೆದ ಚಿತ್ರಗಳು ಕಂಡು ಬಂದಿವೆ.

ರಾಯಚೂರು ಜಿಲ್ಲೆಯ ಕುಮತಿಯಲ್ಲಿ ೮-೧೦ ಅಡಿಗಳ ಎತ್ತರದ ಇತಿಹಾಸ ಪೂರ್ವ ಮಾನವ ರೂಪಗಳ ಶಿಲ್ಪಗಳಿವೆ. ಈ ಗ್ರಾನೈಟ್ ಶಿಲ್ಪಗಳು ಪೂರ್ಣ ಪ್ರಮಾಣದ ಆದರೆ ಚಪ್ಪಟೆ ಕಲ್ಲಿನ ನಿರ್ವಹಣೆ ಹೊಂದಿವೆ. ನೋಡುಗರಿಗೆ ಇತಿಹಾಸ ಪೂರ್ವಕಾಲದ ಈ ಶಿಲ್ಪಗಳು ಹತ್ತಿರದಿಂದ ಹಲವು ಕೋನಗಳಲ್ಲಿ ಹೆನ್ರಿಮೂರನ್ ಸರಳು ಸೌಂದರ್ಯದ ಶಿಲ್ಪಗಳನ್ನು ನೆನಪಿಸಬಲ್ಲವು 'ಆದಿಮ ಸತ್ವ'ದ ಪರಾಕಾಷ್ಠೆ ಈ ಶಿಲ್ಪಗಳು. ಈ ಹೆಗ್ಗಳಿಕೆಯ ನಮ್ಮ ಶಿಲ್ಪಕಲಾ ಇತಿಹಾಸ ಪೂರ್ವವೇ ಸರಿ.

ಅಧ್ಯಾಯ-೩

ತಳ ಸಮುದಾಯಗಳು: ಜನಪದೀಯ ಶಿಲ್ಪಗಳು

ಭಾರತೀಯ ಸಂಸ್ಕೃತಿ ವಿಶ್ವದ ಅತ್ಯಂತ ಪ್ರಾಚೀನವಾದ ಸಂಸ್ಕೃತಿಗಳಲ್ಲಿ ಒಂದಾಗಿದೆ. ಇದಕ್ಕೆ ಸುಮಾರು ೫೦೦೦ ವರ್ಷಗಳ ಪ್ರಾಚೀನತೆ ಇದ್ದು, ನಿರಂತರವಾಗಿ ಬೆಳೆದು ಬಂದಿರುವ ಗುಣವೊಂದೇ ಅಲ್ಲದೇ ಇಂದಿಗೂ ಜೀವಂತವಾಗಿರುವ ಹೆಗ್ಗಳಿಕೆ ಇದೆ. ಈ ದೇಶದ ಸಾಂಸ್ಕೃತಿಕ ಪರಂಪರೆಯ ಉಗಮ, ವಿಕಾಸ ಇವುಗಳ ಅಧ್ಯಯನ ಅತ್ಯಂತ ಲಾಭದಾಯಕ, ದೇಶದ ಸಂಸ್ಕೃತಿ ಇಂದು ಮುಟ್ಟಿರುವ ಔನ್ನತ್ಯದ ಮಟ್ಟಕ್ಕೆ ಈ ದೇಶದ ಲಲಿತ ಹಾಗೂ ಕುಶಲ ಕಲೆಗಳ ಅನೇಕ ಪ್ರಕಾರಗಳು ಮಹತ್ತರವಾದ ಕೊಡುಗೆ ನೀಡಿವೆ. ಈ ಕಲೆಗಳ ಉಗಮ, ವಿಕಾಸಗಳು ದೇಶದ ಸಾಂಸ್ಕೃತಿಕ ಬೆಳವಣಿಗೆಯ ಭಾಗವಾಗಿದೆ. ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ, ವಾಸ್ತು ಹಾಗೂ ಮೂರ್ತಿಶಿಲ್ಪಗಳು ದೇಶದ ವಿವಿಧ ಜನ ಸಮುದಾಯಗಳ ಜೀವನದ ಅವಿಭಾಜ್ಯ ಅಂಗಗಳಾಗಿರುವುದೇ ಅಲ್ಲದೇ ಜೀವನದ ಸೊಬಗು ಮತ್ತು ಗಾಂಭೀರ್ಯಗಳನ್ನು ಸಮೃದ್ಧಿಗೊಳಿಸುವ ಸಾಧನಗಳಾಗಿವೆ. ಪ್ರತಿಯೊಬ್ಬ ವ್ಯಕ್ತಿಯ ಮಹತ್ವದ ವಿಕಾಸದ ಕ್ರಿಯೆಯಲ್ಲಿ

ಜೀವನದ ಸಮಗ್ರತೆಯ ದೃಷ್ಟಿಕೋನ ಮೂಡಿಸುವುದರಲ್ಲಿ ಕಲೆಯ ಅನೇಕ ಪ್ರಕಾರಗಳು ಮಹತ್ತರ ಹಾಗೂ ಯಶಸ್ವಿಯಾಗಿ ಪಾತ್ರವಹಿಸಿವೆ.

ಹೈದ್ರಾಬಾದ ಕರ್ನಾಟಕದ ನೆಲ ಜನಪದ ಕಲೆಗಳ ಕಣಜವಾಗಿದೆ. ಜನಪದ ಶಿಲ್ಪಕಲೆಯು ಜನಪದರ ಉಸಿರಿನಿಂದ, ಬೆವರಿನಿಂದ ಹಾಗೂ ನಂಬಿಕೆಗಳಿಂದ ರೂಪ ತಾಳಿರಬಹುದು, ಅವರ ಉತ್ಪಾದಕತೆಯ ಸಂದರ್ಭದಲ್ಲಿ ಸೃಷ್ಟಿಗೊಂಡಂತಹುದು. ಜನಪದ ಸಮಾಜದ ಸೃಜನಶೀಲವಾದ ಮನಸ್ಥಿತಿಯ ಸ್ತರಗಳು ಅಲ್ಲಿ ಅಡಗಿರುವುದಷ್ಟೇ ಅಲ್ಲದೆ ಅವು ತಳ ಸಮುದಾಯಗಳ ಸಾಂಸ್ಕೃತಿಕ ಪ್ರತಿಬಿಂಬಗಳೂ ಆಗಿವೆ. ತಳಸಮುದಾಯಗಳ ಆಶೋತ್ತರಗಳು, ನಂಬಿಕೆ ಆದರ್ಶಗಳು ಇಲ್ಲಿ ಘನೀಭವಿಸಿವೆ.

ತಳ ಸಮುದಾಯದ ಜನರ ಜೀವನದಲ್ಲಿ ಅನಾದಿ ಕಾಲದಿಂದಲೂ ಹಾಸುಹೊಕ್ಕಾಗಿ ಬೆರೆತು ಬಂದಿರುವ ಜನಪದ ಶಿಲ್ಪಗಳು ತಳಸಮುದಾಯಗಳ ಬದುಕಿನ ಪ್ರಮುಖ ಭಾಗವಾಗಿವೆ. ತಳ ಸಮುದಾಯಗಳಲ್ಲಿರುವ ಜನಪದ ಸಂಸ್ಕೃತಿ, ಧಾರ್ಮಿಕ ಆಚರಣೆಗಳು, ಸಾಮಾಜಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವಾಗ ಜನಪದರ ನಂಬಿಕೆ, ಭಯ, ಭಕ್ತಿ, ಸಂಸ್ಕಾರ, ಪಾರಂಪರಿಕ ನಡೆಗಳು ಗಮನಿಸಿದಾಗ ಸ್ಪಷ್ಟತೆಯ ಅರಿವುಂಟಾಗುತ್ತದೆ. ಧಾರ್ಮಿಕ ರೂಪದ ಜನಪದ ಶಿಲ್ಪಗಳು, ಸೌಂದರ್ಯ ಮೂಲದ ಜನಪದ ಶಿಲ್ಪಗಳು, ಆಚರಣೆ ಮೂಲದ ತಾತ್ಕಾಲಿಕ ಶಿಲ್ಪಗಳು, ಕೃಷಿ ಮತ್ತು ವ್ಯಕ್ತಿ ವಸ್ತುಗಳ ಮೂಲದ ಜನಪದ ಶಿಲ್ಪಗಳು ಆಯಾ ಸಮುದಾಯಗಳ ಹಲವಾರು ಸಮಸ್ಯೆಗಳಿಗೆ, ಉಲ್ಲಾಸ, ಸಂಭ್ರಮ, ಹರಕೆ, ವಿವೇಚನೆಯಂತಹ ಸ್ಥಿತಿಗಳ ಸಾಧಕ ಬಾಧಕಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗಿದೆ.

'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಅಕ್ಕಸಾಲಿಗನಾದ ಎನ್ನುವಂತೆ ವೃತ್ತಿಯಿಂದ ಜಾತಿ ನಿರ್ಮಾಣವಾದವು. ಇವರು ಮೂಲತಃ ಜನಪದ ವೃತ್ತಿಕಾರರು. ಈ ವೃತ್ತಿಕಾರರಿಗೆಲ್ಲ ರೈತ ಮೇಟಿಯ ರೂಪದಲ್ಲಿದ್ದಾನೆ. ಇವರಿಗೆಲ್ಲ ಅನ್ನದಾತವೆನಿಸಿದ್ದಾನೆ. ಆದರೂ

ಒಬ್ಬರು ಇನ್ನೊಬ್ಬರ ಮೇಲೆ ಅವಲಂಬಿತರಾಗಿದ್ದಾರೆ. ರೈತ ಒಕ್ಕಲುತನ ಕಾರ್ಯಕ್ಕೆ ಇವರೆಲ್ಲರ ಸಹಕಾರ ಅತ್ಯವಶ್ಯಕ, ಕುಂಬಾರ, ಕಂಬಾರ, ಬಡಿಗ, ನೇಕಾರ ಹೂಗಾರ್, ಚಮ್ಮಾರ, ಡೋಹಾರ, ತಳವಾರ, ನಾಯಿಂದ, ಅಗಸ ಹೀಗೆ ಅನೇಕ ತಳಸಮುದಾಯದ ಕಸುಬುಗಾರರು ತಮ್ಮ ತಮ್ಮ ವೃತ್ತಿಯಿಂದ ರೈತನಿಗೆ ನೆರವಾಗುತ್ತಾರೆ. ರೈತನಾದರೂ ಅವರವರ ಕಾರ್ಯಕ್ಕೆ ತಕ್ಕ ಪ್ರತಿಫಲ ನೀಡುತ್ತಾನೆ. ರಾಶಿಯೆಂದು ಕಣದ ಮೇಲೆ ಇವರನ್ನೆಲ್ಲ ಕರೆದು ಗೌರವಿಸಿ, ಪ್ರೀತಿ–ವಿಶ್ವಾಸಗಳಿಂದ ಅವರ ಋಣ ತೀರಿಸುತ್ತಾನೆ. ಅವರಿಗೆ ಸಲ್ಲಬೇಕಾದ 'ಆಯ'ವನ್ನು ಕೊಟ್ಟು ಅವರ ಜೀವನಕ್ಕೆ ಆಸರೆಯಾಗುತ್ತಾನೆ. ಅಸ್ಪೃಶ್ಯನನ್ನು ಮನೆಯ ಮಗನೆಂದು ಭಾವಿಸುತ್ತಾನೆ. ಅವನಿಗೂ ಸಲ್ಲಬೇಕಾದ ಆಯವನ್ನಕೊಟ್ಟು ಆತನ ಬದುಕಿಗೆ ಉರುಗೋಲಾಗಿ ಪರಿಣಮಿಸುತ್ತಾನೆ. ಹೀಗೆ ಹಿಂದಿನ ಕಾಲದಲ್ಲಿ ರೈತನನ್ನು ಅವಲಂಬಿಸಿ ಎಲ್ಲ ವರ್ಗದ ಜನ ಜನಪದ ಸಮಾಜದಲ್ಲಿ ಪ್ರೀತಿ–ವಿಶ್ವಾಸಗಳಿಂದ ಬದುಕಿಕೊಂಡು ಬಂದಿದ್ದಾರೆ.

ಜನಪದರು ಬೇಟೆ ಸಾಧನಗಳಲ್ಲಿ, ವ್ಯವಸಾಯದ ಉಪಕರಣಗಳಲ್ಲಿ ವಿವಿಧ ವೃತ್ತಿಯ ಸಾಧನ ಸಲಕರಣೆಗಳಲ್ಲಿ ಕಲಾತ್ಮಕತೆಯನ್ನು ತೋರಿಸುತ್ತಲ್ಲೇ ಬಂದಿದ್ದಾರೆ. ಆದುದರಿಂದ ಕಲೆ ಇಲ್ಲದೆ ಅವರ ಬದುಕಿಲ್ಲ. ಕಲೆ ಅವರಿಗೆ ಹೃದಯ ವೈಶಾಲ್ಯವನ್ನು ಸಹಕಾರ ಮನೋಭಾವವನ್ನು ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಡುವ ಸಾಧನವಾಗಿದೆ. ಜಾತಿಮತಗಳ ಗೊಂದಲಗಳ ಆಚೆಗೆ ನಿಂತು ಜನಪದ ಕಲೆ ಮನುಷ್ಯನ ಬದುಕಿನ ಬೆಳಕಾಗಿ ಉಳಿದುಬಂದಿದೆ.

ವಾಸ್ತುರೂಪದ ಕಲೆ ಜನಪದ ಕಲೆಗಳ ಒಂದು ಅಂಗ ಇದು ಜನಪದ ಶಿಲ್ಪಕ್ಕೆ ಸಂಬಂಧಿಸಿದ್ದು, ವಾಸ್ತುಶಿಲ್ಪ ಹಾಗೂ ಸಾಧಾರಣ ಶಿಲ್ಪಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಜನರು ವಾಸವಾಗಿರುವ ಊರು ಮನೆಗಳಲ್ಲೂ ಅನೇಕ ಬದಲಾವಣೆಗಳನ್ನು ಕಾಣಬಹುದಾಗಿದೆ. ಒಂದೊಂದು ಪ್ರದೇಶಕ್ಕೆ ಹವಾಮಾನಗಳಿಗೆ ಅನುಗುಣವಾಗಿ ಅವು ಬೆಳೆದು ಬಂದಿವೆ.

ಜನಪದ ಶಿಲ್ಪಕಲೆ ಎಂದರೆ ಸಾಮಾನ್ಯವಾಗಿ ತಳಸಮುದಾಯಗಳ ಜನರಿಂದ ಲಕ್ಷಣ ಮುಕ್ತವಾಗಿ ರಚನೆಗೊಂಡ ಆಕೃತಿಗಳು, ಅಂದರೆ ಶಿಷ್ಟಪದ ಶಿಲ್ಪಗಳ ರಚನೆಯಲ್ಲಿರುವ ಶಾಸ್ತ್ರದ ಕಟ್ಟು ಕಟ್ಟಳೆಗಳೇ ನಿವೇದನೆ, ಅವೆಲ್ಲ ಜನಪದ ಶಿಲ್ಪಕೃತಿಗಳ ರಚನೆಯಲ್ಲಿ ಇರುವುದಿಲ್ಲ. ಒಂದರ್ಥದಲ್ಲಿ ಜನಪದ ಶಿಲ್ಪಕಲಾಕೃತಿಗಳು ಎಂದರೆ ಉಳಿಮುಟ್ಟದ ಪ್ರತಿಮೆಗಳಿದ್ದಂತೆ. ಅವುಗಳಲ್ಲಿ ನಯ–ನಾಜೂಕು ಕಡಿಮೆಯೆನಿಸಿದರೂ ಅಂತಃಸತ್ವ ಮಾತ್ರ ಹಿರಿದಾಗಿರುತ್ತದೆ. ಧಾರ್ಮಿಕ ಸಂಪ್ರದಾಯಗಳು, ಪ್ರಕೃತಿಯ ಶಕ್ತಿ ಮೂಲಗಳು, ಮಾನವನ ಸುಪ್ತ ಚೇತನಗಳು ಹುದುಗಿಕೊಂಡಿರುವ, ಸೌಂದರ್ಯ ತುಂಬಿರುವ, ತಳಸಮುದಾಯಗಳ ದೈನಂದಿನ ಬದುಕೇ ಆಗಿರುವ 'ರೂಪಕಗಳು' ಈ ಜನಪದ ಶಿಲ್ಪಗಳು ಎಂದರೆ ಅತಿಶಯೋಕ್ತಿಯಲ್ಲ.

ಬಿಡುವಿನ ವೇಳೆಯಲ್ಲಿ, ಕೆಲಸದ ಅವಧಿಯಲ್ಲಿ, ಸುಗ್ಗಿಯ ಕಾಲದಲ್ಲಿ ಹಾಗೆಯೇ ಮದುವೆ, ಶೋಭಾನಗಳು, ಹಬ್ಬ–ಹರಿದಿನಗಳು ಮೊದಲಾದ ಸಂದರ್ಭಗಳಲ್ಲಿ ಒಟ್ಟು ಆಚರಣೆಯ ಕೇಂದ್ರಬಿಂದುವಾಗಿ ಈ ಶಿಲ್ಪಗಳು ಸೃಷ್ಟಿಗೊಳ್ಳುತ್ತ ಬಂದಿರುವವು. ಈ ಶಿಲ್ಪಗಳು ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಹೇರಳವಾಗಿ ನೋಡಲು ಸಿಗುತ್ತವೆ.

ನಮ್ಮ ಗ್ರಾಮೀಣ ಪ್ರದೇಶದ ತಳಸಮುದಾಯಗಳ ಅನುಭವ ಹೃದಯ ಶ್ರೀಮಂತಿಕೆ, ಸಂಸ್ಕಾರಗಳು ಈ ಶಿಲ್ಪಗಳಲ್ಲಿ ಅರಿ ನಿಂತಿವೆ. ಈ ಶಿಲ್ಪಗಳ ವೈವಿಧ್ಯತೆ, ಮಾಧ್ಯಮ, ರಚನಾ ತಂತ್ರಗಾರಿಕೆ ಮತ್ತು ಮೈವಳಿಕೆ ಅಲ್ಲದೆ ಪೂಜೆ–ಆರಾಧನೆ–ವಿಧಿಕ್ರಿಯೆಗಳು ಎಲ್ಲವೂ ಕಲಾತ್ಮಕವಾಗಿರುತ್ತವೆ. ಹೃದಯ ಸ್ಪರ್ಷಿಯಾಗಿರುತ್ತವೆ. ಶಿಲ್ಪಗಳನ್ನು ರಚಿಸುವ ತಳ ಸಮುದಾಯಗಳ ಜನರು ಎಂದೂ ತಾವು ಕಲಾವಿದರೆಂದೇ ಅಥವಾ ಶಿಲ್ಪಿಗಳೆಂದೇ ಅಂದುಕೊಂಡವರೆ ಅಲ್ಲ. ಯಾರು ಬೇಕೋ ಅವರು ತಮಗೆ ಅಂದಕಂಡಂತೆ ಶಿಲ್ಪಗಳನ್ನು ಸೃಷ್ಟಿಸಿದರು. ಅವೆಲ್ಲ ಜನಪದ ಶಿಲ್ಪಗಳೆನಿಸಿದವು.

ಜನಪದ ಶಿಲ್ಪಗಳು ನಮ್ಮ ಗ್ರಾಮೀಣ ಸಂಸ್ಕೃತಿ ಸಂಪ್ರದಾಯಗಳ ಸಂಕೀರ್ಣತೆಯನು ಹೇಳುವ ಸಂಕೇತಗಳು ಆಗಿ ನಿಂತಿವೆ. ಹಾಗಾಗಿ ಅನೇಕ ವೇಳೆ ಶಿಷ್ಟ ಮತ್ತು ಜನಪದ ಶಿಲ್ಪಗಳೆರಡೂ ಅನ್ಯೋನ್ಯವಾಗಿ ಬೆರೆತದ್ದುಂಟು. ಅಂದರೆ ಒಮ್ಮೊಮ್ಮೆ ಶಿಷ್ಟಕ್ಕೆ ಜನಪದವನ್ನು ಜನಪದಕ್ಕೆ ಶಿಷ್ಟವನ್ನು ಕಸಿಮಾಡಿರುವುದನ್ನು ಕಾಣುತ್ತೇವೆ.

ವಿಶೇಷವಾಗಿ ಹೈದ್ರಾಬಾದ-ಕರ್ನಾಟಕ ಪ್ರದೇಶದಲ್ಲಿ ಬೆಳೆದು ಬಂದಿರುವ ವೈವಿಧ್ಯಮಯ ಜನಪದ ಶಿಲ್ಪಗಳಲ್ಲಿ ಮುಖ್ಯವಾಗಿ ೧) ಮಣ್ಣು ಮಾಧ್ಯಮದ ಜನಪದ ಶಿಲ್ಪಗಳು ೨) ಶಿಲಾ ಮಾಧ್ಯಮದ ಜನಪದ ಶಿಲ್ಪಗಳು ೩) ಮರ ಮಾದ್ಯಮದ ಜನಪದ ಶಿಲ್ಪಗಳು, ೪) ಲೋಹ ಮಾಧ್ಯಮದ ಜನಪದ ಶಿಲ್ಪಗಳು ೫) ಸಂಕೀರ್ಣ ಮಾಧ್ಯಮದ ಶಿಲ್ಪಗಳು ಕಂಡು ಬರುತ್ತವೆ.

ಈ ಮಾಧ್ಯಮಗಳಲ್ಲಿ ಸೃಷ್ಟಿಯಾಗಿರುವ ಶಿಲ್ಪಗಳ ರಾಶಿ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಅಪಾರವಾಗಿದೆ.

೧) ಮಣ್ಣಿನ ಮಾಧ್ಯಮದ ಜನಪದ ಶಿಲ್ಪಗಳು: ಜೋಕುಮಾರ, ಗುಳ್ಳವ್ವ, ಮಣ್ಣೇತ್ತು, ಸೀಗಮ್ಮ, ಗಜಲಕ್ಷ್ಮೀ, ಕಾಮನ ಶಿಲ್ಪ, ಹರಕೆಯ ಶಿಲ್ಪಗಳು, ದೃಷ್ಟಿಬೊಂಬೆಗಳು, ಅಲಂಕಾರದ ಜಂಭದ ಆನೆ, ಮುಂತಾದ ಮಣ್ಣಿನ ಮಾಧ್ಯಮದ ಜನಪದ ಶಿಲ್ಪಗಳನ್ನು ತಳ ಸಮುದಾಯದ ಶಿಲ್ಪಗಳ ಸೃಷ್ಟಿಯಾಗಿವೆ. ಉದಾಹರಣೆಯಾಗಿ ಮಣ್ಣೇತ್ತಿನ ಶಿಲ್ಪಗಳನು ಗಮನಿಸಬಹುದು.

ಮಣ್ಣೆತ್ತಿನ ಶಿಲ್ಪಗಳು:

ಮಣ್ಣೆತ್ತಿನ ಶಿಲ್ಪಗಳನ್ನು ಕುಂಬಾರರು, ಚಿತ್ರಗಾರರು, ಜೀನಗಾರರು, ಬಡಿಗೇರರು, ಮುಂತಾದವರು ಮಾಡುತ್ತಾರೆ. ಕೃಷಿ ಪ್ರಧಾನವಾದ ದೇಶ ನಮ್ಮದು, ನಾವು ಸಾಗುವಳಿ ಮಾಡಲು ಹೆಚ್ಚಾಗಿ ಮೊದಲಿನಿಂದಲೂ ಎತ್ತುಗಳನ್ನು ಉಪಯೋಗಿಸುತ್ತಾ ಬಂದಿದ್ದೇವೆ. ಜ್ಯೇಷ್ಠ, ಆಷಾಢದಲ್ಲಿ ಬರುವ ಮಣ್ಣೆತ್ತಿನ ಅಮವಾಸ್ಯೆಯ ದಿವಸ ಮಣ್ಣೆತ್ತುಗಳನ್ನು ತಂದು ಜಗುಲಿಯ ಮೇಲಿಟ್ಟು ಪೂಜಿಸುತ್ತಾರೆ. ಬಸವಣ್ಣ ಎಂದು ನಾಮಾಂಕಿತ ಮಾಡಿ ಸುಣ್ಣ ಬಣ್ಣಗಳಿಂದ ಅಲಂಕರಿಸಿ, ಬಳಿ

ಬಸವಣ್ಣನಂತೆ ಮಾಡುವರು. ಈ ರೀತಿ ಸದಾ ರೈತರೊಂದಿಗೆ ಪರಿಶ್ರಮ ಪಟ್ಟು ದುಡಿಯುವ ಪ್ರಾಣಿಯ ಬಗ್ಗೆ ಪೂಜ್ಯ ಭಾವನೆ ಸದಾ ಇರಲಿ ಎನ್ನುವ ಭಾವನೆಯಿಂದ ನಮ್ಮ ಪೂರ್ವಜರು ಮಣ್ಣೆತ್ತಿನ ಶಿಲ್ಪಕಲೆ ಉತ್ಸವ ಆಚರಣೆ ತಂದರು.

ಹಳ್ಳಿಗಳಲ್ಲಿ ಕುಂಬಾರರು ಹೆಚ್ಚಾಗಿ ಈ ಮಣ್ಣಿನ ಎರಡು ಜೋಡಿ ನೀಟಾದ ಕೊಡುಗಳುಳ್ಳ ಜೋಡೆತ್ತುಗಳನ್ನು ಮಾಡುತ್ತಾರೆ. ಮತ್ತು ಆಹಾರ ತಿನ್ನಲೆಂದು ಅವುಗಳ ಮುಂದೆ ಒಂದು ಸಣ್ಣ ಡೋಣಿಯನ್ನು ಮಾಡಿ ಊರಲ್ಲಿಯ ಪ್ರತಿ ಮನೆಮನೆಗೆ ಕೊಟ್ಟು ಅದಕ್ಕೆ ಪ್ರತಿಯಾಗಿ ಜಾಜವನ್ನು ಕಾಳುಕಡಿಯ ರೂಪದಲ್ಲಿ ಒಯ್ಯುತ್ತಾರೆ. ಎತ್ತುಗಳ ನಿರ್ಮಾಣದಲ್ಲಿ ಕುಂಬಾರರ ಕಲಾವಂತಿಕೆ ವಿಶೇಷವಾಗಿರುತ್ತದೆ. ಈ ಮಣ್ಣಿನ ಜೋಡೆತ್ತುಗಳಿಗೆ ಮನೆಯಲ್ಲಿ ಗಂಡು ಮಕ್ಕಳು ವಿಶೇಷ ಅಲಂಕಾರ ಮಾಡುತ್ತಾರೆ. ಅವುಗಳ ಕೊಡುಗಳಿಗೆ ಬಣ್ಣ ಹಚ್ಚಿ ಕೊರಳಲ್ಲಿ ಗೆಜ್ಜೆ, ಮುಂತಾದ ಎತ್ತುಗಳಿಗೆ ಹಾಕುವ ಆಭರಣಗಳ ಅಲಂಕಾರ ಈ ಎತ್ತುಗಳಿಗೂ ಮಾಡಿ ಅವುಗಳಿಗೂ ಜೂಲ ಹಾಕಿ ಮನೆಯಲ್ಲಿ ವಿಶೇಷವಾದ ಪೂಜೆ ಸಲ್ಲಿಸುತ್ತಾರೆ. ಮರುದಿವಸ ಇವುಗಳನ್ನು ಮನೆಯ ಗೂಡುಗಳಲ್ಲಿರುವ ಸಂಪ್ರದಾಯವಿದೆ.

ಮರ ಮಾಧ್ಯಮದ ಜನಪದ ಶಿಲ್ಪಗಳು:

ಜನಪದ ಶಿಲ್ಪಕಲಾ ಕ್ಷೇತ್ರದಲ್ಲಿ ಮರ ಮಾಧ್ಯಮದ ಶಿಲ್ಪಗಳ ಕ್ಷೇತ್ರವು ವಿಶಾಲವಾದುದಾಗಿದೆ. ಧಾರ್ಮಿಕ ಶಿಲ್ಪಗಳಲ್ಲಿ ಹೆಚ್ಚಿನದಾಗಿ ಮರ ಮೂರ್ತಿಗಳು, ವಾಹನಗಳು, ಕೆಲವು ದೇವಾಲಯಗಳಲ್ಲಿನ ಮುಖ್ಯ ಮೂರ್ತಿಗಳು ಮರ ಮಾಧ್ಯಮದಲ್ಲಿಯೇ ರಚನೆಗೊಂಡತಹುಗಳು ಆಗಿವೆ. ಮರ ಮಾಧ್ಯಮದ ಜನಪದ ಶಿಲ್ಪಗಳು ಮೈವಳಿಕೆಯಲ್ಲಿ ನುಣುಪಾಗಿಯೇ ಅನಾವರಣಗೊಳ್ಳುವಂತಹುಗಳಾಗಿದ್ದು, ಬಣ್ಣಗಳಿಂದ ಅಲಂಕೃತಗೊಂಡಿರುತ್ತವೆ. ವರ್ಣಾಲಂಕಾರಗೊಂಡ ಶಿಲ್ಪಗಳು ದೀರ್ಘ ಕಾಲದ ಬಾಳಿಕೆಗೂ ಜೊತೆಗೆ ಆಯಾ ಶಿಲ್ಪದ ರೂಪದಕ್ಕೆ ತಕ್ಕನಾದ ರೀತಿಯಲಿ ಕಲಾವಿದರನ್ನು ತನ್ನ ಅಭಿರುಚಿಯನ್ನು ಜನರಿಗೆ

ಒಪ್ಪಿಗೆಯಾಗುವ ರೀತಿಯಲ್ಲಿ ರಚನೆ ಮಾಡಿರುವುದನ್ನು ಜನಪದ ಶಿಲ್ಪಗಳಲ್ಲಿ ಗಮನಿಸಬಹುದಾಗಿದೆ.

ಮರದ ಮಾಧ್ಯಮದಲ್ಲಿ ತಳ ಸಮುದಾಯಗಳ ಕಲಾವಿದರು ಹಲವಾರು ಜನಪದ ಶಿಲ್ಪಗಳನ್ನು ರಚಿಸಿರುವರು. ವಿಭೂರ್ತಿ ಬುಟ್ಟಿಗಳು, ದೇವರ ಪಲ್ಲಕ್ಕಿ, ನಂದಿಧ್ವಜ, ಕಂಬಗಳು, ದ್ವಾರಬಾಗಿಲುಗಳು, ಕೃಷಿ ಉಪಕರಣಗಳು ಇಂತಹ ಮೊದಲಾದವುಗಳಲ್ಲಿ ಶಿಲ್ಪಗಳನ್ನು ಪ್ರಾಯೋಜನಿಕ ದೃಷ್ಟಿಯಿಂದ ರಚಿಸಿದವುಗಳಾಗಿರುತ್ತವೆ. ಕೀಲು ಕುದುರೆ, ಸೂತ್ರದ ಗೊಂಬೆ, ಚಂದಾಳಗೊಂಬೆ, ಗಾರುಡಿಗೊಂಬೆ ಮೊದಲಾದವುಗಳನ್ನು ಮನೋರಂಜನೆಯ ಹಿನ್ನೆಲೆಯಲ್ಲಿ ರಚಿಸಿದವುಗಳಾಗಿರುತ್ತವೆ.

ದ್ಯಾಮವ್ವ, ಮರಗವ್ವ, ಚೆಂಗಳೆವ್ವ, ಎಲ್ಲಮ್ಮ, ದುರಗಮ್ಮ, ಚೌಡಮ್ಮ, ಗಡಿಮಾರಿ ಮೊದಲಾದ ಶಿಲ್ಪಗಳನ್ನು ಧಾರ್ಮಿಕ ಹಿನ್ನೆಲೆಯಲ್ಲಿ ರಚಿಸಿದವುಗಳಾಗಿರುತ್ತವೆ. ಹೊಟ್ಟೆ ಹೊರೆಯಲು ಹೊತ್ತು ತಿರುಗವವರಲ್ಲಿ ದುರಗಮ್ಮ ಪೋತುರಾಜನ ಮುಖವಾಡದಂತಹ ಹಲವು ಶಿಲ್ಪಗಳನ್ನು ಕಾಣಬಹುದು.

ಕಲೆಯನ್ನೇ ವೃತಿಯಾಗಿಸಿಕೊಂಡಿರುವ ಕಿನ್ನಾಳ, ಗಾಜರಕೋಟದಂತಹ ಕೆಲವಾರು ಸ್ಥಳ ನಿರ್ದಿಷ್ಟ ವೃತ್ತಿಕಾರದಲ್ಲಿಯೂ ಹಲವು ಶಿಲ್ಪಗಳನ್ನು ಕಾಣಬಹುದು. ಉದಾಹರಣೆಯಾಗಿ ಕಿನ್ನಾಳ ಗೊಂಬೆ ಶಿಲ್ಪವನ್ನು ಗಮನಿಸಬಹುದು.

ಕಿನ್ನಾಳ ಶಿಲ್ಪ

ಕುಶಲಕರ್ಮಿಗಳ ನೆಲೆಬೀಡು ಕೊಪ್ಪಳ ತಾಲ್ಲೂಕಿನ ಕಿನ್ನಾಳಗ್ರಾಮ ಈಗ ಸುಮಾರು ೨೫ ಜನ ಕುಶಲಕರ್ಮಿಗಳ ಪ್ರಯತ್ನದಿಂದ ದೇಶದ ಜನರನ್ನು ಆಕರ್ಷಿಸಿದೆ. ಇಲ್ಲಿ ವಿಜಯನಗರ ಅರಸರ ಕಾಲದಿಂದಲೂ ಕಲಾವಿದರು ತಮ್ಮ ಸೃಜನಶೀಲ ಪ್ರತಿಭೆಯನ್ನು ಪ್ರಕಟಗೊಳಿಸುತ್ತಾ ಬಂದಿದಾರೆ.

ದೇವರ ಪಲ್ಲಕ್ಕಿ, ಮಂಟಪ, ಬೊಂಬೆಗಳ ಕೆತ್ತನೆಗೆಲಸ, ಪೀಠೋಪಕರಣಗಳು, ಷೋಕೇಸ್, ಒಡವೆ ಪೆಟ್ಟಿಗೆ, ಮತ್ತು ಕಿನ್ನಾಳದ ಆಟಿಕೆಗಳು ತುಂಬಾ ಪ್ರಸಿದ್ದವಾಗಿವೆ. ಮೊದಲು ಗ್ರಾಮದೇವತೆಗಳಿಗೆ ಬಣ್ಣದ ಲೇಪನ ಮಾಡುತ್ತಿದ್ದ ಈ ಕಲಾವಿದರು ಕಾಲಕ್ಕೆ ತಕ್ಕಂತೆ ತಮ್ಮ ಕಲಾಕೃತಿಗಳಲ್ಲಿ ವೈವಿಧ್ಯತೆಯನ್ನು ತಂದುಕೊಂಡಿದ್ದಾರೆ.

ಕಟ್ಟಿಗೆಯ ತುಂಡು, ಚಹಾಪೆಟ್ಟಿಗೆ, ತಟ್ಟಿನ ಗಂಜು, ಮಣ್ಣು, ಕಟ್ಟಿಗೆಯ ಪಾಚಿ, ಹುಣಸೆಯ ಸರಿ ಮುಂತಾದ ವಸ್ತುಗಳನ್ನು ಬಳಸಿ ಕಲಾಕೃತಿಗಳನ್ನು ನಿರ್ಮಿಸುತ್ತಾರೆ. ಈ ಕಲಾಕೃತಿಗಳಿಗೆ ಬಳಸುವ ಬಣ್ಣಗಳು ಎರಡು ರೀತಿಯಲ್ಲಿವೆ. ಒಂದು ಬಾಳಪ್ಪನ ಬಣ್ಣ ಇನ್ನೊಂದು ಲಜಾವರ ಬಣ್ಣ.

ಬಾಳಪ್ಪನ ಬಣ್ಣ: ಇದು ಬಳಪದ ಬಣ್ಣವಾಗಿದ್ದು, ಜನಪದರ ಬಾಯಲ್ಲಿ ಬಾಳಪ್ಪನ ಬಣ್ಣವಾಗಿದೆ. ಬಳಪದ ಕಲ್ಲನ್ನು ತಂದು ನೀರಿನಲ್ಲಿ ನೆನೆಯಿಟ್ಟು ಅರೆದು ಇಲ್ಲವೆ ತೇಯ್ದು ಅಂಟು ಹಾಕಿ ಸೋಸುತ್ತಾರೆ. ಹೀಗೆ ಸೋಸಿದ ದ್ರಾವಣವನ್ನು ಆಟಿಕೆ ವಸ್ತುಗಳಿಗೆ ಲೇಪಿಸುತ್ತಾರೆ.[1]

ಲಜಾವರ ಬಣ್ಣ: ಇದನ್ನು ಬಣ್ಣಗಳ ರಾಜನೆಂದು ಕರೆಯುತ್ತಾರೆ. ಕಿನ್ನಾಳ ಶಿಲ್ಪಕಲಾವಿದರು ಈ ಬಣ್ಣಕ್ಕೆ ವಿಶೇಷ ಮಹತ್ವವನ್ನು ಕೊಟ್ಟಿದ್ದಾರೆ. ಕುಟ್ಟಿದ ತವರಕ್ಕೆ ಮೀನಸರಿ ಹಾಕಿ ಹದಬರುವಂತೆ ಮಾಡುತ್ತಾರೆ ಆಮೇಲೆ ನೀರಿನಲ್ಲಿ ಕೆಲವು ಸಮಯ ನೆನೆಯಿಟ್ಟು ನಂತರ ಈ ದ್ರಾವಣವನ್ನು ಸೇರಿಸುತ್ತಾರೆ. ಹೀಗೆ ಸಿದ್ದವಾದುದೆ ಲಜಾವರ ಬಣ್ಣವಾಗಿದೆ.

ಹೈದರಾಬಾದಿನ ನಿಜಾಮನ ಸೋದರ ಸಂಬಂಧಿಯಾದ ಸಾಲಾರಜಂಗನಿಗೆ ಕೊಪ್ಪಳ ಪ್ರದೇಶವು ಜಹಗೀರಾಗಿ ದೊರೆತ ಮೇಲೆ, ಆತನು ಕಿನ್ನಾಳ ಕಲಾಕೃತಿಗಳ ಸೌಂದರ್ಯಕ್ಕೆ ಮಾರು ಹೋಗಿ, ಅಪಾರ ಪ್ರೋತ್ಸಾಹ ನೀಡಿದನು. ಚಿತ್ರಗಾರರಿಗೆ 'ನಿರ್ಮಲ್' ಕುಶಲಕಲೆಯ ಸಂಪರ್ಕ ಬರುವಂತೆ ಮಾಡಿ, ವಿವಿಧ ಪರ್ಷಿಯನ್ ವಿನ್ಯಾಸಗಳನ್ನು ಇವರು ಅಳವಡಿಸಿಕೊಳ್ಳಲು

1 ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಲಲಿತ ಕಲೆಗಳ ಸಂಪುಟ, ಲೇ: ಡಾ.ಎಸ್.ಸಿ.ಪಾಟೀಲ, ಪು.ಸಂ. ೮೦

ಕಾರಣನಾದನು. ಹಾಗಾಗಿ ಕಿನ್ನಾಳ ಕಲೆಯು ಹಿಂದೂ-ಮುಸ್ಲಿಂ ಶೈಲಿಯ ಸುಂದರ ಸಾಮರಸ್ಯವನ್ನು ಮೈಗೂಡಿಸಿಕೊಂಡು, ಇನ್ನೊಂದು ಆಯಾಮವನ್ನು ಕಂಡಕೊಳ್ಳಲು ಸಾಧ್ಯವಾಯಿತು. ದೊಡ್ಡಮೂರ್ತಿ ಹಾಗೂ ಬೊಂಬೆಗಳ ತಯಾರಿಕೆಗೆ ಪೊಳಕಿ ಮತ್ತು ಮಾಲಗತ್ತಿ ಮರಗಳನ್ನು ಬಳಸುತ್ತಾರೆ. ಹಣ್ಣು ಮತ್ತು ತರಕಾರಿಗಳ ಪ್ರತಿಕೃತಿಗಳನ್ನು ತಯಾರಿಸಲು ನುಗ್ಗೆಯ ಮರವನ್ನು ಬಳಸುತ್ತಾರೆ. ಬೇವಿನ ಮರದಿಂದ ಚೌಕಿಗಳು, ಫಲಕಗಳು, ಪ್ರಭಾವಳಿಗಳು ಮತ್ತು ಪೀಠೋಪಕರಣಗಳನ್ನು ತಯಾರಿಸುತ್ತಾರೆ.

ಕಲಾಕೃತಿಗಳ ತಯಾರಿಕೆಗೆ ಮೊದಲು ಈ ಕೆಳಕಂಡ ಕಚ್ಚಾವಸ್ತುಗಳನ್ನು ಸಿದ್ಧಪಡಿಸಿಟ್ಟುಕೊಳ್ಳಲಾಗುವ ಹುಣಸೆ ಬೀಜಗಳನ್ನು ತೆಗೆದುಕೊಂಡು ಉರಿಯಿಂದ ಸಣ್ಣ ಸಣ್ಣ ತುಂಡಗಳನ್ನಾಗಿ ಕತ್ತಿರಿಸಿ, ಅದನ್ನು ಚೆನ್ನಾಗಿ ಪುಡಿಮಾಡಿ ಹುಣಸೆ ಸರಿ ಮತ್ತು ಮರದ ಪುಡಿಯೊಡನೆ ಚೆನ್ನಾಗಿ ಮಿಶ್ರಣ ಮಾಡಿದಾಗ 'ಕಿಟ್ಟ' ಸಿದ್ಧವಾಗುವುದು. ಬೆಣಚು ಕಲ್ಲನ್ನು ರಂಗೋಲಿಯಂತೆ ಹಿಟ್ಟುಮಾಡಿ ಅದನ್ನು ನೀರಲ್ಲಿ ನೆನೆಯಿಸಿ, ಸೋಸಿದಾಗ, 'ಬಿಲಿಡು' ಸಿದ್ಧವಾಗುವುದು ಅದಕ್ಕೆ ಸೋಸಿದ ಗೊಂದು ಮತ್ತು ವಜ್ರ ಸರಿಗಳನ್ನು ಸೇರಿಸಿದಾಗ 'ಗಚ್ಚಾ' ತಯಾರಾಗುವುದು. ಇದನ್ನು ಗೊಂಬೆಮತ್ತಿತ್ತರ ಕಲಾಕೃತಿಗಳ ಮೇಲೆ ಆಭರಣಗಳು ಮತ್ತಿತರ ವಿನ್ಯಾಸಗಳ ಕುಸುರಿ ಕೆಲಸ ಮಾಡುವಾಗ ಅವುಗಳು ಉಬ್ಬಿ ತೋರುವಂತೆ ಮಾಡಲು ಬಳಸಲಾಗುವುದು.

ತಯಾರಿಕೆಯ ತಂತ್ರ

ಕಿನ್ನಾಳದ ಚಿತ್ರಗಾರರು ತಾವು ತಯಾರಿಸಬೇಕೆಂದಿರುವ ಕಲಾಕೃತಿಗೆ ತಕ್ಕಂತೆ ಮೂಲ ವಸ್ತುವಾದ ಮರದ ತುಂಡನ್ನು ಗರಗಸದಿಂದ ಕೊಯ್ದು ಕೈ, ಕಾಲು, ತಲೆ ಮೊದಲಾದ ಬಿಡಿ ಭಾಗಗಳನ್ನು ತಯಾರಿಸಿ, ಒಣಗಿದ ನಂತರ ಅದರಿಂದ ಹಾಗೂ ಮರಳು ಕಾಗದದಿಂದ ಸೂಕ್ಷ್ಮವಾಗಿ ಉಜ್ಜಿ ನುಣುಪಾಗಿಸಲಾಗುವುದು. ನಂತರ ಹುಣಸೆ ಸರಿಯ ನೆರವಿನಿಂದ

ಎಚ್ಚರವಹಿಸಿ ಬಟ್ಟೆಯನ್ನು ಮುದುಡಿ ಗೆರೆ ಬೀಳದಂತೆ ಸರಿಯಾಗಿ ಅಂಟಿಸಲಾಗುವುದು. ಆಮೇಲೆ ಕೆಂಪು, ನೀಲಿ, ಹಸಿರು, ಕಪ್ಪು, ಹಳದಿ ಮತ್ತು ಬಿಳಿ ಬಣ್ಣದ ಪುಡಿಗಳನ್ನು ಗೊಂದಿನ ಜೊತೆಗೆ ಚೆನ್ನಾಗಿ ಕಲಸಿ ತಯಾರಿಸಿದ ಬಣ್ಣಗಳಲ್ಲಿ ಬೇಕಾದುದನ್ನು ಹಚ್ಚುವರು. (ಈಗ ರೆಡಿಮೇಡ್ ಬಣ್ಣಗಳೇ ದೊರೆಯುತ್ತಿವೆ) ಆಮೇಲೆ ಅವರೇ ತಯಾರಿಸಿಟ್ಟುಕೊಂಡಿರುವ ಗಾಜಿನ ಚೂರು ಅಥವಾ ಕಲ್ಲಿನ ತುಂಡಿನಿಂದ ತಿಕ್ಕಿ ತೀಡಿ, ಹೊಳಪು ಬರುವಂತೆ ಮಾಡುವರು. ತವರ ಮತ್ತು ಸತುವಿನ ಮಿಶ್ರಣ ಲೇಪಿಸಿ, ಒಣಗಿದ ನಂತರ ಅದನ್ನು ಕಲ್ಲಿನ ತುಂಡಿನಿಂದ ಚೆನ್ನಾಗಿ ಉಜ್ಜಿದಾಗ ಬೆಳ್ಳಿಯ ಹೊಳಪು ಬರುತ್ತದೆ. ಅದರ ಮೇಲೆ ಬಂಗಾರದ ಬಣ್ಣದ ಪುಡಿ ಲೇಪಿಸಿ ಉಜ್ಜಿದಾಗ ಬಂಗಾರದ ಮೆರುಗು ಹೊರ ಹೊಮ್ಮುವುದ. ಅಂತಿಮವಾಗಿ ಕಡು ಹಳದಿಯ ಪಾರದರ್ಶಕ ವಾರ್ನಿಷ ಲೇಪಿಸಿದಾಗ ಕೃತಿಯ ತಯಾರಿಕೆ ಪೂರ್ಣವಾಗುವುದು. ಅದೇ ರೀತಿಯ ಕ್ರಿಯೆಯಿಂದಾಗಿ ಬಳೆ, ಕೊರಳ ಹಾಕಿ ಓಲೆ ಮೊದಲಾದ ಆಭರಣಗಳು ಹಾಗೂ ನಾಟಕದ ಕಿರೀಟ, ಭುಜಕೀರ್ತಿ ಮೊದಲಾದವುಗಳಿಗೆ ಬಂಗಾರದ ಮೆರುಗು ಬಂದು, ಹೆಚ್ಚು ಆಕರ್ಷಕವಾಗುತ್ತವೆ.

ಕೇವಲ ಮಹಿಳೆಯರೇ ಮರದ ಹೊಟ್ಟು ಸೆಗಣಿ ಮತ್ತು ಬಟ್ಟೆಗಳನ್ನು ಬಳಸಿ ವಿವಿಧ ರೀತಿಯ ಬೊಂಬೆಗಳನ್ನು ತಯಾರಿಸಿ, ಅಂದವಾದ ಬಣ್ಣಗಳನ್ನು ಹಾಕುತ್ತಾರೆ. ತುಂಬಾ ಆಕರ್ಷಕವಾದ ಈ ಆಟಿಕೆಗಳು ಮಕ್ಕಳಿಗೆ ತುಂಬಾ ಪ್ರಿಯವಾಗಿದ್ದು, ಬಹು ಅಗ್ಗದ ದರದಲ್ಲಿ ದೊರೆಯುತ್ತವೆ. ಇವುಗಳಲ್ಲಿ ಜನಪ್ರಿಯವಾದ ಇತರ ಕಲಾಕೃತಿಗಳೆಂದರೆ, ಲಕ್ಷ್ಮೀ, ಪಾರ್ವತಿ, ಶಿವ, ಗರುಡ, ನಂದಿ, ಕೀಲುಗೌರಿ, ಪ್ರಾಣಿಗಳಲ್ಲಿ ಹೋರಿ, ಎತ್ತು, ಹಸು, ಪಾರಿವಾಳ, ನವಿಲು, ಬಾತುಕೋಳಿ, ಹಣ್ಣು ಹಂಪಲುಗಳು, ತರಕಾರಿಗಳ ಪೆಟ್ಟಿಗೆಗಳನ್ನು ಹೆಸರಿಸಬಹುದು. ಇವುಗಳನ್ನು ಹೆಂಗಳೆಯರೇ ಹೆಚ್ಚಾಗಿ ತಯಾರಿಸುತ್ತಿದ್ದು, ಅವರೇ ಸಂತೆ ಮತ್ತು ಜಾತ್ರೆಗಳಲ್ಲಿ ಮಾರಾಟ ಮಾಡುತ್ತಾರೆ. ವರ್ಷಕ್ಕೊಮ್ಮೆ ಬರುವ ಹಬ್ಬಗಳಲ್ಲಿ ಗೌರಿ, ಗಣೇಶ ಮೂರ್ತಿಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಿ, ಮಾರಾಟ ಮಾಡುತ್ತಾರೆ. ಮಕ್ಕಳ ಆಟಿಕೆಗಳಲ್ಲಿ ಬಾಲಕೃಷ್ಣನ

ಮೂರ್ತಿಯ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಲೇಬೇಕು. ಉತ್ತರ ಕರ್ನಾಟಕದಲ್ಲಿ ಈ ಬೊಂಬೆಯನ್ನು ಹಿಡಿಯದೆ ಅದರೊಡನೆ ಆಟವಾಡದೆ ಬೆಳೆದ ಮಕ್ಕಳಿಲ್ಲವೇ ಇಲ್ಲವೆನ್ನಬಹುದು. ಕಾಲು ಚಾಚಿ ಕುಳಿತು ಕೈಗಳೆರಡನ್ನು ತಾಯಿಯೆಡೆಗೆ ಚಾಚುತ್ತಿರುವ ಕಡುಹಳದಿ ಬಣ್ಣದಲ್ಲಿ ತಯಾರಿಸಲಾದ ಬಾಲಕೃಷ್ಣನ ಮೂರ್ತಿಯು ಮಕ್ಕಳಿಗೆ ಬಹುಪ್ರಿಯವಾದುದು.

ಕಿನ್ನಾಳ ಕರ್ನಾಟಕದಲ್ಲಿ ಈ ಕಲೆಯ ಮಾತೃಕೇಂದ್ರವಾಗಿದೆ. ಇತರ ಕೇಂದ್ರಗಳಲ್ಲಿ ಗಂಗಾವತಿ, ಕುದುರೆಮೋತಿ, ಸಂಡೂರು, ದಾವಣಗೆರೆ ಮತ್ತು ಬೆಂಗಳೂರು ಹೆಸರಿಸಬಹುದು. ಪ್ರಸ್ತುತ ಕಿನ್ನಾಳದಲ್ಲಿ ಸುಮಾರು 50 ಕುಟುಂಬಗಳು ಈ ಕಲೆಯಲ್ಲಿ ತೊಡಗಿಸಿಕೊಂಡಿವೆ. ಈ ಕಲೆಯು ಒಬ್ಬ ವ್ಯಕ್ತಿಯನ್ನವಲಂಬಿಸಿರುವುದಿಲ್ಲ. ಕುಟುಂಬದ ಎಲ್ಲಾ ಸದಸ್ಯರೂ ಈ ಕಲಾಕೃತಿಗಳ ತಯಾರಿಕೆಯಲ್ಲಿ ಭಾಗಿಗಳಾಗುತ್ತಾರೆ. ವ್ಯಕ್ತಿಯ ಬೇಕು ಬೇಡಗಳ ಅಥವಾ ಅನಿಸಿಕೆಗಳಿಗೆ ಒತ್ತು ನೀಡದೆ, ಸಾಮಾಜಿಕ ಅರ್ಥವನ್ನೊಳಗೊಂಡಿರುತ್ತದೆ. ಆದ್ದರಿಂದಲೇ ಇದು ಸಮಾಜಕ್ಕೆ ಉಪಯುಕ್ತವಾದ ವೃತ್ತಿ ಮೂಲವಾಗಿ ಪರಿಣಮಿಸಿದೆ.

ಶಿಲಾ ಮಾಧ್ಯಮದ ಜನಪದ ಶಿಲ್ಪಗಳು:

ಶಿಲೆಯು ಬಹು ಪ್ರಾಚೀನ ಕಾಲದಿಂದಲೂ ಶಿಲ್ಪಕಲಾಕೃತಿಗಳ ರಚನೆಗೆ ಬಳಕೆಯಾಗಿದೆ. ಮೈಖೆಲ್ ಎಂಜಿಲೋ ಹೇಳವಂತೆ 'ದಿಟವಾದ ಶಿಲ್ಪವೆಂದರೆ ಅದು ಕೆತ್ತನೆಯಿಂದ ಕೂಡಿದ್ದು, ಅದರಲ್ಲೂ ಶಿಲೆಯಲ್ಲಿ ಕಂಡರಿಸಿರುವುದು. ಈ ಮಾಧ್ಯಮದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಜನಪದ ಶಿಲ್ಪಗಳು ರಚನೆಯಾಗಿವೆ. ವೀರಭದ್ರ, ಹನುಮಂತ, ಮೈಲಾರ, ಗಣಪತಿ, ಶಿವ, ಲಜ್ಜಾಗೌರಿ, ಕಾಳಿ, ದುರ್ಗಿ, ಶೆಟಗವ್ವ, ಕರೆವ್ವ, ಉಡಿಚೆವ್ವ, ನಂದಿ, ನಾಗದೇವತೆ, ಪಾರ್ವತಿ, ವೀರಗಲ್ಲುಗಳು, ವೀರಮರಣ ಶಿಲ್ಪಗಳು, ಮಹಾಸತಿ ಶಿಲ್ಪ ಮತ್ತು ಮಾರಮ್ಮನ ಆತ್ಮ ಬಲಿದಾನದ ಶಿಲ್ಪ ಇತ್ಯಾದಿಗಳು ಉದಾಹರಣೆಗಾಗಿ ಶಿಲ್ಪವನ್ನು ನೋಡಬಹುದು.

ಮಾರಮ್ಮ

ಜನಪದರ ಶಕ್ತಿ ದೇವತೆಗಳಲ್ಲಿ ಮಾರಮ್ಮನ ಹರವು ವಿಶಾಲವಾದದ್ದು, ಬ್ರಾಹ್ಮಣ ಮತ್ತು ಹೊಲೆ–ಮಾದಿಗರ ವರ್ಣ ಸಂಕರದ ಪ್ರಮುಖ ಅಧ್ಯಾಯವನ್ನೇ ಪರಿಚಯಿಸುವ ಮಾರಮ್ಮನ ಆಚರಣೆ, ಹಿನ್ನೆಲೆಯು ವಿಶೇಷವಾಗಿದೆ. ಈ ಮಾರಮ್ಮನ ಕಥೆಯ ಹಿನ್ನೆಲೆಯ ಮಹತ್ವವನ್ನು ಸಾಕಷ್ಟು ಜನಪದ ದೇವರುಗಳ ಅಧ್ಯಯನದ ಸಂಶೋಧನೆಗಳಲ್ಲಿ ಕಾಣಬಹುದಾಗಿದೆ. ಪ್ರಸ್ತುತ ಹೈದ್ರಾಬಾದ ಕರ್ನಾಟಕ ಪ್ರದೇಶದ ಗ್ರಾಮಗಳಲ್ಲಿ ಕಾಣಬರುವ ಶಿಲ್ಪಗಳು ಬಹಳ ವಿಶಿಷ್ಟವಾಗಿದೆ. ಸ್ವಾಭಾವಿಕ ದುಂಡು ಕಲ್ಲಿನ ಆರಾಧನೆ ಇಲ್ಲಿ ನಗರ ಸಂಸ್ಕೃತಿಯ ಶಿಷ್ಟ ಪ್ರಭಾವವನ್ನು ಹೊರತುಪಡಿಸಿ ಜನಪದ ಸ್ವತಂತ್ರ ಸಂಪ್ರದಾಯ ಶಿಲ್ಪ ಆರಾಧನೆಯನ್ನು ಮೇಳೈಸಿದೆ. ದುಂಡಾದ ಸ್ವಾಭಾವಿಕ ಶಿಲ್ಪಕ್ಕೆ ಲೋಹದಿಂದ ತಯಾರಿಸಿದ ಎರಡು ಕಣ್ಣುಗಳನ್ನು ಅಳವಡಿಸಿ ಅರಿಶಿನ ಕುಂಕುಮವನ್ನು ಲೇಪಿಸಿ ಆರಾಧಿಸುವ ಸಂಪ್ರದಾಯ ಸಂಪೂರ್ಣ ಜನಪದದಾಗಿದೆ.

ಲೋಹ ಮಾಧ್ಯಮದ ಜನಪದ ಶಿಲ್ಪಗಳು

ಜನಪದರು ವಿವಿಧ ಲೋಹಗಳಲ್ಲಿ ಶಿಲ್ಪಗಳನ್ನು ರಚಿಸಿ, ಆಚರಿಸುತ್ತಾ, ಆರಾಧಿಸುತ್ತ ಬಂದಿರುವರು. ಲೋಹ ಮಾಧ್ಯಮ ಸುಲಭವಲ್ಲದ ಕಾರಣ ಆಯ್ದ ಕೆಲವೇ ವೃತ್ತಿಕಾರ ಶಿಲ್ಪಿಗಳು ಈ ಮಾಧ್ಯಮದಲ್ಲಿ ಜನಪದ ಶಿಲ್ಪಗಳನ್ನು ರಚಿಸುತ್ತ ಬಂದಿರುವರು.

ಗೃಹೋಪಕರಣಗಳಲ್ಲಿ ಆಯುಧಗಳಲ್ಲಿ, ಆಭರಣಗಳಲ್ಲಿ, ವಾದ್ಯಗಳಲ್ಲಿ, ಪೂಜಾ ಸಾಮಗ್ರಿಗಳಲ್ಲಿ ವಿವಿಧ ಬಗೆಯ ಶಿಲ್ಪಗಳನ್ನು ಕಾಣಬಹುದು. ಅಲ್ಲದೇ ಸ್ತ್ರೀ ದೇವತಾ ಶಿಲ್ಪಗಳು, ಪುರುಷ ದೇವತಾ ಶಿಲ್ಪಗಳು, ದೇವರುಗಳು ವಾಹನ ಶಿಲ್ಪಗಳು, ಸಂಕೀರ್ಣ ವಿನ್ಯಾಸ ಶಿಲ್ಪಗಳು ಹೀಗೆ ಹಲವಾರು ಮಾಧ್ಯಮದ ಶಿಲ್ಪಗಳೂ ಈ ಮಾಧ್ಯಮಗಳಲ್ಲಿ ಅರಳಿವೆ.

ಇಂತಹ ನೂರಾರು ಜನಪದ ಶಿಲ್ಪಗಳು ಸೌಂದರ್ಯ, ಧರ್ಮ, ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಬೆಳೆದುಬಂದಿರುವವು. ಉದಾಹರಣೆಗೆ ತೊಟ್ಟಿಲು ಗೌರಮ್ಮನ ಮತ್ತು ಗಾಜರಕೋಟದ ಶಿಲ್ಪಗಳನ್ನು ನೋಡಬಹುದು.

ತೊಟ್ಟಿಲು ಗೌರಮ್ಮನ ಶಿಲ್ಪ:

ತೊಟ್ಟಿಲು ಗೌರಮ್ಮನ ಶಿಲ್ಪಗಳು ಹೈದ್ರಾಬಾದ ಕರ್ನಾಟಕದಲ್ಲಿ ಪ್ರತಿ ಮನೆಗಳಲ್ಲಿ ಸಿಗುತ್ತವೆ. ಬಹುಪಾಲು ಮರದಲ್ಲಿ ರಚನೆಯಾಗಿರುವ ಈ ಶಿಲ್ಪಗಳು ಕ್ವಚಿತ್ತಾಗಿ ಲೋಹದಲ್ಲಿ ಎರಕ ಹೊಯ್ಯುವ ಪದ್ಧತಿಯಿಂದ ರಚಿಸಲ್ಪಟ್ಟಿವೆ.

ಮುತ್ತೈದೆಯರು ಪೂಜಿಸಿ ತೂಗಿದರೆ ಸಂತಾನ ಪ್ರಾಪ್ತವಾಗುತ್ತದೆ, ಸಂಪತ್ತು ವೃದ್ಧಿಯಾಗುತ್ತದೆ ಎಂಬ ನಂಬಿಕೆ ಹೆಂಗಳೆಯರಲ್ಲಿದೆ. ಗೌರಿ ಹುಣ್ಣಿಮೆಯಲ್ಲಿ ಗೌರಮ್ಮನ ಪೂಜೆ, ಆಚರಣೆ ಜೋರಾಗಿ ನಡೆಯುತ್ತದೆ.

ಗಾಜರಕೋಟ್ ಲೋಹ ಶಿಲ್ಪಗಳು:

ಗುಲಬರ್ಗಾದ ಗಾಜರಕೋಟ್ ಶಿಲ್ಪ ರಚನೆಯ ತಂತ್ರಗಾರಿಕೆಯ ಕಿರುಶಿಲ್ಪಗಳ ತಯಾರಿಕೆಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಈಗಾಗಲೇ ಅಧ್ಯಯನದಲ್ಲಿ ಅಭ್ಯಸಿರುವ ಹಲವಾರು ರೀತಿಯ ಶಿಲ್ಪಗಳು ರಾಜರಕೋಟ್ ಲೋಹಶಿಲ್ಪ ತಯಾರಿಕೆಯ ವಿಧಾನದಲ್ಲಿಯೇ ರಚನೆಯಾಗಿವೆ. ಬೀರಲಿಂಗೇಶ್ವರ ಶಿಲ್ಪಗಳು, ವೀರತಿಪ್ಪಣ್ಣ ಪರಿವಾರದ ಶಿಲ್ಪಗಳ ರಚನೆಯು ಇತರೆ ತಂತ್ರಶೈಲಿಯಂತೆಯ ಕಂಡುಬಂದರೂ ಇಲ್ಲಿ ಮೇಣದ ಜೊತೆಗೆ ರಾಳವು ಹಾಗೂ ಎಣ್ಣೆಯ ಬಳಕೆಯು ವಿಶೇಷವಾಗಿ ಕಂಡು ಬರುತ್ತದೆ. ಮೇಣದ ಹಂತದ ನಂತರ ನುಣುಪಾದ ಮಣ್ಣಿನಂಥ ಕೋರ್ ಕೊಯ್ಯುವ ಹಂತ ಮೊಳೆ ಅಳವಡಿಕೆ ಹಾಗೂ ಎರಕದ ನಂತರದಲ್ಲಿನ ಶಿಲ್ಪದ ಅನಾವರಣ ಹಂತದಲ್ಲಿನ ವಿಶೇಷತೆಗಳು ಇತರೆ ಶಿಲ್ಪ ಎರಕದ ಶೈಲಿಗಳಿಗೆ ಭಿನ್ನವಾಗಿರುತ್ತವೆ.

ಲೋಹದ ರಸದ ಎರಕದ ಸಂದರ್ಭದಲ್ಲಿ ಚಿಕ್ಕ ಚಿಕ್ಕ ಮೂಸೆಗಳು ಲೋಹದ ರಸಧಾರೆಗೆ ಬಳಸಲಾಗುತ್ತದೆ.

ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳು:

ಸಗಣಿ, ಹಿಟ್ಟು, ನಾರು, ಚಿಂದಿಬಟ್ಟೆ, ಸಕ್ಕರೆ, ಬೆಲ್ಲ, ಕಾಗದ, ಮಡಿಕೆ, ಬೆತ್ತ, ದಂಟು, ಬಿದಿರು, ಏನೆಲ್ಲ ಮಾಧ್ಯಮಗಳಲ್ಲಿ ನಮ್ಮ ಜನಪದರು ಶಿಲ್ಪಗಳನ್ನು ರಚಿಸುತ್ತ ಬಂದಿರುವರು. ಇವನ್ನೆಲ್ಲಾ ಸಂಕೀರ್ಣ ಮಾಧ್ಯಮದಲ್ಲಿ ಗಮನಿಸಬಹುದು.

ಈ ಮಾಧ್ಯಮದಲ್ಲಿನ ಶಿಲ್ಪಗಳು ತುಂಬ ವೈವಿಧ್ಯಮಯ ಚಿಕ್ಕ ಶಿಲ್ಪಗಳಿಂದ ಹಿಡಿದು ದೊಡ್ಡ ಆಕಾರದ ಶಿಲ್ಪಗಳು ರಚನೆಯಾಗಿರುವುದುಂಟು ಇದನ್ನು ಅಶಾಶ್ವತ ಮಾಧ್ಯಮವೆಂದೂ ಕರೆಯಬಹುದು. ಕೆಲವು ಶಿಲ್ಪಗಳನ್ನಿಲ್ಲಿ ಗಮನಿಸಬಹುದು. ಬೆದರು ಬೊಂಬೆಗಳು, ಆಣಿ–ಪಿಣಿ, ತೊಗಲು ಗೊಂಬೆಗಳು, ಗಾರುಡಿ ಗೊಂಬೆಗಳು, ಕಿಸಗಾಲು ಗೊಂಬೆಗಳು, ಮದ್ದಿನ ಹುಲಿಗಳು, ಮೊದಲಾದ ಶಿಲ್ಪಗಳು, ಸೌಂದರ್ಯ ಪ್ರಜ್ಞೆಯ ಹಿನ್ನಲೆಯಲ್ಲಿ ರಚನೆಗೊಂಡಿರುವವು. ಹಾಗೇ ಕಾಮ, ಬೂಧ, ಬುದಗಾಮ, ಪಾಂಡವರು, ಸೀಗಿ, ಕಂಬಿ, ದೇವರ ಪಾದಗಳು, ಸಕ್ಕರೆ ಗೊಂಬೆಗಳು, ಹಿಟ್ಟಿನ ಗೊಂಬೆಗಳು, ಕರ್ಚಿಗೊಂಬೆ, ಮೊದಲಾದವುಗಳು ಧಾರ್ಮಿಕ ನಂಬಿಕೆಯ ಹಿನ್ನೆಲೆಯಲ್ಲಿ ಬೆಳೆದುಬಂದಿರುವವು. ದೃಷ್ಟಿಗೊಂಬೆಗಳು, ಮಾಟ–ಮಂತ್ರದ ಗೊಂಬೆಗಳು, ಮೋಡಿಯಾಟದಲ್ಲಿ ಗೊಂಬೆಗಳು ಮೊದಲಾದವು ತಾಂತ್ರಿಕ ಹಿನ್ನೆಲೆಯಲ್ಲಿ ಸೃಷ್ಟಿಗೊಂಡಿರುವುದನ್ನು ಕಾಣಬಹುದು.

ಸುಡುಗಾಡು ಸಿದ್ದರು, ಕರಡಿ ವೇಷದವರು, ವೇಷಗಾರರು ಮೊದಲಾದವರಲ್ಲಿ ವೃತ್ತಿಮೂಲವಾಗಿ ಜನಪದ ಶಿಲ್ಪಗಳು ಬೆಳೆದುಬಂದಿರುವವು. ಉದಾಹರಣೆಗಾಗಿ ಕಿಸಗಾಲು ಗೊಂಬೆಶಿಲ್ಪಗಳನ್ನು ಗಮನಿಸಬಹುದು.

ಕಿಸಗಾಲು ಗೊಂಬೆ ಶಿಲ್ಪ:

ಕಿಸಗಾಲು ಗೊಂಬೆ ಶಿಲ್ಪಗಳನ್ನು ಕೈಕಾಲುಗೊಂಬೆ, ಕೂಸಿನ ಗೊಂಬೆ, ಕೊಡದ ಗೊಂಬೆ ಎಂದು ವಿಂಗಡಿಸಬಹುದು. ಈ ಗೊಂಬೆಗಳನ್ನು ಅಷ್ಟವಾಗಿ ಸಗಣಿ ಮಾಧ್ಯಮದಲ್ಲಿ ರಚಿಸಲಾಗುವುದು. ಮೂಲತಃ ಜಾಲಿಹಾಳ, ಇಟಗಿ ಬೇಲೂರುಗಳಲ್ಲಿ ತಳಸಮುದಾಯಕ್ಕೆ ಸೇರಿದ ಚಿತ್ರಗಾರ ಕುಟುಂಬಗಳು ಈ ಶಿಲ್ಪಗಳನ್ನು ಪಾರಂಪರಿಕವಾಗಿ ಮಾಡಿಕೊಂಡು ಬರುತ್ತಲಿವೆ.

ಈ ಗೊಂಬೆಗಳು ಬಾದಾಮಿಯ ಬನಶಂಕರಿ ಜಾತ್ರೆ ಮತ್ತು ಇಟಗಿ ಜಾತ್ರೆಗಳಲ್ಲಿ ಭರ್ಜರಿಯಾಗಿ ಮಾರಾಟವಾಗುತ್ತವೆ. ಇವುಗಳನ್ನು ಕೊಂಡೊಯ್ಯುವುದರಿಂದ ಸಂತಾನ ಪ್ರಾಪ್ತಿ, ಸಂಪತ್ತಿನ ವೃದ್ಧಿಯಾಗುತ್ತದೆ ಎನ್ನುವ ನಂಬಿಕೆ ಪ್ರಚಲಿತವಿದೆ.

ದೃಷ್ಟಿಬೊಂಬೆಗಳು

ಆದಿವಾಸಿಗಳು, ಜನಪದರು, ಸಂಪ್ರದಾಯಸ್ಥರು, ಮೊದಲಾಗಿ ಸಾಮಾನ್ಯವಾಗಿ ಎಲ್ಲರೂ ಕೂಡ ಈ ದೃಷ್ಟಿಗೊಂಬೆಗಳ ಆಚರಣೆಯನ್ನು ಮಾಡಿಕೊಂಡು ಬಂದಿರುವುದು ವಿಶೇಷ ಆಚರನೆಯ ತಾವೂ ಕೈಗೊಂಡ ಯಾವುದೇ ಕಾರ್ಯದ ಯಶಸ್ವಿಗೆ ತಡೆಯೊಡ್ಡುವ ವಿಘ್ನಗಳ ಈ ದೃಷ್ಟಿಬೊಂಬೆಯಿಂದ ನಿಷ್ಪ್ರಯೋಜನಕವಾಗಲೆಂದು ಸ್ಥಾಪಿಸುವ ಬೃಹತ್ ಆಚರಣೆಯ ಗೊಂಬೆಗಳಾಗಿವೆ. ಇವುಗಳ ಆಕಾರಗಳು ಭಯಾನಕವಾಗಿದು, ಆ ವೇಳೆಯಲ್ಲಿ ನೋಡುವವರಿಗೆ ಹೆದರಿಕೆಯನ್ನು ಉಂಟುಮಾಡುತ್ತವೆ. ಇವುಗಳನ್ನು ನೋಡಿದಾಗ ಮಾನಸಿಕ ಉಗ್ರ ವಿಚಾರವು ಕುಡ ತಲ್ಲಣಿಸುತ್ತದೆ. ಸಾಮಾನ್ಯವಾಗಿ ಕೆಂಡಾ ಮಂಡಲದ ಉಗ್ರ ಕಣ್ಣುಗಳ, ವಿಕಾರ ಸ್ವರೂಪದ ಶಿರಭಾಗ ಮಾತ್ರ ಹೊಂದಿದ ಶಿಲ್ಪಗಳು ಮಣ್ಣಿನಿಂದಲೇ ತಯಾರಾಗುತ್ತವೆ. ಇವುಗಳನ್ನು ತಯಾರು ಮಾಡಿದ ಕುಂಬಾರರು ಇವುಗಳ ರಚನೆಯ ಸರಳವಾಗಿ, ವರ್ಣ ಲೇಪನ ಕೂಡ ಈ ಶಿಲ್ಪಕ್ಕೆ ಅರ್ಥವತ್ತಾಗಿ ಮೆರಗನ್ನು ನೀಡಿರುತ್ತಾರೆ. ಈ ಶಿಲ್ಪಗಳು ಪ್ರಾದೇಶಿಕ ವಿಭಿನ್ನತೆಗನುಗುಣವಾಗಿ ವಿವಿಧ ಬಗೆಯಲ್ಲಿ ರಚನೆಯಾಗಿರುತ್ತವೆ. ಇವುಗಳನ್ನು ರಚನೆ ಮಾಡಲು ವೃತ್ತಿಯ ಪರಿಣಿತೆಯೇ

ಬೇಕು ಎಂದೆನಿಸುವುದಿಲ್ಲ. ಗೋಳಾಕಾರದ ತೆಳು ದೃಷ್ಟಿಗೊಂಬೆಗಳು ಮುಖಭಾಗವನ್ನು ಹೊಂದಿದ 9ದ್ವಿಮಾನ) ಉಬ್ಬು ಶಿಲ್ಪಗಳು, ಹಸಿಯಾದ ಜೇಡಿಮಣ್ಣಿನಿಂದ ನಿರ್ಮಾಣಗೊಂಡು ಕೆಲವು ಒಣಗಿದ ಮೇಲೆ ವರ್ಣ ಲೇಪನಗೊಂಡು ಅಲಂಕಾರ ಅಥವಾ ಆಚರಣೆ ಸಿದ್ಧವಾದರೆ ಮತ್ತೆ ಇನ್ನು ಕೆಲವು ಬೊಂಬೆಗಳು ಸುಡಾವೆ ತಂತ್ರಜ್ಞಾನದಿಂದ ದೊರೆಯುತ್ತವೆ.

ಜನಪದರ ನಂಬಿಕೆಯ ಧಾರ್ಮಿಕ ಆಚರಣೆಗಳಲ್ಲಿ ಉಗ್ರರೂಪಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವುದು ಗಮನಿಸಬೇಕಾದ ಅಂಶ. ಇಲ್ಲಿ ಶಾಂತ ಮತ್ತು ಉಗ್ರಸ್ವಭಾವದ ತೀರ ಹತ್ತಿರದ ಸಂಬಂಧವನ್ನು ಜನಪದರು ಅಂದರೆ ಶೋಷಿತ ವರ್ಗಗಳು ಅನುಭವಿಸಿಕೊಂಡು ಬಂದ ಪರಿಪಾಠದಿಂದ ಹಾಸುಹೊಕ್ಕಾಗಿದೆ. ಶಾಂತ ಸ್ವಭಾವ ಇತರರಿಗೆ ಯಾವ ರೀತಿಯಲ್ಲಿ ಕೇಡು ಮಾಡುವುದಿಲ್ಲವೋ ಅದೇ ರೀತಿಯಾಗಿ ಕೇಡುನ್ನು ಕೂಡ ತಡೆಯುವುದು ಅದರ ಸ್ವಭಾವಕ್ಕೆ ಅಸಾಧ್ಯವೆಂಬ ನಿಲುವು ಈ ಜನಪದರದ್ದು. ಇದೇ ಕಾರಣದಿಂದ ದಯತ್ಯ ಶಕ್ತಿಗಳು ವಿಘ್ನಗಳು, ರಾಕ್ಷಸರು ಕೇಡನ್ನು ಉಂಟುಮಾಡುವ ಉಗ್ರರೂಪದಲ್ಲಿಯೇ ಇರುವುದರಿಂದ ಅವರನ್ನೇ ಆರಾಧಿಸಿ ಸೇವೆಯನ್ನು ಸಲ್ಲಿಸುವ ಮುಖಾಂತರ ಅವರ ಮನಸ್ಸನ್ನು ಗೆದ್ದು ಅಥವಾ ಅವರ ಸೇವೆಗೆ ಶರಣುಗೊಂಡು ಕೇಡುಗಳಿಂದ ದೂರವಿರುವುದಕ್ಕೆ ಈ ದೃಷ್ಟಿಗೊಂಬೆಗಳನ್ನು ಉಪಯೋಗಿ ಪದ್ಧತಿಯನ್ನು ರೂಢಿಸಿಕೊಂಡಿರುತ್ತಾರೆ.[1]

ಈ ದೃಷ್ಟಿಗೊಂಬೆಗಳನ್ನು ಕುಂಬಾರಿಕೆ ಮೂಲದ ವೃತ್ತಿಯವರೇ ಮಣ್ಣಿನ ಮಾಧ್ಯಮದಲ್ಲಿ ಸುಡಾವೆ ಶಿಲ್ಪ ಅಥವಾ ಹಸಿಜೇಡಿಮಣ್ಣಿನಲ್ಲಿಯೇ ರಚನೆಯನ್ನು ಮಾಡಿ ಅವುಗಳ ಪಡಿಯಚ್ಚು ಮುಖಾಂರ ದ್ವಿಮಾಣ (ಮುಖಭಾಗ ಮಾತ್ರ ರಚನೆ ಮಾಡುವುದು), ತ್ರಿಮಾನ (ಪೂರ್ಣ ತಲೆಭಾಗವನ್ನು ರಚನೆ ಮಾಡುವುದು)ಗಳಲಿ ದೈತ್ಯ ಮೀಸೆಗಳು, ಹೊರಚಾಚಿದ ವಿಕಾರದವಾದ

1 ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ –ಒಂದು ಅಧ್ಯಯನ, ಡಾ. ಲಕ್ಷ್ಮೀಪತಿ. ಜಿ. ಅವರ ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಪು.ಸಂ. 62

ಕೋರೆಹಲ್ಲುಗಳು, ದುಂಡುಮೂಗು, ದೊಡ್ಡ ದೊಡ್ಡ ತಯಾರಿಸಿ ತಾವು ಕಟ್ಟುವ ಮನೆಗಳ ಮೇಲೆ ಬೆಳೆ ಬೆಳೆದ ತೋಟ ಅಥವಾ ಹೊಲಗಳಲ್ಲಿ ಸ್ಥಾಪನೆ ಮಾಡುತ್ತಾರೆ. ಈ ರೀತಿ ಸ್ಥಾಪನೆ ಮಾಡಿರುವುದರಿಂದ ಉಗ್ರ ಶಕ್ತಿಯು ನಮ್ಮ ಜೊತೆ ಇದ್ದು ಇತರೆ ಯವುದೇ ಶಕ್ತಿಗಳು ತಮಗೆ ಕೇಡನ್ನು ಬಗೆಯಲಾರವು ಹಾಗೂ ಇವುಗಳಿಂದ ರಕ್ಷಣೆ ಸಿಗುವುದು ಎಂಬ ಭಾವನೆಯಿಂದ ಅವುಗಳಿಗೆ ಮಾರು ಹೋಗಿರುತ್ತಾರೆ. ತಮ್ಮ ಯಶಸ್ವಿಗೆ ಅಡ್ಡಿಯುಂಟು ಮಾಡಲಾರವು ಹಾಗೂ ಇವುಗಳಿಂದ ರಕ್ಷಣೆ ಸಿಗುವುದು ಎಂಬ ಭಾವನೆಯಿಂದ ಅವುಗಳಿಗೆ ಮಾರು ಹೋಗಿರುತ್ತಾರೆ. ಕತ್ತಲೆಯಲ್ಲಿ ಕನ್ನ ಹಾಕಲು ಕಳ್ಳರು ಅಥವಾ ತಮ್ಮ ಸ್ವತ್ತಿನ ಮೇಲೆ ಇತರೆಯವರ ದುಷ್ಟಕಣ್ಣು ಬೀಳಬಾರದೆಂದು, ಮಂತ್ರವಾದಿಗಳಿಂದ ಅಥವಾ ಮನೆಯ ಹಿರಿಯರಿಂದ ಇವುಗಳನ್ನು ಅಳವಡಿಸಿಕೊಂಡಿರುತ್ತಾರೆ. ಜನಪದ ಶಿಲ್ಪಗಳಲ್ಲಿ ಅತಿ ಸಾಮಾನ್ಯವಾದ ಟೊಳ್ಳಾಕಾರದ ಈ ದೃಷ್ಟಿಗೊಂಬೆಗಳು ಶಿಷ್ಟರ ಆಚರಣೆಗಳಲ್ಲೂ ಪ್ರಮುಖ ಪಾತ್ರವಹಿಸುತ್ತವೆ. ಈ ಶಿಲ್ಪಗಳು ಕುಡ ಆಯಾ ಪ್ರಾದೇಶಿಕ ವಿಭಿನ್ನತೆಗೆ ತಕ್ಕಂತೆ ಹಲವಾರು ರೂಪ ವೈಶಿಷ್ಟ್ಯಗಳನ್ನು ಅನಾವರಣಗೊಳಿಸಿ ಜನಪದದ ಶ್ರೀಮಂತ ವಿಚಾರಧಾರೆಯನ್ನು ಎತ್ತಿ ಹಿಡಿದಿವೆ.

ಬಿದಿರು ಶಿಲ್ಪಗಳು

ಬಿದಿರಿನಿಂದ ಬದುಕಿನ ಅಗತ್ಯ ವಸ್ತುಗಳನ್ನು ತಯಾರು ಮಾಡುವ ಕಸುಬಿನವರು ಮೇದಾರರು ಎಂಬುದು ಜನಪದರ ವಾಡಿಕೆ. ಮೇದಾರರು ತಯಾರಿಸುವ ಬಿದಿರಿನ ಕುಕ್ಕೆ ವಾಡೆಯಂತಹ ವಸ್ತುಗಳ ಹೆಸರಿನ ಜೋಡಣೆಯಿಂದ 'ಕುಕ್ಕುಡವಾಡೇಶ್ವರಿ' ದೇವತೆಯು ಆಚರಣೆಗೆ ಬಂದಿದ್ದಾಗಿ ಇವರು ಕುಲದೈವನಾಗಿ ಸ್ವೀಕರಿಸಿದ್ದಾರೆ. ಈ ಕುಕ್ಕುಡವಾಡೇಶ್ವರಿಯು ರೇಣುಕಾ ದೇವಿಯಾಗಿಯೂ ಇನ್ನೊಂದು ಹೆಸರನ್ನು ಪಡೆದಿರುವುದು ವಿಶೇಷ. ಮನೆದೇವತೆಯಾದ ಈ ದೇವತೆಯು ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಜೋಳದ ಹಾಳಿನ ಹತ್ತಿರವಿರುವ ಅಮ್ಮನಗುಡ್ಡದಲ್ಲಿ ನೆಲೆಗೊಂಡಿರುತ್ತಾಳೆ. ಮೇದಾರರ ಹುಟ್ಟಿನ ಬಗ್ಗೆ ಶಿವಪಾರ್ವತಿಯರೇ ಕಾರಣವೆಂಬ ಜನಪದ ಕಥೆಯೇ ಇದೆ. ಆದರೆ ವಾಸ್ತವವಾಗಿ ಕಸುಬನ್ನು

ನಿರ್ವಹಿಸುವ ಜನಾಂಗಕ್ಕೊಂದು ಹೆಸರಾಗಿ ಈ ಮೇದಾರಿಕೆ ಕಸುಬಿಗೆ ಮೇದಾರ ಜನಾಂಗವಾಗಿ ರೂಪಗೊಂಡಿರುವುದು ಅನೇಕ ವಿದ್ವಾಂಸರ ವಿಚಾರವಾಗಿದೆ.

ಬಿದರಿನ ಮೂಲಕ ಜೀವನಕ್ಕೆ ಅಗತ್ಯವಾದ ಮೊರ, ಬುಟ್ಟಿ, ಹೂಬುಟ್ಟಿ, ಬೀಸಣಿಕೆ, ಕಣ್ಣಿನ ಜರಡಿ, ಮೂಗ ಜರಡಿ, ತಟ್ಟೆ, ಚಂದ್ರಿಕೆ (ರೇಷ್ಮೇ ಸಾಕಣಿಕೆಯಲ್ಲಿ ಬಳಸುವ ಪರಿಕರಗಳು) ಬಿದರಿನ ಮಂಚ, ಕೊಳಲು, ಪಿಳ್ಳಂಗೋವಿ, ಗೊಲ್ಲರ ಗೆಣೆ, ಪಾಟೇಕೋಲು (ಸಣ್ಣ ಬಿದರಿನ ರಂದ್ರಕ್ಕೆ ಗಂಧದ ಸಣ್ಣ ಕಾಯಿರಿಸಿ ಹಿಂದೆ ಇನ್ನೊಂದು ಕಾಯಿರಿಸಿ, ಗಜಕಟ್ಟಿಯಿಂದ ನೂಕಿದರೆ ಟಪ್ ಎಂದು ಸದ್ದ ಬರುತ್ತದೆ) ಏಣಿ, ಬಿದಿರಿನ ಕುರ್ಚಿ, ಹೂಕುಂಡ ಮುಂತಾದವುಗಳು ತಯಾರಿಸುವ ಮೇದಾರರು ಜನಪದ ಶಿಲ್ಪಗಳನ್ನು ಬಿದಿರಿನ ಮೂಲಕ ತಯಾರಿಸುತ್ತಾರೆ.

ಬಿದಿರು ಕಚ್ಚಾ ವಸ್ತುವಿನ ತಯಾರಿಕೆ

ಬಿದಿರಿನ ಹೊಸ ಫಸಲು ಬಂದಾಗ ವರ್ಷಕ್ಕೊಮ್ಮೆ ಹೊಸದಾಗಿ ಬಿದಿರು ಕಡಿದು ತಂದಾಗ ಬಿದಿರು ಕೊಂಬೆಯನ್ನು ದೇವರ ಪಕ್ಕದಲ್ಲಿರಿಸಿ ಪೂಜಿಸುತ್ತಾರೆ. ಇದು ಮನೆಯಲ್ಲೇ ನಡೆಸುವ ಕಾರ್ಯ ಇದನ್ನು 'ಬಿದಿರು ಮಳೆಹಬ್ಬ' ಎಂದು ಕರೆಯುತ್ತಾರೆ.

ಬಿದಿರಿನಿಂದ ಕಲಾತ್ಮಕವಾದ ವಸ್ತುಗಳನ್ನು ತಯಾರಿಸಲು ಸಾಮಾನ್ಯವಾಗಿ ಹಸಿರು ಬಿದಿರನ್ನು ಆಯ್ಕೆ ಮಾಡಿಕೊಂಡು ಅದರ ಮೇಲ್ಭಾಗವನ್ನು ಹರಿತವಾದ ಕತ್ತಿಯಿಂದ ಜವರುತ್ತಾರೆ. ನಂತರ ತಯಾರು ಮಾಡಬೇಕಾಗಿರುವ ವಸ್ತುವಿಗೆ ತಕ್ಕಂತೆ ಆಕಾರಕ್ಕೆ ಹೊಂದಿಕೊಳ್ಳುವ ಹಾಗೆ ದಪ್ಪ ಮತ್ತು ಸಣ್ಣ ಇವುಗಳ ಆಧಾರದಲ್ಲಿ ಬಿದಿರನ್ನು ಸೀಳಿ ಬೇರ್ಪಡಿಸುತ್ತಾರೆ. ಈ ಸೀಳುವ ಕೆಲಸವನ್ನುಜಾಗರೂಕವಾಗಿ ಮಾಡಬೇಕಾಗಿರುವುದರಿಂದ ಈ ಕಾರ್ಯವನ್ನು ವಾಡಿಕೆಯಂತೆ ಗಂಡಸರೇ ನಿರ್ವಹಿಸುತ್ತಾರೆ. ಈ ರೀತಿಯಾಗಿ ಸೀಳಿ ತೆಗೆದ ದಬ್ಬೆಗಳಿಂದ ನಿಗದಿಪಡಿಸಿಕೊಂಡಂತೆ ಬುಟ್ಟಿ, ಚಾಪೆ, ಮೊರ, ಬಿದಿರಿನ ಕುರ್ಚಿ ಮುಂತಾದವುಗಳನ್ನು ಹೆಂಗಸರು ಹೆಣೆಯುತ್ತಾರೆ.

ಬಿದಿರು ಒಣಗಿದ್ದರೆ ಅದನ್ನು ನೀರಿನಲ್ಲಿ ನೆನೆಸಿ, ಕೆಲಸಕ್ಕೆ ಉಪಯೋಗಿಸುತ್ತಾರೆ. ದಪ್ಪವಾದ ಬಿದಿರಿನಿಂದ ಒಂದು ಅಥವಾ ಎರಡು ಅಡಿಗಳಷ್ಟು ಆಕಾರಕ್ಕೆ ಕತ್ತಿರಿಸಿಕೊಂಡು ಅವುಗಳಿಂದ ಗ್ರಹಾಲಂಕಾರದ ವಸ್ತುಗಳಾದ ಗಿಳಿ, ನವಿಲು, ಹೂವಿನ ಬಳ್ಳಿ, ಅಲಂಕಾರ ವಸ್ತುಗಳು, ಹೂಜಿ ಮುಂತಾದ ಕಲಾತ್ಮಕ ವಸ್ತುಗಳನ್ನು ತಯಾರಿಸುತ್ತಾರೆ. ಈ ಹಿಂದೆ ಬಣ್ಣಗಳನ್ನು ಲೇಪಿಸಿದ ಅವುಗಳಿಗೆ ದೀಪದ ಬೆಂಕಿ ಅಥವಾ ಮೇಣದ ಬತ್ತಿಯ ಬೆಂಕಿ ಹಾಗೂ ಹೊಗೆಯಿಂದ ಅಲಂಕಾರ ಸ್ವಾಭಾವಿಕ ಸೌಂದರ್ಯ ಮೂಡುವಂತೆ ಎನಾಮಲ್ ಬಣ್ಣಗಳನ್ನು ಲೇಪಿಸಿ ನಗರಗಳಲ್ಲಿ ವ್ಯಾಪಾರ ಬೇಡಿಕೆಯನ್ನು ಹೆಚ್ಚಿಸಿಕೊಂಡಿರುತ್ತಾರೆ. ಅವುಗಳಲ್ಲಿ ಪೆನ್‌ಸ್ಟ್ಯಾಂಡ್, ಪೇಪರವೇಟ್, ಅಲಂಕಾರದ ಸರಗಳು, ಮಣಿಗಳು, ಬಳೆಗಳು, ಬುಕಸ್ಟ್ಯಾಂಡ್ ಮುಂತಾದವುಗಳ ಮೇಲೆ ಸುಂದರ ಕಲಾಕೃತಿಗಳು ರಚನೆ ಸೇರಿ ಆಕರ್ಷಕವಾಗಿರುತ್ತವೆ. ಗ್ರಾಮೀಣ ಭಾಗಗಳಲ್ಲಿ ನಡೆಯುವ ಜಾತ್ರೆ, ಉತ್ಸವ, ಆಚರಣೆಗಳ ಸಂದರ್ಭಗಳಲ್ಲಿ ವಿಶಿಷ್ಟವಾದ ಕಲಾತ್ಮಕ ಬಿದಿರಿನ ಜನಪದ ಶಿಲ್ಪಗಳು ಸಾಕಷ್ಟು ಕಂಡುಬರುತ್ತವೆ.

ಬಿದಿರಿನ ಗಾರುಡಿ ಬೊಂಬೆಗಳನ್ನು ತಯಾರು ಮಾಡುವಾಗ ಹಸಿ ಇರುವಾಗ ಅವುಗಳನ್ನು ಬಾಗಿಸಿ, ವೃತ್ತಾಕಾರ, ಜಿಗ್‌ಜಾಗ್ ಆಕಾರಗಳನ್ನು ಪಡೆದುಕೊಂಡು ಅವುಗಳನ್ನು ಕಬ್ಬಿಣದ ಸಣ್ಣ ತಂತಿಯನ್ನು ಬಳಸಿ ಆಕಾರಕ್ಕೆ ತಕ್ಕಂತೆ ಬಳಸುತ್ತಾರೆ. ಅಸ್ತಿಪಂಜರ (ಮೂಲ ಆಕಾರ) ತಯಾರು ಮಾಡಿ ನಂತರ ಸಣ್ಣ ಸಣ್ಣ ದಬ್ಬೆಗಳಿಂದ ಹೊರಮೈಯನ್ನು ರಚನೆ ಮಾಡಿ, ನಂತರ ನುಣುಪಾದ ಮೇಲ್ಮೈ ಪಡೆಯಲು (ಪೇಪರ್) ಕಾಗದ ಮತ್ತು ಮೆಂತೆ ಕಾಳನ್ನು ಅರೆದು ಅದಕ್ಕೆ ಸ್ವಲ್ಪ ಅಕ್ಕಿಯ ಗಂಜಿಯನ್ನು ಹುಣಸೆ ಬೀಜದ ಪುಡಿಯ ಸರಿ ಬೆರೆಸಿ, ಬಿದರಿನ ಅಂಕುಡೊಂಕುಗಳಿಗೆ ಬಳಿದು ನಂತರ ಮುಖದಲ್ಲಿ ಕಣ್ಣು, ಕಿವಿ, ಮೂಗು, ಬಾಯಿ ಆಕಾರಗಳನ್ನು ಮೂಡಿಸುತ್ತಾರೆ. ನಂತರ ತೇವಾಂಶ ಆರಲುಬಿಟ್ಟು ಒಣಗಿದ ಮೇಲೆ ಬಣ್ಣಗಳನ್ನು (ಎನಾಮಲ್) ಬ್ರಷ್‌ಗಳಿಂದ ಬಳಸಿ ಕಲಾಕೃತಿಯನ್ನು ರಚಿಸಿ ನಂತರ ಅವುಗಳಿಗೆ ಬಟ್ಟೆಗಳನ್ನು ಆಯಾ

ಬೊಂಬೆಗೆ ಸರಿಹೊಂದುವಂತೆ ಆಯ್ಕೆ ಮಾಡಿ ಜೋಡಿಸುತ್ತಾರೆ. ಕೆಲವು ಬೊಂಬೆಗಳು ತಲೆಯಿಂದ ಅಡಿಯವರವಿಗೂ ಬಿದಿರನ್ನೇ ಬಳಸಿ ಬಣ್ಣವನ್ನು ಲೇಪಿಸುತ್ತಾರೆ.

ಕೆಲವು ಗಾರುಡಿ ಬೊಂಬೆಗಳನ್ನು ಶಿರಭಾಗವನ್ನು ಇತ್ತೀಚಿಗೆ ಫೈಬರ್‌ನಿಂದ ತಯಾರು ಮಾಡಿ ಸಪಾಟಾದ ದೇವವನ್ನು ಬಿದಿರನ್ನು ಬಳಸಿ ತಯಾರು ಮಾಡುತ್ತಾರೆ. ಹಾಗೂ ಈ ಗಾರುಡಿ ಬೊಂಬೆಗಳ ರಕ್ಷಣೆಗೆ ಬಿದಿರಿನ ಬೃಹತ್ ಬುಟ್ಟಿಗಳನ್ನೂ ಆರು ಮಾಡುತ್ತಾರೆ. ಈ ಬಿದಿರನ ಕೆಲಸವನ್ನು ಹೆಣ್ಣು, ಗಂಡು, ಮಕ್ಕಳು, ವೃದ್ಧರು ಆದಿಯಾಗಿ ನಿರ್ವಹಿಸಿ ಕುಟುಂಬದ ಶ್ರಮದಿಂದ ತಮ್ಮ ಜೀವನವನ್ನು ನಡೆಸುವ ಇವರು ವಾಸ್ತವ್ಯವನ್ನು ಕಾಲ ಕಾಲಕ್ಕೆ ಬದಲಾಯಿಸುತ್ತಿರುತ್ತಾರೆ. ಹೆಚ್ಚಾಗಿ ಜನ ಜಂಗುಳಿಯಲ್ಲಿ ವಾಸಿಸುವ ಇವರು ಮೂಲವಸ್ತು ಬಿದಿರನ್ನು ಪಡೆಯಲು ಹಳ್ಳಗಳನ್ನು ಹಾಗೂ ಕಾಡುಗಳನ್ನು ಆಶ್ರಯಿಸುತ್ತಾರೆ. ಅರಣ್ಯ ಇಲಾಖೆಯ ಕಾನೂನಿನಿಂದ ಇವರ ಮೂಲ ವಸ್ತುಗಳನ್ನು ಪಡೆಯಲು ದುಬಾರಿ ಹಣವನ್ನು ನೀಡಿ ಖರೀದಿಸುತ್ತಾರೆ. ಜನಪದೀಯ ಆಚರಣೆಯ ವಿಧಿ ವಿಧಾನಗಳಾದ ಹುಟ್ಟಿ (ತೊಟ್ಟಿಲು) ಜೀವನದ ಅಗತ್ಯ ವಸ್ತುಗಳು, ಚಟ್ಟ ಇವುಗಳಿಗೆ ಬಿದಿರಿನ ಪ್ರಾಮುಖ್ಯತೆ ಬಹಳವಾಗಿದೆ. ಕಲಾತ್ಮಕ ಬದುಕಿಗೂ ವಿಸ್ತಾರವಾದ ಕೊಡುಗೆ ನೀಡಿದೆ.

ಗಾರುಡಿ ಗೊಂಬೆಗಳು

ಮುಖಭಾವವು ಹಸನ್ಮುಖಿಯಾಗಿ ರಾಜ ಠೀವಿಯಿಂದ ನಿಂತ ಭಂಗಿಯಲ್ಲಿಯು ರಾಜ, ರಾಣಿಯರಾಗಿ ಹಾಗೂ ನಗೆ ಮೂಡಿಸುವ ರೀತಿಯಲ್ಲಿನ ಹಾಸ್ಯ ಪಾತ್ರಗಳ ಹಾವಾಡಿಗ, ದಂಪತಿಯ ರೂಪಗಳಲ್ಲಿ ಈ ಗಾರುಡಿ ಬೊಂಬೆಗಳು, ಜಾತ್ರೆ, ಉತ್ಸವ, ಊರ ಹಬ್ಬಗಳಲ್ಲಿ ಸಿರಿವಂತರ ಮದುವೆ ಸಮಾರಂಭಗಳಲ್ಲಿ ಮನೋರಂಜನೆಗಾಗಿ ಬಳಕೆಯಾಗುತ್ತವೆ. ಅಲೆಮಾರಿ ಜನಾಂಗಗಳು ಈ ರೀತಿಯ ಗಾರುಡಿ ಬೊಂಬೆಗಳನ್ನು ತಯಾರಿಸಿಕೊಂಡು ಆಳೆತ್ತರಕ್ಕೂ ದ್ವಿಗುಣ ಆಕಾರದ ಈ ಲಘುಬಾರದ ಆಕೃತಿಗಳನ್ನು ಹೊತ್ತು, ಬೀದಿ ಬೀದಿ ಅಲೆದು ಹೊಟ್ಟೆ ಪಾಡು

ನೀಗಿಸಿಕೊಳ್ಳುತ್ತಾರೆ. ಈ ಬೊಂಬೆಗಳ ಕತ್ತು ಅಥವಾ ನಾಭಿಯಲ್ಲಿ ಕಣ್ಣು ಹೊರ ಪ್ರಪಂಚ ನೋಡುವಷ್ಟು ಕಿಂಡಿಯನ್ನು ಮಾಡಿಕೊಂಡು ತಿರುಗುತ್ತಾ, ಬಳಕುತ್ತಾ, ಪ್ರೇಕ್ಷಕರನ್ನು ಆನಂದಗೊಳಿಸಲು ಈ ಬೊಂಬೆಗಳು ತಮಾಷೆಯಾಗಿಯೇ ಕಾಣುತ್ತೇವೆ.

ಈ ಗಾರುಡಿ ಬೊಂಬೆಗಳ ಮುಖವಾಡವನ್ನು ತ್ರಿಮಾನದಲ್ಲಿ ಟೊಳ್ಳಾಗಿ ರಚನೆ ಮಾಡುತ್ತಾರೆ. ಪೇಪರ್‌ಮೆಷ್, ಅಥವಾ ಬಿದಿರಿನ ತೆಳು ಲೆಪ್ಪದಿಂದ ಮುಖ ಕವಚವನ್ನು ಸಿದ್ಧಪಡಿಸಿ, ಹಂತ ಹಂತವಾಗಿ ಪದರುಗಳ ಹುಣಸೆ ಬೀಜದ ಸರಿಯಿಂದ ಬಟ್ಟೆಯನ್ನು ಅಂಟಿಸಿ ನಂತರ ಬಣ್ಣಗಳನ್ನು ಮುಖವರ್ಣಿಕೆ ಒಪ್ಪುವಂತಹ ರೀತಿಯಲ್ಲಿ ಲೇಪಿಸಿ ಸುಂದರವಾಗಿರುವಂತಹ ಮುಖವಾಡಗಳನ್ನು ರಚನೆ ಮಾಡುತ್ತಾರೆ. ಈ ಮುಖವಾಡಗಳನ್ನು ಸರಿ ಹೊಂದಿಸುವಂತಹ ಬಿದಿರಿನ ದಬ್ಬೆಗಳಿಂದ ಆಧರಿಸಿದ ದೇಹ ರಚನೆಯನ್ನು ತಯಾರುಮಾಡಿ, ನಂತರ ಅವುಗಳಿಗೆ ಸೌಂದರ್ಯವರ್ಧನೆಗೆ ಉತ್ತಮ ಪೋಷಾಕು ಬಟ್ಟೆಗಳನ್ನು ಹಾಗೂ ರಟ್ಟಿನ ಮೂಲದ ಚಿನ್ನದ ಬಣ್ಣದ ಬಟ್ಟೆ ಅಥವಾ ಕಾಗದಗಳಿಂದ ಆಭರಣಗಳು, ತಲೆಗೂದಲಿಗೆ ನೈಲಾನ್ ಕುಚ್ಚಗಳನ್ನು ಅಲಂಕೃತಗೊಳಿಸಿ ರಾಜ–ರಾಣಿ ಜೋಡಿ ಗಾರುಡಿ ಬೊಂಬೆಗಳನ್ನು ಉತ್ಸವ, ಜಾತ್ರೆ, ವಿಶೇಷ ಸಂದರ್ಭಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಬಳಸುತ್ತಾರೆ.

ಹೀಗೆ ತಳಸಮುದಾಯಗಳ ಶಿಲ್ಪಿಗಳು ರಚಿಸುವ ಜನಪದ ಶಿಲ್ಪಗಳು ನಮ್ಮ ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುವ ಕುರುಹುಗಳಾಗಿ ಜೀವಂತವಾಗಿವೆ. ಆಧುನಿಕತೆಯ ಪರಿಣಾಮವಾಗಿ ಇಂತಹ ಕೆಲವು ಶಿಲ್ಪಗಳು ತಮ್ಮ ನೈಜ ಆವರಣಗಳನ್ನು ಕಳೆದುಕೊಂಡಿವೆ. ಮತ್ತು ಅವುಗಳ ಹಿಂದಿನ ಆಚರಣೆಗಳು ಮಾಯವಾಗಿವೆ. ಮರೆತೂ ಹೋಗಿವೆ. ಅಂತಹವುಗಳ ಶೋಧ, ದಾಖಲೆ ಮತ್ತು ಅಧ್ಯಯನಗಳು ಇಂದಿನ ಅಗತ್ಯಗಳಾಗಿವೆ.

ಕರಕುಶಲ ಕಲೆಗಳು

ಕರಕುಶಲ ವಸ್ತುಗಳು ಎನ್ನಿ ಹಸ್ತಶಿಲ್ಪ ಎನ್ನಿಃ ಗುಡಿಗಾರಿಕೆ ಎನ್ನಿಃ ಮೂಲ ಸ್ವರೂಪ ಎಲ್ಲಾ ಒಂದೇ. ಎಲ್ಲವು ನಮ್ಮ ಭಾರತ ದೇಶದಲ್ಲಿ ಬಹುಕಾಲದಿಂದ ಶತಶತಮಾನಗಳಿಂದ ಜೀವಂತವಾಗಿ ಬೆಳೆದು ಬಂದಿರುವ ದೊಡ್ಡ ಪರಂಪರೆಯಾಗಿದೆ. ನೋಡಲು ಅಂದವಾದ, ಬಳಕೆಗೆ ಅನುಕೂಲವಾದ, ಬದುಕಿಗೆ ಒಂದು ಅರ್ಥಕೊಡುವ ಸುಂದರ ವಸ್ತುಗಳು ಇವು. ಕರಕುಶಲ ಕಲೆಗಳಿಗೆ ಮಿತಿಯೇ ಇಲ್ಲವೆನ್ನಬಹುದು. ಶಿಲ್ಪಿಯ ಕಲ್ಪನಾ ಶಕ್ತಿ ಮತ್ತು ಅದನ್ನನುಸರಿಸುವ ಕೈ ಚಳಕ ಇದ್ದಿದ್ದರೆ ಸಾಕು, ಏನನ್ನು ಬೇಕಾದರೂ ಸೃಷ್ಟಿಸುವ ಸಾಮರ್ಥ್ಯ ಹೊರಬರುತ್ತದೆ. ಒಂದೊಂದು ಬಗೆಯ ಕುಶಲಕಲೆಯಲ್ಲು ಭಿನ್ನ ಭಿನ್ನ ಸೃಷ್ಟಿಗಳು, ಲೋಹಶಿಲ್ಪವನ್ನನು ತೆಗೆದುಕೊಂಡರೆ ಅದರಲ್ಲಿ ಕಂಚಿನ ಶಿಲ್ಪ, ಹಿತ್ತಾಳೆ ಶಿಲ್ಪ, ಪಂಚಲೋಹ ಶಿಲ್ಪ, ತಾಮ್ರದ ಶಿಲ್ಪ ಹೀಗೆ ನಾನಾ ಪ್ರಕಾರಗಳಿವೆ. ಮರದ ಕಲೆಯಲ್ಲಿ ಗಂಧದ ಮರದ ಕೆತ್ತನೆ, ಬೀಟೆಮರದ ಕಲೆ, ತೇಗದ ಮರದ ಕೆಲ ಹೀಗೆ ಅನೇಕ ಬಗೆಯ ಕರಕುಶಲ ವಸ್ತುಗಳಿವೆ.

ಕಸೂತಿ ಕಲೆ, ಅರಗಿನ ಕಲೆ, ಮಣ್ಣಿನ ಕಲೆ, ಶಿಲಾ ಶಿಲ್ಪಕಲೆ, ಧಾತುಶಿಲ್ಪ, ಆಭರಣ ಕಲೆ, ಗೊಂಬೆ ಮತ್ತು ಆಟಿಕೆ ಕಲೆ, ಎಲ್ಲವೂ ಕರ್ನಾಟಕ ಹಸ್ತಶಿಲ್ಪ. ಕಲಾ ಸಂಪತ್ತಿಗೆ ಬೆನ್ನೆಲುಬಾಗಿ ನಿಂತಿವೆ. 'ಬಿದಿ' ಕಲೆ ಬೀದರ್ ಜಿಲ್ಲೆಯಲ್ಲಿ ಕಾಣಸಿಗುವ ಅತಿಮುಖ್ಯವಾದ ಕರಕುಶಲ ಕಲೆಯಾಗಿದೆ. ಮುಂಚೆ ಹೈದರಾಬಾದ ಸಂಸ್ಥಾನಕ್ಕೆ ಸೇರಿದ್ದು, ಈಗ ಕರ್ನಾಟಕದಲ್ಲಿರುವ ಬೀದರ್ ಜಿಲ್ಲೆಯಲ್ಲಿ ಕಾಣಸಿಗುವ ಅಪರೂಪದ ಕರಕುಶಲ ಕಲೆಯಾಗಿದೆ.

ಸತು ಮತ್ತು ಜೇಡಿಮಣ್ಣಿನ ಸಂಯೋಜನೆಯಿಂದ ನಾನಾ ವಿನ್ಯಾಸಗಳನ್ನು ತಯಾರಿಸಿ ಅದರಲ್ಲಿ ಬೆಳ್ಳಿಯ ಎಲೆಗಳನ್ನು ಕಲಾತ್ಮಕವಾಗಿ ಹುದುಗಿಸುತ್ತಾರೆ. ಬಿದ್ರಿಕಲೆಯಲ್ಲಾಗುವ ಆಭರಣಗಳು, ಕರಂಡಕಗಳು, ಸಿಗರೇಟು ಡಬ್ಬಿಗಳು, ಹೂವಿನ ಕುಂಡಗಳು, ಹೂಜಿ, ಹುಕ್ಕಾ, ಪಾನದಾನ ಪೆಟ್ಟಿಗೆ, ಊರುಗೋಲು, ಚದುರಂಗ ಪಟ, ಕೀ ಹಿಡಿಗಳು, ಪೂಜಾ ಸಾಮಗ್ರಿಗಳು,

ಮೇಣಬತ್ತಿ ನಿಲುವುಗಳು, ಕುಂಕುಮ ಭರಣಿಗಳು, ಕಾಗದ ಕತ್ತರಿಸುವ ಚಾಕು, ಎಲ್ಲವೂ ಅತ್ಯಂತ ಜನಪ್ರಿಯವಾದ ವಸ್ತುಗಳು.

ಬೀದರಿನ ಬಿದ್ರಿಕಲೆ ಕೇವಲ ಕಲೆಯಾಗಿ ಪ್ರಕಟವಾಗಿಲ್ಲ. ಅದೊಂದು ಅಭೂತಪೂರ್ವ ಲೋಹ ವಿಜ್ಞಾನವಾಗಿದೆ. ಹೀಗಾಗಿ ಬಿದ್ರಿಕಲೆಗೆ ವಿಶ್ವದಲ್ಲೆಡೆ ನಡೆಯುವ ವಿಜ್ಞಾನ ಮೇಳಗಳಲ್ಲಿ ಇದುಕ್ಕೊಂದು ರಾಜ ಮರ್ಯಾದೆ ಇದೆ. ಬಿದ್ರಿ ಕುಶಲಕರ್ಮಿಗಳು ಸಹ ವಿಜ್ಞಾನಿಗಳಿಗೆ, ಅವರು ಅನಕ್ಷರಸ್ಥರಿಕಬಹುದು. ಆದರೆ ಪರಂಪರೆಯಿಂದ ಬಂದ ವೈಜ್ಞಾನಿಕ ಪ್ರಜ್ಞೆ ಮತ್ತು ದೃಶ್ಯ ಪ್ರಜ್ಞೆಗಳೆರಡು ಸಮ್ಮಿಳಿತವಾಗಿ ಸುಂದರವಾದ ಬಿದ್ರಿಕಲೆ ರೂಪುಗೊಳ್ಳುವ ಪ್ರಕ್ರಿಯೆ ಅತ್ಯಂತ ಅದ್ಭುತವಾಗಿದೆ.

ಕುಲಕಸಬುಗಳಾದ ಕುಂಬಾರಿಕೆ, ಕಂಬಾರರು, ನೇಕಾರಿಕೆ, ಕಂಚುಗಾರಿಕೆ, ಚಮ್ಮಾರ ಹೀಗೆ ಮುಂತಾದ ಕುಶಲತೆಗಳನ್ನು ಡಿಪ್ಲೋಮಾ ಕೋರ್ಸಗಳಿಗಾಗಿ ಪರಿವರ್ತಿಸಿ ಶೈಕ್ಷಣಿಕ ಶಿಸ್ತಿಗೆ ತಂದಾಗ ಆ ವೃತ್ತಿಯ ಕುರಿತು ಇರುವ ಕೀಳರಿಮೆ ಹೋಗಿ ಪ್ರತಿಭಾವಂತ ಯುವ ಸಮುದಾಯವು ಈ ಶಿಕ್ಷಣವನ್ನು ಪಡೆದು ಪ್ರಶಿಕ್ಷಿತರಾಗಿ ತಮ್ಮ ಸ್ವಾವಲಂಬಿ ಬದುಕನ್ನು ಕಾಣುವಂತರಾಗುತ್ತಾರೆ. ನಮ್ಮ ಗ್ರಾಮೀಣ ಪ್ರದೇಶದ ಮಹಿಳೆಯರು ತಯಾರಿಸುವ ಚಂಚಿಯು ಕಲಾತ್ಮಕವಾಗಿಯೂ ಮತ್ತು ಬಹುಉಪಯೋಗಿಯಾಗಿಯು ಇರುತ್ತವೆ. ಹೀಗೆ ಅನೇಕ ರೀತಿಯ ಕಲಾತ್ಮಕ ಕೌಶಲ್ಯವನ್ನು ಹೊಂದಿದ ಪ್ರಾದೇಶಿಕ ಕುಶಲ ಕಲೆಗಳು ಇಂದಿನ ಸಮದರ್ಭಕ್ಕೆ ಅನುಗುಣವಾಗಿ ನಿವ್ಯಾಸಗಳನ್ನು ಮಾಡಿ ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ಉಪಯೋಗಿ ವಸ್ತುಗಳು ಮತ್ತು ಕಲಾತ್ಮಕತೆಯಿಂದ ಕೂಡಿದ ಕೃತಿಗಳನ್ನು ರಚನೆಮಾಡಿ ಮಾರುಕಟ್ಟೆಯನ್ನು ನಿರ್ಮಿಸಿದರೆ ಈ ಪ್ರದೇಶದ ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರಿಯಾಗಬಹುದಾಗಿದೆ.[1] ಈ ಪ್ರದೇಶದ ಪ್ರಗತಿಪರ ವಿದ್ವಾಂಸರು, ರಾಜಕಾರಣಿಗಳು, ಉದ್ಯಮಿಗಳು, ಸರಕಾರಿ ಮತ್ತು ಸಾಮಾಜಿಕ ಸಂಸ್ಥೆಗಳೂ ಕೂಡಿ ಕಲಾ ಕೌಶ್ಲಯದ ಶಿಕ್ಷಣವನ್ನು ಕೊಡುವ ಸಂಸ್ಥೆಯನ್ನು ಕಟ್ಟಲು

1 ಕಲಾಗಂಗಾ ಸಂಶೋಧನ ಪತ್ರಿಕೆ, ಲೇಖನ: ಡಾ.ಸತೀಶಕುಮಾರ ಪಿ.ವಲ್ಲಾಪುರೆ, ಪು.ಸಂ. 32

ಆರ್ಥಿಕ ಸಹಕಾರ ನೀಡಿದರೆ ನಿರುದ್ಯೋಗಿ ಯುವಕರು ಸ್ವಾವಲಂಬಿ ಬದುಕು ಕಾಣಬಹುದು. ಇದಕ್ಕೆ ಉದಾಹರಣೆ ಬೆಂಗಳೂರಿನ ಸಮೀಪದಲ್ಲಿರುವ ಕುಶಲ ಕಲಾ ಕೇಂದ್ರಗಳು ಅನೇಕರಿಗೆ ವೃತ್ತಿ ಕೌಶಲ್ಯ ಕಲಾ ಶಿಕ್ಷಣವನ್ನು ನೀಡಿ ಅವರ ಬದುಕನ್ನು ಕಂಡುಕೊಳ್ಳಲು ಸಹಕಾರಿಯಾಗಿವೆ.

ಈ ಪ್ರದೇಶಕ್ಕೆ 371 (ಜೆ) ಸಿಕ್ಕಿರುವುದರಿಂದ ಈ ಪ್ರದೇಶದಲ್ಲಿ ಅನೇಕ ಕಲಾ ಕೌಶಲ್ಯಾಭಿವೃದ್ಧಿ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿ ಯುವ ಸಮುದಾಯಕ್ಕೆ ಆರ್ಥಿಕ ನೆರವನ್ನು ನೀಡಿ ಶಿಕ್ಷಣವನ್ನು ಕೊಟ್ಟರೆ ಈ ಪ್ರದೇಶದ ಜನ ಸಮುದಾಯದ ಆರ್ಥಿಕ ಪ್ರಗತಿ ಮತ್ತು ಸಾಂಸ್ಕೃತಿಕ ಕ್ಷೇತ್ರದ ಬೆಳವಣಿಗೆಯನ್ನು ಕಾಣಬಹುದಾಗಿದೆ. ಕಲಾ ಕೌಶಲ್ಯ ಮತ್ತು ಸೃಜನಶೀಲ ವ್ಯಕ್ತಿಗಳು ಬೆಳೆದಂತೆ ಈ ಪ್ರದೇಶದ ಸಾಂಸ್ಕೃತಿಕ ಮೌಲ್ಯ ಹೆಚ್ಚುತ್ತದೆ. ಈ ಪ್ರದೇಶದ ಆರ್ಥಿಕ ಪ್ರಗತಿಗೆ ದಾರಿಯಾಗುತ್ತದೆ. ಸಮಕಾಲೀನ ಸಂದರ್ಭದಲ್ಲಿ ವಿನ್ಯಾಸಕರ ಬೇಡಿಕೆ ಮತ್ತು ಕಂಪ್ಯೂಟರ್ ಮೂಲಕ ಮಾಡುವ ಕೆಲಸಕ್ಕೆ ಅನೇಕ ಸಾಫ್ಟವೇರಗಳ ಅರಿವು ಇರುವುದು ಬಹಳ ಪ್ರಾಮುಖ್ಯತೆ ಪಡೆದಿದೆ. ಆದುದರಿಂದ ಇಂತಹ ಹೊಸ ವಿಷಯಗಳನ್ನು ಪ್ರಶಿಕ್ಷಣ ಕೊಡುವುದರಿಂದ ನಮ್ಮ ಪ್ರದೇಶದ ಪ್ರತಿಭೆಗಳಿಗೆ ಸ್ವಾವಲಂಬನೆ ಬದುಕು ಮತ್ತು ಆರ್ಥಿಕ ಪ್ರಗಿ ಕಾಣಬಹುದಾಗಿದೆ. ಒಂದು ಪ್ರದೇಶದ ಬೆಳವಣಿಗೆಯನ್ನು ಕಾಣಬೇಕಾದರೆ ಆ ಪ್ರದೇಶದ ಜನ ಸಮುದಾಯ ಆರ್ಥಿಕ ಸಬಲರಾದಾಗ ಕಲೆ, ಸಂಸ್ಕೃತಿ ಜೊತೆಗೆ ಸಮಾಜ ಸಮೃದ್ಧಿ ಮತ್ತು ಮತ್ತು ನೆಮ್ಮದಿಯ ತಾಣವಾಗುತ್ತದೆ.

ಟಿಪ್ಪಣಿಗಳು:

- ಪೂಜಾವಿಧಿಗಳಿಂದ ಮುಕ್ತವಾಗಿದ್ದ ಗಾರೆ ಶಿಲ್ಪಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿ, ಭಕ್ತರ ಮನಸ್ಸಿಗೆ ಮುದವನ್ನು ನೀಡುತ್ತಿದ್ದವು. ಶಿಲೆ, ಮರ, ಲೋಹ ಮತ್ತಿತರ ವಸ್ತುಗಳಿಗಿಂತ ಗಾರೆ ಶಿಲ್ಪಗಳ ರಚನೆ, ಕಾಲ ಮತ್ತು ಹಣದಲ್ಲಿ ಮಿತವ್ಯಯಕಾರಿ ಬಹುಶ: ಆದುದರಿಂದಲೇ ಗಾರೆ ಶಿಲ್ಪಗಳ ರಚನೆ ಜನಪ್ರಿಯಗೊಂಡಿರಬಹುದು.

ಶಿಲ್ಪಗಳನ್ನು ರಚಿಸುವಾಗ ಪರಿಷ್ಕರಣೆಗಳಿಗೆ ವಿಪುಲವಾದ ಅವಕಾಸವಿದ್ದುದ್ದರಿಂದ, ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಶಿಲ್ಪಗಳನ್ನು ಸುಂದರಗೊಳಿಸಬಹುದಾಗಿತ್ತು. ಇನ್ನೂ ಗಾರೆ ಶಿಲ್ಪಿಗಳ ಬಗೆಗೆ ಸ್ಪಷ್ಟ ಮಾಹಿತಿ ಇಲ್ಲ. ವಿಜಯನಗರ ಕಾಲದ ಗಾರೆ ಶಿಲ್ಪಗಳನ್ನು ಶಿಲ್ಪ ಶಾಸ್ತ್ರದಲ್ಲಿ ಪರಿಣಿತಿ ಪಡೆದ ಶಿಲ್ಪಗಳೇ ನಿರ್ಮಿಸಿರಬೇಕು. ಏಕೆಂದರೆ ಆ ಕಾಲದ ಮರ, ಶಿಲೆ, ಲೋಹ ಮತ್ತು ಗಾರೆ ಶಿಲ್ಪಗಳು ರಚನೆಯಲ್ಲಿ ಒಂದೇ ತೆರನಾಗಿ ಕಂಡುಬರುತ್ತವೆ. ಅಂದರೆ ವಿಜಯನಗರ ಕಾಲದಲ್ಲಿ ಗಾರೆ ಕುಶಲ ಕಲೆಯಲ್ಲಿ ನುರಿತ ಶಿಲ್ಪಿಗಳ ಒಂದು ವರ್ಗವೇ ಇತ್ತೇ ಎಂದು ಸ್ಪಷ್ಟವಾಗುತ್ತದೆ. ಹೀಗೆ ಮಧ್ಯಕಾಲದಲ್ಲಿ ಗಾರೆ ಶಿಲ್ಪಗಳ ರಚನೆ ಒಂದು ಜನಪ್ರಿಯ ಶಿಲ್ಪಕಲಾ ಮಾಧ್ಯಮವಾಗಿತು.

- ಪ್ರಾದೇಶಿಕತೆ: ಯಾವುದೇ ಒಂದು ಪ್ರದೇಶದ ಜನಜೀನದ ವೈಶಿಷ್ಟ್ಯಗಳನ್ನು ಭಾಷೆ, ಸಂಪ್ರದಾಯಗಳು, ಉಡುಪು, ವಿಚಾರಗಳು, ಅನುಭವಗಳು ಇತ್ಯಾದಿ ಚಿತ್ರ ಶಿಲ್ಪಕಲಾಕೃತಿಯೊಂದರಲ್ಲಿ ಸಾಕಷ್ಟು ವಿವರವಾಗಿ ಅಳವಡಿಸಿಕೊಂಡಾಗ, ಅಂತಹ ಕೃತಿಯಲ್ಲಿ ಪ್ರಾದೇಶಿಕತೆ ಇದೆ ಎಂದು ಗುರುತಿಸಬಹುದು.
- ಕಲಬುರಗಿಯ ಖ್ಯಾತ ಚಿತ್ರಕಲಾವಿದ ಮತ್ತು ಕಲಾ ಸಂಗ್ರಹಕ ಡಾ.ವಿಜಯ ಹಾಗರಗುಂಡಗಿ ಅವರು ಹೈದ್ರಾಬಾದ ಕರ್ನಾಟಕ ಪ್ರದೇಶದ ಅತ್ಯಂತ ಮಹತ್ವದ ಮತು ಅಪರೂಪದ ಚಿತ್ರ-ಶಿಲ್ಪ ಮತ್ತು ಕರಕುಶಲ ವಸ್ತುಗಳನ್ನು ಸಂಗ್ರಹಿಸಿದ್ದಾರೆ.



ಹೈದ್ರಾಬಾದ-ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಆಚರಣೆಯಲ್ಲಿರುವ ಜೋಕುಮಾರನ ಜಾನಪದ ಶಿಲ್ಪ.



ಮಲ್ಲಪ್ಪ ಸಿ. ಡೋಲೆ ಅವರು ಜನಪದೀಯ ಶೈಲಿಯಲ್ಲಿ ರಚಿಸಿದ 'ಮದ್ದಿನ ಹುಲಿಗಳ ಶಿಲ್ಪ'.




ಕಿಸಗಾಲು ಗೊಂಬೆ ಶಿಲ್ಪಗಳು



ಜೇಡಿಮಣ್ಣಿನ ಮಾಧ್ಯಮದಲ್ಲಿ ರಚಿಸಿದ ಪಾತ್ರೆಗಳು.





ಜೇಡಿಮಣ್ಣಿನಲ್ಲಿ ನಿರ್ಮಿಸಿದ
ಒಂದು ಜನಪದ ಮುಖವಾಡ ಶಿಲ್ಪ.

ಜೇಡಿಮಣ್ಣನ್ನು ಹದಗೊಳಿಸುತ್ತಿರುವ ದೃಶ್ಯ.



ಜೇಡಿಮಣ್ಣಿನ ಮಾಧ್ಯಮದಲ್ಲಿ ನಿರ್ಮಿಸಿದ ಶಿಲ್ಪಗಳನ್ನು ಸುಡುತ್ತಿರುವುದು.



ಶ್ರೀಶೈಲ್ ಬಡಿಗೇರ ಅವರು ನಿರ್ಮಿಸಿದ
ಒಂದು ಮೇಣದ ಶಿಲ್ಪ.



ಶಕುಂತಲಾ ಎಂ. ಬಡಿಗೇರ ಅವರು ಜನಪದ ಶೈಲಿಯಲ್ಲಿ ನಿರ್ಮಿಸಿದ ಶಿಲ್ಪಗಳು.



ಕುದುರೆಗಳ ಶಿಲ್ಪ ಕಲಾಕೃತಿಗಳು
ನಿರ್ಮಿಸುತ್ತಿರುವ ಶ್ರೀ ಬಸಣ್ಣ ಬಡಿಗೇರ್.



ಶ್ರೀ ಬಸಣ್ಣ ಬಡಿಗೇರ್ ಅವರು ನಿರ್ಮಿಸಿದ ಕಲಾತ್ಮಕ ಕಾಷ್ಠಶಿಲ್ಪ ವಿನ್ಯಾಸಗಳು.



ಶ್ರೀ ಸಿದ್ಧಾರೂಡ ಜಿ.ಬಿ. (ಇಟಗಿ)
ಹೊಯ್ಸಳ ಶೈಲಿಯಲ್ಲಿ ನಿರ್ಮಿಸಿದ
'ದರ್ಪಣ ಸುಂದರಿ'



ಶ್ರೀ ರಾಮಾಂಜನೇಯ ಬಡಿಗೇರ್
(ರಾಯಚೂರು) ಹೊಯ್ಸಳ ಶೈಲಿಯಲ್ಲಿ
ನಿರ್ಮಿಸಿದ 'ಮೋಹಿನಿ' ಶಿಲ್ಪ.

ಅಧ್ಯಾಯ-೪

ಹೈದ್ರಾಬಾದ ಕರ್ನಾಟಕದ ತಳಸಮುದಾಯ ಶಿಲ್ಪಕಲಾವಿದರು

ಪ್ರಸ್ತಾವನೆ:

ಶ್ರಮ ಮತ್ತು ಸೃಜನಶೀಲತೆಗಳು ಒಂದನ್ನೊಂದು ಪೋಷಿಸುತ್ತಿರುತ್ತವೆ. ಶ್ರಮದಿಂದ ಸೃಜನಶೀಲತೆ ಹುಟ್ಟುತ್ತದೆ. ಆ ಸೃಜನಶೀಲತೆಯು ಶ್ರಮದ ಆಯಾಸವನ್ನು ನೀಗಿಸುತ್ತದೆ. ಹೀಗೆ ಪ್ರಾಚೀನ ಕಾಲದಿದಂಲೂ ಶ್ರಮ ಜೀವಗಳೇ ಸೃಜನಶೀಲರಾಗಿರುವುದನ್ನು ನೊಡುತ್ತೇವೆ. ಚಿತ್ರ-ಶಿಲ್ಪ, ನಾಟ್ಯ, ಸಾಹಿತ್ಯ ಮುಂತಾದವುಗಳ ನಿರ್ಮಾತೃಗಳು ತಳಸಮುದಾಯಗಳ ಶ್ರಮ ಜೀವಿಗಳಾಗಿದ್ದ ಕಾರಣದಿಂದಲೇ ಅವರು ಅಷ್ಟೊಂದು ಉನ್ನತ ಕೊಡುಗೆಯನ್ನು ನೀಡಲು ಸಾಧ್ಯವಾಗಿದೆ. ಶ್ರಮದಿಂದ ಬರುವ ಅನುಭವವು ಕಲಾತ್ಮಕವಾಗಿ ಅಭಿವ್ಯಕ್ತಿಸುವ ತುಡಿತ ಹೊಂದಿರುವುದರಿಂದ ಇದು ಸಾದ್ಯವಾಗಿದೆ. ಹಲವು ದಾಳಿಗಳನ್ನೆದುರಿಸಿದ ಮತ್ತು ಅನೇಕ ಬಾರಿ ಬರಗಾಲಕ್ಕೆ ತುತ್ತಾದ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಹಸಿವು. ನೋವು. ಅವಮಾನ,

ಬಡತನ, ಶೋಷಣೆಗೆ ಒಳಗಾಗಿ ಜೀವ ಸವೆಸಿದ ತಳ ಸಮುದಾಯದ ಹಲವಾರು ಶಿಲ್ಪಕಲಾವಿದರು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಕಾಣಸಿಗುತ್ತಾರೆ. ತಮ್ಮ ವಿಶಿಷ್ಟ ಕಲಾ ಪ್ರತಿಭೆಯಿಂದ ರಾಜ್ಯ, ರಾಷ್ಟ್ರಮಟ್ಟದಲ್ಲಿ ಗುರುತಿಸಿ ಕೊಂಡಿದ್ದಾರೆ. ಅನೇಕ ಪ್ರಶಸ್ತಿ ಗೌರವಗಳನ್ನು ಪಡೆದಿದ್ದಾರೆ. ಇಷ್ಟಾಗಿಯೂ ಈ ಸ್ಥಾನಮಾನಗಳು ಇನ್ನು ಹಲವರಿಗೆ ದಕ್ಕದೆ ಹೋಗಿವೆಯಾದರೂ, ಅವರ ಕಲಾಪ್ರತಿಭೆಯೇನು ಕಡಿಮೆಯದಾಗಿಲ್ಲ. ಅಂತಹ ಎಲೆಮರೆಕಾಯಿಯಂತೆ ಉಳಿದಿರುವ ಅನೇಕ ಪ್ರಕಾರದ ಶಿಲ್ಪಕಲಾವಿದರ ಪರಿಚಯವನ್ನು ಈ ಅಧ್ಯಾಯದಲ್ಲಿ ಕೊಡಲಾಗಿದೆ.

ಜನಪದ ಶಿಲ್ಪ ಸಂಪ್ರದಾಯ ಶಿಲ್ಪಗಳಲ್ಲದೆ ಸಮಕಾಲೀನ ಶಿಲ್ಪಕಲೆಯಲ್ಲಿ ಕೂಡ ಹೈದ್ರಾಬಾದ-ಕರ್ನಾಟಕದ ಹಲವಾರು ಶಿಲ್ಪಕಲಾವಿದರು ತೊಡಗಿಸಿಕೊಂಡಿದ್ದಾರೆ. ದಿ. ಧನಂಜಯ ಶಿಲ್ಪಿ, ನಾಡೋಜ ನಾಗಣ್ಣ ಬಡಿಗೇರ್, ಬಸಣ್ಣಾ ಬಡಿಗೇರ್, ದೇವೀಂದ್ರಪ್ಪ ಕಂಬಾರ, ಮಹಾದೇವಪ್ಪ ಎಸ್.ಶಿಲ್ಪಿ, ಚಂದ್ರಶೇಖರ ಶಿಲ್ಪಿ, ಎಸ್.ಎಸ್.ಸಿಂಪಿ, ಎಂ.ಬಿ.ಲೋಹಾರ್, ಮಾನಯ್ಯ ಬಡಿಗೇರ್, ನಾಗಪ್ಪ ಪ್ರಧಾನಿ, ಈರಣ್ಣ ಕಂಬಾರ, ಬಾಬುರಾವ ಎಚ್. ನಿಂಗಣ್ಣ ಡಿ.ಕೇರಿ, ಮಹೇಶ ತಳವಾರ, ವಿಶ್ವೇಶ್ವರಯ್ಯ ಟಿ.ಎನ್, ಜಗನ್ನಾಥ ಜಕ್ಕೆಪಲ್ಲಿ, ಎಲ್.ಎನ್.ಮನೋಕರ್, ನಾರಾಯಣಪ್ಪ ಚಿತ್ರಗಾರ, ಏಕಪ್ಪಾ ಚಿತ್ರಗಾರ, ಅಣ್ಣಪ್ಪ ಚಿತ್ರಗಾರ, ಅವ್ವಣಪ್ಪ ಪತ್ತಾರ, ಸುರಪುರದ ವೀರಣ್ಣ ಕೋನಾಳ, ಶಕ್ತಿನಗರದ ಸಿದ್ದಲಿಂಗಾಚಾರ್ಯ, ಆನಂದ ಬಾಬು, ನಟರಾಜ ಶಿಲ್ಪಿ, ರಾಜಕುಮಾರ ಯಳಸಂಗಿಕರ್, ಪರಶುರಾಮ.ಪಿ, ಧರ್ಮಣ್ಣ ವಡ್ಡರ್, ರಾಜೇಶ ದೇಗಾಂವಕರ್, ತಳವಾರ ಎಚ್.ಡಿ, ಗೋವರ್ಧನ ಕೆ, ಸಂಜಯ ಪಾಳೇಕಾರ್, ಮಲ್ಲಪ್ಪ ಸಿ.ಡೋಲೆ, ಶಂಕರ ಹೊಡ್ಡಿನಮನಿ, ಶಿವಪ್ರಸಾದ ಬನ್ನಟ್ಟಿ, ಚಂದ್ರಪ್ಪ ಗೋಗಿ, ಬಸವರಾಜ ಕಲೆಗಾರ, ಅರವಿಂದ ಟೊನಪೆ, ಬಸವರಾಜ್ ಮೇತ್ರಿ, ಶಿವಕುಮಾರ ಜಾಧವ, ಅಶೋಕ ಮೇಲಿನಮನಿ, ಮರಿಯಪ್ಪ ಹಣಮಂತ, ಸಂತೋಷ ರಾಠೋಡ್, ಅವಿನಾಶ ಭೋವಿ, ಜಿ.ಕೆ.ಬಡಿಗೇರ್(ಕೊಪ್ಪಳ), ರಾಜಕುಮಾರ ಎಸ್.ಕೆ (ಕಲಬುರ್ಗಿ), ಅಮರೇಶ ಪರಂಗಿ

(ರಾಯಚೂರ ಜಿಲ್ಲೆ), ತಿಪ್ಪಣ್ಣ (ಕಲಬುರಗಿ), ಸುನೀಲ ಪೂಜಾರಿ (ಬೀದರ), ಯಮುನಪ್ಪ (ರಾಯಚೂರು), ಮೋಹನ ಪಂಚಾಳ (ಬೀದರ), ಗಣೇಶ (ಕೊಪ್ಪಳ), ವೀರೇಂದ್ರ ಎಸ್.ಪಾಟೀಲ (ಕಲಬುರ್ಗಿ), ಸಂಜಯಕುಮಾರ ಬಿ (ಬೀದರ), ಶಿವುಕುಮಾರ (ಬೀದರ್) ಚಂದ್ರು (ರಾಯಚೂರ), ರಾಜಕುಮಾರ ಮಾಲಗತ್ತಿ (ಕಲಬುರ್ಗಿ), ಅಶೋಕ ಯಡ್ರಾಮಿ (ಕಲಬುರ್ಗಿ), ಸಿದ್ರಾಮ ಎಮ್. (ಯಾದಗಿರಿ), ಭೀಮಾಶಂಕರ ಯಡ್ರಾಮಿ (ಕಲಬುರಗಿ), ಚಂದ್ರಕಾಂತ ಶಿವಪುರ (ಯಾದಗಿರಿ), ಗೌತಮ ಅಂದಾನಿ (ಕಲಬುರ್ಗಿ) ಅಂಥೋನಿ (ಕಲಬುರಗಿ), ಭೀಮರಾಯ ಎಚ್ (ರಾಮತೀರ್ಥ, ಕಲಬುರ್ಗಿ), ಮಾಪಣ್ಣ ಎನ್ (ಕಲಬುರ್ಗಿ), ಶರಣಪ್ಪ ಆರ್ (ರಂಜೋಳಿ ಕಲಬುರಗಿ ಜಿಲ್ಲೆ), ಬಸಪ್ಪ.ಆರ್. (ಮಸ್ಕಟ್, ಕಲಬುರ್ಗಿ ಜಿಲ್ಲೆ), ಬಿ.ಸಿದ್ದಾರೂಢ(ಬಳ್ಳಾರಿ), ಮೌನೇಶ ಕಮ್ಮಾರ (ಯಾದಗಿರಿ ಜಿಲ್ಲೆ), ನಂದಕುಮಾರ ಪಿ. (ಯಾದಗಿರಿ), ಬ್ರಹ್ಮೇಂದ್ರ ಆಚಾರ್ಯ (ರಾಯಚೂರು), ಪ್ರಶಾಂತ ಎನ್. ಸೋನಾರ (ಕೊಪ್ಪಳ), ಮೌನೇಶ (ಬಳ್ಳಾರಿ), ಪ್ರಕಾಶ ಬಗಲಿ (ಬಳ್ಳಾರಿ), ಹಣಮಂತ ಬಾಡದ (ಕಲಬುರಗಿ), ಮಲ್ಲಿಕಾರ್ಜುನ (ರಾಯಚೂರ), ರಾಜಶೇಕರ ಎಸ್ (ಕಲಬುರಗಿ), ವಿರೇಶ (ರಾಯಚೂರ), ಜೀವನ ಎಮ್.ಕೇರಿ (ಕಲಬುರ್ಗಿ), ಸುಧಾಕರ ಕೆ ಹರಸೂರ (ಕಲಬುರ್ಗಿ), ಪ್ರಕಾಶ ಚಿದಾನಂದ (ಬಳ್ಳಾರಿ), ಪ್ರಭಾಕರ ಕೆ. ವಿಶ್ವಕರ್ಮ, (ಕಲಬುರಗಿ), ನಾರಾಯಣ ಬಡಿಗೇರ್ (ಯಾದಗಿರಿ), ಶ್ರೀಶೈಲ ಬಡಿಗೇರ ಹೀಗೆ ಹಲವಾರು ಹಿರಿಯ ಮತ್ತು ಕಿರಿಯ ಶಿಲ್ಪಕಲಾವಿದರು ಸಂದರ್ಭಕ್ಕನುಸಾರವಾಗಿ ವಿವಿಧ ಮಾಧ್ಯಮಗಳಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಬಿದರಿ ಕಲೆಯಲ್ಲಿ ಪರಿಣಿತರಾದ ದತ್ತಾತ್ರೇಯ ಮಾಣಿಕಪ್ಪ, ಮಹಮದ್ ಆರೀಫ್ ರಶಿದೋದ್ದೀನ್ ಮಹಮ್ಮದ್ ಷರೀಫ, ಲಕ್ಷ್ಮೀಬಾಯಿ, ಅಬ್ದುಲ ಖಾದಿರ, ಮಹಮ್ಮದ ಉಸ್ಮಾನ, ಮೊಹಮ್ಮದ ಫೈಜುದ್ದಿನ್, ಗುಲಾಮ ಸಮದ್ ಸಿದ್ಧಿಕಿ, ಶಹಾ ಮಜೀದ್ ಖಾದ್ರಿ, ಮೊಹಮ್ಮದ್ ಅಬ್ದುಲ್ ರೌಫ್, ಮೊಹಮ್ಮದ ಶಫಿಯೊದ್ದೀನ್, ಶಹಾ ರಷೀದ್ ಖಾದ್ರಿ, ಮೊಹಮ್ಮದ್ ಆರೀಫುದ್ಧಿನ್, ಅಬ್ದುಲ್ ಹಮೀದ್, ಅಬ್ದುಲ ಹಕೀಂ, ಮೊಹ್ಮದ್ ಅನಿಸ್ ಅಹ್ಮದ್ ಇವರೆಲ್ಲರೂ ವಿವಿಧ

ಮಾಧ್ಯಮಗಳ ಶಿಲ್ಪರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಸಂಕ್ಷಿಪ್ತ ಪರಿಚಯವನ್ನು ಈ ಕೆಳಗಿನಂತೆ ನೀಡಲಾಗಿದೆ.

ಹೈದ್ರಾಬಾದ-ಕರ್ನಾಟಕ ಪ್ರದೇಶದ ಪ್ರಮುಖ ಶಿಲ್ಪಕಲಾವಿದರು.

ಧನಂಜಯ ಶಿಲ್ಪಿ: (೧೯೩೪-೨೦೦೪):

ಧನಂಜಯ ಶಿಲ್ಪಿಯವರು ಒರ್ವ ಪ್ರತಿಭಾವಂತ ಶಿಲ್ಪಕಲಾವಿದರಾಗಿದ್ದು, ಯಾವತ್ತು ತಮ್ಮ ವಿದ್ವತ್ಪೂರ್ಣ ಅನುಭವಗಳಿಂದ ಚಿತ್ರಕಲೆ ಮತ್ತು ಶಿಲ್ಪಕಲೆಯ ಕುರಿತು ವಿದ್ಯಾರ್ಥಿಗಳಿಗೆ, ಸಹವರ್ತಿಗಳಿಗೆ ಮಾರ್ಗದರ್ಶನ ಮಾಡುತ್ತ, ಸಲಹೆಗಳನ್ನು ನೀಡುತ್ತ ಎಲ್ಲರೊಂದಿಗೆ ಆತ್ಮೀಯವಾಗಿ ವರ್ತಿಸುತ್ತಿದ್ದರು. ಅವರು ಇದೇ ೨೦೧೭ರ ಫೆಬ್ರವರಿ ಒಂದಕ್ಕೆ ನಮ್ಮನ್ನಗಲಿ ಹದಿನೇಳು ವರ್ಷಗಳಾದವು. ಇಂದು ಭೌತಿಕವಾಗಿ ನಮ್ಮೊಡನೆ ಇರದಿದ್ದರೂ ಅವರು ಬಿಟ್ಟು ಹೋಗಿರುವ ಕಲಾ ಸಂಪತ್ತು ಬಹುಕಾಲ ಅವರ ಜೀವಂತಿಕೆಯನ್ನು ರುಜುಪಡಿಸುತ್ತವೆ, ನೋಡುಗರಿಗೆ ಸೌಂದರ್ಯದ ಸೆಲೆಯಾಗಿವೆ.

ರಾಷ್ಟ್ರೀಯ, ಅಂತಾರಾಷ್ಟ್ರೀಯ ಖ್ಯಾತಿವೆತ್ತ ಶಿಲ್ಪ ಕಲಾವಿದರ ಸಾಲಿನಲ್ಲಿ ಪರಿಗಣಿಸಲ್ಪಡುವ ವ್ಯಕ್ತಿತ್ವ ಗಳಿಸಿಕೊಂಡಿರುವ ಇವರ ಶಿಲ್ಪಕಲಾಕೃತಿಗಳು ನೋಡಿದವರು ಬೇರೆ ಯಾವುದೇ ಹೇಳಿಕೆ ಕೊಡದೆ ಸಂತೋಷದಿಂದ 'ಅಬ್ಬಾ'! ಸುಂದರ ಕಲಾಕೃತಿ' ಎಂದು ಉದ್ಗರಿಸದೇ ಇರಲಾರರು. ಅಂಥ ಒಂದು ಪ್ರಭುತ್ವ ಸಾಧಿಸಿದರು. ನವ್ಯ, ನೈಜ ಮತ್ತು ಸಾಂಪ್ರದಾಯಿಕ ಮುಂತಾದ ಯಾವುದೇ ಕಲಾ ಪ್ರಕಾರಗಳಲ್ಲಿ ಇವರು ಶಿಲ್ಪವನ್ನು ರಚಿಸಬಹುದಾದರೂ ಆಯ್ಕೆ ಮಾಡಿಕೊಂಡದ್ದು, ರಚನೆ ಮಾಡಿರುವದು ಹೆಚ್ಚಾಗಿ ನೈಜ ಶೈಲಿಯಲ್ಲಿಯೇ. ಅದಕ್ಕೆ ಕಾರಣ ಇಲ್ಲದಿಲ್ಲ. ಏಕೆಂದರೆ ಅವರು ಪಡೆದ ಶಿಕ್ಷಣ ಅಂತಹದ್ದೇ ಆಗಿತ್ತು, ಅವರ ಗುರುಗಳಿಂದ ಪ್ರಭಾವ ಪಡೆದ ಶೈಲಿಯೂ ಅದೇ ಆಗಿತ್ತು. ಆ ಸಮಯದಲ್ಲಿ ಬ್ರಿಟಿಷರ ಆಳ್ವಿಕೆಯಿಂದ ದೇಶಿಯ ಕಲೆಗಳ ಜೋತೆಗೆ ಪಾಶ್ಚಿಮಾತ್ಯ ಕಲಾ ಸಂಪ್ರದಾಯಗಳು ಬೆಳೆದುಬಂದವು.

ಮುಂತಾದವುಗಳು ಅವರು ಅಮೃತಶಿಲೆಯಲ್ಲಿ ನಿರ್ಮಿಸಿದ ಶಿಲ್ಪಕಲಾಕೃತಿಗಳಿಗೆ ಉದಾಹರಣೆಗಳಾಗಿವೆ.

ಧನಂಜಯ ಶಿಲ್ಪಿ ರಚಿಸಿದ 'ಮಗು ತಾಯಿಯ ಎದೆ ಹಾಲು ಕುಡಿಯುತ್ತಿರುವುದು ಶಿಲ್ಪವನ್ನು ಕಂಡ ಭಾರತೀಯ ವೈದ್ಯಕೀಯ ಇಲಾಖೆಯವರು ಆ ಕಲಾಕೃತಿಯ ಚಿತ್ರವನ್ನು ತಮ್ಮ ಅಧಿಕೃತಿ ಚಿಹ್ನೆಹಾಗಿ ಪಡೆದರು. ಈಗ ವಿಶ್ವ ಆರೋಗ್ಯ ಸಂಘಟನೆಯವರು (ಯುನಿಸೆಫ್) ತಾಯಿ ಮಗುವಿಗೆ ಸಂಬಂಧಿಸಿದ ವಿಭಾಗದ ಚಿಹ್ನೆಯಾಗಿ ಕಲಾಕೃತಿ ಪಡೆದಿದ್ದಾರೆ.

ಬಹುಕಾಲ ಬಾಳಿಕೆ ಬರಲಿ ಎನ್ನುವ ದೃಷ್ಟಿಯಿಂದ ಮತ್ತು ಬಯಲು ಪ್ರದೇಶದಲ್ಲಿ ಮಳೆ, ಗಾಳಿ, ಬಿಸಿಲುಗಳಿಗೆ ಮೈಯೊಡ್ಡಿ ನಿಲ್ಲಬಹುದಾದ ಪಂಚ-ಲೋಹ (ಭ್ರಾಂಝ್) ಮಾದ್ಯಮದಲ್ಲಿಯೂ ಅನೇಕ ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಕಲಬುರಗಿಯ ಮಹಾದೇವಪ್ಪ ರಾಂಪುರೆ ವೈದ್ಯಕೀಯ ಕಾಲೇಜಿನಲ್ಲಿರುವ ಮಹಾದೇವಪ್ಪ ರಾಂಪುರೆಯವರ ಮಾನವ ಅಳತೆಯ ನಿಂತಿರುವ ಭಂಗಿಯಲ್ಲಿನ ಶಿಲ್ಪ ಶಹಾಬಾದನಲ್ಲಿರುವ ನೆಹರೂರವರ ಭಾವಶಿಲ್ಪ, ಮೈಸೂರಿನಲ್ಲಿರುವ ಚೌಡಯ್ಯನವರ ಭಾವಶಿಲ್ಪ, ಬೀದರ್, ಕಲಬುರಗಿ ಚಿತ್ರದುರ್ಗ, ಹೈದ್ರಾಬಾದ, ಪುಣೆ, ಚಿಂಚೋಳಿ ಸುಲ್ತಾನಪುರ ಮುಂತಾದ ಸ್ಥಳಗಳಲ್ಲಿ ಕಾಣುವ ಬಾಬಾ ಸಾಹೇಬ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಶಿಲ್ಪಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಶಿಲ್ಪಕಲೆಯಲ್ಲಿ ವ್ಯಾಪಕವಾಗಿ ಬಲಸಲ್ಪಡುವ ಇನ್ನೊಂದು ಮಾಧ್ಯಮವೆಂದರೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಸಾಮಾನ್ಯವಾಗಿ ಸಿಮೆಂಟಿನ ಗುಣ ಹೊಂದಿರುವ, ಸಿಮೆಂಟಿಗಿಂತ ಮೃದುವಾದ ಬಿಳಿಯ ಮಣ್ಣಿನ ಶಿಲ್ಪಗಳನ್ನು ಪಡಿಯಚ್ಚುಗಳ ಮುಖಾಂತರ ಪಡೆಯಲಾಗುತ್ತದೆ. ವಿರಳವಾಗಿ ಕೆಲವೊಮ್ಮೆ ಕಲ್ಲಿನಂತೆಯೂ ಕೊರೆದು ಶಿಲ್ಪಗಳನ್ನು ನಿರ್ಮಿಸಬಹುದು. ನಮಗೆ ಬೇಕಾದ ಶಿಲ್ಪಗಳನ್ನು ಮೊದಲು ಜೇಡಿಮಣ್ಣಿನಲ್ಲಿ ತಯಾರಿಸಿ ನಂತರ ಅವುಗಳ ಪಡಿಯಚ್ಚುಗಳನ್ನು (ಮೌಲ್ಡ್) ಸಿದ್ಧಪಡಿಸಿಕೊಳ್ಳಲಾಗುವುದು. ಇಂಥ ಪಡಿಯಚ್ಚಿನಿಂದ ಒಂದು ಅಥವಾ ಬೇಕಾದ

ಸಂಖ್ಯೆಯಲ್ಲಿ ಪುಡಿ ಆಕಾರದಲ್ಲಿರುವ, ಸಿಮೆಂಟಿನ ಗುಣ ಹೊಂದಿರುವ ಪ್ಲಾಸ್ಟರ್ ಆಫ್ ಪ್ಯಾರಿಸನ್ನು ನೀರಿನಲ್ಲಿ ಬೆರಿಸಿ ದ್ರಾವಣವನ್ನು ಪಡಿಯಚ್ಚುಗಳಲ್ಲಿ ಸುರುವಿ ಶಿಲ್ಪಗಳನ್ನು ರಚಿಸಲಾಗುವುದು. ಪ್ಲಾಸ್ಟರ್ ಆಫ್ ಪ್ಯಾರಿಸನಲ್ಲಿ ಅಂತಿಮ ರೂಪ ಕೊಡುವುದಕ್ಕಿಂತ ಮುಂಚೆ ಶಿಲ್ಪಗಳನ್ನು ಜೇಡಿಮಣ್ಣಿನಲ್ಲಿ ತಯಾರಿಸಿಕೊಳ್ಳುವುದರಿಂದ ಮಾಧ್ಯಮ ಸುಲಭವಾಗಿರುತ್ತದೆ. ಮನೆಯ ಒಳಾಂಗಣದಲ್ಲಿ ಅಲಂಕಾರಿಕವಾಗಿ ಉಪಯೋಗಿಸಲ್ಪಡುವ ಇಂಥ ಶಿಲ್ಪಗಳ ಬೇಡಿಕೆಯು ಹೆಚ್ಚಾಗಿರುತ್ತದೆ. ಬಿಳಿಯ ವರ್ಣದ ಶಿಲ್ಪಗಳು, ಅಲಂಕಾರಿಕ ಆಕೃತಿಗಳು ಸುಂದರವಾಗಿ, ಆಕರ್ಷಕವಾಗಿ ಕಾಣುತ್ತವೆ. ಕಲ್ಲಿನ ಶಿಲ್ಪಗಳು ಮತ್ತು ಲೋಹ ಮಾಧ್ಯಮದ (ಕಂಚು, ಹಿತ್ತಾಳೆ, ತಾಮ್ರ, ಬ್ರಾಂಝ್ ಮುಂತಾದ) ಶಿಲ್ಪಗಳ ತರುವಾಯ, ಅವಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಿಸಿದ ಶಿಲ್ಪಗಳು ಈ ಪ್ಲಾಸ್ಟರ್ ಆಫ್ ಪ್ಯಾರಿಸ್ ಶಿಲ್ಪಕಲಾಕೃತಿಗಳಾಗಿವೆ. ಮುಂಬೈಯಲ್ಲಿನ ಮಿಟ್ಟಿಭಾಯಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜನಿಯರಿಂಗ್ ವಿಷಯದ ಪ್ಯಾನೆಲ್‌ಗಳು, ಹೋಟೆಲ್ ಸಾಮ್ರಾಟ್, ಆಟ್ಲಾಸ್ ಅಪಾರ್ಟಮೆಂಟ್ ಮುಂತಾದ ಸ್ಥಳಗಲ್ಲಿನ ಶಿಲ್ಪಗಳು, ಚಿತ್ರದುರ್ಗದ ವೀರ ಮದಕರಿ ನಾಯಕನು ಕುದುರೆಯ ಮೇಲೆ ಕುಳಿತ ಲೈಫ್ ಅಳತೆಯ ಭ್ರಾಂಝ್ ಶಿಲ್ಪಕ್ಕಾಗಿ ನಿರ್ಮಿಸಿದ ಪ್ಲಾಸ್ಟರ್ ಆಫ್ ಪ್ಯಾರಿಸ್ ಶಿಲ್ಪ, ಕಲಬುರಗಿಯ ದಿ ಐಡಿಯಲ್ ಫೈನ್ ಆರ್ಟ್ ಕಲಾಶಾಲೆಯಲ್ಲಿನ ಅಪ್ಸರೆಯ ಶಿಲ್ಪ ಮುಂತಾದ ಇಂಥ ಅನೇಕ ಶಿಲ್ಪಕಲಾಕೃತಿಗಳಲ್ಲದೆ ಅವರು ವಿದ್ಯಾರ್ಥಿ ಜೀವನದಲ್ಲಿ ಮತ್ತು ಸುಮಾರು ಹನ್ನೆರಡು ವರ್ಷ ಉಪನ್ಯಾಸಕರಾಗಿ ಸೇವೆಸಲ್ಲಿಸಿದ ಸಂದರ್ಭದಲ್ಲಿ ನಿರ್ಮಿಸಿದ ಶಿಲ್ಪಗಳು ಮುಂಬೈಯನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಇಂದಿಗೂ ನೋಡಲು ದೊರೆಯುತ್ತವೆ.

ಇನ್ನುಳಿದ ಮಾಧ್ಯಮಗಳಾದ ಕಪ್ಪು ಶಿಲೆ, ಸಿಮೆಂಟ್ ಕಟ್ಟಿಗೆ ಮುಂತಾದ ಮಾಧ್ಯಮಗಳಲ್ಲಿ ನಿರ್ಮಿಸಿದ ಶಿಲ್ಪಗಳು ನುರಾರು ಸಂಖ್ಯೆಯಲ್ಲಿ ದೇಶ ವಿದೇಶಗಳಲ್ಲಿ ಸಂಗ್ರಹಗೊಂಡಿವೆ. ಅಂತೆಯೇ ಇವರು ಪಡೆದ ಪ್ರಶಸ್ತಿಗಳು ಕಡಿಮೆಯೇನಿಲ್ಲ. ಕರ್ನಾಟಕ ಸರ್ಕಾರವು ಕೊಡುವ ರಾಜ್ಯದ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾದ 'ಜಕಣಾಚಾರಿ ಪ್ರಶಸ್ತಿ' ಯಲ್ಲದೆ (೨೦೦೧) ಕರ್ನಾಟಕ ಲಲಿತಕಲಾ

ಅಕಾಡೆಮಿಯ ಗೌರವ ಪ್ರಶಸ್ತಿ (೧೯೫೮), ಮಹಾರಾಷ್ಟ್ರದ ರಾಜ್ಯಪಾಲರ ಪ್ರಶಸ್ತಿ (೧೯೬೫), ಮುಂಬೈಯ ವಾರ್ಷಿಕ ಪ್ರದರ್ಶನದಲಿ ಶಿಲ್ಪಕ್ಕಾಗಿ ಪಡೆದ ಪ್ರಶಸ್ತಿ (೧೯೬೨) ಮುಂತಾದವುಗಳಲ್ಲದೆ, ವಿದ್ಯಾರ್ಥಿ ಜೀವನದಲ್ಲಿಯೂ ಅನೇಕ ಪ್ರಶಸ್ತಿಗಳನ್ನು, ವಿದ್ಯಾರ್ಥಿವೇತನಗಳನ್ನು ಪಡೆದಿದ್ದಾರೆ.

ಬೆಳಗಾಂವ ಜಿಲ್ಲೆಯ ಅಥಣಿಯಂತಹ ಗಡಿಭಾಗದಲ್ಲಿ ಜನಿಸಿ (೨೦.೦೧.೧೯೩೪) ಮುಂಬೈ ಮಹಾನಗರದಲ್ಲಿ ಕನ್ನಡದ ಕಂಪಸೂಸಿ, ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿಸಿದ ಧನಂಜಯ ಶಿಲ್ಪಿಯವರು ತಮ್ಮ ಕಲಾ ಸಾಧನೆಯನ್ನು ಕಲಬುರ್ಗಿಯಲ್ಲೂ ನಡೆಸಿರುವುದು ಹೈದ್ರಾಬಾದ್ ಕರ್ನಾಟಕದ ಜನತೆಯ ಹೆಮ್ಮೆಯ ಸಂಗತಿಯಾಗಿದೆ. ಅಪೂರ್ವ ಶಿಲ್ಪಕಲಾಕೃತಿಗಳಿಂದ ಪ್ರೀತಿಗೆ ಪಾತ್ರರಾದ ಕಲಾಕೃತಿಗಳ ನಿರ್ಮಾಣದಿಂದ ಅಭಿಜಾತಯುಗ ಪರಂಪರೆಯನ್ನೇ ಪ್ರತಿನಿಧಿಸಿದ ಧನಂಜಯ ಶಿಲ್ಪಿಯವರು ಕರ್ನಾಟಕ ಕಂಡ ಅಪರೂಪದ ಶಿಲ್ಪಕಲಾವಿದರಾಗಿದ್ದಾರೆ. ತಳಸಮುದಾಯದಿಂದ ಬಂದರೂ ಅಪೂರ್ವ ಕಲಾಕೃತಿಗಳ ನಿರ್ಮಾಣದಿಂದ ಶ್ರೇಷ್ಠತೆಯನ್ನು ಮೆರೆದ, ಧನಂಜಯ ಶಿಲ್ಪಿಯವರನ್ನು ನಾಡಿನ ಜನ ಯಾವತ್ತು ಮರೆಯುವಂತಿಲ್ಲ.

ದಿ.ಎಂ.ಬಿ. ಲೋಹಾರ: (೧೯೪೯–೨೦೦೮):

ಮೂಲತಃ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ 'ಕಣಜಿ' ಗ್ರಾಮದವರಾದ ಎಂ.ಬಿ. ಲೋಹಾರ್ ಅವರು ದಿ ಐಡಿಯಲ್ ಫೈನ್ ಆರ್ಟ ಸಂಸ್ಥೆಯಲ್ಲಿ ಚಿತ್ರಕಲಾ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಲೋಹಾರರು ಚಿತ್ರಕಲಾಕೃತಿಗಳ ಸೃಷ್ಟಿಯೊಂದಿಗೆ ಆಗಾಗ ಶಿಲ್ಪಕಲಾಕೃತಿಗಳನ್ನು ರಚಿಸಿರುವುದುಂಟು. ಅವೆಲ್ಲ ಸಾಂಪ್ರದಾಯಿಕ ಮತ್ತು ಅಕಾಡೆಮಿಕ ಶೈಲಿಯಲ್ಲಿದ್ದು, ಗಮನ ಸೆಳೆಯುತ್ತವೆ. ಆದರೆ ಅವರ ನಯಜಭಾವ ಸಂವಹನ ಈ ಶಿಲ್ಪಗಳಲ್ಲಿ ಕಾಣಲಾಗದು. ಕೆಲವು ವ್ಯಕ್ತಿ ಶಿಲ್ಪಗಳು, ದೇವರ ಮೂರ್ತಿ ಶಿಲ್ಪಗಳನ್ನು ಇವರು

ರಚಿಸಿರುವುದುಂಟು. ಸಿಮೆಂಟ ಮಾಧ್ಯಮದಲ್ಲಿ ಲಕ್ಷ್ಮೀ, ಕಾಳಿಕಾದೇವಿ, ಬಸವೇಶ್ವರರು ಮೊದಲಾದವರು ಅಲ್ಲದೇ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಮಣ್ಣಿನಲ್ಲಿ, ರಚಿಸಿರುವ ಕೆಲವು ವಾಸ್ತು ಶಿಲ್ಪ ಮಾದರಿಗಳನ್ನು ಪರಿಗಣಿಸಬಹುದಾಗಿದೆ. ಇವುಗಳಲ್ಲಿ ಅವರ ಹಸ್ತ ಕೌಶಲದ ಸೂಕ್ಷ್ಮಗಳನ್ನು ಗುರುತಿಸಬಹುದು.

ನಾಗಪ್ಪ ಪ್ರಧಾನಿ:

ಇತಿಹಾಸ ಪೂರ್ವ ಚಿತ್ರ-ಶಿಲ್ಪಗಳಿರುವ ರಾಯಚೂರು ಜಿಲ್ಲೆಯ ನಾಗಪ್ಪ ಪ್ರಧಾನಿ ಸಮಕಾಲೀನ ಶಿಲ್ಪಿಯಾಗಿ ಅರಳಿರುವ ಕ್ರಮದಲ್ಲಿ ಕನ್ನಡ ದೃಶ್ಯಕಲೆಯ ಇತಿಹಾಸ ಅಡಕವಾಗಿದೆ. ಹೀಗೆ ಆದಿಮ ಸತ್ವಗಳೇ ಅಲ್ಲದೆ ಬೆಂಗಳೂರು, ಶಾಂತಿನಿಕೇತನ ಕಲಾಶಾಲೆಗಳಲ್ಲಿ ಕಲಿತ ಶಿಲ್ಪಕಲೆಯ ವ್ಯಾಕರಣ ಮೀರಿ ಸಮಕಾಲೀನ ರೂಪಗಳ ಶಿಲ್ಪಗಳನ್ನು ನಾಗಪ್ಪ ಗ್ರಹಿಸಿ ಬಿಂಬಿಸಿದ್ದಾರೆ. 'ಸ್ವದೇಶಿ ಚಳುವಳಿಯ'ಯ ಬೇರುಗಳಿಂದಲೇ ಮೂಡಿದ ಶಾಂತಿನಿಕೇತನದ ಪರಂಪರೆಗೆ ವಿಭಿನ್ನವಾದ ಶಿಲ್ಪಸೃಷ್ಟಿಯಲ್ಲಿ ಸ್ವಂತಿಕೆಯ ಲೇಪ ಹೊಂದಿದ ಗ್ರಹಿಕೆ ರೂಪಗಳಲ್ಲಿ ಅವರು ತೀವ್ರತೆಯಿಂದ ತೊಗಡಿರುವುದರ ಪ್ರತೀಕದಂತೆ ಅವರ ಹಲವು ಶಿಲ್ಪಕೃತಿಗಳಿವೆ. 'HEAD'ಮಾಲೆಯ ಶಿಲ್ಪಗಳನ್ನು ಇಲ್ಲಿ ಉದಾಹರಿಸಬಹುದು. ನಮ್ಮ ಸಂಪ್ರದಾಯ ಆಧುನಿಕ ಸಮಕಾಲೀನ ಶಿಲ್ಪ ಸೃಷ್ಟಿ ಸಂದರ್ಭಗಳೆಲ್ಲದರಲ್ಲೂ ಭಾವಶಿಲ್ಪ ಪರಂಪರೆ ನಡೆದು ಬಂದಿರುವ ಹಾದಿ ಅಚ್ಚರಿಯನ್ನು ಉಂಟು ಮಾಡುವುದಾದರೂ ಆ ಪ್ರಕಾರದ ಅನಿವಾರ್ಯತೆ ಶಿಲ್ಪಗಳು, ಪೋಷಕರ ಸಹ ಸಂಬಂಧ ಇತ್ಯಾದಿಗಳು ಸಮಾಜದ ಒಂದು ಭಾಗದಲ್ಲಿ ಇನ್ನು ಮುಂದುವರೆದಿವೆ. ಕ್ಯಾಮೆರಾ ಬಂದರೂ ಕಲಾವಿದರ ಅಗತ್ಯ ಇಂದಿಗೂ ಇದ್ದೆ ಇದೆ. ಹಾಗೆ ನಾಗಪ್ಪ ಪ್ರಧಾನಿಯವರ ಭಾವಶಿಲ್ಪಗಳೂ ರೂಪದರ್ಶಿಯ ಹೊರ ನೋಟವನ್ನೇ ಅಲ್ಲದೆ ಒಳನೋಟಗಳನ್ನು ಬಿಂಬಿಸುತ್ತವೆ (ವಿಜ್ಞಾನಿ ಸಿ.ಎನ್.ಆರ್.ರಾವ್ ರವರ ಶಿಲ್ಪ ಇಲ್ಲಿ ನೆನಪಾಗುತ್ತದೆ.)[೧] ಪಶ್ಚಿಮ ಹಾಗೂ ಯುರೋಪಿಯನ್ ಪ್ರಭಾವಗಳನ್ನು ಅರಗಿಸಿಕೊಂಡ

1 ಕೆ.ವಿ.ಸುಬ್ರಹ್ಮಣ್ಯಂ ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ. ಪು.ಸಂ. ೩೬

ಗಣನೀಯ ಶಿಲ್ಪಗಳು 'Labour' ಹಾಗೂ 'Mother and Child' ಈ ಟೆರಾಕೋಟಾ ಶಿಲ್ಪಗಳಲ್ಲಿ ನಾಗಪ್ಪ ವಿಶಿಷ್ಟವಾಗಿ ಕಾಣುತ್ತಾರೆ. ಮುಖ–ಮುಖವಾಡಗಳನ್ನು ದೃಶ್ಯಕಲಾವಿದರು ಗ್ರಹಿಸುವ ರೀತಿ ವಿಭಿನ್ನ ತುಟಿ, ಕಣ್ಣು, ಗಲ್ಲ, ಕೆನ್ನೆಗಳನ್ನು ರೂಪಿಸಿರುವ ಗ್ರಹಿಕೆಯನ್ನು ಒಂದು ಶಿಲ್ಪವೊಂದು ತೀವ್ರ–ತಳಮಳದಲ್ಲಿದೆ.

ಮೂಲತಃ ರಾಯಚೂರು ಜಿಲ್ಲೆಯವರಾದ ನಾಗಪ್ಪ ಪ್ರಧಾನಿ ಅವರು ಪ್ರಸ್ತುತ ಬೆಂಗಳೂರಿನ ಚಿತ್ರಕಲಾ ಪರಿಷತನ ದೃಶ್ಯಕಲಾ ಕಾಲೇಜಿನಲ್ಲಿ ಶಿಲ್ಪಕಲಾ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಾಗಪ್ಪ ಪ್ರಧಾನಿ ಅವರು ಇತ್ತಿಚೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಮಿನಿ ವಿಧಾನ ಸೌಧದ ಎದುರು ೧೫ ಅಡಿ ಎತ್ತರ ಹಾಗೂ ೧,೭೦೦ ಕೆ.ಜಿ. ತೂಕವಿರುವ ಪೂರ್ಣ ಪ್ರಮಾಣದ ಡಾ.ಬಿ.ಆರ್.ಅಂಬೇಡ್ಕರ್‌ರವರ ಕಂಚಿನ ವಿಗ್ರಹವನ್ನು ನಿರ್ಮಿಸಿದ್ದಾರೆ.

ಇವರು ಫೈಬರ್, ಲೋಹ ಮತ್ತು ಶಿಲಾ ಮಾಧ್ಯಮಗಳಲ್ಲಿ ಸಾಕಷ್ಟು ಭಾವಶಿಲ್ಪ ಮತ್ತು ಆಧುನಿಕ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಬೆಂಗಳೂರು, ಮುಂಬಯಿ ಮತ್ತು ದಹಲಿಗಳಲ್ಲಿ ಶಿಲ್ಪಕಲಾ ಪ್ರದರ್ಶನವನ್ನು ಏರ್ಪಡಿಸಿದ್ದಾರೆ.

ಬಾಬುರಾವ್ ಎಚ್. (ಕಲಬುರಗಿ):

ಚಿತ್ರ–ಶಿಲ್ಪಕಲಾವಿದ ಬಾಬುರಾವ ಎಚ್ ೦೧.೦೬.೧೯೬೫ರಲ್ಲಿ ತಳ ಸಮುದಾಯದ ರೈತ ಕುಟುಂಬದಲ್ಲಿ ಜನಿಸಿದರು. ದಾವಣಗೆರೆಯ ಲಲಿತಕಲಾ ಮಹಾವಿದ್ಯಾಲಯ, ಗುಲಬರ್ಗಾದ ಎಂ.ಎಂ.ಕೆ ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಮತ್ತು ಬರೋಡಾದ ಎಂ. ಎಸ್. ವಿಶ್ವವಿದ್ಯಾಲಯದಲ್ಲಿ ದೃಶ್ಯಕಲಾ ಶಿಕ್ಷಣವನ್ನು ಅಧ್ಯಯನ ಮಾಡಿದ್ದಾರೆ. ನಂತರ ದಾವಣಗೆರೆಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಗ್ರಾಫಿಕ್ಸ (ಪ್ರಿಂಟ್ ಮೇಕಿಂಗ್) ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಐದು ವರ್ಷ ಸೇವೆ ಸಲ್ಲಿಸಿದ್ದಾರೆ.

ಇವರು ಚಿತ್ರ-ಪ್ರಿಂಟ್‌ಗಳ ಜೊತೆ ಜೊತೆಗೆ ಶಿಲ್ಪಕಲೆಯಲ್ಲಿಯೂ ತೊಡಗಿಸಿಕೊಂಡು, ಆಲಮಟ್ಟಿಯ ಶಿಲ್ಪವನ ಕಲಬುರಗಿಯ ಮಹಾನಗರ ಪಾಲಿಕೆಯ ಉದ್ಯಾನವನ, ಉಪಳಾಂವದ ಉದ್ಯಾನವನ ಮತ್ತು ಶ್ರೀ ಗುರು ವಿದ್ಯಾಪೀಠ, ಕೆಸರಟಗಿಯ ಉದ್ಯಾನದಲ್ಲಿ ಬೃಹತ್ ಗಾತ್ರದ ಹಲವಾರು ಸಾರ್ವಜನಿಕ ಮತ್ತು ಉದ್ಯಾನವನದ ಶಿಲ್ಪಗಳನ್ನು ಸಿಮೆಂಟ್, ಶಿಲೆ ಮತ್ತು ಫೈಬರ್‌ಗ್ಲಾಸ್ ಮಾಧ್ಯಮದಲ್ಲಿ ನಿರ್ಮಿಸಿದ್ದಾರೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಗದಗದ ಹುಲಿಕೋಟೆಯಲ್ಲಿ ಏರ್ಪಡಿಸಿದ ಸಿಮೆಂಟ್ ಶಿಲ್ಪಕಲಾ ಶಿಬಿರ, ರಾಮನಗರದಲ್ಲಿ ಏರ್ಪಡಿಸಿದ ಶಿಲ್ಪಕಲಾ ಶಿಬಿರ, ಬೆಂಗಳೂರಿನ ಗಾಂಧಿ ಭವನದಲ್ಲಿ ಏರ್ಪಡಿಸಿದ ಸಿಮೆಂಟ್ ಶಿಲ್ಪಕಲಾ ಶಿಬಿರ, ಬಾಗಲಕೋಟೆಯಲ್ಲಿ ಏರ್ಪಡಿಸಿದ ಸಿಮೆಂಟ ಮಾಧ್ಯಮ ಶಿಲ್ಪಕಲಾ ಶಿಬಿರ ಮೂಡುಬಿದರೆಯಲ್ಲಿ ಏರ್ಪಡಿಸಿದ ಶಿಲ್ಪಕಲಾ ಗುಲಬರ್ಗಾ ವಿಶ್ವವಿದ್ಯಾಲಯವು ಏರ್ಪಡಿಸಿದ ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿ ಅತ್ಯುತ್ತಮವಾದ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಇವರು ಆಲಮಟ್ಟಿಯ ಶಿಲ್ಪವನದಲ್ಲಿ ಆರು ದೈತ್ಯ ಆಕಾರದ ಡೈನೋಸಾರಸ್‌ಗಳನ್ನು ನಿರ್ಮಿಸಿದ್ದಾರೆ. ಇವುಗಳಲ್ಲಿ ಟೈರನೊಸಾರಸ್, ಅತ್ಯಂತ ದೊಡ್ಡದಾಗಿದೆ. ಗುಲಬರ್ಗಾ ಮಹಾನಗರ ಪಾಲಿಕೆಯ ಉದ್ಯಾನವನದಲ್ಲಿ ಕೂಡಾ ೨೨ ಅಡಿ ಎತ್ತರ ಟೈರನೋಸಾರಸ್ ಶಿಲ್ಪವನ್ನು ಸಿಮೆಂಟ್ ಮಾಧ್ಯಮದಲ್ಲಿ ರಚಿಸಿದ್ದಾರೆ. ಕೆಸರಟಗಿಯ ಉದ್ಯಾನವನದಲ್ಲಿ ವಿವಿಧ ಪ್ರಬೇದದ ಡೈನೋಸಾರಸಗಳ ಶಿಲ್ಪಗಳನ್ನು ರಚಿಸಿದ್ದಾರೆ. ಕಳೆದ ಏಳೆಂಟು ವರ್ಷಗಳಲಿ ಕರ್ನಾಟಕದಲ್ಲಿ ಹೆಚ್ಚು ಡೈನೋಸಾರಸ್‌ಗಳ ಪ್ರತಿಕೃತಿಯನ್ನು ನಿರ್ಮಿಸಿದ ಖ್ಯಾತಿ ಇವರದಾಗಿದೆ. ಈ ಡೈನೋಸಾರಸ್ ಶಿಲ್ಪಗಳನ್ನು ನಿರ್ಮಿಸುವಾಗ ಬಾಬುರಾವ ಅವರು ಸಹಕಲಾವಿದರೊಂದಿಗೆ ಹಲವಾರು ಬಾರಿ ಜುರಾಸಿಕ್ ಪಾರ್ಕ್ ಸಿನೆಮಾ ನೋಡಿ, ಸಿನೆಮಾದಲ್ಲಿರುವ ಡೈನೋಸಾರಸಗಳ ದೇಹದ ಅಂಗಾಂಗಳ ರಚನೆ, ಮಾಂಸ-ಖಂಡಗಳು, ಒರಟಾದ ಚರ್ಮದ ಘನತ್ವ, ಬಲವಾದ ಹಿಂಗಾಲು, ಗರಗಸದಂತಹ ಹಲ್ಲಿನ ಸಾಲು,

ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸಿ, ಈ ಡೈನೋಸಾರಸ್ ಶಿಲ್ಪಗಳನ್ನು ಅತ್ಯಂತ ಆಕರ್ಷಕವಾಗಿ ಸಿಮೆಂಟ್ ಮಾಧ್ಯಮದಲ್ಲಿ ನಿರ್ಮಿಸಿದ್ದಾರೆ.

ಇವರು ಕಲಬುರಗಿಯ ಶ್ರೀಗುರು ವಿದ್ಯಾಪೀಠ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸುಮಾರು ೨೫ ಅಡಿ ಎತ್ತರದ ಬೃಹತ್ ಗಾತ್ರದ ಮರ ಮತ್ತು ಪಕ್ಷಿಗಳ ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಇಂತಹ ಬೃಹತ್ ಗಾತ್ರದ ಮರ ಮತ್ತು ಪಕ್ಷಿಗಳನ್ನು ಸಿಮೆಂಟನ ಮಾಧ್ಯಮದಲ್ಲಿ ನಿರ್ಮಿಸುವುದು ಸುಲಭವಲ್ಲ. ಮೊದಲು ಅಡಿಪಾಯ ಹಾಕಿಕೊಳ್ಳಬೇಕು. ಅದರ ಮಧ್ಯ ಕಬ್ಬಿಣದ ಸರಳುಗಳಿಂದ ಪಿಲ್ಲರ್‌ಗಳನ್ನು ನಿರ್ಮಿಸಿಕೊಂಡ ಬಳಿಕ ವಿವಿಧ ಗಾತ್ರದ ಸರಳುಗಳಿಂದ ಮರದ ಟೊಂಗೆ, ಟಿಸಿಲುಗಳು, ಇತ್ಯಾದಿಗಳನ್ನು ಕಟ್ಟಿಕೊಳ್ಳಬೇಕು. ಅನಂತರ ಇಟ್ಟಿಗೆ ತುಂಡುಗಳು ಮತ್ತು ಮರಳು ಮಿಶ್ರಿತ ಸಿಮೆಂಟ್‌ನಿಂದ ಮರದ ಪೊಟರೆ, ಉಬ್ಬು-ತಗ್ಗು ಮೈವಳಿಕೆ ಇತ್ಯಾದಿಗಳನ್ನು ರೂಪಿಸಿಕೊಳ್ಳಬೇಕು. ನಂತರ ಹತ್ತು ಸಾವಿರಕ್ಕೂ ಹೆಚ್ಚು ವಿವಿಧ ಗಾತ್ರದ ಎಲೆಗಳನ್ನು ಮರದ ಟೊಂಗೆಗಳಿಗೆ ಗುಂಪು ಗುಂಪಾಗಿ ಜೋಡಿಸಿ ನೈಜರೂಫ ನೀಡಬೇಕು.

ಇವರು ನೈಜ ಶಿಲ್ಪಗಳಲ್ಲದೆ ಆಲಮಟ್ಟಿಯ ಉದ್ಯಾನವದಲ್ಲಿ ಹೆನಿಮೂರನ್ ಶಿಲ್ಪಗಳನ್ನು ನೆನಪಿಸುವ ಎರಡು ಬೃಹತ್ ಗಾತ್ರದ ನವ್ಯ ಶಿಲ್ಪಗಳನ್ನು ಕೂಡಾ ರಚಿಸಿದ್ದಾರೆ. ಶಿಲ್ಪಕಲಾ ಅಕಾಡೆಮಿ ರಾಮನಗರದಲ್ಲಿ ಏರ್ಪಡಿಸಿದ ಶಿಬಿರ ಮತ್ತು ಕಲಬುರಗಿಯ ಶ್ರೀ ಗುರುವಿದ್ಯಾಪೀಠದಲ್ಲಿ ನಡೆದ ಇಂಟರ್‌ನ್ಯಾಷನಲ್ ಸ್ಕಲ್ಪಚರ್ ಮತ್ತು ಪೇಂಟಿಂಗ್ ಸಿಂಪೋಜಿಯಂನಲ್ಲಿ ನವ್ಯ ಶಿಲ್ಪಗಳನ್ನು ರಚಿಸಿದ್ದಾರೆ.

ಜಗನ್ನಾಥ ಜಕ್ಕೆಪಲ್ಲಿ:

ಜಗನ್ನಾಥ ಜಕ್ಕೆಪಲ್ಲಿ ಅವರು ೧೯೬೮ರಲ್ಲಿ ಕಲಬುರಗಿ ಜಿಲ್ಲೆಯ ನಿಡಗುಂದಾ ಗ್ರಾಮದಲ್ಲಿ ಜನಿಸಿದ್ದಾರೆ. ಕಲಬುರಗಿಯ ಎಂ.ಎಂ.ಕೆ ಕಾಲೇಜ್ ಆಫ್ ವಿಜ್ಯೂವಲ್ ಆರ್ಟನಿಂದ ದೃಶ್ಯಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದಾರೆ. ಇವರು ಫೈಬರ್, ಶಿಲೆ, ಲೋಹ

ಮತ್ತು ಮಿಶ್ರ ಮಾಧ್ಯಮಗಳಲಿ ಹಲವಾರು ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಕೃಷ್ಣಮೂರ್ತಿ, ಅಣ್ಣಾರಾವ ಪಾಟೀಲ್, ಎಂ.ಬಿ.ಜಯರಾಮ್, ಶೇಷಾದ್ರಿ ಅಯ್ಯರ್, ಅರಳಗುಪ್ಪೆ ಚಂದ್ರೇಗೌಡ, ಬಸವಣ್ಣ, ಕೇಂಪೆಗೌಡ, ವರಕವಿ ದ.ರಾ.ಬೇಂದ್ರೆ ಮುಂತಾದವರ ಭಾವಶಿಲ್ಪಗಳನ್ನು ಕಂಚಿನ ಮಾಧ್ಯಮದಲ್ಲಿ ನಿರ್ಮಿಸಿದ್ದಾರೆ.

ನಮ್ಮ ಆಧುನಿಕ ಶಿಲ್ಪ ಸಂದರ್ಭದ ಬೇರುಗಳನ್ನು ಬಲ್ಲ ಇವರು ಜೆ.ಜೆ.ಕಲಾಶಾಲೆಯಲ್ಲಿ ಕಲಿತು ಬಂದು ಕಲಬುರಗಿಯಲ್ಲಿ ಹೊಸತನವನ್ನು ಮೂಡಿಸಿದ ಧನಂಜಯ ಶಿಲ್ಪಿಯವರಿಂದ ಹಲವು ಒಳನೋಟಗಳನ್ನು ಗ್ರಹಿಸಿದವರು. ಜಾನಪದ ಮೂಲದ ಸತ್ವಗಳನ್ನು ಅರಿಗಿಸಕೊಂಡೇ ಸಮಕಾಲೀನ ಅನುಭವಗಳನ್ನು ಬಿಂಬಿಸಿದ್ದಾರೆ. ಟೆರಾಕೋಟಾ ಮಾಧ್ಯಮದಲ್ಲಿ ಮೂಡಿ ಬಂದಿರುವ 'ಅಪಘಾತ' ಶಿಲ್ಪಕಲಾಕೃತಿ ವಿಕೃತಿ ಸೌಂದರ್ಯದಿಂದ ಗಮನಿಸುವಂತಿದೆ. ಹಾಗೆಯೇ ಟೆರಾಕೋಟಾ ಮಾಧ್ಯಮದ (Thinking) ಚಿಂತಾಕ್ರಾಂತ ದಂಪತಿಗಳ ಗ್ರಹಿಕೆ ಬಹುಕಾಲ ಕಾಡುವ ಭಾವ ತೀವ್ರತೆಯನ್ನು ಹೊಂದಿದೆ. ಕಪ್ಪು, ಕಂದು ಬಣ್ಣಗಳು ಆಶಯಕ್ಕೆ ಪೂರಕವಾಗಿವೆ. ಇವರು ಕೆಲವು ಶಿಲ್ಪಗಳಲ್ಲಿ ಬುದ್ಧಿ ಮತ್ತು ಭಾವಗಳೆರಡರ ಸಂಗಮದಂತಹ ಗ್ರಹಿಕೆಗಳಿವೆ. 'Spring' 'Sleeping Seed' ಇತ್ಯಾದಿಗಳು ಮೊದಲನೆಯ ಗುಂಪಿಗೆ ಸೇರಿದರೆ, 'Computer' 'thinking' ಶಿಲ್ಪಗಳು ತಮ್ಮ ಮಾದ್ಯಮಗಳ ನಿರ್ವಹಣೆಯೇ ಅಲ್ಲದೆ ಸಮಕಾಲೀನ ಆಶಯಗಳಿಂದಾಗಿಯೂ ವೀಕ್ಷಕರ ಗಮನ ಸೆಳೆಯುತ್ತವೆ.

ಕಲಬುರಗಿ ಕಲಾ ಮಹೋತ್ಸವ (೧೯೮೮, ೧೯೯೦, ೧೯೯೨) ಮೈಸೂರು ದಸರಾ ಪ್ರದರ್ಶನ (೧೯೯೩) ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನ, ಆಲ್ ಇಂಡಿಯಾ ಶಿಲ್ಪಕಲಾ ಪ್ರದರ್ಶನ ಬೆಂಗಳೂರು, ಲಕ್ಕುಂಡಿ ಉತ್ಸವ (೨೦೦೧) ೭ನೇ ಕರ್ನಾಟಕ ಕಲಾಮೇಳ, ಸೌತ್‌ಝೋನ ಕಲ್ಚರಲ್ ಸೆಂಟರ್ ನಾಗಪೂರ, ದಿ ಆರ್ಟ್ ಸೊಸೈಟಿ ಆಫ್ ಇಂಡಿಯಾದ ವಾರ್ಷಿಕ ಕಲಾ ಪ್ರದರ್ಶನ, ಕಲಬುರಗಿಯ ದೃಶ್ಯ ಬೆಳಕು ಸಾಂಸ್ಕೃತಿಕ ಸಂಸ್ಥೆಯ ವಾರ್ಷಿಕ ಕಲಾ ಪ್ರದರ್ಶನಕ್ಕೆ ಇವರ ಶಿಲ್ಪಗಳು ಆಯ್ಕೆಗೊಂಡು ಪ್ರದರ್ಶನಗೊಂಡಿವೆ.

ಕೇರಿ.ಎನ.ಡಿ:

ಶಿಲ್ಪಕಲಾವಿದರಾದ ಕೇರಿ ಎನ್.ಡಿ ಅವರು ೧೯೭೭ ಡಿಸೆಂಬರ್ ೧೫ರಂದು ಕಲಬುರಗಿ ತಾಲೂಕಿನ ಬೆಳಕೋಟಾ ಗ್ರಾಮದಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಹುಟ್ಟೂರಿನಲ್ಲಿ ಪೂರ್ತಿಗೊಳಿಸಿ ಚಿತ್ರಕಲೆಯಲ್ಲಿ ಡಿಪ್ಲೋಮಾ ಪದವಿಯನ್ನು ಕಲಬುರಗಿಯ ದಿ ಆರ್ಟ್ ಇಂಟಿಗ್ರೇಷನ್ ಮಹಾವಿದ್ಯಾಲಯದಲ್ಲಿ ಪೂರ್ಣಗೊಳಿಸಿ, ಸ್ನಾತಕೋತ್ತರ ಪದವಿಯನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪೂರ್ಣಗೊಳಿಸಿದ್ದಾರೆ. ಅನಂತರ ಶಿಲ್ಪಕಲೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ಖಾಸಗಿ ಸಂಸ್ಥೆಯೊಂದರಲ್ಲಿ ಸುಮಾರು ಮೂರು ವರ್ಷಗಳ ಕಾಲ ತರಬೇತಿ ಹಾಗೂ ಶಿಲ್ಪಕಲಾಕೃತಿಗಳ ರಚನೆಯಲ್ಲಿ ಆಸಕ್ತಿ ಇರುವ ಕಾರಣದಿಂದಾಗಿ ಇವರು ಚಿತ್ರಕಲಾಬ್ಯಾಸದಲ್ಲಿ ಪ್ರವೇಶವನ್ನು ಪಡೆದರಾದರೂ ನಂತರದ ದಿನಗಳಲ್ಲಿ ಶಿಲ್ಪಕಲಾ ರಚನೆಯಲ್ಲಿಯೇ ಹೆಚ್ಚು ತೊಡಗಿಸಿಕೊಂಡಿದ್ದಾರೆ.

ಇವರು ರಚಿಸಿದ ಅನೇಕ ಶಿಲ್ಪಕಲಾಕೃತಿಗಳು ದೇಶದ ನಾನಾ ಕಡೆಗಳಲ್ಲಿ, ವಿವಿಧ ದೇವಾಲಯಗಳಲ್ಲಿ ನೋಡಸಿಗುತ್ತವೆ. ಇವರು ರಚಿಸಿದ ಚಾಲುಕ್ಯ ಶೈಲಿಯ ನಾಟ್ಯ ಗಣಪತಿಯನ್ನು ನೋಡಿದವರಿಗೆ ಇವರೆಷ್ಟು ಪ್ರತಿಭಾವಂತ ಶಿಲ್ಪಕಲಾವಿದನೆಂದೆನಿಸುವುದು ಸಹಜ. ಈ ವಿಗ್ರಹ ಕಲ್ಲಿನಲ್ಲಿ ರೂಪುಗೊಂಡಿದ್ದು, ಇಡೀ ಶಿಲ್ಪದ ಮೈವಳಿಕೆ ಹಾಗೂ ಭಾವ ತುಂಬಿ ಬರುವಂತಹ ಆ ರೂಪ ಇವರ ಕಲಾ ನೈಪುಣ್ಯತೆಗೆ ಸಾಕ್ಷಿಯಾಗಿದೆ.

ಕ್ಲೇ, ಪ್ಲಾಸ್ಟರ್ ಆಫ್ ಪ್ಯಾರಿಸ್ ಹೀಗೆ ಇವರ ಅನೇಕ ಶಿಲ್ಪಗಳು ಕಟ್ಟಿಗೆ, ಶಿಲೆ ಮತ್ತು ಫೈಬರ್ ಮಾಧ್ಯಮಗಳಲ್ಲಿ ರೂಪುಗೊಂಡು ಅನೇಕ ಕಡೆಗಳಲ್ಲಿ ಜನ ಮನ್ನಣೆಯನ್ನು ಪಡೆದಿವೆ. ಇವರು ಕಲಬುರಗಿಯ ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆಯ ತೃತೀಯ ವಾರ್ಷಿಕ ಕಲಾ ಪ್ರದರ್ಶನದ ಪ್ರಶಸ್ತಿ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೧೧ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನದ ಬಹುಮಾನ ಪಡೆದುಕೊಂಡಿದ್ದಾರೆ. ಇವರು ರಚಿಸಿದ ಶಿಲ್ಪಕಲಾಕೃತಿಗಳು

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ಕನ್ನಡ ವಿ.ವಿ., ಹಂಪಿ, ಬಿಡದಿ, ಸಿಂಗದಳ್ಳಿ, ಬಸವಕಲ್ಯಾಣ, ಬೆಳಕುಣಿ, ಕುಪ್ಪಳ್ಳಿಗಳಲ್ಲಿ ಸಂಗ್ರಹಗಳನ್ನೊಳಗೊಂಡಿವೆ. ಪ್ರಸ್ತುತ ಇವರು ಕಲಬುರಗಿಯ ದಿ ಆರ್ಟ್ ಇಂಟೆಗ್ರೇಷನ್ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಶಿಲ್ಪಕಲಾ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮಹೇಶಕುಮಾರ ತಳವಾರ:

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಾರಪಳ್ಳಿ ಗ್ರಾಮದ ತಳಸಮುದಾಯದ ಕುಟುಂಬದಲ್ಲಿ ಜನಸಿದ (೨೨.೦೭.೧೯೭೯) ಮಹೇಶಕುಮಾರ ತಳವಾರ ಅವರು ದಿ ಆರ್ಟ್ ಇಂಟೆಗ್ರೇಷನ ಚಿತ್ರಕಲಾ ಕಾಲೇಜಿನಿಂದ ಚಿತ್ರಕಲಾ ಡಿಪ್ಲೋಮಾ ಕೋರ್ಸ ಮತ್ತು ಬೆಂಗಳೂರಿನ ಕೆ.ಪಿ.ಪ್ರಭು ಕರಕುಶಲ ತರಬೇತಿ ಕೇಂದ್ರ, ಜೋಗುರದೊಡ್ಡಿಯಲ್ಲಿ ೧೮ ತಿಂಗಳ ಅವಧಿಯ ಶಿಲ್ಪಕಲೆಯ ಸಂಬಂಧಿಸಿದ ಕೋರ್ಸನ್ನು ಮುಗಿಸಿದ್ದಾರೆ. ಪ್ರಸ್ತುತ ಇವರು ಗುಲಬರ್ಗಾ ಪೀಪಲ್ಸ್ ಶಿಕ್ಷಣ ಸಂಸ್ಥೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಲಬುರಗಿ, ಬೆಂಗಳೂರು, ಸಾಣೇಹಳ್ಳಿ, ಖಜರಾಹೋ, ಚಂಡೀಗಢ, ಜಮ್ಮು, ಮೈಸೂರು, ಗದಗ, ಹಂಪಿ, ಬೀದರ್, ತುಮಕೂರು, ನಾಗಪುರ ಮುಂತಾದ ಊರುಗಳಲ್ಲಿ ನಡೆದ ವಿವಿಧ ಮಾಧ್ಯಮದ ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿದ ಅನುಭವ ಇವರದಾಗಿದೆ.

ನವದೆಹಲಿಯ ಸಮಕಾಲೀನ ಕಲಾವಿದರ ವಾರ್ಷಿಕ ಬಹುಮಾನ, ಬೆಂಗಳೂರು ವಿಶ್ವವಿದ್ಯಾಲಯದ ಯುವಜನೋತ್ಸವದ ಬಹುಮಾನ, ಕರ್ನಾಟಕ ಸಿರಿಗಂಧ ಪ್ರಶಸ್ತಿ, ಹೈದ್ರಾಬಾದ ಕರ್ನಾಟಕ ರತ್ನ ಪ್ರಶಸ್ತಿ, ಮತ್ತು ಹೈದ್ರಾಬಾದ ಆರ್ಟ್ ಸೊಸೈಟಿ ಪ್ರಶಸ್ತಿಗಳು ದೊರಕಿವೆ. ಇವರು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿ, ಕಾರ್ಯನಿರ್ವಹಿಸಿದ್ದಾರೆ.

ಮಲ್ಲಪ್ಪ ಸಿ.ಡೋಲೆ:

ಕಲಬುರಗಿ ಜಿಲ್ಲೆಯ ದೇಗಾಂವದ ತಳ ಸಮುದಾಯದಲ್ಲಿ ಜನಿಸಿದ ಮಲ್ಲಪ್ಪ ಸಿ.ಡೋಲೆ ಅವರು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಚಿತ್ರ-ಶಿಲ್ಪಕಲಾವಿದರಿಗೆ ತಾವು ವಾಸಿಸುವ ಪರಿಸರ, ತನ್ನ ಸುತ್ತಮುತ್ತಲಿನ ಸಂಪ್ರದಾಯ, ಸಾಂಸ್ಕೃತಿಕ ಆಚರಣೆಗಳು ಸಹಜವಾಗಿಯೇ ಅವರ ಚಿತ್ರ-ಶಿಲ್ಪಕಲಾಕೃತಿಗಳ ಮೇಲೆ ಪ್ರಭಾವ ಬೀರುತ್ತದೆ. ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ಒಂದು ಚಿಕ್ಕಹಳ್ಳಿ ದೇಗಾಂವ, ಈ ಹಳ್ಳಿಯಲ್ಲಿ ಇಂದಿಗೂ ಪ್ರಚಲಿದಲ್ಲಿರುವ ಮದ್ದಿನ ಹುಲಿಗಳ ಜಾತ್ರೆ ಸುಮಾರು ನೂರಾ ಐವತ್ತು ವರ್ಷಗಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದು ವಿಶೇಷ. ಈ ಮದ್ದಿನ ಹುಲಿಗಳ ಜಾತ್ರೆಯಿಂದ ಪ್ರೇರಿತಗೊಂಡ ಯುವ ಚಿತ್ರ ಶಿಲ್ಪಕಲಾವಿದ ಹಲವಾರು ಮದ್ದಿನ ಹುಲಿ (ಜನಪದ ಶಿಲ್ಪ) ಗಳನ್ನು ತಮ್ಮ ಚಿತ್ರ ಶಿಲ್ಪಗಳಲ್ಲಿ ಕಲಾತ್ಮಕವಾಗಿ ಪ್ರತಿಬಿಂಬಿಸುವ ಮೂಲಕ ಗಮನ ಸೆಳೆದಿದ್ದಾರೆ.

ಬಾಲ್ಯದಲ್ಲಿ ತಮ್ಮೂರಿನಲ್ಲಿ ನಡೆಯುವ ಜನಪದ ಹುಲಿ ಜಾತ್ರೋತ್ಸವದ ವರ್ಣರಂಜಿತ ದೃಶ್ಯಗಳು ಇವರ ಮೇಲೆ ಗಾಢವಾಗಿ ಪ್ರಭಾವ ಬೀರಿದ ಪರಿಣಾಮವಾಗಿ, ಈ ರೀತಿಯ ಜನಪದ ಸತ್ವಗಳನ್ನೊಳಗೊಂಡ ಚಿತ್ರ-ಶಿಲ್ಪಗಳು ಇವರಿಂದ ರೂಪಗೊಂಡಿವೆ.

ನಾಡೋಜ ನಾಗಣ್ಣ ಬಡಿಗೇರ

ಗುಲಬರ್ಗಾದಲ್ಲಿ ನೆಲೆಸಿರುವ ನಾಗಣ್ಣ ಮೋನಪ್ಪ ಬಡಿಗೇರ್ ಅವರು ೧೪.೦೩.೧೯೧೬ರಂದು ಜನಿಸಿದ್ದು, ತಂದೆಯರಾದ ಶ್ರೀ ಮೋನಪ್ಪ ಬಡಿಗೇರ ಅವರಲ್ಲಿ ಕಾಷ್ಠ ಶಿಲ್ಪಕಲೆ ಅಭ್ಯಸಿಸಿ, ಆಕರ್ಷಕ ಮರಗೆತ್ತನೆಗಳಿಂದ ಕೂಡಿದ ನೂರಾರು ಗೃಹಗಳನ್ನು ಶಾಸ್ತ್ರಬದ್ಧವಾಗಿ ನಿರ್ಮಾಣ ಮಾಡಿದ್ದಾರೆ. ಒಂದೇ ಮರದ ತುಂಡಿನಲ್ಲಿ ಗುಂಬರಿ, ಹಲವಾರು ತುಣುಕುಗಳನ್ನು ಜೋಡಿಸಿ ರಚಿಸಿದ ಚಂಡು, ಬಾಟಲಿಯಲ್ಲಿ ತೇರು, ಕೃಷಿ ಉಪಕರಣ ಇತ್ಯಾದಿ

ವಿಶೇಷವಾದ ಕಲಾಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ರಾಜ್ಯ ಶಿಲ್ಪಕಲಾ ಅಕಾಡೆಮಿಯ ಗೌರವ ಪ್ರಶಸ್ತಿಯಲ್ಲದೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, 'ನಾಡೋಜ' ಗೌರವ ಪದವಿ ದೊರೆತಿವೆ. ಶ್ರೀ ಶರಣಬಸವೇಶ್ವರ ಸಂಸ್ಥಾನ ಮೊದಲಾಗಿ ಅನೇಕ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಆದರ್ಶ ಕಲಾಶಾಲೆ ಸೇರಿದಂತೆ ಅನೇಕ ಮಠ ಮಾನ್ಯಗಳಲ್ಲಿ ಖಾಸಗಿ ಕಲಾಪ್ರೇಮಿಗಳಲ್ಲಿ ಶ್ರೀಯುತರ ಕೃತಿಗಳು ಸಂಗ್ರಹಿತವಾಗಿವೆ. ಡಾ. ನಾಗಣ್ಣನವರ ಪುತ್ರನಾದ ಹಾಗೂ ಇದೇ ಸಂದರ್ಭದಲ್ಲಿ ಗೌರವ ಪ್ರಶಸ್ತಿ ಪುರಸ್ಕೃತರಾಗುತ್ತಿರುವ ಶ್ರೀ ಬಸಣ್ಣ ಮೋನಪ್ಪ ಬಡಿಗೇರ ಅವರು ಸೇರಿದಂತೆ ಅನೇಕ ಶಿಷ್ಯರನ್ನು ಹೊಂದಿದ್ದಾರೆ.

ಮಹಾದೇವಪ್ಪ ಎಸ್.ಶಿಲ್ಪಿ

ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ದಿಗ್ಗಾಂವ್ ಗ್ರಾಮದಲ್ಲಿ ಜನಿಸಿದ ಶ್ರೀ ಮಹಾದೇವಪ್ಪನವರ ಮನೆತನದವರು ಮೂಲತಃ ಅಕ್ಕಸಾಲಿಗರು, ಹಿರಿಯ ಬಳಿ ಶಿಲ್ಪಕಲೆಯ ಪ್ರಾಥಮಿಕ ಅಭ್ಯಾಸ ಪಡೆದು ಭದ್ರಾಚಲವ ಪ್ರಖ್ಯಾತ ಸ್ಥಪತಿಗಳಾದ ಶ್ರೀ ಗಣಪತಿಯವರಲ್ಲಿ ಆರು ವರ್ಷ ಕಲಿತು ಶಿಲ್ಪಕಲೆಯಲ್ಲಿ ನಿಪುಣರಾದರು. ಮುಂದೆ ಚಿತ್ತಾಪುರದಲ್ಲಿ ನೆಲಸಿ ಕಲ್ಲು, ಕಟ್ಟಿಗೆ, ಸಿಮೆಂಟು, ಪ್ಲಾಸ್ಟರ್ ಆಫ್ ಪ್ಯಾರೀಸ್ ಮತ್ತು ಹಿತ್ತಾಳೆಗಳಲ್ಲಿ ನಿರಂತರವಾಗಿ ಕಲಾ ಕೃತಿಗಳನನ್ನು ರಚಿಸುತ್ತಲೇ ಬಂದಿದ್ದಾರೆ. ಅದೇ ಕಾರಣದಿಂದಲೇ 'ಪಂಚಕಲಾ ಪ್ರವೀಣ' 'ಶಿಲ್ಪಕಲಾ ಪ್ರವೀಣ' 'ಪಂಚಶಿಲ್ಪಕಲಾವರ ರತ್ನ' ಎಂದು ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಶ್ರೀಯುತರು ಕಲ್ಲಿನಲ್ಲಿ ವಿಘ್ನೇಶ್ವರ ನಾಟ್ಯ ಸರಸ್ವತಿ, ಮಹಿಷಮರ್ಧಿನಿ, ನಂದಿ, ರಾಮ, ಲಕ್ಷ್ಮಣ ಸೀತೆ, ಹನುಮಂತ, ಕೃಷ್ಣ, ನವಗ್ರಹಗಳು, ಕಾಳಿ, ಸಹಸ್ರಫಣಿ ಪಾರ್ಶ್ವನಾಥ ಮುಂತಾದ ಶಿಲ್ಪಗಳು ಗಮನ ಸೆಳೆಯುತ್ತವೆ. ಕಂಚಿನಲ್ಲಿ ಹಾಗೂ ಬೆಳ್ಳಿಯ ತಗಡಿನಲ್ಲಿ ರಚಿಸಿರುವ ಪ್ರಭಾವಳಿಗಳು, ಪಾದರಕ್ಷೆಗಳು, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ರಚಿಸಿರುವ ಗಣಪತಿ ವಿಗ್ರಹಗಳು, ದೇವಿಯ ವಿಗ್ರಹಗಳು, ಮಂದಿರದ ಚಿಕ್ಕ ಚಿಕ್ಕ ಮಾದರಿಗಳು, ಗೋಪುರಗಳು ಹಾಗೂ ಸಿಮೆಂಟ್‌ನಲ್ಲಿ ಮಾಡಿರುವ ಮೂರ್ತಿಗಳು ಇವರ ಕಲಾಪ್ರೌಡಿಮೆಗೆ ನಿದರ್ಶನವಾಗಿ ನಿಂತಿವೆ. ೧೯೯೦ ರಲ್ಲಿ ಮೈಸೂರಿನ ಶಿಲ್ಪಕಲಾ ಪ್ರದರ್ಶನದಲ್ಲಿ

ಇವರು ಪ್ರದರ್ಶನಕ್ಕೆ ಇಟ್ಟ ಕಲಾಕೃತಿಗಳಿಗೆ ಪ್ರಥಮ ಪ್ರಶಸ್ತಿ ಬಂದಿದೆ. ಇವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ. ಇವರು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಮಾನಯ್ಯ ಬಡಿಗೇರ

ಖ್ಯಾತ ಶಿಲ್ಪಿ ವಂಶಪಾರಂಪರ್ಯದ ಜೊತೆಗೆ ಕಲೆಯ ಮೇಲಿನ ಆಸಕ್ತಿಯಿಂದ ಕಾಷ್ಠ ಶಿಲ್ಪಕಲೆಯನ್ನು ಕಲಿತವರು. ಇವರು ಮೂಲತಃ ಗುಲಬರ್ಗಾದವರು. ಇವರ ತಂದೆ ನಾಡೋಜ ನಾಗಣ್ಣ ಎಂ.ಬಡಿಗೇರ. ತಾಯಿ ಕಮಲಮ್ಮ. ಚಿತ್ರಕಲೆಯಲ್ಲಿ ಬಿಎಫ್.ಎ ಪದವಿ ಪಡೆದುಕೊಂಡಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತಂದೆಯವರೇ ಕಾಷ್ಠ ಶಿಲ್ಪಕಲೆಯ ಮೊದಲ ಗುರು. ವಿಜಯ ಹಾಗರಗುಂಡಗಿ ಲೋಹ ಶಿಲ್ಪ ಕಲಾ ಗುರುಗಳು, ಕಲಾವಿದ ಮೋಹನ್ ಎಚ್. ಸೀತನೂರ ಅವರ ಬೆಂಬಲ ಪ್ರೋತ್ಸಾಹ. ರಾಜ್ಯ, ರಾಷ್ಟ್ರಮಟ್ಟದಲ್ಲಿ ತಮ್ಮ ಶಿಲ್ಪಗಳ ಪ್ರದರ್ಶನ, ತರಬೇತಿ ಕಾರ್ಯಾಗಾರ ಆಯೋಜನೆ, 2005ರಿಂದ 2008ರ ವರೆಗೆ ಕರ್ನಾಟಕ ಶಿಲ್ಪಕಲಾ ಕಾಡೆಮಿಯ ಸದಸ್ಯರಾಗಿ ಹೈದ್ರಾಬಾದ್–ಕರ್ನಾಟಕ ಭಾಗಕ್ಕೆ ಶಿಲ್ಪಕಲಾ ಶಿಬಿರಗಳನ್ನು ನೀಡಿದ್ದಾರೆ. ಜಿಲ್ಲಾ ಹಾಗೂ ರಾಜ್ಯ ಮಟ್ಟದ ಚಿತ್ರಕಲಾ ಶಿಕ್ಷಕ ಸಂಘದ ಉಪಾಧ್ಯಕ್ಷರಾಗಿ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಅನೇಕ ಶಿಬಿರಗಳ ಶಿಬಿರಾರ್ಥಿಯಾಗಿ ಸಂಚಾಲಕರಾಗಿ, ಶಿಲ್ಪಕಲಾ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಯಾಗಿ, ಜಕಣಾಚಾರಿ ಪ್ರಶಸ್ತಿಯ ಆಯ್ಕೆ ಮತರದಾರರಾಗಿ, ಚಿತ್ರಕಲಾ ಸ್ಪರ್ಧೆಗಳ ನಿರ್ಣಾಯಕರಾಗಿ ಸೇವೆ ಸಲ್ಲಿಸಿದ್ದಾರೆ. 1986 ಮೈಸೂರು ದಸರಾ ಪ್ರಶಸ್ತಿ, 1985 ವಿಭಾಗದ ಮಟ್ಟದ ಚಿತ್ರಕಲಾ ಶಿಕ್ಷಕರ ಪ್ರಶಸ್ತಿ, 2007ರಲ್ಲಿ ವಿಭಾಗದ ಮಟ್ಟದ ಚಿತ್ರಕಲಾ ಸ್ಪರ್ಧೆಗಳ ನಿರ್ಣಾಯಕರಾಗಿ ಸೇವೆ ಸಲ್ಲಿಸಿದ್ದಾರೆ. 2007ರಲ್ಲಿ ರೋಟರಿ ಕ್ಲಬ್ ಆಫ್ ಮಿಡ್ ಟೌನ್ ಗುಲಬರ್ಗಾ ಇವರು 'ಉತ್ತಮ ಚಿತ್ರಕಲಾ ಶಿಕ್ಷಕ ಪ್ರಶಸ್ತಿ' ನೀಡಿ ಗೌರವಿಸಿದ್ದಾರೆ. ಕಲಬುರ್ಗಿ ಕಂಪು–2010, ಭಾರತ ವಿಕಾಸ ಪ್ರೇರಕ ಪ್ರಶಸ್ತಿ ಪಡೆದಿದ್ದಾರೆ.

ಇವರ ಕಾಷ್ಠಶಿಲ್ಪ ರಚನೆಯ ವಿಶೇಷತೆ ಎಂದರೆ, ಟೊಳ್ಳು ವಿಧಾನದಲ್ಲಿ ಕಂಚಿನ ವಿಗ್ರಹವನ್ನು ಎರಕ ಮಾಡಿದ ಮೇಲೆ ಇದರ ಮೇಲೆ ನಕ್ಷೆ ಬಿಡಿಸುವ ಕೆಲಸ ಮಾಡುವುದಿಲ್ಲ. ಚಾಣ, ಸುತ್ತಿಗೆ ಬಳಸದೆ ಮೂರ್ತಿ ನಿರ್ಮಿಸುವ ತಂತ್ರಗಾರಿಕೆ ಇವರದು.

ಕಾಷ್ಠಶಿಲ್ಪ ಕಲೆ ತುಂಬಾ ಹಳೆ ಕಾಲದ್ದು. ಇದು ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಬೆಳಕಿಗೆ ಬಂದಿದ್ದು, ಆ ನಂತರ ಕೆಳದಿ ವೆಂಕಟಪ್ಪ ನಾಯಕನ ಕಾಲದಲ್ಲಿ ಸುರಪುರ ತಾಲೂಕಿನಲ್ಲಿ ಕಾಷ್ಠ ಶಿಲ್ಪಿಯಾಗಿದ್ದ ಗರುಡಾದ್ರಿ ಎಂಬುವರು ಇದ್ದರಂತೆ, ಅವರಿಂದ ತಮ್ಮ ತಾತ, ತಂದೆಯವರಿಂದ ತಮಗೆ ಬಂದಿದ್ದು. ಹಳೆಯ ಪದ್ಧತಿಯಾಗಿರುವುದರಿಂದ ಎರಕ ಹೊಯ್ದು ಶಿಲ್ಪಗಳನ್ನು ತಯಾರಿಸುವುದು ದೊಡ್ಡ ಕೆಲಸ. ತಾಳ್ಮೆಯಿಂದ ಮಾಡಿದರೆ ಮಾತ್ರ ಈ ಕಲೆಯನ್ನು ಸಾಧಿಸಲು ಸಾಧ್ಯ ಎನ್ನುವುದು ಇವರ ಅಭಿಪ್ರಾಯ.

ಯಾವುದಾದರೂ ಒಂದು ವಿಗ್ರಹವನ್ನು ತಯಾರಿಸುವ ಮೊದಲು ಅದರ ಚಿತ್ರವನ್ನು ನಿರ್ದಿಷ್ಟ ಕಾಲಮಾನದಲ್ಲಿ ಕಾಗದದ ಮೇಲೆ ಚಿತ್ರ ಬಿಡಿಸುತ್ತಾರೆ. ಇದು ಆಯಾ ದೇವರ ಶ್ಲೋಕಗಳನ್ನು ಆಧರಿಸಿರುತ್ತದೆ. ಅನಂತರ ಈ ಚಿತ್ರಕ್ಕೆ ಬೇಕಾದಷ್ಟು ಜೇನಿನ ಮೇಣದಿಂದ ಎಲ್ಲಾ ಅಂಗಗಳನ್ನು ಸೃಷ್ಟಿಸಲಾಗುತ್ತದೆ. ಇದಕ್ಕೆ ಎಣ್ಣೆ ಬೆರೆಸಿ ಕೊನೆಗೆ ಮೂರ್ತಿಯ ಆಕಾರಕ್ಕೆ ಬದಲಿಸಲಾಗುತ್ತದೆ. ಇದನ್ನು ನಂತರ ಬೆಂಕಿಯಲ್ಲಿ ಉರಿಸಿದ ನಂತರ ಶಿಲ್ಪ ಕಲೆಯ ಅಸಲಿ ಕೆಲಸ ಶುರುವಾಗುತ್ತದೆ. ಕಾಷ್ಠಶಿಲ್ಪ ಕಲೆಯ ಈ ಹಂತಗಳು ಸುಲಭವಲ್ಲ. ಆದರೆ ಒರಿಜಿನಾಲಿಟಿ ಇರುತ್ತದೆ. ಹಾಗಾಗಿಯೇ ಕಾಷ್ಠಶಿಲ್ಪ ಕಲೆ ಅಂದರೆ ಮಾಸ್ಟರ್ ಪೀಸ್ ಇದ್ದ ಹಾಗೆ ಎನ್ನುತ್ತಾರೆ.

ಇವರ ಕಾಷ್ಠಶಿಲ್ಪ ರಚನೆಯ ವಿಶೇಷತೆ ಎಂದರೆ, ಟೊಳ್ಳು ವಿಧಾನದಲ್ಲಿ ಕಂಚಿನ ವಿಗ್ರಹವನ್ನು ಎರಕ ಮಾಡಿದ ಮೇಲೆ ಇದರ ಮೇಲೆ ನಕ್ಷೆ ಬಿಡಿಸುವ ಕೆಲಸ ಮಾಡುವುದಿಲ್ಲ. ಚಾಣ, ಸುತ್ತಿಗೆ ಬಳಸದೆ ಮೂರ್ತಿ ನಿರ್ಮಿಸುವ ತಂತ್ರಗಾರಿಕೆ ಇವರದು. ಮೇಣದಲ್ಲಿ ಅಂತಿಮ ರೂಪ ಪಡೆದ ಮೂಲ ಕೃತಿಗೆ ಸ್ವಲ್ಪವೂ ಕುಂದು ಬಾರದಂತೆ ಲೋಹ ರೂಪಕ್ಕೆ ಮಾರ್ಪಡಿಸುವ

ತಂತ್ರಗಾರಿಕೆಯನ್ನು ಸಿದ್ಧಿಸಿಕೊಂಡಿರುವ ಇವರು ಸಾಂಪ್ರದಾಯಿಕ ಶೈಲಿಯೊಂದಿಗೆ ಜನಪದ ಶೈಲಿಯನ್ನು ಸಂಯೋಜಿಸಿ ಶಿಲ್ಪಗಳಿಗೆ ಹೊಸ ಮೆರುಗನ್ನು ಕೊಡುತ್ತಾರೆ.

ಇತ್ತೀಚಿಗೆ ಅಮೇರಿಕದ ಮಹಿಳೆ ಕ್ಯಾಲಿಕಾ ಭಾರತದ ಶಿಲ್ಪ ಕಲಾವಿದರ ಬಗ್ಗೆ ಆಕ್ಸ್‌ಫರ್ಡ ಯೂನಿವರ್ಸಿಟಿಯಲ್ಲಿ ಪಿಹೆಚ್.ಡಿ ಮಾಡಲು ಅನುಮತಿಗಾಗಿ ಅರ್ಜಿ ಸಿದ್ಧಪಡಿಸುವುದಕ್ಕಾಗಿ ಗುಲಬರ್ಗಾಕ್ಕೆ ಬಂದು, ಮಾನಯ್ಯನವರ ಕಲಾಕೃತಿಗಳ ವೀಕ್ಷಿಸಿ ಸಂದರ್ಶನ ಮಾಡಿದ್ದಾರೆ. ಕಂಪ್ಯೂಟರ್ ಗ್ರಾಫಿಕ್ಸ್‌ನಂತಹ ಆಧುನಿಕ ತಂತ್ರಜ್ಞಾನದ ಕಾಲಘಟ್ಟದಲ್ಲೂ ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ತೊಡಗಿಸಿಕೊಂಡು ದೇಶ, ವಿದೇಶಗಳವರೆಗೂ ಹೆಸರು ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ.

ಏಕಪ್ಪ ಆರ್. ಚಿತ್ರಗಾರ

ಕೊಪ್ಪಳದ ಬಳಿ ಇರುವ ಕಿನ್ನಾಳ ಗ್ರಾಮವು ಭಾರತದ ಶ್ರೇಷ್ಠ ಕಲೆಯ ಪರಂಪರೆಯೊಂದರ ತವರೂರು. ಕಿನ್ನಾಳದ ಈ ಕಲೆಯ ಪೋಷಕವಾಗಿದ್ದ ಕುಟುಂಬವೊಂದರ ಕಲಾವಿದ ಶ್ರೀ ಏಕಪ್ಪ ಆರ್. ಚಿತ್ರಗಾರ ಅವರು ಶ್ರೀ ರಾಮಚಂದ್ರ ಚಿತ್ರಗಾರ ಪುತ್ರರಾಗಿ ಮೇ ೧೦, ೧೯೪೩ರಲ್ಲಿ ಜನಿಸಿದರು. ಶ್ರೀ ಏಕಪ್ಪನವು ತಮ್ಮ ತಂದೆಯವರಿಂದಲೇ ಕಿನ್ನಾಳ ಕಲೆಯನ್ನು ಕಲಿತು, ಹಲವಾರು ದೇಗುಲಗಳಲ್ಲಿ ದ್ವಾರಪಾಲಕರು, ನಿಂತ ಸಿಂಹಗಳು, ಬ್ರಹ್ಮಕುದುರೆಗಳು, ಕಿನ್ನಾಳದ ಗೌರಿ, ಅಷ್ಟದಿಕ್ಪಾಲಕರು, ಶಿವ-ಪಾರ್ವತಿ, ಗರುಡವಾಹನ ಮೂರ್ತಿ, ಗಂಗಾಮಾತೆ, ಛತ್ರಿ, ಪಲ್ಲಕ್ಕಿ, ಚಾಮರ, ಭುಜದ ಕವಚ, ಎದೆ ಕವಚ, ನಡುಪಟ್ಟಿ ಮುಂತಾದ ಅನೇಕ ಪ್ರಕಾರದ ಶಿಲ್ಪಕಲೆಯಲ್ಲಿ ಮೇಲುಗೈ ಸಾಧಿಸಿರುವವರು. ಶ್ರೀಯುತರು ಹಂಪಿಯ ಐದು ಅಡಿಯ ಹತ್ತು ದ್ವಾರಪಾಲಕರು, ಏಳೂವರೆ ಅಡಿಯ ನಿಂತ ಸಿಂಹಗಳು, ನಾಲ್ಕು ಅಡಿಯ ಎಂಟು ಬಾಗಿಲುವಾಡಗಳು, ಬ್ರಹ್ಮಕುದುರೆ, ಪ್ರಭಾವಳಿಗಳನ್ನು ತಂದೆಯವರ ಜೊತೆಯಲ್ಲಿ ಮಾಡಿದ್ದಾರೆ. ಈಗ ಶ್ರೀ ಏಕಪ್ಪ ಅವರು ಅಂತರಾಷ್ಟ್ರೀಯ ಮಟ್ಟದ ಕಿನ್ನಾಳ ಕಲಾವಿದರಾಗಿ ಪ್ರಸಿದ್ಧರಾಗಿದ್ದಾರೆ.

ಶಿಲ್ಪಕಲಾ ಅಕಾಡೆಮಿಯ ವತಿಯಿಂದ ಹೂವಿನ ಹಡಗಲಿಯ ಕಾರ್ಯಕ್ರಮದಲ್ಲಿ ಕಿನ್ನಾಳ ಶಿಲ್ಪಕಲೆಯ ಪ್ರಾತ್ಯಕ್ಷಿಕೆ ನಡೆಸಿಕೊಟ್ಟಿದ್ದಾರೆ. ಅಲ್ಲದೆ ಈ ಕಲೆಯ ಬಗಗೆ ಕಿರು ಪ್ರಮಾಣದ ಕರಪತ್ರಗಳನ್ನು ಸಹ ಬರೆದಿದ್ದಾರೆ. ಇತ್ತೀಚೆಗೆ ವಿದೇಶಿಯರೂ ಸಹ ಈ ಕಲೆಯಲ್ಲಿ ಆಸಕ್ತರಾಗಿ ಇವರ ಬಳಿಯಲ್ಲಿ ಈ ಕಲೆಯನ್ನು ಕಲಿಯುತ್ತಿದ್ದಾರೆ.

ಬಸಣ್ಣ ಮೋನಪ್ಪ ಬಡಿಗೇರ:

ಗುಲಬರ್ಗಾ ಜಿಲ್ಲೆಗೆ ವಿಶಿಷ್ಟವೆನಿಸುವ ಬಾಗಿಲುವಾಡಗಳು, ಅವುಗಳ ಎರಡೂ ಬದಿಯಲ್ಲಿ ಕುದುರೆಯ ಮುಖಗಳ ಶೋಭಾಯಮಾನವಾಗಿ ಮನೆಗೆ ಸ್ವಾಗತಿಸುತ್ತದೆ. ಇಂತಹ ಕಟ್ಟಿಗೆಯ ಮೂರ್ತಿ ಶಿಲ್ಪಕಲೆಯಲ್ಲಿ ಸಿದ್ಧಹಸ್ತರೆನಿಸಿದ್ದಾರೆ. ಶ್ರೀ ಬಸಣ್ಣ ಮೋನಪ್ಪ ಬಡಿಗೇರ ಅವರು.

ವಿಜಯನಗರದ ನಂತರ ಸುರಪುರ ಸಂಸ್ಥಾನ, ಸಾಹಿತಿ ಕಲಾವಿದರಿಗೆ ಆಶ್ರಯ ನೀಡಿದ ಪ್ರಮುಖ ರಾಜಮನೆತನಗಳಲ್ಲಿ ಒಂದಾಗಿದೆ. ಪ್ರಖ್ಯಾತ ಚಿತ್ರಕಲಾವಿದೆ ಗರುಡಾದ್ರಿ, ದಖ್ಖನಿ ಚಿತ್ರಕಲೆಗೆ ನೀಡಿದ ಕಾಣಿಕೆ ಲೋಕಪ್ರಸಿದ್ಧ. ಅಂತಹ ಪುಣ್ಯಭೂಮಿ ಸುರುಪುರ ಬಳಿಯ ಗೋನಾಳ ಎಸ್.ಡಿ.ಯಲ್ಲಿ ೦೧.೦೬.೧೯೫೩ ರಲ್ಲಿ ಶ್ರೀ ಬಸಣ್ಣ ಮೋನಪ್ಪ ಬಡಿಗೇರರು ಜನಿಸಿದರು. ನಾಡೋಜ ಪ್ರಶಸ್ತಿ ವಿಜೇತ ಶ್ರೀ ನಾಗಣ್ಣ ಬಡಿಗೇರರಲ್ಲಿ ಶಿಲ್ಪಕಲಾ ಅಭ್ಯಾಸ ಪಡೆದು ಮನೆಗಳಿಗೆ ಅಲಂಕಾರಗಳಿಂದ ಕೂಡಿದ ಕಂಬ, ಬೋಧಿಗೆ, ಛತ್ತು, ನಾಗಬಂಧ ಇತ್ಯಾದಿಗಳನ್ನು ಹೂ-ಹಣ್ಣು, ಪ್ರಾಣಿ-ಪಕ್ಷಿ, ಎಲೆ-ಬಳ್ಳಿ, ಮುಂತಾದ ಸುಳಿವು ಹೊಳಹುಗಳನ್ನು ರಚಿಸತೊಡಗಿದ್ದಾರೆ. ಹಲವಾರು ಶಾಲೆಗಳ ತಲೆಬಾಗಿಲು, ಹಣೆಪಟ್ಟಿ, ಜೋಡುಕುದುರೆ ಇತ್ಯಾದಿಗಳು ಅತ್ಯಂತ ಸೂಕ್ತ ಕುಸುರಿ ಕೆಲಸಗಳಿಂದ ಕಲಾತ್ಮಕವಾಗಿ ರೂಪಿಸಿದ್ದಾರೆ. ಅಲ್ಲದೆ ಕಾಷ್ಠದಿಂದ ರಚಿಸಿರುವ ತೇರು, ಮಂಟಪ, ಪಲ್ಲಕ್ಕಿಗಳು ಜಿಲ್ಲೆ ಹಾಗೂ ನೆರೆ ಜಿಲ್ಲೆಗಳಲ್ಲಿ ಕಾಣಸಿಗುತ್ತವೆ. ಒಂದೇ ಮರದ ತುಂಡಿನಲ್ಲಿ ರಚಿಸಿದ 'ಗುಂಬರಿ' ಅನೇಕ ಮರದ ತುಂಡುಗಳಿಂದ

ತೆಣೆದ ಚೆಂಡು, ಗಾಜಿನ ಬಾಟಲಿಗಳಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ಸಾಮಗ್ರಿಗಳು, ಚಿಕ್ಕ ತೇರು ಇತ್ಯಾದಿ ಹಲವಾರು ವಿಶಿಷ್ಟ ಬಗೆಯ ಕೃತಿಗಳನ್ನು ರಚಿಸಿದ್ದಾರೆ.

ಬಸಣ್ಣ ಕಾ. ಕಂಚುಗಾರ:

ಕಲಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನ ಕೊಡೆಕಲ್ ಗ್ರಾಮದಲ್ಲಿ ಶಿಲ್ಪಿ ಶ್ರೀ ಬಸವಣ್ಣನವರು ಜನವರಿ ೦೧, ೧೯೩೧ರಲ್ಲಿ ಜನಿಸಿದರು. ತಮ್ಮ ತಂದೆಯವರಿಂದಲೇ ಶಿಲ್ಪಕೆಲಯನ್ನು ಕಲಿತ ಬಸವಣ್ಣನವರು ಕಾಷ್ಠ ಹಾಗೂ ಶಿಲೆಯಲ್ಲಿ ಹಲವಾರು ಗ್ರಾಮದೇವತೆ, ಗಣಪತಿ, ಹನುಮಂತ, ವೀರಭದ್ರ, ಶಿವ-ಪಾರ್ವತಿ, ಲಕ್ಷ್ಮೀ, ಸರಸ್ವತಿ, ರಾಘವೇಂದ್ರಸ್ವಾಮಿ ಮುಂತಾದ ದೇವತಾ ಶಿಲ್ಪಗಳನ್ನು ಕೆತ್ತಿರುವರು. ಕಂಚಿನಲ್ಲಿ ಇವರು ರಚಿಸಿರುವ ಅಶ್ವಾರೂಢ ಮಲ್ಲಯ್ಯ, ಕಾಳಿಕಾದೇವಿ, ಅನ್ನಪೂರ್ಣೇಶ್ವರಿ, ಮೌನೇಶ್ವರ ವಿಗ್ರಹಗಳು ಇವರ ಕಲಾ ಪ್ರೌಢಿಮೆಗೆ ಸಾಕ್ಷಿಯಾಗಿವೆ. ತಮ್ಮ ತಂದೆಯವರಿಂದ ಕಂಚುಗಾರಿಕೆ, ಬಡಗಿತನ, ಜ್ಯೋತಿಷ್ಯಶಾಸ್ತ್ರ, ವಾಸ್ತುಶಾಸ್ತ್ರ, ನಾಟಿವೈದ್ಯವನ್ನು ಕಲಿತು ಮುಂದುವರೆಸಿಕೊಂಡು ಬಂದಿದ್ದಾರೆ.

ಸ್ವತಃ ಲೇಖಕರೂ ಆಗಿರುವ ಶ್ರೀಯುತರು ಈಗಾಗಲೇ 'ಕಾಲಜ್ಞಾನ ಕಿರಣ ಕೊಡೆಕಲ್ ಬಸವಣ್ಣ", 'ಪುರಾತತ್ವ ಲಿಂಗದ ಘನತೆ' ಎಂಬ ಎರಡು ಆಧ್ಯಾತ್ಮ ಚಿಂತನೆಯ ಗ್ರಂಥಗಳನ್ನು ಬರೆದಿದ್ದಾರೆ. ಇವರು ರಚಿಸಿದ ಶಿಲ್ಪಕಲಾಕೃತಿಗಳು ಬಿಜಾಪುರ, ನಾಲತವಾಡ, ಅಫಜಲಪೂರ ಮುಂತಾದೆಡೆ ಸಂಗ್ರಹವಾಗಿದ್ದು ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿದೆ.

ಅಮಾತ್ಯಪ್ಪ ಶಿಲ್ಪಿ:

ಮೂಲತಃ ರಾಯಚೂರಿನ ಚಿಕ್ಕ ಹೆಸರೂರಿನವರಾದ ಪ್ರಸ್ತುತ ಸರ್ಜಾಪುರದಲ್ಲಿ ನೆಲೆಸಿರುವ ಶ್ರೀ ಅಮಾತ್ಯಪ್ಪ ಬಡಿಗೇರ ಅವರು ೧೫.೧೦.೧೯೪೩ ರಲ್ಲಿ ಜನಿಸಿದರು. ತಂದೆಯವರಿಂದ ಕುಲಕಸುಬಾದ ಬಡಗಿತನ ಹಾಗೂ ಸ್ವಂತವಾಗಿ ಶಿಲಾಶಿಲ್ಪ ರಚನೆ ಅಭ್ಯಸಿಸಿದರು. ಸರ್ಜಾಪುರದಲ್ಲಿ ಮರದಲ್ಲಿ ಗ್ರಾಮ ದೇವತೆಯ ಶಿಲ್ಪ ರಚನೆ ಹಾಗೂ ಶಿಲೆಯಲ್ಲಿ

ಆಂಜನೇಯನ ಮೂರ್ತಿಯಿಂದ ಆರಂಭಿಸಿ ಈ ಎರಡೂ ಮಾಧ್ಯಮಗಳಲ್ಲಿ ಅನೇಕ ಶಿಲ್ಪಗಳನ್ನು ರಚಿಸಿದ್ದಾರೆ. ಮುಗಳಖೋಡದ ಜಿಡಗಾ, ಆಂಧ್ರದ ಅಧೋನಿ, ರಾಯಚೂರಿನ ಕೃಷ್ಣಾ ಗ್ರಾಮಗಳಲ್ಲದೆ ಬೀದರ್, ಸಿಂಧನೂರು, ಬಳ್ಳಾರಿಯ ನಂದ್ಯಾಳ, ಜೇವರ್ಗಿಯ ಬಿಳಾರ ಹಾಗೂ ಗುಲಬರ್ಗಾ ಶಹರಗಳಲ್ಲಿ ಮಠಾಧೀಶರುಗಳು, ಆಂಜನೇಯ, ಗಂಗಾದೇವಿ, ಲಿಂಗಗಳು, ದುರ್ಗಾದೇವಿ ಇತ್ಯಾದಿ ಕೃತಿಗಳನ್ನು ಕಾಣಬಹುದು. ಶಹಾಪುರದ ನಂದ್ಯಾಳ ಗ್ರಾಮದಲ್ಲಿ ಭೋಜ ಲಿಂಗೇಶ್ವರ ಮೂರ್ತಿಯನ್ನು ಸರ್ಜಾಪುರದಲ್ಲಿ ಸಿದ್ಧಾರೂಢರ ಮೂರ್ತಿಯನ್ನು ಬಿಳಿ ಅಮೃತ ಶಿಲೆಯಲ್ಲಿ ರಚಿಸಿರುವುದ ಕಾಣಬಹುದು.

ಶಿಲ್ಪಿ ದೇವಿಂದ್ರಪ್ಪ ಪರಪ್ಪ ವಿಶ್ವಕರ್ಮ:

ಸಾಂಪ್ರದಾಯಿಕ ಕಾಷ್ಠ ಶಿಲ್ಪಕಲಾ ಕ್ಷೇತ್ರದಲ್ಲಿ ಅನನ್ಯ ಸೇವೆಯನ್ನು ಸಲ್ಲಿಸುತ್ತಿರುವ ಶ್ರೀ ದೇವಿಂದ್ರಪ್ಪನವರ ಪರಪ್ಪ ವಿಶ್ವಕರ್ಮ ಅವರು ದಿನಾಂಕ: ೦೧.೦೧.೧೯೪೫ರಲ್ಲಿ ಕಲಬುರಗಿ ಜಿಲ್ಲೆಯ ನಂದಿಹಳ್ಳಿಯಲ್ಲಿ ಜನಿಸಿದ ಇವರು ರಥಶಿಲ್ಪಕಲೆಯಲ್ಲಿ ಸಿದ್ಧಹಸ್ತರು.

ಶ್ರೀ ದೇವಿಂದ್ರಪ್ಪನವರು ನಿರ್ಮಿಸಿರುವ ವಿಗ್ರಹಗಳಲ್ಲಿ ಮುದ್ದೇಬಿಹಾಳದ ಮೈಲೇಶ್ವರ ಗ್ರಾಮದ ಗ್ರಾಮದೇವತೆ, ಶಹಾಪುರ ಕರೆಕಲ್ ಗ್ರಾಮದ ಗ್ರಾಮದೇವತೆಗಳು, ಪ್ರಮುಖವಾದವು. ಎಲ್ಲಕಿಂತ ಮುಖ್ಯವಾಗಿ ಇವರು ದೇವಸ್ಥಾನಗಳಿಗೆ ನಿರ್ಮಿಸಿಕೊಟ್ಟಿರುವ ರಥಗಳು ಜನರು ಭಕ್ತಿಭಾವವನ್ನು ಇನ್ನಷ್ಟು ಹೆಚ್ಚಿಸುತ್ತದೆ ಎಂದರೆ ಅತಿಶಯೋಕ್ತಿಯಲ್ಲ, ಏಕೆಂದರೆ ದೇವರುಗಳನ್ನು ಆನೆ, ಸಿಂಹ, ಅಶ್ವ, ಗರುಡ, ಪಲ್ಲಕ್ಕಿ, ರಥ ಮುಂತಾದವುಗಳಲ್ಲಿ ಮೆರವಣಿಗೆ ಮಾಡುವ ಸಂಪ್ರದಾಯ ಎಲ್ಲಾ ದೇವಸ್ಥಾನಗಳಲ್ಲೂ ಇದೆ. ಕಲೆ, ಸೌಂದರ್ಯ, ಭಕ್ತಿಯನ್ನು ತುಂಬಿದ ರಥಗಳಲ್ಲಿ ದೇವರನ್ನು ಕುಳ್ಳಿರಿಸಿ ಉತ್ಸವ ಮಾಡಿ ಭಕ್ತರು ಸಂತೋಷಿಸುತ್ತಾರೆ. ಆದ್ದರಿಂದ ರಥ ತಯಾರಿಸುವ ಶಾಸ್ತ್ರ ಪ್ರಕಾರವಾಗಿಯೇ ದೇವೀಂದ್ರಪ್ಪನವರ ಕೈಗಳಿಂದ ಸಿದ್ಧವಾಗುವ ರಥಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಹೊನಗುಂಟಿ

ಗ್ರಾಮದಲ್ಲಿ ಶಕ್ತಿಪೀಠವೆಂದು ಪ್ರಸಿದ್ಧವಾಗಿರುವ ಶ್ರೀ ಚಂದ್ರಲಾಂಬ ಪರಮೇಶ್ವರಿ ದೇವಿಯ ಉತ್ಸವಕ್ಕೆಂದು ನಿರ್ಮಿಸಿರುವ ರಥ ಅತ್ಯಂತ ಆಕರ್ಷಕವಾಗಿದೆ. ರಥದ ಸುತ್ತ ನವಗ್ರಹ ಮೂರ್ತಿಗಳು, ಪ್ರಭಾವಳಿ ಸಿಂಗಹವಾಹಿನಿಯ ಮುಖ, ಕಂಬಗಳು ಇವೆಲ್ಲವನ್ನೂ ಶಾಸ್ತ್ರೋಕ್ತವಾಗಿ ಸಿದ್ಧಪಡಿಸಿದ್ದಾರೆ.

ಇವರ ಮತ್ತೊಂದು ಹೆಗ್ಗಳಿಕೆ ಎಂದರೆ ನಂದಿಹಳ್ಳಿಯಲ್ಲಿ ಇವರು ನಿರ್ಮಿಸಿರುವ ತೇರು ೩೫ ಅಡಿ ಎತ್ತರವಾಗಿದು, ಅತ್ಯಂತ ಕಲಾತ್ಮಕವಾಗಿದೆ. ಹಾಗೆಯೇ ಬಿಂದಲಬಾವಿಯಲ್ಲಿ ೨೫ ಅಡಿ ಎತ್ತರದ, ಹೊನಗುಂಟದಲ್ಲಿ ೧೨ ಅಡಿ ೧೨ ಅಡಿ ಎತ್ತರದ ರಥಗಳನ್ನು ಇವರು ನಿರ್ಮಿಸಿದ್ದಾರೆ. ಮಾಡಗಿ ಗ್ರಾಮದ ದೇವಸ್ಥಾನಕ್ಕೆ ಪಲ್ಲಕ್ಕಿಯನ್ನು, ಹಾವನೂರ ಗ್ರಾಮದ ದೇವಸ್ಥಾನಕ್ಕೆ ಜೋಡು ಕುದುರೆಗಳನ್ನು ಮಾಡಿಕೊಟ್ಟಿರುತ್ತಾರೆ. ಇದಲ್ಲದೆ ಇವರು ಸುಂದರ ಕುಸುರಿಗಳಿಂದ ಅಲಂಕರಿಸಲಾಗುವ ಬಾಗಿಲುಗಳನ್ನು ಮಾಡುವುದರಲ್ಲಿಯೂ ಪರಿಣಿತರು.

ಶ್ರೀ ದೇವಿಂದ್ರಪ್ಪನವರು ಶ್ರೀಶೈಲ ಜಗದ್ಗುರುಗಳಿಂದ ಸನ್ಮಾನವನ್ನು ಸ್ವೀಕರಸಿದ್ದಾರೆ. ನಂದಿಹಳ್ಳಿ ಗ್ರಾಮಸ್ಥರು ಕೂಡ ಇವರ ಕಲಾವಂತಿಕೆಯನ್ನು ಮೆಚ್ಚಿ ಸನ್ಮಾನಿಸಿ ತಮ್ಮ ತುಂಬು ಹೃದಯದ ಅಭಿಮಾನವನ್ನು ತೋರಿದ್ದಾರೆ. ರಥ ನಿರ್ಮಾಣದಲ್ಲಿ ಕಾಷ್ಠ ಶಿಲ್ಪಕಲೆಯನ್ನು ಸಾಂಪ್ರದಾಯಿಕ ರೀತಿಯಲ್ಲಿ ಉಳಿಸಿ ಬೆಳೆಸಿಕೊಂಡು ಬರುತ್ತಿರುವ ಶ್ರೀ ದೇವಿಂದ್ರಪ್ಪ ವಿಶ್ವಕರ್ಮ ಅವರನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ೨೦೧೫ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದೆ.

ನಾಡೋಜ ಡಾ. ವ್ಹಿ.ಟಿ.ಕಾಳೆ

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ನೆಲೆಸಿರುವ ವ್ಹಿ.ಟಿ.ಕಾಳೆಯವರು ಸಮಕಾಲೀನ ಕಲಾ ಸಂದರ್ಭದಲ್ಲಿ ಚಿತ್ರಕಾರರಾಗಿ, ಕಲಾಶಿಕ್ಷಕರಾಗಿ, ಕಲಾ ಬರಹಗಾರರಾಗಿ, ಶಿಲ್ಪಕಾರರಾಗಿ, ಕಲಾಶಿಕ್ಷಕರಾಗಿ, ಗಮನಾರ್ಹವಾಗಿ ಗುರುತಿಸಿಕೊಂಡಿರುವ ವ್ಹಿ.ಟಿ.ಕಾಳೆಯವರು ಕೇವಲ ವರ್ಣಚಿತ್ರ

ಕಲಾವಿದರಷ್ಟೇ ಅಲ್ಲ, ಒಬ್ಬ ಉತ್ತಮ ಶಿಲ್ಪಿಯೂ ಆಗಿದ್ದಾರೆಂದರೆ ಅಚ್ಚರಿ ಪಡಬೇಕಿಲ್ಲ. ಸಿಮೆಂಟ್, ಮಣ್ಣು, ಪ್ಲಾಸ್ಟರ್ ಆಫ್ ಪ್ಯಾರಿಸ್ ಮುಂತಾದ ಮಾಧ್ಯಮಗಳಲ್ಲಿ ಇವರು ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ಶಿಲ್ಪಗಳು ಎರಡು ರೀತಿಯಲ್ಲಿವೆ. ಫಲಕದ ಮೇಲೆ ರಚಿಸಿದ ಉಬ್ಬು ಶಿಲ್ಪಗಳು ಮತ್ತು ತ್ರಿಯಾಮದ ಶಿಲ್ಪಗಳು ಪ್ರಮುಖವಾಗಿವೆ. ಇವರ ಶಿಲ್ಪಗಳಲ್ಲಿ ಅಂಬೇಡ್ಕರ್, ಬಸವಣ್ಣ, ಮಠಾಧೀಶರು, ಸಾಧುಸಂತರ, ಮಹಾಪುರುಷರ ಭಾವ ಶಿಲ್ಪಗಳನ್ನು ರಚಿಸಿದ್ದಾರೆ.

ಡಾ.ಶಿವಾನಂದ ಎಚ್.ಬಂಟನೂರ್

ಮೂಲತಃ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಖೈನೂರಿನವರಾದ ಡಾ. ಶಿವಾನಂದ ಬಂಟನೂರ ಅವರು ಧಾರವಾಡ ಗುಲಬರ್ಗಾ ಮತ್ತು ಬಾದಾಮಿಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ (೨೦೦೧ರಿಂದ) ಹಂಪಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಮಕಾಲೀನ ಶಿಲ್ಪಕಲೆಯ ಸೃಜನಶೀಲ ಸೃಷ್ಟಿಗಳಿಗೆ ಕಾರಣರಾದ ಬಹುಮುಖ್ಯ ಪ್ರತಿಭಾವಂತರಲ್ಲಿ ಡಾ.ಶಿವಾನಂದ ಬಂಟನೂರ ಒಬ್ಬರು. ಸುತ್ತಲಿನ ಚಲನಶೀಲ ದೃಶ್ಯಲೋಕವನ್ನು ಸಮಕಾಲಿನ ಪ್ರಜ್ಞಾಪ್ರವಾಹದಿಂದ ನಿರಚಿಸಿದ ಸೃಷ್ಟಿಶೀಲತೆಯ ದರ್ಶನವೇ ಇವರ ಶಿಲ್ಪಗಳು. ಹಲವು ಮಾಧ್ಯಮಗಳಲ್ಲಿ ಶಿಲ್ಪಿಸುವ ಬಂಟನೂರ ನೋಡುಗರನ್ನೂ ದುಡಿಸಿಕೊಳ್ಳುವ ತಾತ್ವಿಕತೆಯ ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಪ್ರಕಾರದಲ್ಲಿ ವಿಶಿಷ್ಠ ರೀತಿಯಲ್ಲಿ ಕಾಣಿಸಿಕೊಂಡಿದ್ದು, ಆದರೂ ಅವರ ಅಭಿವ್ಯಕ್ತಿಯ ಅಜ್ಞಾಪ್ರವಾಹದಲ್ಲಿ ಮುರು ಆಯಾಮಗಳ ಶಿಲ್ಪ ಪ್ರಕಾರವೇ ಹೆಚ್ಚಿನ ತೀವ್ರತೆಯಿಂದ ಕಾಣಿಸಿಕೊಂಡಿದೆ ಎಂಬುದು ಗಮನಾರ್ಹ. ಪರಂಪರೆ, ಜಾನಪದ ಕಲಾ ಪ್ರಕಾರಗಳ ಅಧ್ಯಯನಶೀಲ ಬಂಟನೂರ ಸಮಕಾಲೀನ ಶಿಲ್ಪಪ್ರಕಾರದಲಿ ವ್ಯಾಕರಣವನ್ನು ಮೀರಿದ ಮತ್ತು ವಿಕೃತ ಸೌಂದರ್ಯ ಮೀಮಾಂಸೆಯ ಶಕ್ತಿಯುತ ಸೃಷ್ಟಿಗಳಿಂದಾಗಿ ಹೊಸ ಪೀಳಿಗೆಯ ಶಿಲ್ಪಿಗಳಲ್ಲಿ ವಿಶೇಷವಾಗಿ ಕಾಣುತ್ತಾರೆ.

ನಮ್ಮ ಸಂದರ್ಭದ ಉಸಿರುಗಟ್ಟಿಸುವ ಜನಮಾನಸದ ಬದುಕಿನ ಆಳದ ನೋಟಗಳ ದರ್ಶನದಂತೆ ಇವರ ಗ್ರಹಿಕೆಗಳು ಅಭಿವ್ಯಕ್ತಿಗೊಂಡಿವೆ. ನಿನ್ನೆ–ಇಂದು–ನಾಳೆಗಳ ಪ್ರಜ್ಞೆಗಳು ಕಲ್ಲು, ಮರ ಮತ್ತು ಲೋಹ ಅಲ್ಲದೆ ಮಿಶ್ರಮಾಧ್ಯಮದಲ್ಲಿ ಮೂಡಿಬಂದಿದೆ. ವಿಕೃತಿ ಸೌಂದರ್ಯ ಮೀಮಾಂಸೆಗೆ ಪೂರಕವಾಗಿ ಅವರ ಪಲ್ಲಟ, ಶೋಷಣೆ, ಉಸಿರುಗಟ್ಟಿಸುವ ವ್ಯವಸ್ಥೆ, ಆಕಾಶದ ರೊಟ್ಟಿ, ಅವಿವೇಕ, ಕಾಯದ ನೆಳಲು, ಉಯಿಲು, ಧೃವೀಕರಣ, ಬೀರಿದ ಭಾವಗಳು, Indian Brush for Multinational Company Shoes, ಶಿಲ್ಪಗಳೇ ಅಲ್ಲದೆ ಹಂಪಿ ವಿಶ್ವವಿದ್ಯಾಲಯದಲ್ಲಿ ಇವರ ಹಲವು ಶಿಲ್ಪಗಳಿವೆ. ಹತ್ತಿರದಲ್ಲೇ ಲಭ್ಯ, ಸರಳ ಮಾಧ್ಯಮಗಳಿಂದಲೇ ಗಹನವಾದ ಅನುಭವಲೋಕವನ್ನು ನೋಡುಗರ ಮುಂದೆ ಸೃಷ್ಟಿಸುವ ಬಂಟನೂರ ಅವರ ಶಿಲ್ಪಗಳಲ್ಲಿ ಸಾಮಾಜಿಕ ಬದ್ಧತೆಯ ಅನುಭವವಾಗುತ್ತದೆ. ವಿಕ್ಷಿಪ್ತ, ಆತಂಕಮಯ ಬುದಕನ್ನು ಅರಿಗಿಸಿಕೊಂಡು ಸಮಚಿತ್ತದಿಂದ ಅಭಿವ್ಯಕ್ತಿಸಿರುವ ಬಂಟನೂರರನ್ನು ಅವರ ಬಹುತೇಕ ಶಿಲ್ಪಗಳಲ್ಲಿ ನಾವು ಕಾಣುಬಹುದು.[೧]

ಡಾ. ಶಿವಾನಂದ ಬಂಟನೂರ ಅವರು ಬೆಂಗಳೂರಿನ ಕೆನ ಕಲಾಶಾಲೆಯಿಂದ ಚಿತ್ರಕಲೆಯಲ್ಲಿ ಎ.ಎಂ.ಜಿ.ಡಿ.ಆರ್ಟ್, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎ ಡ್ರಾಯಿಂಗ್ ಮತ್ತು ಪೇಂಟಿಂಗ್ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲದಿಂದ (೨೦೦೨) ಕರ್ನಾಟಕ ಜನಪದ ಶಿಲ್ಪಕಲೆ ಮಹಾಪ್ರಬಂಧಕ್ಕೆ ಪಿಹೆಚ್.ಡಿ ಪದವಿ ಪಡೆದಿದ್ದಾರೆ. ಮೈಸೂರಿನ ಕಾವಾ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಮುಂಬೈನ ಬೇಂದ್ರೆ ಆರ್ಟ್ ಫೌಂಡೇಷನ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಆಯೋಜಿಸಿದ ರಾಜ್ಯ/ರಾಷ್ಟ್ರಮಟ್ಟದ ಸಮಕಾಲೀನ ಚಿತ್ರ–ಶಿಲ್ಪಕಲಾ ಶಿಬಿರ, ಕಾರ್ಯಾಗಾರಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ.

---

1. ದೃಶ್ಯಕಲಾ ವಿಮರ್ಶಕ–ಕೆ.ವಿ.ಸುಬ್ರಹ್ಮಣ್ಯಂ ಅವರು ಡಾ.ಶಿವಾನಂದ ಬಂಟನೂರ ಅವರು ೨೦೧೬ರಲ್ಲಿ ಏರ್ಪಡಿಸಿದ ಶಿಲ್ಪಕಲಾ ಪ್ರದರ್ಶನಕ್ಕೆ ಬರೆದ ಕ್ಯಾಟಲಾಗ್ ಬರಹ.

ವಿಶ್ವೇಶ್ವರಯ್ಯ ಟಿ.ಎನ್

ವಿಶ್ವೇಶ್ವರಯ್ಯ ಟಿ.ಎನ. ಅವರು ೧೯೭೧ ರಲ್ಲಿ ತಳಸಮುದಾಯದ ಕುಟುಂಬದಲ್ಲಿ ಜನಿಸಿದ ೩ನೇ ತರಗತಿವರೆಗೆ ಮಾತ್ರ ಶಿಕ್ಷಣ ಪಡೆದಿದ್ದಾರೆ. ಇವರು ಸ್ವಯಂ ಪ್ರೇರಿತವಾಗಿ ಶಿಲ್ಪಕಲಾಕ್ಷೇತ್ರದಲ್ಲಿ ತೊಡಗಿಸಿಕೊಂಡು ವಿವಿಧ ಮಾಧ್ಯಮಗಳನ್ನು ಹಲವಾರು ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ.

ಮುಖ್ಯವಾಗಿ ಇವರು ಬೆಳಗಾಂವಿಯ ಸುವರ್ಣ ವಿಧಾನಸೌಧಕ್ಕಾಗಿ ಲೋಹ ಮಾಧ್ಯಮದಲಿ ರಾಷ್ಟ್ರಲಾಂಚನವನ್ನು ನಿರ್ಮಿಸಿಕೊಟ್ಟಿದ್ದಾರೆ. (೪.೫ ಅಡಿ ಎತ್ತರ, ೬೫೦ ಟನ್ ತೂಕ ಕಂಚಿನ ಮಾಧ್ಯಮ) ೧೧ ಅಡಿ ಎತ್ತರದ ಸ್ವಾಮಿ ವಿವೇಕಾನಂದ ಮುರ್ತಿ, ೨೨ ಅಡಿ ಎತ್ತರದ ಬಸವೇಶ್ವರ ಮೂರ್ತಿ, ಮತ್ತು ೫ ಅಡಿ ಎತ್ತರದ ಶ್ರೀ ಮಡಿವಾಳಯ್ಯ ಸ್ವಾಮಿಯ ಶಿಲ್ಪವನ್ನು ಇವರು ರಚಿಸಿದ್ದಾರೆ.

ವಿಶ್ವೇಶ್ವರಯ್ಯ ಟಿ.ಎನ್. ಅವರು ವಿವಿಧ ಮಾಧ್ಯಮದ ಶಿಲ್ಪಗಳನ್ನು ನಿರ್ಮಿಸಲು ವಿ.ಟಿ.ಎನ್ ಕ್ರಿಯೆಟಿವ್ ಆರ್ಟ್ ಸ್ಟುಡಿಯೋವನ್ನು ಕಲಬುರಗಿ-ಬೀದರ ಹೆದ್ದಾರಿಯ ಕಪನೂರ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಿದ್ದಾರೆ. ಈ ಸ್ಟುಡಿಯೋದಲ್ಲಿ, ಲೋಹ, ಫೈಬರ್ ಮತ್ತು ಪ್ಲಾಸ್ಟರ್ ಆಫ್ ಪ್ಯಾರೀಸನಲ್ಲಿ ಶಿಲ್ಪಗಳನ್ನು ನಿರ್ಮಿಸಲಾಗುತ್ತದೆ. ವಿಶ್ವೇಶ್ವರಯ್ಯನವರಿಗೆ ಚೈತನ್ಯಮಯ ಆರ್ಟ್ ಗ್ಯಾಲರಿಯ ಚೈತನ್ಯ ಶ್ರೀ ಪ್ರಶಸ್ತಿ, ಕಲಬುರಗಿ ಕಂಪು ಪ್ರಶಸ್ತಿ ಮತ್ತು ವಿವಿಧ ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಸನ್ಮಾನಿಸಿವೆ.

ಈಶ್ವರಪ್ಪ ಬಡಿಗೇರ:

ಇವರು ಶಿಲ್ಪಕಲಾವಿದರು. ಭವ್ಯ ಇತಿಹಾಸ ಹೊಂದಿರುವ ರಥಗಳ ನಿರ್ಮಾಣ. ಈಗ ಸಾಕಷ್ಟು ಜನಪ್ರಿಯವಾಗಿಲ್ಲ. ಆದರೂ ನಮ್ಮ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ, ರಥ ನಿರ್ಮಾಣ ಮಾಡುವುದರಲ್ಲೇ

ತಮ್ಮನ್ನು ಅರ್ಪಿಸಿಕೊಂಡರವರಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂರು ಗ್ರಾಮದ ಈಶ್ವರಪ್ಪ ಬಡಿಗೇರ ಅವರು ಒಬ್ಬರು. ಇವರು ಎಪ್ಪತ್ತೈದು ವರ್ಷಗಳ ಹಿಂದೆ ತಂದೆ ಮಾನಪ್ಪ ತಾಯಿ ಅಯ್ಯಮ್ಮನವರ ಪುತ್ರರಾಗಿ ಜನಿಸಿದರು.

ಶಿಲ್ಪಕಲಾವಿದರ ಮನೆತನದ ಈ ಕುಟುಂಬದಲ್ಲಿ ತಾತ ವೀರಪ್ಪನವರು ರಥ ನಿರ್ಮಿಸುವುದರಲ್ಲಿ ಪರಿಣಿತಿ ಪಡೆದಿದ್ದರು. ಇವರ ಬಳಿ ಈಶ್ವರಪ್ಪನವರು ಪರಮ ಶಿಷ್ಯರಾಗಿ ರಥ ನಿರ್ಮಿಸಲು ಪ್ರಾರಂಭಿಸಿದ್ದು, ೧೯೪೮ರಿಂದ ಇವರು ತಯಾರಿಸಿದ ಪ್ರಥಮ ರಥ ರಾಯಚೂರು ಜಿಲ್ಲೆಯ ರಂಗನಾಥಸ್ವಾಮಿಯ ರಥ. ನಂತರ ೧೯೬೦ರಲ್ಲಿ ಮಾನ್ವಿ ತಾಲೂಕು ಅಮೀನಗಡದ ಹುಚ್ಚಮ್ಮನ ರಥ, ೧೯೬೩ರಲ್ಲಿ ಆಂಧ್ರಪ್ರದೇಶದ ಆದವಾನಿ ತಾಲ್ಲೂಕು ಬಾವೂರಿನ ಶ್ರೀ ಹುಚ್ಚ ಬುಡ್ಡಪ್ಪನ ರಥ, ೧೯೭೭ರಲ್ಲಿ ಮಾನ್ವಿಯ ನಾರಾಯಣ ತೀರ್ಥರಥ, ೧೯೭೯ರಲ್ಲಿ ಬಳ್ಳಾರಿಯ ರಾಘವೇಂದ್ರ ಸ್ವಾಮಿಗಳ ರಥ ಮುಂತಾದವು ಇವರ ಪ್ರತಿಭೆ, ಕುಶಲಕಲಾ ನೈಪುಣ್ಯತೆಯನ್ನು ಪ್ರತಿಬಿಂಬಿಸುತ್ತದೆ.

ಇವರು ಅನೇಕ ಹಳೆಯ ರಥಗಳನ್ನು ಪುನರುಜ್ಜೀವನಗೊಳಿಸಿದ್ದಾರೆ. ಅವುಗಳಲ್ಲಿ ಬಿಜಾಪುರ ತಾಲೂಕಿನ ಗಲಗರಿಯ ಲಕ್ಷ್ಮೀನರಸಿಂಹಸ್ವಾಮಿ ರಥ, ಕಲಬುರ್ಗಿ ಜಿಲ್ಲೆಯ ಸನ್ನತಿಯ ಶ್ರೀ ಚಂದ್ರಲಾ ಪರಿಮೇಶ್ವರಿ ರಥ, ರಾಯಚೂರಿನ ಲಿಂಗಸೂರಿನ ಶ್ರೀ ಕುಪ್ಪೆ ಭೀಮಸ್ವಾಮಿಯ ರಥಗಳು ಮುಖ್ಯವಾದವು. ಕೇವಲ ರಥಶಿಲ್ಪ ನಿರ್ಮಾಣದಲ್ಲೇ ತೊಡಗದೆ ಮರದ ವಿಗ್ರಹಗಳನ್ನು ಕೂಡ, ದೇವಾಲಯಗಳಿಗೆ ರಚಿಸಿಕೊಟ್ಟಿದ್ದಾರೆ. ಅವುಗಳಲ್ಲಿ ರಾಮ, ಲಕ್ಷ್ಮಣ, ಸೀತೆ, ಲಕ್ಷ್ಮೀ, ಸರಸ್ವತಿ, ಚಂದ್ರಲಾ ಪರಮೇಶ್ವರಿ ಮುಂತಾದ ವಿಗ್ರಹಗಳನ್ನು ರಚಿಸಿದ್ದಾರೆ.

ಇವರು ದೇವರ ಪಲ್ಲಕ್ಕಿಗಳನ್ನು ನಿರ್ಮಿಸುವುದರಲ್ಲೂ ಸಿದ್ಧಹಸ್ತರಾಗಿದ್ದು, ಇವರು ತಯಾರಿಸಿದ ಪಲ್ಲಕ್ಕಿಗಳು ಬಾಗಲಕೋಟೆ, ಲಿಂಗಸೂಗುರು ಮತ್ತು ಬಳ್ಳಾರಿಯ ಶ್ರೀ ರಾಘವೇಂದ್ರ ಸ್ವಾಮೀಯ ದೇವಾಲಯಗಳಲ್ಲಿವೆ. ರಥಗಳ ನಿರ್ಮಾಣದಲ್ಲಿ ತೊಡಗಿ, ಈ ರಥವನ್ನು

ರಥೋತ್ಸವದಲ್ಲಿ ಬಳಸುವುದರಿಂದ ಎಲ್ಲ ಧರ್ಮದವರನ್ನು ಸಮನಾಗಿ, ಜಾತಿ ಜನಾಂಗದವರನ್ನೂ ಆಕರ್ಷಿಸಿ ಭೇದ ಭಾವವನ್ನು ದೂರಮಾಡಿ ಸರ್ವರಲ್ಲಿಯೂ ಐಕ್ಯತೆಯ ತತ್ವವನ್ನು ಚಿತ್ತರಿಸುವ ರಥಗಳನ್ನು ರಚಿಸುತ್ತಿರುವ ಈಶ್ವರಪ್ಪ ಬಡಿಗೇರರ ಸಾಧನೆ ಮೆಚ್ಚುವಂತಹದು. ರಥಗಳ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರಿಗೆ ೧೯೯೯ನೇ ಸಾಲಿನ ಕರ್ನಾಟಕ ಸರ್ಕಾರವು ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ನೀಡಿ ಗೌರವಿಸಿದೆ.

ತುಕಾರಾಮ ಬಡಿಗೇರ್:

ತುಕಾರಾಮ ಬಡಿಗೇರ್ ರಾಯಚೂರು ಜಿಲ್ಲೆ ಸಿಂಧನೂರಿನವರು. ಈ ಶಿಲ್ಪಕಲಾವಿದರ ವಾಸ್ತುಶಿಲ್ಪ ಹಾಗೂ ಸ್ಮರಣಶಕ್ತಿ ಕಲ್ಪನಾ ಶಕ್ತಿ ನಿಜಕ್ಕೂ ಅಧ್ಭುತ. ಇವರು ಕೆತ್ತಿದ ಕಲಾಕೃತಿಗಳಲ್ಲಿ ನೆಹರು, ಸುಭಾಶ್ಚಂದ್ರ ಬೋಸ್, ಮಹಾತ್ಮ ಗಾಂಧೀ ಮುಂತಾದ ನಾಯಕರು ಇವರ ಕೈ ಚಳಕದಲ್ಲಿ ರೂಪ ಪಡೆದಿದ್ದಾರೆ. ಚಿತ್ರಕಲಾ ಶಿಕ್ಷಕರಾಗಿರುವ ಇವರು, ತಮ್ಮ ೭ ನೇಯ ವರ್ಷದಲ್ಲಿಯೇ ಕಲೆಯ ಬಗ್ಗೆ ಆಸಕ್ತಿ ಹೊಂದಿದವರು.

ವೃತ್ತಿಯಿಂದ ಬಡಿಗೇರರಾಗಿರುವ ಇವರು, ಹೊಟ್ಟೆಪಾಡಿಗಾಗಿ ತಂದೆ ಮಾಡುತ್ತಿದ್ದ ಮಣ್ಣಿನ ಗಣೇಶನಲ್ಲಿ ಇವರು ಕಲೆಯನ್ನು ಗುರುತಿಸಿಕೊಂಡು ಪ್ರಾರಂಭದಲ್ಲಿ ಚಾಕಪೀಸ್ ಹಾಗೂ ಸಾಬೂನಿನಲ್ಲಿ ಸುಂದರ ಮೂರ್ತಿಗಳನ್ನು ಹಾಗೂ ಹೂಗಳನ್ನು ರಚಿಸಿದ್ದಾರೆ. ನಂತರದಲ್ಲಿ ಶಾಸ್ತ್ರೋಕ್ತವಾಗಿ ಶಿಲ್ಪಕಲಾ ಶಿಕ್ಷಣ ಪಡೆದುಕೊಂಡು, ಉತ್ತಮ ಶಿಲ್ಪಿಯಾಗಿ ಹೊರ ಹೊಮ್ಮಿದ್ದಾರೆ. ಇಲ್ಲಿಯವರೆಗೆ ಒಂದು ನೂರಾ ಐವತ್ತಕ್ಕೂ ಹೆಚ್ಚು ಮೂರ್ತಿಗಳನ್ನು ನಿರ್ಮಿಸಿದ್ದು, ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ಇವರ ಮೂರ್ತಿಗಳು ಪ್ರತಿಷ್ಠಾಪಿತಗೊಂಡಿವೆ. ಅನೇಕ ಕಡೆ ಇವರು ನಿರ್ಮಿಸಿದ ದ್ವಾರ ಬಾಗಿಲುಗಳು ಕೂಡ ರಾರಾಜಿಸುತ್ತಿವೆ. ೧೮ ಅಡಿ ಎತ್ತರದ ದ್ವಾರಬಾಗಿಲು ನಿರ್ಮಿಸಿದ ಕೀರ್ತಿಯೂ ಸಹ ಇವರಿಗೆ ಸಲ್ಲುತ್ತದೆ.

ವಿರೇಂದ್ರ ಶಾಹ :

ಮೂಲತಃ ಚಿತ್ರಕಲಾವಿದರಾದ ವಿರೇಂದ್ರ ಶಾಹ ಅರು ಕಲಬುರಗಿಯಲ್ಲಿ ಹಲವಾರು ಹೋಟೆಲ್ ಮತ್ತು ಮನೆಗಳಿಗೆ ಸೃಜನಶೀಲ ಭಿತ್ತಿಶಿಲ್ಪಗಳನ್ನು ರಚಿಸಿದ್ದಾರೆ. ಕಲಬುರಗಿಯ ಶರಣಬಸವೇಶ್ವರ ಕೆರೆ, ಕ್ರಿಸ್ಟೆಲ್ ಪ್ಯಾಲೆಸ್ ಹೋಟೆಲ್, ಹೇರಿಟೇಜ್ ಇನ್ ಹೋಟೆಲ್‌ಗಳಲ್ಲಿ ಇವರು ಭಿತ್ತಿ ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಇವರು ಗುಲಬರ್ಗಾ ವಿಶ್ವವಿದ್ಯಾಲಯದ ಬಸ್ ನಿಲ್ದಾಣದಲ್ಲಿ ಮಿಶ್ರ ಮಾಧ್ಯಮದಲ್ಲಿ ರಚಿಸಿದ ಭಿತ್ತಿ ಶಿಲ್ಪಗಳು ಹೆಚ್ಚು ಸೃಜನಶೀಲವಾಗಿವೆ. ಇವರು ಸಿಮೆಂಟ್, ಪೈಬರ್ ಮತ್ತು ಮಿಶ್ರ ಮಾಧ್ಯಮಗಳಲ್ಲಿ ಭಿತ್ತಿಶಿಲ್ಪಗಳನ್ನು ಹೆಚ್ಚಾಗಿ ನಿರ್ಮಿಸುತ್ತಾರೆ. ಕರ್ನಾಟಕವಲ್ಲದೇ ಹೈದ್ರಾಬಾದನಲ್ಲಿಯೂ ಸಾಕಷ್ಟು ಭಿತ್ತಿ ಶಿಲ್ಪಗಳನ್ನು ರಚಿಸಿದ್ದಾರೆ.

ಎಸ್.ಎಸ್.ಸಿಂಪಿ:

ಕಲಬುರ್ಗಿಯ ಹಿರಿಯ ಚಿತ್ರಕಲಾವಿದ ಶಿಲ್ಪಕಲಾವಿದ ಎಸ್.ಎಸ್.ಸಿಂಪಿ ಅವರು ಸುಮಾರು ಐದು ದಶಕಗಳಿಂದ ಭಿತ್ತಿಶಿಲ್ಪ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು, ಪ್ಲಾಸ್ಟರ್ ಆಫ್ ಪ್ಯಾರಿಸ್, ಫೈಬರ್, ಶಿಲೆ, ಮತ್ತು ಸಿಮೆಂಟ್ ಮಾಧ್ಯಮಗಳಲ್ಲಿ ಬೃಹತ್ ಗಾತ್ರದಲ್ಲಿ ಹಲವಾರು ಭಿತ್ತಿ ಶಿಲ್ಪಗಳನ್ನು ರಚಿಸಿದ್ದಾರೆ. ಮಳಖೇಡದ ರಾಜಶ್ರೀ ಸಿಮೆಂಟ್ ಫ್ಯಾಕ್ಟರಿ, ಕಲಬುರಗಿಯ ಗ್ರಾಂಡ್ ಹೋಟೆಲ್, ಮಹಾಲಕ್ಷ್ಮೀ ಜ್ಯುವಲರ್ಸ್ ಮುಂತಾದ ಕಡೆ ಇವರು ಅನೇಕ ಭಿತ್ತಿಶಿಲ್ಪಗಳನ್ನು ರಚಿಸಿದ್ದಾರೆ.

ಇವರು ಗುಲಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲಾ ಅಧ್ಯಯನ ವಿಭಾಗ ಏರ್ಪಡಿಸಿದ ಭಿತ್ತಿಶಿಲ್ಪ ರಚನಾ ಕಾರ್ಯಗಾರದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರು ಯಾವುದೇ ನೌಕರಿ ಮತ್ತು ಇತರೆ ಕೆಲಸಗಳನ್ನು ಮಾಡದೇ ಕೇವಲ ಭಿತ್ತಿಶಿಲ್ಪಗಳ ರಚನೆಗಳಿಂದಲೇ ಜೀವನ ನಿರ್ವಹಿಸುತ್ತಿರುವುದು ಯುವ ಕಲಾವಿದರಿಗೆ ಮಾದರಿಯಾಗಿದೆ.

ಈರಣ್ಣ ಪಿ.ಕಂಬಾರ:

ಪ್ರತಿಭಾವಂತ ಚಿತ್ರಶಿಲ್ಪಕಲಾವಿದ, ಸಮಕಾಲೀನ ಶಿಲ್ಪಕಲೆಯಲ್ಲಿ ತಮ್ಮ ಅಪೂರ್ವ ಸಾಂಪ್ರದಾಯಿಕ ಚಿತ್ರ ಶಿಲ್ಪಕಲೆಯಿಂದ ತೀವ್ರ ಗಮನ ಸೆಳೆದಿರುವ ಶಿಲ್ಪಿ ಈರಣ್ಣ ಪಿ.ಕಂಬಾರ. ಇವರು ಮೂಲತಃ ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಬಟಗೇರ್ ಗ್ರಾಮದವರು. ಶಿಲ್ಪಕಲೆ ಪಾರಂಪರಾನುಗತವಾಗಿ ಬಂದಿದುದರಿಂದ ಇವರಿಗೆ ಬಾಲ್ಯದಲ್ಲಿಯೇ ಕಲೆಯ ಅಭಿರುಚಿ ಬೆಳೆಯಿತು.

ಇವರು ಅನೇಕ ಚಿತ್ರಕಲಾ ಮತ್ತ ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡಿದ್ದಾರೆ. ಗುಲಬರ್ಗಾದ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಬೆಂಗಳೂರಿನ ಚಿತ್ರಕಲಾ ಪರಿಷತ್, ಬೆಂಗಳೂರಿನ ಕರ್ನಾಟಕ ಶಿಲ್ಪಿಕಲಾ ಅಕಾಡೆಮಿ, ಧಾರವಾಡದ ಸಾಂಪ್ರದಾಯಿಕ ಶಿಲ್ಪಕಲಾ ಶಿಬಿರ, ಸುರಪುರದ ಸಾಂಪ್ರದಾಯಿಕ ಶಿಲ್ಪಕಲಾ, ಕಲಬುರಗಿ ಕಂಪುವಿನ ಶಿಲ್ಪಕಲಾ ಶಿಬಿರ, ಬೆಳಗಾವಿಯ ವಿಶ್ವಕನ್ನಡ ಸಮ್ಮೇಳದನದ ಶಿಲ್ಪಕಲಾ ಶಿಬಿರ ಹೀಗೆ ಹಲವಾರು ಶಿಬಿರಗಳಲ್ಲಿ ಇವರು ಭಾಗವಹಿಸಿ ತಮ್ಮ ಕ್ರಿಯಾಶೀಲತೆಯನ್ನು ಪ್ರದರ್ಶಿಸಿದ್ದಾರೆ.

ಇವರು ಶಿಲ್ಪಕಲೆಯನ್ನು ತಮ್ಮ ವೃತ್ತಿ ಪ್ರವೃತಿಯನ್ನಾಗಿಸಿಕೊಂಡಿರುವರು. ಮನೆಗಳ ದ್ವಾರಬಾಗಿಲ, ಹೊಸ್ತಿಲು, ಪಟ್ಟುಗಳಲ್ಲಿ ಸುಂದರವಾದ ಕುಸುರಿ ಕಲೆಯನ್ನಲ್ಲದೇ, ಜಾನಪದ, ಪೌರಾಣಿಕ ವಿಷಯಗಳ ಸುಂದರ, ಆಕರ್ಷಕ ಕೆತ್ತನೆಯಿಂದ ಬಹು ಬೇಡಿಕೆಯ ಕಾಷ್ಠ ಶಿಲ್ಪಿಗಳಾಗಿದ್ದಾರೆ. ಈ ಪ್ರಕಾರಗಳಲ್ಲಿ ಕಳಸಹೊತ್ತ ಮದನಿಕೆ; ಶಕುಂತಲಾ ಪತ್ರಲೇಖನ, ಶ್ರೀ ಗಣೇಶ, ನಾಟ್ಯ ಸರಸ್ವತಿ, ಧನಲಕ್ಷ್ಮೀ ಮುಂತಾದ ಕೃತಿಗಳು.

ಇವರು ೧೯೮೫ ರಿಂದ ಮೈಸೂರು ದಸರಾ ಉತ್ಸವಕ್ಕಾಗಿ ಕಲಬುರಗಿಯನ್ನು ಪ್ರತಿನಿಧಿಸುವ ಸ್ತಬ್ಧಚಿತ್ರ ಪ್ರದರ್ಶನಗಳಲ್ಲಿ ತೊಡಗಿಸಿಕೊಂಡು ಕ್ರಿಯಾಶೀಲತೆಯನ್ನು ಮೆರೆಯುತ್ತಿದ್ದಾರೆ. ಜಗದ್ವಿಖ್ಯಾತ ಚಿತ್ರಕಲಾವಿದ ಕಲಬುರಗಿಯ ಡಾ.ಎಸ್.ಎಂ. ಪಂಡಿತ ಹಾಗೂ

ಧನಂಜಯ ಶಿಲ್ಪಿ ಅವರಿಂದ ತುಂಬಾ ಪ್ರಭಾವಿತರಾಗಿರುವ ಇವರು ತಮಗೆ ಅವರು ಸ್ಫೂರ್ತಿಯನ್ನು ಪ್ರೇರಣೆಯನ್ನು ನೀಡಿದ್ದಾರೆ ಎಂದು ಸ್ಮರಿಸುತ್ತಾರೆ.

ರುದ್ರಯ್ಯ ಗಣಾಚಾರಿ:

ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲೂಕಿನ ಲಾಲೂರೆ ಆಡೂರ ಎಂಬ ಪುಟ್ಟಗ್ರಾಮದಲ್ಲಿ ಜನಿಸಿದ ರುದ್ರಯ್ಯ ವೀರಭದ್ರಯ್ಯ ಗಣಾಚಾರಿ ಶಿಲ್ಪಕಲಾ ಪರಂಪರೆಯಲ್ಲಿ ಮುಂದುವರೆಸಿಕೊಂಡು ತಾಲೂಕಿನಲ್ಲಿ ದೇವರ ಮೂರ್ತಿಗಳನ್ನು ಕೆತ್ತುವ ಪ್ರಸಿದ್ಧ ಶಿಲ್ಪಕಲಾವಿದ. ಇವರ ಕಲೆಗಾರಿಕೆಯಲ್ಲಿ ಸಿದ್ಧವಾದ ಸುಂದರ ದೇವರ ಮೂರ್ತಿಗಳು ಪ್ರತಿಷ್ಠಾಪನೆಗೊಂಡು ಇಂದು ನಿತ್ಯ ಪೂಜೆಗೊಳ್ಳುತ್ತವೆ.

ಹಂಪಿ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷ, ಕುವೆಂಪು, ವಿಶ್ವವಿದ್ಯಾಲಯದಲ್ಲಿ ಎರಡು ವರ್ಷ ಶಿಲ್ಪಕಲೆಯನ್ನು ಕಲಿತು, ಈಗ ತಮ್ಮ ಸ್ವಂತ ಊರಲ್ಲಿಯೇ ಶ್ರೀ ವೀರಭದ್ರೇಶ್ವರ ಶಿಲ್ಪಕಲಾ ಮಂದಿರ ನಿರ್ಮಿಸಿಕೊಂಡಿದ್ದಾರೆ. ಇವರು ಕಲ್ಲಿನಲ್ಲಿ ಅಷ್ಟೇ ಅಲ್ಲ, ಸಾಬೂನಿನಲ್ಲಿ ಚಿಕ್ಕ ಚಿಕ್ಕ ದೇವರ ಮೂರ್ತಿಗಳನ್ನು ಮಾಡುತ್ತಾರೆ. ಕಟ್ಟಿಗೆಯಲ್ಲಿಯೂ ಅಂದವಾದ ಕುಸುರಿ ಕೆತ್ತನೆ ಮಾಡುತ್ತಾರೆ.

ಕಿನ್ನಾಳ ಕಲೆಯ ತಯಾರಿಕೆಯಲ್ಲಿ ಇವರು ಸಿದ್ಧಹಸ್ತರೆಂದು ಪ್ರಸಿದ್ಧರಾಗಿದ್ದಾರೆ. ಈ ಕಿನ್ನಾಳ ಕಲೆಯ ಚೌಕಿಯ ತಯಾರಿಕೆಗಾಗಿಯೇ ಕರ್ನಾಟಕ ರಾಜ್ಯ ಕರಕುಶಲ ನಿಗಮ ೧೯೮೫ರಲ್ಲಿ ಇವರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ಹಲವಾರು ಪ್ರದರ್ಶನಗಳಲ್ಲಿ ಭಾವಹಿಸಿರುವ ಇವರು ೧೯೮೬ರಲ್ಲಿ ರಾಜ್ಯ ಮಟ್ಟದ ಕಲಾವಿದರ ಆಯ್ಕೆ ಸಮಿತಿಯಲ್ಲಿ ಒಬ್ಬರಾಗಿದ್ದರು.

ಕಿನ್ನಾಳದಲ್ಲಿಯೇ ೧೯೨೦ರಲ್ಲಿ ಜನಿಸಿದ ಇವರು ವಿದ್ಯಾಭ್ಯಾಸ ನಾಲ್ಕನೆಯ ತರಗತಿಗೆ ಮುಗಿಯಿತಾದರೂ ಕಲಾಮಾರ್ಗದರ್ಶಕರಾಗಲು ಅಡ್ಡಿಯಾಗಲಿಲ್ಲ. ೧೯೮೭-೮೮ರಲ್ಲಿ ಕಿನ್ನಾಳದ

ಮಹಿಳಾ ಕರಕುಶಲ ತರಬೇತಿ ಕೇಂದ್ರದಲ್ಲಿ ಪರಿಣಿತ ಕರಕುಶಲಗಾರರಾಗಿ ಸೇವೆ ಸಲ್ಲಿಸಿದರು. 'ಸಂಡೂರು ಕುಶಲಕಲಾ ಕೇಂದ್ರ'ದಲ್ಲಿಯ ಕಲಾ ತರಬೇತಿ ವಿಭಾಗದಲ್ಲಿ ಪರಿಣಿತ ಕರಕುಶಲಗಾರರನ್ನಾಗಿ ಶ್ರೀಯುತರನ್ನು ೧೯೯೦ರಲ್ಲಿ ನೇಮಿಸಿದೆ. ಹಲವು ಸಮಾರಂಭಗಳಲ್ಲಿ ಸನ್ಮಾನಿತರಾದ ಇವರನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೯೧ರ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.

ವೆಂಕೋಬಪ್ಪ ಕೃಷ್ಣಪ್ಪ ಚಿತ್ರಗಾರ:

ಇವರು ಸಾಂಪ್ರದಾಯಿಕ ಕಲೆಯ ಹಿನ್ನೆಲೆಯಿಂದ ಬಂದವರು. ಅಜ್ಜ ಯಂಕಪ್ಪನವರು ಪಳಗಿದ, ಅನುಭವಶಾಲಿಯಾದ ಕಲಾವಿದರಾಗಿದ್ದರು. ಇವರ ತಂದೆಯವರಾದ ಕೃಷ್ಣಪ್ಪ ಯಂಕಪ್ಪ ಚಿತ್ರಗಾರರು ಸಹ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದು, ಬಾಲ್ಯದಿಂದಲೇ ಅವರಿಗೆ ಯೋಗ್ಯ ಮಾರ್ಗದರ್ಶನ ನೀಡಿ ಕಲಾವಿದನನ್ನಾಗಿ ರೂಪಿಸಿದ್ದಾರೆ.

ಹಲವು ಬಣ್ಣಗಳಿಂದ ಅಲಂಕೃತವಾದ, ಸೂಕ್ಷ್ಮವಾದ ಕುಸುರಿ ಕೆಲಸ ಹೊಂದಿರುವ ವಿವಿಧ ಆಕಾರದ, ಹೊಳಪಾದ, ನುಣುಪಾದ ಮೇಲ್ಮೈಯುಳ್ಳ ಕಿನ್ನಾಳದ ಮರದ ಉಪಕರಣಗಳು ಯಾರನ್ನಾದರೂ, ಆಕರ್ಷಿಸದೇ ಬಿಡದು, ವಿಶೇಷವಾಗಿ ತೊಟ್ಟಿಲುಗಳು, ಕಾಲುಮಣೆಗಳು, ಚೌಕಿಗಳು ಜನಾದರಣೆಯನ್ನು ಪಡೆದಿವೆ. ಈ ಬಗೆಯ ಕಲೆಯಲ್ಲಿ ಸಿದ್ಧಹಸ್ತರಾದ ಇವರು ಕೀಲದ ಗೌರಿ, ತೂಗುವ ಗೌರಿ, ಶಿವ-ಪಾರ್ವತಿ, ಗ್ರಾಮದೇವತೆಗಳು ಹಾಗೂ ದೇವತಾಕಾರ್ಯಕ್ಕೆ ಬೇಕಾಗುವ ಛತ್ರ, ಚಾಮರ, ಪಲ್ಲಕ್ಕಿ, ನಂದಿ, ಲಕ್ಷ್ಮಿ ಇತ್ಯಾದಿ ಅನೇಕ ಮೂರ್ತಿಗಳನ್ನು ನೂರಾರ ಸಂಖ್ಯೆಯಲ್ಲಿ ರೂಪಿಸಿದ್ದಾರೆ. ವಿವಿಧ ಆಕಾರ ಹಾಗೂ ಕೋನಗಳಲ್ಲಿ ಕಟ್ಟಿಗೆಯಲ್ಲಿ ತಯಾರಿಸಿದ, ಲಜಾವರ ಎಂಬ ಮಿನುಗುವ ಚಿನ್ನದ ಹೊಳಪುಳ್ಳ ಬಣ್ಣಗಳನ್ನು ಹೊಂದಿರುವ ಚೌಕಿ ಜನಪ್ರಿಯವಾಗಿವೆ. ಇವರು ಕಾಷ್ಠ ಮಾಧ್ಯಮವಲ್ಲದೇ ಸಿಮೆಂಟ್, ಕಲ್ಲು ಮುಂತಾದ ಮಾಧ್ಯಮಗಳಲ್ಲೂ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ.

ಡಾ. ಪರಶುರಾಮ.ಪಿ

ಡಾ. ಪರಶುರಾಮ ಪಿ. ಅವರು ಕುವೆಂಪು ವಿಶ್ವವಿದ್ಯಾಲದಿಂದ ದೃಶ್ಯಕಲೆಯಲ್ಲಿ ಸ್ನಾತಕ ಪದವಿ, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ (2007) ಮತ್ತು 'ಕರ್ನಾಟಕ ಚಿತ್ರಕಲಾ ಗ್ಯಾಲರಿಗಳು' (2013) ಎಂಬ ಮಹಾ ಪ್ರಬಂಧಕ್ಕೆ ಪಿಹೆಚ್.ಡಿ ಪದವಿ ಪಡೆದಿದ್ದಾರೆ.

ಚಿತ್ರ-ಶಿಲ್ಪಗಳ ಕುರಿತು ಐವತ್ತಕ್ಕೂ ಹೆಚ್ಚು ವಿಮರ್ಶಾತ್ಮಕ ಮತ್ತು ಸಂಶೋಧನಾ ಲೇಖನಗಳು ನಾಡಿನ ವಿವಿಧ ಪತ್ರಿಕೆ ಮತ್ತು ವಾರ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಹಲವಾರು ವಿಚಾರ ಸಂಕೀರ್ಣಗಳಲ್ಲಿ ಪ್ರೌಢ ಪ್ರಬಂಧಗಳ ಮಂಡನೆ, ಕನ್ನಡದ ಹಲವಾರು ಮಹತ್ವದ ರಂಗ ಪ್ರಯೋಗಗಳಿಗೆ ರಂಗ ವಿನ್ಯಾಸ, ರಂಗಪರಿಕರ ಮತ್ತು ಭಿತ್ತಿ ಪತ್ರಗಳ ನಿರ್ಮಾಣ, ಆಲಮಟ್ಟಿಯ ಶಿಲ್ಪವನ, ಕೆಸರಟಗಿಯ ಉದ್ಯಾನವನ, ಗುಲಬರ್ಗಾದ ಮಹಾನಗರ ಪಾಲಿಕೆಯ ಉದ್ಯಾನವನ, ಶಿವಮೊಗ್ಗದ ಮಹಾತ್ಮ ಗಾಂಧಿ ಉದ್ಯಾನವನ, ತುಮಕೂರಿನ ಅಮ್ಮಾಣಿ ಕೆರೆಯ ಉದ್ಯಾನವನ, ಬಸವಕಲ್ಯಾಣದ ಬಂದವರ ಓಣಿಯ ಉದ್ಯಾನವನ ಮತ್ತು ಜೆ.ಡಿ.ಪಿ ಇಕೋ ಗಾರ್ಡನಗಳಲ್ಲಿ ಸಿಮೆಂಟ್ ಮತ್ತು ಫೈಬರ್ ಮಾಧ್ಯಮದ ಶಿಲ್ಪ ಮತ್ತು ಭಿತ್ತಿ ಚಿತ್ರ (ಮ್ಯೂರಲ್)ಗಳನ್ನು ನಿರ್ಮಿಸಿದ್ದಾರೆ. ಕರ್ನಾಟಕದ ಶಿಲ್ಪಕಲಾ ಅಕಾಡೆಮಿಯ 2014ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ ರಾಜ್ಯಮಟ್ಟದ ಭಿತ್ತಿಶಿಲ್ಪ ರಚನಾ ಶಿಬರದಲ್ಲಿ ಭಾಗವಹಿಸಿದ್ದಾರೆ. ಪ್ರಸ್ತುತ (2011)ರಿಂದ ಗುಲಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೃಶ್ಯ ಬೆಳಕು ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಪ್ರಭುಲಿಂಗಪ್ಪ

ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ಮಾಳನೂರು ಗ್ರಾಮದವರಾದ ಪ್ರಭುಲಿಂಗಪ್ಪನವರು 25-05-1954ರಲ್ಲಿ ಜನಿಸಿರುತ್ತಾರೆ. ನಾಲ್ಕನೇ ತರಗತಿವರೆಗೆ ಮಾತ್ರ ಓದಿರುವ ಇವರು ಕಾಷ್ಠ ಮಾದ್ಯಮದಲ್ಲಿ ಹೆಚ್ಚಿನ ಪರಿಣಿತಿ ಹೊಂದಿದ್ದಾರೆ. ಕೋಣ (ಸಿರಸಿ)

ಗ್ರಾಮದೇವತೆ (ಪರಸನಹಳ್ಳಿ, ಹುಣಸಿಹಳ್ಳಿ, ಗುಳಬಾಳ, ಜಂಬಲದಿನ್ನಿ, ಮಾರಲಬಾವಿ, ಸಾಲೋಡಗಿ, ಮಿಣಜಿಗಿ) ಮಾರಮ್ಮದೇವಿ, ದುರ್ಗಾದೇವಿ (ಬಾಚಿಮಟ್ಟಿ) ಮರಗಮ್ಮದೇವಿ (ಲಿಂಗದಹಳ್ಳಿ) ಕೆಂಚಮ್ಮ ದೇವಿ ಮೂರ್ತಿ (ಕೋಳಿಯಾಳ, ನಗನೂರ) ಮುಂತಾದ ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ.

ನಿಂಗಯ್ಯ ಎಂ ಗಣಾಚಾರಿ

ನಿಂಗಯ್ಯ ಎಂ. ಗಣಾಚಾರಿ ಅವರು ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ವಜ್ಜಲ ಗ್ರಾಮದಲ್ಲಿ ದಿನಾಂಕ: 22.01.1956ರಂದು ಜನಿಸಿರುತ್ತಾರೆ. ಕೇವಲ ಎಸ್.ಎಸ್.ಎಲ್.ಸಿವರೆಗೆ ಮಾತ್ರ ಓದಿರುವ ಇವರು ಶಿಲಾ ಮಾಧ್ಯಮದಲ್ಲಿ ಸಾಕಷ್ಟು ಶಿಲ್ಪ ಕಲಾಕೃತಿಗಳನ್ನು ರಚಿಸಿದ್ದಾರೆ.

ದುರ್ಗಾಮಾತೆ (ವಜ್ಜಲ) ಶ್ರೀ ವೀರಭದ್ರೇಶ್ವರ (ಕೋನಾಳ) ಮಲ್ಲಯ್ಯ ತಾತ (ದೇವಪುರ) ಶ್ರೀ ವೆಂಕಟೇಶ್ವರ (ಕೋಳೂರ ತಾಂಡಾ), ಬೀರಲಿಂಗೇಶ್ವರ ದೇವಾಲಯದ ಬಾಗಿಲು (ವಜ್ಜಲ) ಬಸವೇಶ್ವರ ವಚನ ಶಿಲಾ ಮಂಟಪ (ಇಂಗಳೇಶ್ವರ) ಹೀಗೆ ಶಿಲೆಯಲ್ಲಿ ಹಲವಾರು ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ.

ಶ್ರೀ ರೇವಣಸಿದ್ದಯ್ಯ ಸ್ಮಾರಕ ಸಾಹಿತ್ಯ ಪ್ರತಿಷ್ಠಾನ ಕಲ್ಲದೇವನಹಳ್ಳಿ ತಿಂಥಣಿ ದಾಸೋಹ ಪುರಸ್ಕಾರ (2004) ಆಧ್ಯಾತ್ಮ ಕಲಾ ಸಂಗೀತ ಸಾಹಿತ್ಯ ಪ್ರತಿಷ್ಠನ ಕೊಡೆಕಲ್ ಪ್ರಶಸ್ತಿ (2007) ಹೀಗೆ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ. ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕರ್ಮವೀರ ಪತ್ರಿಕೆಗಳಲ್ಲಿ ಇವರ ಕುರಿತು ಲೇಖನಗಳು ಪ್ರಕಟಗೊಂಡಿವೆ.

ಸುರೇಂದ್ರ ಕೆ.ವಿಶ್ವಕರ್ಮ

ಸುರೇಂದ್ರ ಕೆ.ವಿಶ್ವಕರ್ಮ ಅವರು ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಕೊಳ್ಳೂರು ಗ್ರಾಮದಲ್ಲಿ ದಿನಾಂಕ: 28.06.1969 ರಲ್ಲಿ ಜನಿಸುತ್ತಾರೆ. ಶಿಲ್ಪಕಲೆಯಲ್ಲಿ ಎಂ.ವಿ.ಎ

ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದಾರೆ. ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ಪರಿಣಿತಿ ಹೊಂದಿರುವ ಇವರ ಅನೇಕ ಶಿಲ್ಪಕಲಾಕೃತಿಗಳು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಚಾಲುಕ್ಯ ಉತ್ಸವ, ಹಂಪಿ ಉತ್ಸವ, ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬ ಮುಂತಾದ ನಾಡಿನ ಪ್ರತಿಷ್ಠಿತ ಶಿಲ್ಪಕಲಾ ಪ್ರದರ್ಶನಗಳಲ್ಲಿ ಜನಮೆಚ್ಚುಗೆಯನ್ನು ಗಳಿಸಿವೆ.

2007ರ 5ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನದ ಬಹುಮಾನ ಹಾಗೂ ನಾಡಿನ ಅನೇಕ ಸಂಘ–ಸಂಸ್ಥೆಗಳಿಂದ ಪುರಸ್ಕಾರಗಳನ್ನು ಪಡೆದಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ನಟರಾಜ ಎಂ. ಶಿಲ್ಪಿ

ನಟರಾಜ ಎಂ. ಶಿಲ್ಪಿ ಅವರು ದಿನಾಂಕ: 01.06.1977ರಂದು ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಜನಿಸುತ್ತಾರೆ. ಶಿಲ್ಪಕಲೆಯಲ್ಲಿ ಎಂ.ಎಫ್.ಎ ಮತ್ತು ಎಂ.ಫಿಲ್ ಪದವಿ ಪಡೆದುಕೊಂಡಿದ್ದಾರೆ. ಶಿಲೆ, ಫೈಬರ್ ಮತ್ತು ಮಿಶ್ರ ಮಾಧ್ಯಮದಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸುತ್ತಾರೆ. ಬೆಂಗಳೂರು, ಕಾಶ್ಮೀರ, ಮುಂಬಯಿ, ಹಂಪಿ, ಇಲಕಲ್, ರಾಯಚೂರು ಪಾಟ್ನ ಕಲಬುರಗಿ ಮುಂತಾದೆಡೆಗಳಲ್ಲಿ ನಡೆದ ರಾಜ್ಯ ಮತ್ತು ರಾಷ್ಟ್ರಮಟ್ಟದ ಶಿಲ್ಪ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಕಲಬುರಗಿ, ಬೆಂಗಳೂರು, ದೆಹಲಿ, ಮುಂಬಯಿ, ಮುಂತಾದೆಡೆಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಬದಾಮಿ ಮತ್ತು ಹಂಪಿಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹವಾಗಿದೆ.

ಅದೇ ರೀತಿ ರೋಟರಿ ಕ್ಲಬ್, ಗುಲಬರ್ಗಾ. 2002 ಶಿಲ್ಪ ರೇಖಾಚಿತ್ರ ಶಿಬಿರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ಶೃಂಗೇರಿ ಮಠ, ಶೃಂಗೇರಿ. 2006ರ ಶಿಲ್ಪ ಮತ್ತು ಚಿತ್ರಕಲಾ ಶಿಬಿರ, ನುಡಿಹಬ್ಬ ಹಂಪಿ. 2006ರ ಸಿಲಿಕಾನ್ ರಬ್ಬರ್, ಅಚ್ಚಿನಿಂದ ಫೈಬರ್

ಮಾಧ್ಯಮದಲ್ಲಿ ಚಾಲುಕ್ಯ ಶೈಲಿಯ ಶಿಲ್ಪಗಳ ರಚನಾ ಶಿಬಿರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮತ್ತು ಜಿಲ್ಲಾ ಆಡಳಿತ ಬಾಗಲಕೋಟೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಬಾದಾಮಿ ಬನಶಂಕರಿ 2006 ಭಾವಶಿಲ್ಪ ಹಾಗೂ ಸಮಕಾಲೀನ ಶಿಲ್ಪಕಲಾ ಶಿಬಿರ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ಶಿವಕುಮಾರ ಕಲಾಸಂಘ, ಸಾಣೇಹಳ್ಳಿ, (ಚಿತ್ರದುರ್ಗ ಜಿಲ್ಲೆ). 2007ರ ಜನಪದ ಶೈಲಿಯ ಕಂಚಿನ ಏರಕದ ಶಿಲ್ಪಕಲಾ ಶಿಬಿರ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ಕೆನರಾ ಬ್ಯಾಂಕಿನ ಪ್ರಾಯೋಜಿತ ಕೆ.ಪಿ.ಜೆ ಪ್ರಭು, ಕರಕುಶಲ ತರಬೇತಿ ಸಂಸ್ಥೆ, ಜೋಗರದೊಡ್ಡಿ. 2008 ಘಟ್ಟ ಕಲಾ ಗ್ರಾಮ ಕಲಾವಿದರ ಶಿಬಿರ ರಾಯಚೂರು. 2010 ಸಮಕಾಲೀನ ಶಿಲಾ ಶಿಲ್ಪಕಲಾ ಶಿಬಿರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ವಿಜಯ ಚಿತ್ರಕಲಾ ಮಹಾವಿದ್ಯಾಲಯ ಇಳಕಲ್ಲ. 2010 ಕಲಬುರಗಿ ಕಂಪು ಶಿಲ್ಪಕಲಾ ಶಿಬಿರ ಗುಲಬರ್ಗಾ. ಹೀಗೆ ಹಲವಾರು ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ.

ಚೆಪ್ಪುಡಿಕೆಯ ಪೊನ್ನಪ್ಪ ಶಿಷ್ಯವೇತನ, ಕಲಾಮಹೋತ್ಸವ ಮತ್ತು ನ್ಯೂಮಿಲೇನಿಯಂ ಕಲಾ ಪ್ರದರ್ಶನಗಳಲ್ಲಿ ಬಹುಮಾನ ಪಡೆದುಕೊಂಡಿದ್ದಾರೆ. ಕಲಬುರಗಿ ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆಯ 4ನೇ ವಾರ್ಷಿಕ ಕಲಾಪ್ರದರ್ಶನದಲ್ಲಿ ಇವರ ಶಿಲಾ ಮಾಧ್ಯಮದ ಶಿಲ್ಪಕ್ಕೆ ದೃಶ್ಯಬೆಳಕು ಪ್ರಶಸ್ತಿ ದೊರೆತಿವೆ.

ಅಡಿವೆಪ್ಪ ಪರಪ್ಪ ಅಂಗ

ಶಿಲ್ಪ ಕಲಾವಿದ. ಇವರು ಮೂಲತಃ ಕೊಪ್ಪಳ ಜಿಲ್ಲೆ ಮುನಿರಾಬಾದನವರಾಗಿದ್ದು, 1964 ಜೂನ್ 1ರಂದು ಜನಿಸಿದರು. ಹುಟ್ಟಿನಿಂದಲೂ ಶಿಲ್ಪಕಲೆ ಇವರಿಗೆ ಚಿರಪರಿಚಿತವಾಗಿದೆ. ಬಿ.ಎ., ಬಿ.ಇಡಿ ಓದಿದ್ದರೂ, ಕೂಡ ಶಿಲ್ಪ ಕೆತ್ತುವ ವೃತ್ತಿ ಬಿಡದೇ ದಿನನಿತ್ಯದ ಕಾರ್ಯದಂತೆ, ಬಾರ್‌ಸೋಪಿನಲ್ಲಿ ಉಬ್ಬು ಶಿಲ್ಪಗಳು ನೈಜವಾದ ರೂಪದಲ್ಲಿ 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು, ಅಲ್ಲದೇ ಕಡೆಲೆಕಾಳು ಹಾಗೂ ಸಾಸಿವೆ ಕಾಳಿನಿಂದ ಅನೇಕ ಗಣಪತಿಯ ಶಿಲ್ಪಗಳನ್ನು ಮಾಡಿದ್ದಾರೆ.

ಇವರು ರಟ್ಟಿನಿಂದ ಮತ್ತು ಥರ್ಮೋಕೋಲ್‌ನಿಂದ ವಿವಿಧ ಬಗೆಯ ಮಾದರಿಗಳನ್ನು ಒಳಗೊಂಡಂತೆ ಅನೇಕ ಶಿಲ್ಪಕೃತಿಗಳನ್ನು ಮಾಡಿದ್ದಾರೆ. ಮುಧೋಳ, ಹಾಸನ, ಗಂಗಾವತಿ, ಮೈಸೂರು ದಸರಾ, ಆನೆಗೊಂದಿ, ಉತ್ಸವ, ಬಾಗಲಕೋಟೆ ಮುಂತಾದ ಕಡೆಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಅಲ್ಲದೇ ದೂರದರ್ಶನದ ಅವಲೋಕನದಲ್ಲಿ ಇವರ ಸಂದರ್ಶನ ಪ್ರಸಾರವಾಗಿದೆ. ಇವರು ಸಹ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು, ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ. 1994ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಧೋಳದಲ್ಲಿ ಮತ್ತು 1996ರಲ್ಲ ಹಾಸನ, 2000ರಲ್ಲಿ ಬಾಗಲಕೋಟೆಯ ಸಮ್ಮೇಳನದಲ್ಲಿ ಹಾಗೂ ಆನೆಗೊಂದಿ ಉತ್ಸವದಲ್ಲಿ ಅಲ್ಲದೇ ಗಂಗಾವತಿಯ ಸ್ನೇಹ ವೃಂದದಿಂದ 1998ರಲ್ಲಿ ಕರಕುಶಲ ಭಾಸ್ಕರ ಬಿರುದು, ಕೊಟ್ಟು ಸನ್ಮಾನಿಸಿದ್ದಾರೆ.

ಗೌರಿಶಂಕರ ಬಿ.ಜಿ

ಗುಲಬರ್ಗಾ ಜಿಲ್ಲೆಯ ಕಿಣ್ಣಿ ಸಡಕ್ ಎಂಬ ಹಳ್ಳಿಯ ರೈತಾಪಿ ಮನೆತನದಲ್ಲಿ ತಂದೆ ಬಸವಯ್ಯ ಗೋಗಿ, ತಾಯಿ ಕುಸುಮತಿಯವರ ಮಗನಾಗಿ 1982 ಜುಲೈ 20 ರಂದು ಜನಿಸಿದರು. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹಳ್ಳಿಖೇಡ ಗ್ರಾಮದಲ್ಲಿ ಪೂರೈಸಿ, ತಮ್ಮ ಚಿತ್ರಕಲಾ ಶಿಕ್ಷಕರ ಸೂಕ್ತ ಮಾರ್ಗದರ್ಶನದಂತೆ ಹುಮನಾಬಾದನ ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದು ಡಿ.ಎಂ.ಸಿ ಪ್ರಥಮ ಮತ್ತು ದ್ವಿತಿಯ ವರ್ಷ ಪೂರ್ಣಗೊಳಿಸಿ, ಕಲಬುರ್ಗಿಯ ದಿ ಐಡಿಯಲ್ ಫೈನ್ ಆರ್ಟ ಇನಸ್ಟಿಟ್ಯೂಟನಲ್ಲಿ ಕಲಾ ಶಿಕ್ಷಣ ಹಾಗೂ ಡಿಪ್ಲೋಮಾ ಇನ್ ಡ್ರಾಯಿಂಗ್ ಮತ್ತು ಪೇಂಟಿಂಗ ಪದವಿಯನ್ನು ಮತ್ತು ಆರ್ಟ್ ಮಾಸ್ಟರ್ ಪದವಿಯನ್ನು ಪಡೆದರು.

ಇವರ ಶಿಲ್ಪಕಲಾ ನೈಪುಣ್ಯತೆಯನ್ನು ಮನಗೊಂಡು ಇತ್ತೀಚಿಗೆ ಇವರನ್ನು ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತಿವೆ. ಇತ್ತೀಚಿಗೆ ಗುಲಬರ್ಗಾದ ವರ್ಣ ಭೂಮಿ ಶ್ರೀ ಗುರು ವಿದ್ಯಾಪೀಠದವರು 2011ರಲ್ಲಿ ಆಯೋಜಿಸಿದ 'ಇಂಟರ್ ನ್ಯಾಶನಲ್

ಸಿಂಪೋಜಿಯಂ', 2012ರಲ್ಲಿ ಧಾರವಾಡ ಜಿಲ್ಲೆ ಉತ್ಸವದಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಆಯೋಜಿಸಿದ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಇವರು ಚಿತ್ರ ಹಾಗೂ ಶಿಲ್ಪಗಳೆರಡರಲ್ಲಿ ಉತ್ತಮ ನೈಪುಣ್ಯತೆಯನ್ನು ಹೊಂದುವುದರ ಜೊತೆಗೆ ಪ್ರಸ್ತುತ ಗುಲಬರ್ಗಾದ ಶ್ರೀ ಗುರು ವಿದ್ಯಾಪೀಠದಲ್ಲಿ ಕಲಾ ಶಿಕ್ಷಕರಾಗಿ ವಿದ್ಯಾರ್ಥಿಗಳಿಗೆ ಚಿತ್ರ ಶಿಲ್ಪಗಳನ್ನು ಹೇಳಿಕೊಡುವ ಕಾರ್ಯದಲ್ಲಿ ತೊಡಗಿದ್ದಾರೆ.

ಅಣ್ಣಪ್ಪ ಇ. ಚಿತ್ರಗಾರ

ಶಿಲ್ಪ ಕಲಾವಿದ. ಕೊಪ್ಪಳ ಜಿಲ್ಲೆ ಕಿನ್ನಾಳ ಇವರ ಮೂಲ ನೆಲ. ಇವರ ವಿದ್ಯಾರ್ಹತೆ: ಎ.ಎಂ.ಜೆ.ಡಿ (ಆರ್ಟ್ಸ್). ತಂದೆಯವರ ಪ್ರೇರಣೆಯೇ ಶಿಲ್ಪಕಲೆಗೆ ಸ್ಫೂರ್ತಿಯಾಯಿತು. ಕಿನ್ನಾಳ ಶೈಲಿಯಲ್ಲಿ ಮತ್ತು ಮಿಶ್ರ ಮಾಧ್ಯಮದಲ್ಲಿ ದಶಾವತಾರೆ, ದುರ್ಗಾ, ಮುರಗಿ, ಕಿನ್ನಾಳದ ಚೌಕಿ ಪ್ರಭಾವಳಿ, ಮತ್ತು ಹಂಪಿ ಪ್ರದೇಶದ ಬಹಳಷ್ಟು ನಿಸರ್ಗ ಚಿತ್ರಗಳು ಜೊತೆಗೆ ಜೋಗಮ್ಮ-ಲಕ್ಷ್ಮೀ-ವಿಷ್ಣು ಇತ್ಯಾದಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಇವರು ಹಲವಾರು ಕಡೆ ಕಲಾ ಪ್ರದರ್ಶನ ಮಾಡಿದ್ದಾರೆ. 2002ರಲ್ಲಿ ಅಖಿಲ ಭಾರತ 69ನೆಯ ಸಾಹಿತ್ಯ ಸಮ್ಮೇಳನ ತುಮಕೂರು, 2003ರಲ್ಲಿ ಚಿತ್ರಸಂತೆ ಮತು ವಿಜಯಕಲಾ ಮಂದಿರ ಗದಗ, 2004ರಲ್ಲಿ ರೋಟರಿ ಕ್ಲಬ್ ಹೊಸಪೇಟೆ, 2005ರಲ್ಲಿ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಬಸವಕಲ್ಯಾಣ, 2005ರಲ್ಲಿ ಚಿತ್ರಕಲಾ ಪರಿಷತ್, 2006ರಲ್ಲಿ ಹಂಪಿ ಉತ್ಸವದಲ್ಲಿ ಇವರ ಕಲಾಕೃತಿಗಳು ಪ್ರದರ್ಶನ ಗೊಂಡಿವೆ.

ಇದಲ್ಲದೇ ಬೆಂಗಳೂರು, ಹಂಪಿ, ಮೈಸೂರು, ಇನ್ನಿತರ ಅನೇಕ ಕಡೆಗಳಲ್ಲಿ ಈ ಕಲಾವಿದ ಚಿತ್ರಗಾರಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. 2006-07ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, ದೊರೆತಿದೆ. 2005ರಲ್ಲಿ ನಾಟ್ಯ ಸಂಘ ಕಿನ್ನಾಳ ಇವರಿಂದ ಸನ್ಮಾನಿತರಾಗಿದ್ದಾರೆ.

ಅಯ್ಯಣ ವಿಶ್ವಕರ್ಮ

ಶಿಲ್ಪಕರ್ಮಿ ಕಲಬುರ್ಗಿ ತಾಲೂಕಿನ ಕೊಳ್ಳೂರು ಗ್ರಾಮಕ್ಕೆ ಹೋಗುವ ಜಿಲ್ಲಾ ಹೆದ್ದಾರಿ ಸಂಚರಿಸುವಾಗ, ರಸ್ತೆ ಪಕ್ಕದಲ್ಲೊಂದು ತಾತ್ಕಾಲಿಕ ಶೆಡ್ಡು. ಅದರಲ್ಲಿ ಶಿಲೆಗಳನ್ನು ಕಲಾತ್ಮಕವಾಗಿ ಕೆತ್ತುವ ಕಾರ್ಯ ಹಗಲೂ-ರಾತ್ರಿ ನಿರಂತರವಾಗಿ ನಡೆಯುತ್ತಿರುತ್ತದೆ. ಈ ರಸ್ತೆಯ ಮೂಲಕ ಹಾದು ಹೋಗುವರ್‍ಯಾರೂ ಈ ಕಡೆ ಗಮನ ಹರಿಸುವುದಿಲ್ಲ. ಒಳಗೆ ಕೆಲಸ ಮಾಡುವವರೂ ರಸ್ತೆಯಲ್ಲೇನು ನಡೆಯುತ್ತದೆಂಬ ಬಗ್ಗೆ ಗಮವಿಲ್ಲದೇ ತಮ್ಮ ಕೆಲಸದಲ್ಲಿ ತನ್ಮಯರಾಗಿರುತ್ತಾರೆ.

ಕಾಳಿಕಾದೇವಿ ಶಿಲ್ಪಕಲಾ ಕೇಂದ್ರವೆಂಬ ಹೆಸರಿನ ಈ ಶೆಡ್ಡಿನಲ್ಲಿ ಮೂರ್ತಿಗಳನ್ನು ಕೆತ್ತುವ ಕಾಯಕ ಹಲವು ವರ್ಷಗಳಿಂದಲೂ ನಡೆಯುತ್ತಿದೆ. ಈ ಶಿಲ್ಪಕಲಾ ಕೇಂದ್ರದ ರೂವಾರಿ ಹಾಗೂ ಶಿಲ್ಪಕರ್ಮಿ ಅಯ್ಯಣ್ಣ ವಿಶ್ವಕರ್ಮ ಮತ್ತು ಕಾಶಿಪತಿ ಮೇಳಕುಂದಾ ಮೊದಲು ಕಲಬುರಗಿಯ ಸಮೀಪದ ನಂದೂರ ಗ್ರಾಮದಲ್ಲಿ ಈ ಕೆತ್ತನೆಯ ಕೆಲಸ ಆರಂಭಿಸಿದ. ಈ ಜೋಡಿ, ಕಳೆದ 10 ವರ್ಷಗಳಿಂದಲೂ ಕೊಳ್ಳೂರ ಗ್ರಾಮದ ರಸ್ತೆಯ ಬದಿ ಶಿಲ್ಪಕಲಾ ಕೇಂದ್ರವೊಂದನ್ನು ಆರಂಭಿಸಿ, ನಿತ್ಯ ಶಿಲೆಯಲ್ಲಿ ಕಲೆಯನ್ನು ಅರಳಿಸುವ ಈ ಕಾಯಕದಲ್ಲಿ ನಿರತರಾಗಿದ್ದಾರೆ.

ಸಾಮಾನ್ಯವಾಗಿ ಕಲೆಗೆ ಬೆಲೆ ಕಟ್ಟಲಾಗುವುದಿಲ್ಲ. ಕಾಲಾವಕಾಶವೂ ನೀಡಲಾಗುವುದಿಲ್ಲ. ನಮ್ಮ ವೈಚಾರಿಕಧಾರೆ, ತನ್ಮಯತೆಗಳ ಆಧಾರದ ಮೇಲೆ ಮೂರ್ತಿಗಳು ಸಿದ್ಧಗೊಳ್ಳುತ್ತವೆ. ಇಂತಿಷ್ಟೇ ದಿನಗಳಲ್ಲಿ ಎಂದು ಹೇಳಲಾಗುವುದಿಲ್ಲ. ಕೆಲವೊಂದು ಸಲ ಹಗಲೂ ರಾತ್ರಿ ಕೆಲಸ ಮಾಡಬೇಕಾಗುತ್ತದೆ. ಮತ್ತೆ ಕೆಲವು ಸಲ ಮೂಡ್ ಇಲ್ಲದೇ ಕೆಲಸವಾಗುವುದೇ ಇಲ್ಲ. ಕೆಲವೊಮ್ಮೆ ನಮ್ಮ ನಿರೀಕ್ಷೆಗೂ ಕಡಿಮೆ ಅವಧಿಯಲ್ಲಿ ನಿರ್ಮಾಣವಾಗುತ್ತದೆ. ನಮ್ಮ ಶ್ರಮಕ್ಕೆ ದೊರೆತ ಫಲದಲ್ಲಿ ನಾವು ಸಂತುಷ್ಟರಾಗುತ್ತೇವೆ. ನಮ್ಮ ಕಲೆಯನ್ನು ಮೆಚ್ಚಿಕೊಂಡಾಗ ಆಗುವ ತೃಪ್ತಿಯೇ ತಮಗೆ ಸಿಕ್ಕುವ ನಿಜವಾದ ಬೆಲೆಯಾಗಿದೆ ಎನ್ನುತ್ತಾರೆ. ಅಯ್ಯಣ್ಣ.

ಬಾಗಲಕೋಟೆಯ ಶೆಲ್ಲಿಕೆರೆಯಿಂದ ಲಾರಿಗಳಲ್ಲಿ ಶಿಲೆಗಳನ್ನು ತರುತ್ತಿದ್ದು. 10 ಟನ್ ಕಲ್ಲಿಗೆ 20 ಸಾವಿರ ರೂ.ಗಳ ವೆಚ್ಚ ತಗಲುತ್ತದೆ. ಆದರೆ, ಕೆಲವು ಬಾರಿ ಬಿರುಸಾದ ಕಲ್ಲುಗಳಿದ್ದರೆ, ರೂಪ

ಕೊಡುವುದು ತುಂಬಕಷ್ಟ. ಅನೇಕ ಬಾರಿ ಮೂರ್ತಿ ಕೆತ್ತುವಾಗಲೇ ಹಾನಿಯಾಗುವ ಉದಾಹರಣೆಗಳೂ ಅನೇಕ ಎಂದು ತಮ್ಮ ಅನುಭವ ಹೇಳಿಕೊಳ್ಳುತ್ತಾರೆ.

ಒಂದು ಮೂರ್ತಿ ಕೆತ್ತಲು ಸುಮಾರು 30 ದಿನಗಳ ಕಾಲಾವಕಾಶಬೇಕು. ಇದುವರೆಗೂ ತಾವು ಅಂಬಾಭವಾನಿ, ಕಾಳಿಕಾದೇವಿ, ಗಣೇಶ, ಶಿವಪಾರ್ವತಿ ನಂದಿ, ಶಿವಲಿಂಗ, ಹನುಮಾನ್, ಅಂಬಿಗರ ಚೌಡಯ್ಯ ಮುಂತಾದ ಮೂರ್ತಿಗಳನ್ನು ಕೆತ್ತಿರುವುದಾಗಿ ಅಯ್ಯಣ್ಣ ಅವರು ತಾವು ಕೆತ್ತಿರುವ ಮೂರ್ತಿಗಳ ಬಗ್ಗೆ ಮೆಲಕು ಹಾಕುತ್ತಾರೆ.

ಅವಣ್ಣಪ್ಪ ಭದ್ರಪ್ಪ ಪತ್ತಾರ

ಹೆಸರಾಂತ ರಜತ ಕಲಾವಿದ. ಯಾದಗಿರಿ ಜಿಲ್ಲೆ ಕೊಡೆಕಲ್ಲಿನಲ್ಲಿ 11.01.1932ರಲ್ಲಿ ಜನಿಸಿದರು. ತಂದೆ ಭದ್ರಪ್ಪ ತಾಯಿ ನೀಲಮ್ಮ. ಇವರು ಕಡು ಬಡತನದ ಕುಟುಂಬದಲ್ಲಿ ಜನಿಸಿ, ಕೇವಲ ನಾಲ್ಕನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು. ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ತಂದೆಯ ಮಾರ್ಗದರ್ಶನದಲ್ಲಿ ಕುಸುರಿ ಕೆಲಸದಲ್ಲಿ ತೊಡಿಗಿಸಿಕೊಂಡು ನೈಪುಣ್ಯವನ್ನು ಪಡೆದರು. ಅಲ್ಲದೆ ಸಂಸಾರದ ಭಾರ ಹೊತ್ತು ಜೀವನದಲ್ಲಿ ಅನೇಕ ಕಷ್ಟ ನಷ್ಟಗಗಳ ಅನುಭವ ಪಡೆದರು.

ಇವರ ಕಲಾಕೃತಿಗಳು ಗುಲಬರ್ಗಾ, ರಾಯಚೂರು, ವಿಜಾಪುರ, ಮುಂಬಯಿ ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ. ಇವರು ಲೋಹ ಕಲೆಯಲ್ಲಿ ತಮ್ಮ ಕಲಾ ನೈಪುಣ್ಯತೆಯನ್ನು ತೋರಿಸಿದ್ದು, ಇವುಗಳಲ್ಲಿ ತ್ರಿವಿಕ್ರಮ ನಂದಾಶ್ರಮಕ್ಕೆ ಬೆಳ್ಳಿ ತೊಟ್ಟಿಲು, ತಿಂಥಣಿ ಮೌನೇಶ್ವರ ದೇವಸ್ಥಾನದ ಗರ್ಭಗುಡಿಯ ಚೌಕಟ್ಟು, ಬಸವೇಶ್ವರ ದೇವಸ್ಥಾನದ ಗುಡಿಯ ಚೌಕಟು, ಸಾವಳಗಿ ಸಿದ್ದಲಿಂಗೇಶ್ವರ ಮಠ, ನಂದಿಮಠ ತಡವಡಿಗಿ ಸ್ವಾಮೀಜಿಯವರಿಗೆ ನಿರ್ಮಿಸಿಕೊಟ್ಟ ಮೂರ್ತಿ, ಕಿರೀಟ ಹಾಗೂ ಅನೇಕ ಬೆಳ್ಳಿಯ ದೇವಿ ಮೂರ್ತಿಗಳನ್ನು ರಚಿಸಿದ್ದಾರೆ.

ಗ್ರಾಮದೇವತೆಗಳ ಮೂರ್ತಿಗಳು, ಪಲ್ಲಕ್ಕಿ-ತೊಟ್ಟಿಲು, ಚೌರಿ ಗಡ್ಡಿಗಳು, ಬೆಳ್ಳಿಬೆತ್ತ, ಪಂಚಕಲಶ, ದೇವಸ್ಥಾನದ ಗರ್ಭಗುಡಿಯ ಬಾಗಿಲು, ಇವುಗಳಲ್ಲಿ ವಿವಿಧ ವಿನ್ಯಾಸದ ನಕ್ಷೆಗಳನ್ನು ಬಳಸಿ, ಇದುವರೆಗೂ ಒಂದು ಸಾವಿರಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಇವರು ಶಿಲ್ಪಕಲಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ 1989ರಲ್ಲಿ ಗುಲಬರ್ಗಾದ ವಿಶ್ವಕರ್ಮ ಸಮಾಜ, 1996ರಲ್ಲಿ ಸುರುಪುರ, 1997ರಲ್ಲಿ ಬಸವನಬಾಗೇವಾಡಿಯಲ್ಲಿ ಸಾರ್ವಜನಿಕರಿಂದ ಸನ್ಮಾನಿತರಾಗಿದ್ದಾರೆ. ಇವರ ಈ ಕಲಾಸೇವೆಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ 2001ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.

ತಳವಾರ ಎಚ್.ಡಿ

ಶಿಲ್ಪ ಕಲಾವಿದ. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಮಂಡಲಗಿಯವರು. ಹೈಸ್ಕೂಲ್ ಓದುವಾಗಲೇ ಚಿತ್ರ ಬಿಡಿಸುವ ಹವ್ಯಾಸ ಬೆಳೆಸಿಕೊಂಡಿದ್ದ ಈ ಯುವಕ, ಅತ್ಯಂತ ಅಪರೂಪದ ಚಿತ್ರಕಲಾವಿದನಾಗಿ ಹಾಗೂ ಶಿಲ್ಪಕಲಾಕೃತಿಗಳನ್ನು ರಚಿಸುವಲ್ಲಿ ಆಗಾಧ ಪ್ರೌಢಿಮೆಯನ್ನು ಮೆರೆದಿದ್ದಾರೆ. ವಿಶ್ವವಿಖ್ಯಾತ ವಿಶ್ವಕರ್ಮನ ಕೆತ್ತನೆಯ ಕಲಾ ಕುಸುಮ ನೋಡುಗರ ಕಣ್ಮನ ಸೆಳೆಯುವುದು ಸ್ವಾಭಾವಿಕ, ಅಂಥ ಕಲಾಕೃತಿಗಳನ್ನು ರಚಿಸುವುದು ಈ ಯುವಕನ ಹೆಬ್ಬಯಕೆಯಾಗಿದೆ.

ಯಲಬುರ್ಗಾ ಕಾಲೇಜಿನಲ್ಲಿ ಚಿತ್ರಕಲೆಯ ವ್ಯಾಸಂಗ ಮಾಡಿ, ಗೋಡೆಬರಹ, ವಿವಾಹ ಸಮಾರಂಭಗಳಲ್ಲಿ ಚಿತ್ರಬಿಡಿಸುವುದು, ಥರ್ಮಾಕೋಲ್‌ದಲ್ಲಿ ಮದುಮಕ್ಕಳ ಹೆಸರು ಬರೆದು ಜೀವನ ಸಾಗಿಸುತ್ತಿದ್ದರು. ಆನಂತರ ಬೆಂಗಳೂರಿಗೆ ಹೋಗಿ ಕೆ.ಪಿ.ಜೇ. ಪ್ರಭು ಕರಕುಶಲ ತರಬೇತಿ ಕೇಂದ್ರದಲ್ಲಿ ದಿನಕ್ಕೆ ನೂರು ರೂಪಾಯಿಗಳಂತೆ ದಿನಗೂಲಿ ಕೆಲಸಕ್ಕೆ ಹೋಗುತ್ತಿದ್ದರು. ದಿನಗೂಲಿಯಲ್ಲಿದ್ದು ಶಿಲ್ಪಗಳನ್ನು ರಚಿಸುವ ಪ್ರತಿಭೆಯನ್ನು ಗುರುತಿಸಿದ ಮಹಾನಗರಿಯ ವಿವಿಧ ಸಂಘ-ಸಂಸ್ಥೆಗಳು, ಈ ಯುವಕನ ಪ್ರತಿಭೆಗೆ ಪುರಸ್ಕರಿಸಿ ಬೆನ್ನು ತಟ್ಟಿದ್ದರು.

ಕಾಡುಗಲ್ಲಿಗೆ ಉಳಿಯ ಏಟುಗಳನ್ನು ಹಾಕಿದರೆ ನೀಟಾಗಿ, ಮಾಟವಾಗಿ ಮೂರ್ತಿ ಸ್ವರೂಪ ತಳೆಯುತ್ತದೆ ಎಂಬಂತೆ, ಕೈಯಲ್ಲಿ ಚೂಪಾದ ಚಾಣ ಹಾಗೂ ಸುತ್ತಿಗೆ ಹಿಡಿದು, ಶ್ರದ್ಧೆಯಿಂದ ತಮ್ಮ ಕಲ್ಪನೆಯ ವಿಗ್ರಹಗಳಿಗೆ ರೂಪ ನೀಡತೊಡಗಿದರು. ಇವರ ಪಳಗಿದ ಕೈಯಲ್ಲಿ ಒಂದರ ಹಿಂದೆ ಒಂದರಂತೆ ಗಣಪತಿ, ವಿಷ್ಣ, ವಿಶ್ವಕರ್ಮ, ನಟರಾಜ, ಆಂಜನೇಯ, ಲಕ್ಷ್ಮೀ ಹಾಗೂ ಇತರ ಕಲಾಕೃತಿಗಳನ್ನು ಸುಂದರ ಕುಸುರಿಕಲೆಯೊಂದಿಗೆ ಕೆತ್ತಿದ್ದಾರೆ.

ಒಂದು ಕಲ್ಲನ್ನು ಕಟೆದು ಮೂರ್ತಿ ಮಾಡುವುದಕ್ಕೆ ಅತ್ಯಂತ ಕಡಿಮೆ ಕಾಲಾವಕಾಶ ತೆಗೆದುಕೊಂಡು, ಜನರ ಮೆಚ್ಚಿನ ಚಿತ್ರವನ್ನು ಕಲ್ಲಿನಲ್ಲಿ ಕೆತ್ತಿ ಎಲ್ಲರ ಮೆಚ್ಚುಗೆ ಗಳಿಸಿದರು. ಇವರ ಕೈಚಳಕ ಅಷ್ಟೊಂದು ನುರಿತಿದೆ.

ಇವರ ಕೆತ್ತನೆಯ ಶಿಲ್ಪಕಲಾಕೃತಿಗಳಿಗೆ ಈಗ ಬೆಂಗಳೂರಿನಲ್ಲಿ ಎಲ್ಲಿಲ್ಲದ ಬೇಡಿಕೆಯಲ್ಲಿ ಮಾರಾಟವಾಗುತ್ತಿವೆ. ಈಗಾಗಲೇ ಇವರು ಕೆತ್ತಿರುವ ನಟರಾಜನ ವಿಗ್ರಹ, ವಿಷ್ಣುವಿನ ವಿಗರಹ ಹಾಗೂ ಗಣಪತಿ ವಿಗ್ರಹಕ್ಕೆ ಅತಿ ಹೆಚ್ಚಿನ ಬೇಡಿಕೆ ಇದೆ.

ಪ್ರಕಾಶ ಬಡಿಗೇರ

ಕಾಷ್ಠಶಿಲ್ಪಿ, ಸಾಮಾನ್ಯವಾಗಿ ತಮ್ಮ ಮನೆತನದ ಮೂಲ ವೃತ್ತಿಯನ್ನೇ ಮುಂದುವರೆಸಿಕೊಂಡು ಬರುತ್ತಿರುವವರು ಇಂದಿಗೂ ಹಳ್ಳಿಗಳಲ್ಲಿ ಕಾಣಸಿಗುತ್ತಾರೆ. ಆದರೆ, ವಿದ್ಯಾಭ್ಯಾಸ, ತರಬೇತಿ ಮೂಲಕ ವೃತ್ತಿ ಪ್ರಾವಿಣ್ಯತೆ ಪಡೆದರೂ, ಗ್ರಾಮೀಣ ಭಾಗದಲ್ಲಿದ್ದುಕೊಂಡು ಜೀವನ ಆದಾಯ ಹೆಚ್ಚಿಸಿಕೊಳ್ಳುವವರು ಕಡಿಮೆ. ಇಂಥ ಸಂದರ್ಭದಲ್ಲಿ ವಿದ್ಯಾವಂತರಾದರೂ ಸರಕಾರಿ ವೃತ್ತಿಯೇ ಉದ್ಯೋಗವೆಂದು ಪರಿಗಣಿಸದೇ, ಹಳ್ಳಿಯ ಮೂಲ ಕಸುಬನ್ನು ಉಳಿಸಿಕೊಂಡು, ಜನರ ಬೇಡಿಕೆಗೆ ಅನುಗುಣವಾಗಿ ತಮ್ಮ ಪರಂಪರಾಗತ ವೃತ್ತಿಗಾರಿಕಗೆಗೆ ಆಧುನಿಕತೆಯ ಸ್ಪಂದನ ನೀಡಿ, ಸ್ವಯಂ ಉದ್ಯೋಗದ ಜೊತೆಗೆ ಮತ್ತಷ್ಟು ಜನರಿಗೆ ಉದ್ಯೋಗ ನೀಡುವಂಥ ವೃತ್ತಿಯಲ್ಲಿ ತೊಡಗಿದ ಕೆಲವೇ ಕೆಲವು ಜನರ ಪೈಕಿ ಕೊಪ್ಪಳ ಜಿಲ್ಲೆಯ ಮಂಗಳೂರು ಗ್ರಾಮದ ಪ್ರಕಾಶ ಬಡಿಗೇರ ಒಬ್ಬರು.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಮಂಗಳೂರಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಮುಗಿಸಿದ ಅನಂತರ ಮನೆಯ ಆರ್ಥಿಕ ಸ್ಥಿತಿ ಇವರ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುವಂತೆ ಮಾಡಿತು. ನಿರಾಶೆ, ಹತಾಶೆ ಯವುದೂ ಇವರನ್ನು ಕಾಡಲಿಲ್ಲ. ಧೈರ್ಯಗುಂದದೆ ಬಡಗಿತನ ಕುರಿತು ವಿಶೇಷ ತರಬೇತಿ ಹಾಗೂ ಪರಿಣಿತಿ ಪಡೆದರು.

ಅನಂತರ, ತಮ್ಮ ಊರಾದ ಮಂಗಳೂರಿನಲ್ಲೇ ವೃತ್ತಿಯನ್ನು ಮುಂದುವರಿಸಿದರು. ಕಿಟಕಿ, ಬಾಗಿಲುಗಳಿಗೆ, ಚಕ್ರಶೈಲಿ, ಸರಪಳಿ ಶೈಲಿಯ ಕೆತ್ತನೆಯಲ್ಲಿ ಪಳಗಿದ ಇವರು ಬಾಗಿಲುಗಳಿಗೆ ಅತಿ ಸುಂದರವಾದ ಚಿತ್ತಾರ ಬರೆಯುವ ಆಕರ್ಷಕ ಕೆತ್ತನೆಯ ಶೈಲಿ ಇವರದು. ಮನೆಯ ಜಂತಿ, ಪಟ್ಟಿ, ತೀರು, ಮೇಲುಗಂಬಗಳನ್ನು ಮಾಡಲು ಇವರು ಸಿದ್ಧಹಸ್ತರು. ಟೈಲ್ಸ್‌ಗಳನ್ನು ಅತ್ಯಂತ ಸುಂದರವಾಗಿ ಜೋಡಿಸುವ ಇವರು, ಅನೇಕ ವಿಭಿನ್ನ ಕಲೆಗಳನ್ನು ಕರಗತ ಮಾಡಿಕೊಂಡಿದ್ದಾರೆ.

ಭೀಮಣ್ಣ ಮೋನಪ್ಪ ಕಂಬಾರ

ಲೋಹಶಿಲ್ಪಿ, ಯಾದಗಿರಿ ಜಿಲ್ಲೆಯ ಗಾಜರಕೋಟ ಗ್ರಾಮದಲ್ಲಿ 21 ನೆಯ ಫೆಬ್ರುವರಿ 1932ರಂದು ಜನಿಸಿದರು. ಬಾಲ್ಯದಲ್ಲೇ ತಂದೆ ತಾಯಿಯನ್ನು ಕಳೆದುಕೊಂಡರು. ಸಹೋದರ ಸಿದ್ದಣನೊಂದಿಗೆ ತನ್ನ ಮಾವನವರಾದ ಲೋಹಶಿಲ್ಪಿ ಕಾಳಪ್ಪ ಗ್ವಾಡಿ ಅವರಲ್ಲಿ 12 ವರ್ಷ ಕಂಬಾರಿಕೆ ಮತ್ತು ಲೋಹ ಶಿಲ್ಪಕಲೆಯ ಅಭ್ಯಾಸ ಮಾಡಿ ನೈಪುಣ್ಯ ಪಡೆದರು. ಇವರು ಆಧುನಿಕ ಯುಗದ ಸ್ಪರ್ಧಾತ್ಮಕ ಬದುಕಿನಲ್ಲಿ ಹೋಗದೆ ಕರ್ನಾಟಕ ಸಂಸ್ಕೃತಿಯನ್ನು ಬಿಂಬಿಸುವ ಸಗರನಾಡಿನ ಸುರಪುರದ ಜನಪದ ಶೈಲಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ.

ಇವರು ರಚಿಸಿದ ಶಿಲ್ಪಕಲಾಕೃತಿಗಳೆಂದರೆ, ನಂದಿಯ ಮೇಲೆ ಆಸೀನರಾಗಿರುವ ಶಿವಪಾರ್ವತಿ, ಆಶ್ವರೂಢ ಮಲ್ಲಯ್ಯ, ಆನೆ ಅಂಬಾರಿ ಮೇಲೆ ಕುಳಿತ ಭೀರಪ್ಪ ದೇವರು, ಗೌರಿ, ಗಣೇಶ, ಕಾಳಿಕಾದೇವಿ ಅಲ್ಲದೆ ಅನೇಕ ಗ್ರಾಮದೇವತೆಗಳನ್ನು ನಿರ್ಮಿಸಿದ್ದಾರೆ. ಇವರ ಶಿಲ್ಪಕಲಾಕೃತಿಗಳು ರಾಜ್ಯ ಹಾಗೂ ನೆರೆ ರಾಜ್ಯಗಳಲ್ಲಿ ಸಂಗ್ರಹಗೊಂಡಿವೆ. ಹಾಗೂ ಇವರ ಶಿಲ್ಪಕೃತಿಗಳು ಶಿಲ್ಪಿ ವೆಂಕಟಾಚಲಪತಿ ಬೆಂಗಳೂರು, ಚಿತ್ರಕಲಾವಿದ ವಿಜಯ ಹಾಗರಗುಂಡಗಿ

ಗುಲಬರ್ಗಾ, ಖ್ಯಾತ ಸಾಹಿತಿಗಳಾದ ಶಾಂತರಸ ರಾಯಚೂರು, ಚಿತ್ರಕಲಾವಿದ ಶ್ರೀ ಮೋಹನ್ ಎಚ್.ಸೀತನೂರ ಗುಲಬರ್ಗಾ, ಜರ್ಮನಿಯ ಡರ್ಮಸ್ಟಡ್‌ನಲ್ಲಿರುವ ಗಣಕ ವಿಜ್ಞಾನಿ ಶ್ರೀ ಬಸವರಾಜ ಪಾಟೀಲ ಹೀಗೆ ಇನ್ನೂ ಅನೇಕ ಗ್ಯಾಲರಿಯಲ್ಲಿ ಸಂಗ್ರಹಗೊಂಡಿವೆ.

ರಾಜಕುಮಾರ ವಿಶ್ವಕರ್ಮ

ಕಾಷ್ಠ ಶಿಲ್ಪಿ. ಬೀದರ ನಗರದಿಂದ ಅನತಿದೂರದಲಿದ್ದ ಹಳ್ಳದಕೇರಿಯವರು. ಮೊನಪ್ಪ-ಸರಸ್ವತಿ ತಂದೆ ತಾಯಿಗಳು, ಬಾಲ್ಯದಲ್ಲಿಯೇ ಓದು ಬರಹದಲ್ಲಿ ತೀಕ್ಷ್ಣ ಬುದ್ಧಿ. ಶಾಲಾ ದಿನಗಳಲ್ಲಿ ಮಣ್ಣಿನಲ್ಲಿಯೇ ಕಲಾಕೃತಿ ತಯಾರಿಸಿದ ಕೀತಿ ಇವರದು.

ಬಡತನದ ಬಾಳನೌಕೆ ದಡ ಸೇರದೆ ಕುಟುಂಬ ಹಾಳು ಬೀಳಿನ ಹಾದಿಯಲ್ಲಿ ಸಾಗಿತ್ತು. ತಾಯಿ ಸರಸ್ವತಿಯ ತವರೂರು ಊಡುಮನಳ್ಳಿ ಗ್ರಾಮಕ್ಕೆ ಆಗಮಿಸಿದರು. ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಂದುವರೆಸಿದರು. ಕಾಲಚಕ್ರ ಉರುಳುತ್ತಿತ್ತು. ಬಾಳಿನ ಬಂಡಿ ಒಂದಿಷ್ಟು ಸುಧಾರಿಸಿತ್ತು. ಮತ್ತೆ ತಮ್ಮೂರ ಬೀದರಕ್ಕೆ ಹಿಂತಿರುಗಿದರು. ಪ್ರೌಢಶಾಲೆ ಸೇರಿ ಅಭ್ಯಾಸ ನಡೆಸಿದರು. ಇವರ ಅಜ್ಜ ಶಂಕೆಪ್ಪನವರ ಕಾಷ್ಠಕಲೆಯನ್ನು ಕಣ್ಣಾರೆ ನೋಡಿ ಅವರೆಲ್ಲರೂ ವಿಶ್ರಾಂತಿಗೆ ಹೋದಾಗ ಚಿಕ್ಕಪುಟ್ಟ ಮೂರ್ತಿಗಳನ್ನು ಕಾಷ್ಠದಲ್ಲಿ ಮೂಡಿಸಿದರು. ಅಜ್ಜ ನೋಡಿ ಅವಕ್ಕಾದರು! ಏನೂ ಶ್ರಮವಿಲ್ಲದ ಏಕಲವ್ಯ ವಿದ್ಯೆಯನ್ನು ನೋಡಿ ವಿಸ್ಮಯರಾದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಕಲಾಜೀವನಕ್ಕೆ ನಾಂದಿಯಾಯಿತು.

ತಮ್ಮ 23ನೆಯ ವಯೋಮಾನದಲ್ಲಿ ಬೀದರ 'ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಗ್ರೆಗಲ್ ವುಡ್ ಕಾರ್ವಿಂಗ್' ಪ್ರಶಸ್ತಿಗೆ ಭಾಜನರಾದರು. ಈ ಪ್ರಶಸ್ತಿಯಿಂದ ಪ್ರಭಾವಿತರಾದ ಇವರು ಬೀದರ ನಗರದಲ್ಲಿ 'ರಾಜಕುಮಾರ ವಿಶ್ವಕರ್ಮನೆಂದು ವಿಖ್ಯಾತಿ ಹೊಂದಿದರು. ಇವರ ಕಾಷ್ಠಕಲೆ ಉತ್ತುಂಗ ಶಿಖರಕ್ಕೆರಿತು. ಹೈದ್ರಾಬಾದ ಮುಂಬೈ, ತಮಿಳುನಾಡು, ಪಾಶ್ಚಾತ್ಯ ಇಂಜಿನಿಯರುಗಳು ಧಾವಿಸಿ ಇವರ ನೆರವು ಪಡೆದು ವ್ಯಾಪರೋದ್ಯಮಗಳಲ್ಲಿ ಗಣನೀಯವಾದ ಲಾಭ ಗಿಟ್ಟಿಸಿದ್ದರು.

ಕಾಷ್ಠಕಲೆಯನ್ನಲ್ಲದೆ ಚಾಕ್‌ಫೀಸ್‌ನಲ್ಲಿಯೂ ಗಣೇಶ, ಈಶ್ವರ ಮೂರ್ತಿ ಬಹುಸೂಕ್ಷ್ಮವಾಗಿ ಕೊರೆದರು. ಮನೆ ಬಾಗಿಲ ಮಹಾದ್ವಾರ, ಗುಡಿ ಗುಂಡಾರಗಳಿಗೆ ವೈವಿಧ್ಯ ವಿನ್ಯಾಸದ ಮೆರಗು ನೀಡಿ ನೋಡುಗರ ಕಣ್ಮನ ಸೆಳೆದರು.

ಬಸವಕಲ್ಯಾಣದ ಅನುಭವಮಂಟಪಕ್ಕೆ ಬೃಹದಾಕಾರದ ದ್ವಾರದ ಬಾಗಿಲುಗಳು ಚಿತ್ತ ಚಿತ್ತಾರ ಆಕೃತಿ, ವಿನ್ಯಾಸ ವಿಕಾಸಕ್ಕೆ ರಾಜಕುಮಾರರು ತಮ್ಮ ಶ್ರಮವನ್ನೇ ಸಾರ್ಥಕಗೊಳಿಸಿದ್ದಾರೆ. ಸಾಗವಾನಿ (ತೇಗ) ಮರದಿಂದ ತೇದು ಕಾಗದ ಮೇಲೆ ಮೂಡಿದ ವಿನ್ಯಾಸ ವೈಭವೋಪೇತವಾಗಿದೆ. ಸೌಂದರ್ಯದ ಆಗರವಾಗಿದೆ.

ಆಂದ್ರಪ್ರದೇಶ ಮಹಾರಾಷ್ಟ್ರದ ದೇಗುಲಗಳಿಗೆ ಇವರು ಕೆತ್ತಿದ ಕುಸುರಿ ಕಲೆಯ ಕೆತ್ತನೆ ಅಮೋಘವಾದದ್ದು. ಬಿದರಿನ ಪಾಂಡುರಂಗ ದೇಗುಲದಲ್ಲಿ ತೇಗದಲ್ಲಿ ಕೆತ್ತಿದ ಮೂರ್ತಿ, ಮೂಕವಿಸ್ಮಿತನ್ನಾಗಿ ಮಾಡುತ್ತದೆ.

ರಾಜೇಶ ಡಿ.ದೇವಣಗಾಂವ

ಭಿತ್ತಿಚಿತ್ರ ಕಲಾವಿದ, ಭಿತ್ತಿ ಚಿತ್ರಕಲೆ ಪ್ರಪಂಚದಲ್ಲಿ ಬಹು ಪ್ರಾಚೀನ ಕಲೆ. ಈ ಕಲೆಯನ್ನು ಭಾರತದಲಿ ಮುಖ್ಯವಾಗಿ ಅಜಂತಾ, ಎಲ್ಲೋರಾ, ಬಾಗ್, ನಾಸಿಕ್, ಬದಾಮಿ ಮತ್ತು ಅನೇಕ ಐತಿಹಾಸಿಕ ದೇವಸ್ಥಾನ, ಚರ್ಚುಗಳಲ್ಲಿ ನೋಡಬಹುದು. ಈ ಭಿತ್ತಿಚಿತ್ರಗಳು ಇಂದಿಗೂ ನಮಗೆ ಪ್ರಾಚೀನ ಐತಿಹಾಸಿಕ ಕುರುಹಾಗಿ ಉಳಿದಿವೆ. ಈ ಮ್ಯೂರಲ್ ಪದ್ಧತಿಯಲ್ಲಿ ಪ್ರಾಚೀನ ಕಾಲದಲ್ಲಿ ಹೆಚ್ಚಾಗಿ ಬಳಸಿರುವ ತಂತ್ರವೆಂದರೆ ಫ್ರೆಸ್ಕೋ ಟೆಂಪರಾ ಹಾಗೂ ಮೊಜಾಯಿಕ್ ಪದ್ದತಿಗಳು. ಆದರೆ, ಈಗಿನ ನವ್ಯಕಾಲದಲ್ಲಿ ಈ ಕಲೆ ಸಾಕಷ್ಟು ಬೆಳೆದು, ಕಲಾವಿದರು ಹೆಚ್ಚಿನ ಮಾಧ್ಯಮಗಳಿಂದ ಗೋಡೆಗಳ ಮೇಲೆ ತಮ್ಮ ಕ್ರಿಯಾಶೀಲತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅವುಗಳಲಿ ಮುಖ್ಯವಗಿ ಟೇರಾಕೋಟಾ, ಸಿರಾಮಿಕ್, ಸ್ಯಾಂಡ ಕ್ಯಾಸ್ಟಿಂಗ್ ಮತ್ತು ಮಿಶ್ರಣ ಮಾಧ್ಯಮಗಳು.

ಇವರು ಕಲಬುರ್ಗಿಯವರು ಇವರು ದಿ. ಐಡಿಯಲ್ ಫೈನ್ ಆರ್ಟ ಸಂಸ್ಥೆ ಕಲಬುರ್ಗಿಯಲ್ಲಿ ಡಿ.ಎಂ.ಸಿ, ಬಿ.ಎಫ್.ಎ. ಪೇಂಟಿಂಗ್ ಮತ್ತು ಎಂ. ಎಂ. ಕೆ ಕಾಲೇಜ ಆಫ್ ವಿಜ್ಯೂವಲ್ ಆರ್ಟ್ ಕಲಬುರ್ಗಿಯಲ್ಲಿ ತೇರ್ಗಡೆಯಾಗಿದ್ದು, ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಿಂದ ಮ್ಯೂರಲ್ ವಿಷಯದಲ್ಲಿ ಎಂ.ಎಫ್.ಎ ಪೇಂಟಿಂಗ್ ವ್ಯಾಸಂಗ ಮಾಡಿದ್ದಾರೆ.

ತಮ್ಮ ಅಪೂರ್ವ ಕಲಾಕೃತಿಗಳಿಂದ ಹಲವಾರು ಪ್ರಶಸ್ತಿ ಪುರಸ್ಕಾರಗಳನು ಪಡೆದುಕೊಂಡಿದ್ದಾರೆ. ಕಲಬುರ್ಗಿಯ ದಿ.ಐಡಿಯಲ್ ಫೈನ್ ಆರ್ಟ ಸಂಸ್ಥೆಯ 1998-99 ಕಲಾ ಮಹೋತ್ಸವ ಪ್ರಶಸ್ತಿ. ಕಲಬುರ್ಗಿ ವಿಶ್ವವಿದ್ಯಾಲಯ ಯುವ ಜನೋತ್ಸವ-1998ರ ಪ್ರಶಸ್ತಿ, 1999ರಲ್ಲಿ 3ನೆಯ ಅಖಿಲ ಭಾರತ ಕಲಾಶಿಬಿರ ಮತ್ತು ಪ್ರದರ್ಶನದಲ್ಲಿ ಬಂಗಾರದ ಪದಕ ಪಡೆದಿದ್ದಾರೆ. ಕ್ಯಾಮಲ್ ಆರ್ಟ ಫೌಂಡೇಶನ್ 2ನೆಯ ದಕ್ಷಿಣ ಕರ್ನಾಟಕ ಕಲಾಪ್ರದರ್ಶನ ಮುಂಬೈ-2000, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ವಿಶ್ವವಿದ್ಯಾಲಯ ಪದವೀಧರ ಕಲಾವಿದರಿಗೆ ಕೊಡಮಾಡುವ ಶಿಷ್ಯವೇತನ-2001, ಭಾರತ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಷ್ಟ್ರೀಯ ಶಿಷ್ಯವೇತನ ಪಡೆದಿದ್ದಾರೆ.

ಶಿವಪ್ಪ ಬೆಳಗಲ್

ಯುವ ಶಿಲ್ಪಿ. 'ಅಭಿನವ ತಿರುಪತಿ' ಎಂದೇ ಗುರುತಿಸಿಕೊಂಡಿರುವ ತಾಲೂಕಿನ ಹನುಮಸಾಗರದ ವೆಂಕಟೇಶ ಬೆಟ್ಟ ಏರುವಾಗ ಕಗ್ಗಲ್ಲುಗಳ ಮೇಲೆ ಆಕರ್ಷಕವಾಗಿ ಕೆತ್ತಲಾಗಿರುವ ವಿವಿಧ ದೇವತೆಗಳ ಸುಂದರ ಮೂರ್ತಿಗಳು ದಾರಿ ಹೋಕರ ಗಮನ ಸೆಳೆಯುತ್ತವೆ. ಬೆಟ್ಟವೇರುತ್ತಾ ಮುಂದೆ ಹೋದಂತೆ ಬಂಡೆಯ ಮೇಲೆ ಸುಡುಬಿಸಿಲು, ಗಾಳಿ, ಮಳೆ ಲೆಕ್ಕಿಸದೇ ತಲೆಯ ಮೇಲೊಂದು ಟವೆಲ್, ಪಕ್ಕದಲ್ಲಿ ನೀರಿನ ಮಡಿಕೆ, ಕೈಯಲ್ಲಿ ಸುತ್ತಿಗೆ ಹಿಡಿದುಕೊಂಡು ಏಕಾಗ್ರತೆಯಿಂದ ಕೆತ್ತನೆ ಮಾಡುತ್ತಿರುವ ಯುವ ಶಿಲ್ಪಿ ತನ್ಮಯತೆಯಿಂದ ಕಲ್ಲು ಕುಟುಕುವ ಮೂಲಕ ಅದರಲ್ಲೇ ದೇವರ ರೂಪ ಕಾಣುವ ಅಪರೂಪದ ದೃಶ್ಯ ಕಾಣಬಹುದು.

ಇವರು ವೃತಿಯಿಂದ ಶಿಲ್ಪ ಕಲಾವಿದನಾದರೂ ಬಿಡುವಿನ ಅವಧಿಯಲ್ಲಿ ಕಲೆಯನ್ನೇ ಆರಾಧಿಸುತ್ತ, ಯಾವುದೇ ಫಲಾಪೇಕ್ಷೆ ಇಲ್ಲದೇ ಬೆಟ್ಟದಲ್ಲಿರುವ ಕಗ್ಗಲ್ಲುಗಳಿಗೆ ಜೀವ ತುಂಬುವುದನ್ನೇ ಹವ್ಯಾಸವನ್ನಾಗಿಸಿಕೊಂಡು ಅದರಲ್ಲೇ ತೃಪ್ತಿ ಕಂಡುಕೊಂಡಿದ್ದಾನೆ. ಬಹುತೇಕ ಜನರಿಗೆ ಅಪರಿಚತನಾಗಿಯೇ ಉಳಿದರೂ ಇವರ ಕಲಾಕೃತಿಗಳನ್ನು ಕಂಡವರು ಬೆರಗಾಗುವುದು ಸಹಜ. ಕಲೆಯ ಹಿಂದೆ ಬಡತನ ಅಂಟಿಕೊಂಡಿರುತ್ತದೆ. ಎಂಬ ಮಾತಿನಂತೆ ಏಳನೆಯ ತರಗತಿ ಓದಿಗೆ ಶರಣು ಹೊಡೆದು, ಕಡುಬಡತನದಿಂದ ಓದಿಗೆ ತಿಲಾಂಜಲಿ ಇತ್ತು, ಕಲೆಯ ಮೂಲಕವೇ ಮನೆಯ ಕುಟುಂಬ ನಿರ್ವಹಣೆ ಹೊಣೆಗಾರಿಕೆಯನ್ನು ನಿಭಾಯಿಸುವದ ಅನಿವಾರ್ಯತೆ ಇವರದಾಗಿದೆ.

ಮನೆಗಳ ನಿರ್ಮಾಣ ಕಾರ್ಯ ಕುಟುಂಬ ನಿರ್ವಹಣೆಗೆ ಸಾಧ್ಯವಾದರೆ ದೇವಾಲಯ ನಿರ್ಮಾಣ ಅವುಗಳಿಗೆ ಬೇಕಾಗುವ ಕಲ್ಲಿನ ಕಂಬಗಳು, ಗರುಡಗಂಬ, ಮೂರ್ತಿಗಳನ್ನು ಚಿತ್ತಾಕರ್ಷಕ ಗೋಡೆ ಬಂಡೆಗಳನ್ನು ಕೆತ್ತನೆ ಮಾಡುವ ಕೆಲಸ ಕಲೆಯ ಹಸಿವನ್ನು ತಣಿಸುತ್ತದೆ. ಕೆತ್ತನೆಯಲ್ಲಿ ಪರಿಣಿತಿ ಹೊಂದಿದ್ದರೂ ಕಲೆಯನ್ನು ಗುರುತಿಸುವ ಕೆಲಸ ಆಗಿಲ್ಲ. ಆದರೆ ಸುತ್ತಲಿನ ಗ್ರಾಮಗಳ ಜನ ತಮ್ಮೂರಿನ ದೇವಾಲಯ ನಿರ್ಮಾಣ ಮಾಡುವ ಸಮಯದಲ್ಲಿ ಇವರನ್ನು ಹುಡುಕಿಕೊಂಡು ಬರುವುದುಂಟು. ಮೊದಲು ಹಳ್ಳಿಗಳಲ್ಲಿನ ಮನೆಗಳ ನಿರ್ಮಾಣ ಕಾಯಕದಲ್ಲಿದ್ದ ಅನಂತರ ಅದನ್ನು ಬಿಟ್ಟು ಈಗ ಶಿಲ್ಪ ಕೆತ್ತನೆಯನ್ನೇ ಪ್ರಮುಖ ಕಾಯಕವಾಗಿಸಿಕೊಂಡಿದ್ದಾರೆ.

ದೇವಸ್ಥಾನಗಳ ನಿರ್ಮಾಣದಿಂದ ಸ್ವಲ್ಪ ಆರ್ಥಿಕ ವರಮಾನ ಬಂದರೂ ಬಿಡುವಿನ ಅವಧಿಯನ್ನು ವ್ಯರ್ಥಮಾಡಿಕೊಳ್ಳದ ಇವರು ಬೆಟ್ಟ ಏರುತ್ತಾನೆ. ಹೀಗೆ ಬೆಟ್ಟದ ಮೇಲೆ ಕಲ್ಲಿನಲ್ಲಿ ಕಲೆಯನ್ನೇ ಅರಳಿಸಿರುವುದು ಮೆಚ್ಚುವ ಸಂಗತಿ. ಈ ಕಲಾವಿದೆ ಕೆತ್ತಿರುವ ಕೃಷ್ಣ ಕಾಳಿಂಗನ ಹೆಡೆಯ ಮೇಲೆ ನಿಂತು ಮರ್ದಿಸುವುದು, ಗಣಪತಿ, ಅಂಜನೇಯ, ವೀರಭದ್ರ, ಗ್ರಾಮ ದೇವತೆಗಳ ಚಿತ್ರಗಳು, ನಟರಾಜನ ಭಂಗಿಗಳನ್ನು ನೋಡಿದವರು ಮೂಕ ವಿಸ್ಮಿತರಾಗುವಂತಾಗುತ್ತದೆ. ಆಶ್ಚರ್ಯದ ಸಂಗತಿಯೆಂದರೆ ಆರೇಳು ಅಡಿ ಅಗಲ ಉದ್ದದ

ಮೂರ್ತಿಗಳು ಪೂರ್ಣಗಳಬೇಕಾಗರೆ ಕನಿಷ್ಠ ನಾಲ್ಕೈದು ತಿಂಗಳು ಬೇಕಾಗುತ್ತದೆ ಎಂದರೆ ಆತನಲ್ಲಿರುವ ತಾಳ್ಮೆ ಗಮನಿಸುವಂಥದ್ದು.

ಬೆಟ್ಟದ ಮೇಲಿನ ವೆಂಕಟೇಶ್ವರನ ದರ್ಶನಕ್ಕೆ ಬೇರೆಯವರು ಕಾಯಿ ಕರ್ಪೂರ ಒಯ್ದರೆ ಶಿವಪ್ಪ ವೆಂಕಟೇಶ್ವರನನ್ನು ಆರಾಧಿಸುತ್ತ ಕೆತ್ತನೆಗೆ ಬೇಕಾಗುವ ಚಾಣ, ಸುತ್ತಿಗೆ, ಅಳತೆಪಟ್ಟಿ ಸಮೇತವಗಿ ಹೋಗುವುದೇ ಒಂದು ವಿಶೇಷ. ಮೊದಲೇ ಗುರುತಿಸಿದ ಕಲ್ಲುಗಳಿಗೆ ಜೀವ ತುಂಬುವ ಕಾಯಕಕ್ಕೆ ತೊಡಗುವ ಮೊದಲು ದೇವರ ದರ್ಶನ ಪಡೆಯುತ್ತಾರೆ. ಅಚ್ಚರಿಯ ಸಂಗತಿ ಎಂದರೆ ಬೆಟ್ಟದ ಮೇಲಿನ ಕೆತ್ತನೆಯ ಏಳೆಂಟು ವರ್ಷಗಳಿಂದ ನಿರಂತರ ನಡೆಯುತ್ತಿರುವ ಕಾಯಕಕ್ಕೆ ಇವರು ಯಾರಿಂದಲೂ ಫಲ ನೀರಿಕ್ಷಿಸಿಲ್ಲ. ಇಡೀ ಬೆಟ್ಟದಲ್ಲಿರುವ ಎಲ್ಲ ಕಲ್ಲುಗಳಿಗೂ ಮೂರ್ತ ಸ್ವರೂಪ ನೀಡಬೇಕು. ಆದ್ದರಿಂದ ಈ ಪ್ರದೇಶ ಒಂದು ಸುಂದರ ಕಲಾ ತಾಣವಾಗಬೇಕು ಎಂಬ ಹೆಬ್ಬಯಕೆ ಇವರದು.

ಸೋಮಣ್ಣ ಸಿದ್ದಪ್ಪ

ಶಿಲ್ಪಿಯಾದ ಇವರು 1918ರ ಅಗಸ್ಟ್ 18ರಂದು ಜನಿಸಿದರು. ಚಿಕ್ಕಂದಿನಲ್ಲಿಯೇ ಮನೆಯಲ್ಲಿನ ಕಲಾ ವಾತಾವರಣ ಇವರ ಮೇಲೆ ಪ್ರಭಾವ ಬೀರಿತು. ಜೊತೆಗೆ ವಂಶ ಪಾರಂಪರ್ಯವಾಗಿ ಬಂದ ಶಿಲ್ಪಕಲಾ ವಿದ್ಯೆ ಇವರಲ್ಲಿಯೂ ಅರಳಿ ನಿಂತಿತು. ಇವರ ಕಲಾಗುರುಗಳು ಹೊಂಬಳಿ ಗ್ರಾಮದ ಶಂಕರಪ್ಪನವರು. ಇವರು ಚಿಕ್ಕಂದಿನಲ್ಲಿಯೇ ಹರಪನಹಳ್ಳಿ ತಾಲೂಕಿನ ಚಿಗಚೇರಿ ಗ್ರಾಮದಲ್ಲಿ ಚಿನ್ನ ಬೆಳ್ಳಿ ಕೆಲಸದ ಜೊತೆಗೆ ಚಿಕ್ಕ ಚಿಕ್ಕ ವಿಗ್ರಹಗಳನ್ನು ನಿರ್ಮಿಸುತ್ತಿದ್ದರು.

ಸ್ವತಂತ್ರವಾಗಿ ಶಿಲ್ಪಕಲಾ ಸೇವೆಗೆ 1951ರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇವರು ರಚಿಸಿದ 15 ಅಡಿ ಕಲ್ಲಿನ ರಥದಲ್ಲಿ ದಶಾವತಾರಗಳನ್ನೊಳಗೊಂಡ 29 ವಿಗ್ರಹಗಳಿವೆ. ರಥದ ಗಾಲಿಗಳು ತಿರುಗುವಂತೆ ಈ ವಿಗ್ರಹಗಳ ನಿರ್ಮಾಣದಲ್ಲಿ ಈ ಕಲಾವಿದ ಮುತುವರ್ಜಿಯನ್ನು ಮತ್ತು ಸೂಕ್ಷ್ಮವಾದ ಕೆತ್ತನೆ ಕೆಲಸವನ್ನು ನಿರ್ವಹಿಸಿದ್ದಾರೆ. ವೀರನಾಯಯಣ ಮೂರ್ತಿ, ನಟರಾಜ, ವಿಶ್ವಕರ್ಮ ಹಾಗೂ ಶ್ರೀ ವೀರಭದ್ರೇಶ್ವರ ದೇವರು, ಕಾಳಿಕಾದೇವಿ, ರಾಮಲಕ್ಷ್ಮಣರ

ವಿಗ್ರಹಗಳು, ಹೀಗೆ ಅನೇಕ ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ. ಜೊತೆಗೆ ಗದುಗಿನ ವೀರನಾರಾಯಣ ದೇವಸ್ಥಾನದ ಗೋಪುರದ ಜೀರ್ಣೋದ್ಧಾರ ಮಾಡಿ, ಪ್ರಾಚೀನ ಕಾಲದ ಶಿಲ್ಪಕಲಾವಿದರ ಕಲಾ ಪ್ರತಿಭೆಯ ಸಹಯೋಗಕ್ಕೆ ಸೈ ಎನಿಸಿಕೊಂಡಿದ್ದಾರೆ.

1967ರಲ್ಲಿ ಮೈಸೂರು ದಸರಾ ಪ್ರಶಸ್ತಿ, 1981ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ, ಹಾಗೂ ಬಳ್ಳಾರಿಯ ಅನೇಕ ಕಲಾ ಸಂಘ ಸಂಸ್ಥೆಗಳ, ಸಂಘಟನೆಗಳ ಹಲವಾರು ಪ್ರಶಸ್ತಿಗಳು ಇವರಿಗೆ ದೊರೆತಿವೆ. ಅಲ್ಲದೇ ಇವರ ಕಲಾಕೃತಿಗಳು ಅನೇಕ ಸ್ಥಳಗಳಲ್ಲಿ ಪ್ರದರ್ಶನಗೊಂಡು ಜನರ ಮನಗೆದ್ದಿದೆ. ತಮಿಳು ನಾಡಿನಿಮದ ಹಿಡಿದು ಹಿಮಾಲಯದ ಕೇದಾರೇಶ್ವರದವರೆಗೂ ಸುಮಾರು ಸಾವಿರಕ್ಕೂ ಹೆಚ್ಚು ಇವರ ಶಿಲ್ಪಕಲಾಕೃತಿಗಳು ಸಂಗ್ರಹಗೊಂಡಿವೆ. ಅಲ್ಲದೇ ಡೆನ್ಮಾರ್ಕ್, ಇಟಲಿ ಹಾಗೂ ಅಮೇರಿಕಗಳಲ್ಲಿಯೂ ಇವರ ಶಿಲ್ಪ ಕಲಾಕೃತಿಗಳು ಸಂಗ್ರಹಗೊಂಡಿವೆ. 1963ರಲ್ಲಿ ಗದುಗಿನಲ್ಲಿ ಶಿಲ್ಪಕಲಾ ಶಾಲೆಯೊಂದನ್ನು ಹುಟ್ಟುಹಾಕಿ ಸತತ 42 ವರ್ಷಗಳ ಕಾಲ ಅದನ್ನು ನಡೆಸಿಕೊಂಡು ಬಂದು ಅನೇಕ ಯುವ ಶಿಲ್ಪಕಲಾವಿದರನ್ನು ನಾಡಿಗೆ ಕಾಣಿಕೆಯಾಗಿ ನೀಡಿದ ಹಿರಿಮೆ ಇವರಿಗೆ ಸಲ್ಲುತ್ತದೆ.

ವೈ. ಚಂದ್ರಶೇಖರ ಶಿಲ್ಪಿ

ಸುರಪುರ ತಾಲೂಕಿನ ಕಕ್ಕೆರಿ ಗ್ರಾಮದವರಾದ ಚಂದ್ರಶೇಖರ ಶಿಲ್ಪಿ, ಹಲವು ವರ್ಷಗಳಿಂದ ಕಲಬುರಗಿ ನಗರದ ನ್ಯೂ ರಾಘವೇಂದ್ರ ಕಾಲೋನಿಯಲ್ಲಿ ವಾಸವಾಗಿದ್ದಾರೆ. ಬಾಲ್ಯದಿಂದಲೇ ಬಡಿಗಿ (ಬಡಿಗೇರ್) ವೃತ್ತಿಯಲ್ಲಿ ತೊಡಗಿಸಿಕೊಂಡ ಇವರು ಸುರಪುರ ತಾಲೂಕಿನ ಎಸ್.ಡಿ.ಗೋನಾಳ ಗ್ರಾಮದ ನಾಗಣ್ಣ ಬಡಿಗೇರ ಅವರ ಗುರುಕುಲದಲ್ಲಿ 18 ವರ್ಷ ಶಿಲ್ಪಕಲೆ ತರಬೇತಿ ಪಡೆದಿದ್ದಾರೆ.

ಐತಿಹಾಸಿಕ ದೇವಾಲಯಗಳಿಗೆ ಭೇಟಿ ನಿಡಿ ಅಲ್ಲಿಯ ಕಲೆಯನ್ನು ಅಧ್ಯಯನ ಮಾಡಿ ತಮ್ಮದೇ ಶೈಲಿಯಲ್ಲಿ ಬಳಸಿಕೊಳ್ಳುತ್ತಿರುವ ಅಪರೂಪದ ಕಲಾವಿದ ಇವರು. ಸಾಂಪ್ರದಾಯಿಕ

ಕಲೆಗೆ ಹೆಚ್ಚು ಒತ್ತುಕೊಡುವ ಇವರು, ಆಧುನಿಕ ಕಲೆಯ ಪ್ರಭಾವದಲ್ಲಿ ಸಾಂಪ್ರದಾಯಿಕ ಕಲೆ ನಶಿಸುತ್ತಿದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ.

ಇವರ ಕಲೆ ಗುರುತಿಸಿ ಇಲ್ಲಿನ ಎಚ್.ಕೆ.ಸಿ.ಸಿ.ಐ, ಶರಣಬಸವೇಶ್ವರ ವಿದ್ಯಾಸಂಸ್ಥೆ, ಗಣೇಶ ಮಂದಿರ ಸಂಸ್ಥೆ, ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆ ಸೇರಿದಂತೆ ಇತರ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ.

ಪ್ರಮುಖ ಶಿಲ್ಪ ಕೆತ್ತನೆಗಳು: ದೆಹಲಿಯ ಮಾಜಿ ಸಚಿವ ಚಂದ್ರಹಾಸ ಗುಪ್ತ ಅವರಿಗೆ ಜೋಡು ಕುದುರೆ ಕಾಷ್ಠಶಿಲ್ಪ ಕೆತ್ತನೆ, ಜೇವರ್ಗಿ ತಾಲೂಕಿನ ಕೊಳಕೂರು ಸಿದ್ಧಬಸವೇಶ್ವರ ಕಂಚಿನ ಮೂರ್ತಿ, ಕಕ್ಕೆರಿಯ ನವಗ್ರಹ, ಗಣೇಶ, ಅಂಜನೇಯ ಮೂರ್ತಿ ಕೆತ್ತನೆ, ಶರಣ ಬಸವೇಶ್ವರ ಸಂಸ್ಥಾನದಲ್ಲಿ ಆಯೋಜಿಸಿದ್ದ ಶಿಲ್ಪಕಲಾ ಶಿಬಿರದಲ್ಲಿ ಶರಣಬಸವೇಶ್ವರರ ಜನನದ ಮೂರ್ತಿಶಿಲ್ಪ ಅಲ್ಲದೇ ಆಂಧ್ರ ಪ್ರದೇಶ ಮಹಾರಾಷ್ಟ್ರ ರಾಜ್ಯಗಳಿಗೆ ಇವರ ಶಿಲ್ಪಕಲಾ ಕೃತಿಗಳು ಮಾರಾಟವಾಗಿವೆ.

ಕಾಷ್ಠ ಶಿಲ್ಪಕಲೆಯಲ್ಲಿ ವಿಶೇಷವಾಗಿ ಹೆಸರು ಮಾಡಿರುವ ಇವರು ಶಿಲಾಶಿಲ್ಪ, ಕಂಚಿನ ವಿಗ್ರಹ ಮೂರ್ತಿ ಕೆತ್ತನೆಯಲ್ಲೂ ಪ್ರಸಿದ್ಧರಾಗಿದ್ದಾರೆ.

ಕಲಬುರಗಿ ಜಿಲ್ಲೆಯ ಸೇರಿದಂತೆ ಅನೇಕ ಕಡೆ ಕಾಷ್ಠ ಶಿಲ್ಪದ (ಕಟ್ಟಿಗೆ ಕೆತ್ತನೆ ಕಲೆ) ತಲೆಬಾಗಿಲು, ಮೂರ್ತಿಗಳನ್ನು ಕೆತ್ತನೆ ಮಾಡಿಕೊಟ್ಟಿದಾರೆ. ಸಂಪ್ರಾದಾಯಿಕ ಕಲೆಗೆ ಹೆಚ್ಚು ಮಹತ್ವ ನೀಡುವುದರ ಜೊತೆಗೆ, ಚಾಲುಕ್ಯ, ಹೊಯ್ಸಳರ ಶೈಲಿಯನ್ನು ಬಳಕೆ ಮಾಡುತ್ತಿದ್ದಾರೆ. ಇವರು 2012ನೇ ಸಾಲಿನ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಗೌರವ ಪ್ರಶಸ್ತಿ ಪಾತ್ರರಾಗಿದ್ದಾರೆ.

ಶರಣಪ್ಪ ಈರಣ್ಣ ಪತ್ತಾರ

ಶರಣಪ್ಪ ಪತ್ತಾರ ಅವರು ಯಾದಗಿರ ಜಿಲ್ಲೆಯ ಸುರಪುರ ತಾಲೂಕಿನ ನಗನೂರ ಗ್ರಾಮದಲ್ಲಿ ದಿನಾಂಕ: 10.12.1950 ರಂದು ಜನಿಸಿದ್ದಾರೆ. ಏಳನೇ ತರಗತಿವರೆಗೆ ಮಾತ್ರ ಶಿಕ್ಷಣ ಪಡೆದಿರು ಇವರ ಕಾಷ್ಠ ಮತ್ತು ಶಿಲಾ ಮಾಧ್ಯಮದಲ್ಲಿ ಹೆಚ್ಚಿನ ಪರಿಣಿತಿಯನ್ನು ಹೊಂದಿದ್ದಾರೆ.

ರೇವಣಸಿದ್ದೇಶ್ವರ (ಜೋಯಿ ಕಾಡಮಗೇರಿ), ಮಾರುತೇಶ್ವರ (ನಗನೂರ, ಸುರಪುರ), ಬಲವಂತರ ಶರಣರ ಕಲ್ಲಿನ ಬಾಗಿಲು (ನಗನೂರ, ಸುರಪುರ)ಗಳನ್ನು ಶಿಲಾ ಮಾಧ್ಯಮದಲ್ಲಿ ನಿರ್ಮಿಸಿದ್ದಾರೆ. ಗ್ರಾಮದೇವತೆ (ಗೋಗಿ, ಶಹಾಪುರ), ವೀರಭದ್ರೇಶ್ವರ (ಅಲ್ದಾಳ ಶಹಾಪುರ) ಗೌರಮ್ಮ ಮೂರ್ತಿ (ನಗನೂರ) ಜೋಡು ಕುದುರೆ (ನಗನೂರ)ಗಳನ್ನು ಕಾಷ್ಠ ಮಾಧ್ಯಮದಲ್ಲಿ ರಚಿಸಿದ್ದಾರೆ.

ಶ್ರೀ ಶರಣಬಸವೇಶ್ವರ ಸಂಸ್ಥಾನ ಮಠ ನಗನೂರ ವತಿಯಿಂದ ವಿರಾಟ ವಿಶ್ವಕರ್ಮ ಪ್ರಶಸ್ತಿ, 2008 ಎಐಡಿಓ ಸಂಘಟನೆ ನಗನೂರ ಘಟಕದ ವತಿಯಿಂದ ಇವರನ್ನು ಅಭಿನಂದಿಸಲಾಗಿದೆ. ಇವರ ವ್ಯಕ್ತಿತ್ವ ಮತ್ತು ಕಲೆ ಕುರಿತು ಸಂಯುಕ್ತ ದಿನಪತ್ರಿಕೆಯಲ್ಲಿ ಲೇಖನಗಳು ಪ್ರಕಟಗೊಂಡಿವೆ.

ಶಕುಂತಲಾ ಬಡಿಗೇರ

ಪ್ರಸ್ತುತ ಗುಲಬರ್ಗಾದ ಹೊಸ ರಾಘವೇಂದ್ರ ಕಾಲೋನಿಯಲ್ಲಿ ವಾಸವಾಗಿರುವ ಶಕುಂತಲಾ ಬಡಿಗೇರ್ ಅವರು ದಿನಾಂಕ: 19.06.1969 ರಂದು ಜನಿಸಿರುತ್ತಾರೆ. ಇವರು ಕೇವಲ ಒಂದನೇ ತರಗತಿವರೆಗೆ ಶಿಕ್ಷಣ ಪಡೆದುಕೊಂಡಿದ್ದಾರೆ. ಇವರು ಲೋಹ ಮಾಧ್ಯಮದಲ್ಲಿ ಸಾಕಷ್ಟು ಪರಿಣಿತಿ ಹೊಂದಿದ್ದಾರೆ. ಇವರು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಏರ್ಪಡಿಸುವ ವಾರ್ಷಿಕ ಕಲಾ ಪ್ರದರ್ಶನದಲ್ಲಿ 2005 ರಿಂದ 2011ರವರೆಗೆ ನಿರಂತರವಾಗಿ ಭಾಗವಹಿಸಿದ್ದಾರೆ. 2009ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಏರ್ಪಡಿಸಿದ 6ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನದಲ್ಲಿ ಬಹುಮಾನ ಲಭಿಸಿವೆ.

ವಿನೋದಕುಮಾರ ವಿಶ್ವಂಭರ ಪೋದ್ದಾರ

ಇವರು ದಿನಾಂಕ: 24.09.1985ರಂದು ಕಲಬುರಗಿಯಲ್ಲಿ ಜನಿಸಿದ್ದಾರೆ. ಇವರು ದೃಶ್ಯಕಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎಫ್.ಎ ಸ್ನಾತಕೋತ್ತರ ಪದವಿ

ಪಡೆದುಕೊಂಡಿದ್ದಾರೆ. ಇವು ಕಾಷ್ಠ ಶಿಲ್ಪಕಲಾ ಪ್ರಕಾರದಲ್ಲಿ ಪರಿಣಿತಿ ಸಾಧಿಸಿದ್ದು, ಖ್ಯಾತ ಶಿಲ್ಪಕಲಾವಿದರಾದ ಮಾನಯ್ಯ ಬಡಿಗೇರ್, ಸುರೇಶ ಗುಡಿಗಾರ್, ಚಂದ್ರಶೇಖರ ವೈ ಶಿಲ್ಪಿಗಳೊಂದಿಗೆ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ವಿಜಯ ಗಣೇಶ (ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರು), ಬುದ್ಧಮುಖ (ಅಮೇರಿಕಾ) ಕಾಳಿಕಾದೇವಿ (ಕಲಬುರಗಿ), ಶ್ರೀ ಚೆನ್ನವೀರ ಶಿವಯೋಗಿ (ಹಾರಕೂಡ, ಬೀದರ) ಗಣೇಶ (ಧುತ್ತರಗಾಂವ) ಲಿಂಗನಂದಿ (ಕೆಂಗೇರಿ ಬೆಂಗಳೂರು) ಹೀಗೆ ಇವರು ಕಾಷ್ಠ ಮತ್ತು ಶಿಲಾ ಮಾಧ್ಯಮದಲ್ಲಿ ರಚಿಸಿದ ಅನೇಕ ಶಿಲ್ಪಗಳು ಬೇರೆ ಬೇರೆ ಸ್ಥಳಗಳಲ್ಲಿ ಸಂಗ್ರಹಗೊಂಡಿವೆ.

ಇವರು ಕಲಬುರ್ಗಿ, ಬೆಂಗಳೂರು, ಮತ್ತು ಹೈದ್ರಾಬಾದಗಳಲ್ಲಿ ಶಿಲ್ಪಕಲಾ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2015ರ 11ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನದ ಬಹುಮಾನ ಪಡೆದುಕೊಂಡಿದ್ದಾರೆ.

ರಾಜಕುಮಾರ ಚಂದ್ರಶೇಖರ

ರಾಜಕುಮಾರ ಅವರು ಕಲಬುರಗಿ ಜಿಲ್ಲೆಯ ಮಾಲಗತ್ತಿಯಲ್ಲಿ 29.12.1982ರಂದು ಜನಿಸಿರುತ್ತಾರೆ. ಇವರು ಶಿಲ್ಪಕಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಬಿ.ಎಫ್.ಎ ಪದವಿಕೊಂಡಿದ್ದಾರೆ. ಖ್ಯಾತ ಶಿಲ್ಪಿಗಳಾದ ಶ್ರೀ ಕಾಳಪ್ಪ ಬಡಿಗೇರ್ (ಧಾರವಾಡ) ಶ್ರೀ ಗುಣವಂತ ಭಟ್ (ಕಾರ್ಕಳ) ರಲ್ಲಿ ಶಿಲ್ಪಕಲಾ ಶಿಕ್ಷಣ ಪಡೆದುಕೊಂಡಿದ್ದಾರೆ.

ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ (ಧಾರವಾಡ) 2001, ಕನ್ನಡ ವಿಶ್ವವಿದ್ಯಾಲಯ ಹಂಪಿ, ಬದಾಮಿ 2002, ಪ್ರವಾಸೋದ್ಯಮ ಇಲಾಖೆ ಬಾಗಲಕೋಟೆ 2003, ನುಡಿಹಬ್ಬ–12 ಕನ್ನಡ ವಿಶ್ವವಿದ್ಯಾಲಯ ಹಂಪಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು 2006, ಹೀಗೆ ಅನೇಕ ಸಂಸ್ಥೆಗಳಲ್ಲಿ ಇವರು ಶಿಲ್ಪಕಲಾ ಪ್ರದರ್ಶನವನ್ನು ಏರ್ಪಡಿಸಿದ್ದಾರೆ.

ರಾಜಕಾರಣಿಗಳಾದ ತಂಬಾಕೆಯವರ ಶಿಲ್ಪ, ಭಗತಸಿಂಗ್, ಅಂಬೇಡ್ಕರ್ ಮತ್ತು ಅನೇಕ ಶಿವಶರಣೆಯರ ಶಿಲ್ಪಗಳನ್ನು ವಿವಿಧ ಮಾಧ್ಯಮಗಳಲ್ಲಿ ನಿರ್ಮಿಸಿದ್ದಾರೆ. ಜಿಂದಾಲ್ ವಿಜಯನಗರ ಸ್ಟೀಲ್ ಲಿಮಿಟೆಡ್ ತೋರನಹಳ್ಳಿ, ಕನ್ನಡ ವಿಶ್ವವಿದ್ಯಾಲಯ ಹಂಪಿಯ ನುಡಿಹಬ್ಬ–2006, ಶಿಲಾ ಶಿಲ್ಪಕಲಾ ಶಿಬಿರ–2011, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು 2016. ಹೀಗೆ ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಚಾಲುಕ್ಯ ಉತ್ಸವ–ಬಾಗಲಕೋಟೆ (2002), ಕರ್ನಾಟಕ ಕಲಾಮೇಳ ಬೆಂಗಳೂರು–2003, ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು (2004), ವಿಜಯ ಲಲಿತಕಲಾ ಮಹಾವಿದ್ಯಾಲಯ, ಇಳಕಲ್ (1992) ಏರ್ಪಡಿಸಿದ ಕಲಾ ಸ್ಪರ್ದೆಗಳಲ್ಲಿ ಇವರ ಶಿಲ್ಪಕಲಾಕೃತಿಗಳು ಬಹುಮಾನ ಪಡೆದುಕೊಂಡಿವೆ.

ಮಲ್ಲಿಕಾರ್ಜುನ ಬಿ.ಚಿಕನಹಳ್ಳಿ

ಪ್ರಸ್ತುತ ಕಲಬುರಗಿ ಎನ್.ಆರ್. ಕಾಲೋನಿ ವಾಸವಾಗಿರುವ ಮಲ್ಲಿಕಾರ್ಜುನ ಬಿ. ಚಿಕನಹಳ್ಳಿ ಅವರು ದಿನಾಂಕ: 10.05.1976ರಂದು ಜನಿಸಿದ್ದಾರೆ. ಗುರುಗಳಾದ ನಾಡೋಜ ನಾಗಣ್ಣ ಮತ್ತು ಮಾನಯ್ಯ ಎನ್.ಬಡಿಗೇರ್ ಮಾರ್ಗದರ್ಶನದಲ್ಲಿ ಶಿಲೆ ಮತ್ತು ಲೋಹ ಮಾಧ್ಯಮದಲ್ಲಿ ಪರಿಣಿತಿ ಪಡೆದುಕೊಳ್ಳುತ್ತಾರೆ.

ಇವರ ಕಲಾಕೃತಿಗಳು ಗಣೇಶ, ಗೌರಿ, ಸಿಗಿ, ದುರ್ಗಾದೇವಿ, ಕುದುರೆಗಳು, ಪೂಜಾ ರೂಮಿನ ಬಾಗಿಲು, ದ್ವಾರ ಬಾಗಿಲು, ಪಲ್ಲಕ್ಕಿ ಇವರ ಪ್ರಮುಖ ಕಾಷ್ಠಶಿಲ್ಪಗಳು, ಮಹಾರಾಷ್ಟ್ರ, ಮೈಸೂರು, ಬೆಂಗಳೂರು, ಕಲಬುರಗಿ, ಯಾದಗಿರಿ ಇನ್ನೂ ಅನೇಕ ಸ್ಥಳಗಳಲ್ಲಿ ಇವರ ಶಿಲ್ಪಕಲಾಕೃತಿಗಳು ಸಂಗ್ರಹಗೊಂಡಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 3ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಬಹುಮಾನ ಮತ್ತು ರಾಮ್ಸ್‌ಸನ್ಸ್ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಬೀದರ, ಬೆಂಗಳೂರು, ಕಲಬುರಗಿ,

ಸುರಪುರ, ನಾಗಪುರ, ಚಂಡೀಘಡ ಮುಂತಾದ ಸ್ಥಳಗಳಲ್ಲಿ ಇವರು ಶಿಲ್ಪಕಲಾ ಪ್ರದರ್ಶನವನ್ನು ಏರ್ಪಡಿಸಿದ್ದಾರೆ.

ನಾಗರಾಜ ಕಂಬಾರ

ಯಾದಗಿರಿ ಜಿಲ್ಲೆಯ ಗಾಜರಕೋಟದವರಾದ ನಾಗರಾಜ ಕಂಬಾರ ಅವರು ದಿನಾಂಕ: 01.06.1978ರಂದು ಜನಿಸಿರುತ್ತಾರೆ. ಕೇವಲ 10ನೇ ತರಗತಿವರೆಗೆ ಓದಿರುವ ನಾಗರಾಜ ಅವರು ಗುರುಗಳಾದ ಶ್ರೀ ಭೀಮಣ್ಣ ಕಂಬಾರ ಮಾರ್ಗದರ್ಶನದಲ್ಲಿ ಲೋಹ ಶಿಲ್ಪ ಮಾಧ್ಯಮದಲ್ಲಿ ಪರಿಣಿತಿಯನ್ನು ಸಾಧಿಸಿದ್ದಾರೆ. ಮೈಲಾರಲಿಂಗೇಶ್ವರ ಕುದುರೆ (ಮೈಲಾಪುರ) ಮುಸ್ಲಿಂ ಪಿರ್ಲಗಳು (ರಂಜೋಳ) ಮುಖಲಿಂಗ (ಗಾಜರಕೋಟೆ) ನಂದಿ, ದ್ವೀಪಲಕ್ಷ್ಮೀ ಕಾಳಿಕಾದೇವಿ ಮೂರ್ತಿ ಬೃಹತ್ ಆಕಾರದ ಗ್ರಾಮದೇವತೆಗಳು, ಅಂಬಿಗರ ಚೌಡಯ್ಯ, ವೀರಭದ್ರ ಹೀಗೆ ಅನೇಕ ಶಿಲ್ಪಗಳನ್ನು ರಚಿಸಿದ್ದಾರೆ.

ಸಾಂಪ್ರದಾಯಿಕ ಕಂಚಿ ನೇರಕಲಾ ಶಿಲ್ಪಕಲಾ ಶಿಬಿರ ಮೈಸೂರು–2005, ಶ್ರೀನಿವಾಸ ಸರಡಗಿಯಲ್ಲಿ ಶಿಲ್ಪಕೃತಿಗಳ ಪ್ರದರ್ಶನ–2007, ಜನಪದ ಶೈಲಿಯ ಶಿಲ್ಪಕಲಾ ಶಿಬಿರ ಜೋಗರಡೊಡ್ಡಿ ಬಿಡದಿ–2007, ಪಾರಂಪರಿಕ ಎರಕದ ಪ್ರತಿಮೆ ರಚನಾ ಶಿಬಿರ ಶಿವಾರಪಟ್ಟಣ–2010 ಹೀಗೆ ಅನೇಕ ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಶ್ರೀಶೈಲ ಬಸಣ್ಣ ಬಡಿಗೇರ

ನಾಡಿನ ಲೋಹದ ಏರಕ ಶಿಲ್ಪಕಲಾ ಕ್ಷೇತ್ರದಲ್ಲಿ ಅತೀ ಚಿಕ್ಕ ಮೂರ್ತಿಯಿಂದ ಹಿಡಿದು 3 ಅಡಿ ಎತ್ತರದ ಮೂರ್ತಿ ನಿರ್ಮಿಸುವಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಉದಯೋನ್ಮುಖ ಶಿಲ್ಪಿಗಳಲ್ಲಿ ಶ್ರೀಶೈಲ ಬಸಣ್ಣ ಬಡಿಗೇರ ಪ್ರಮುಖರು 20 ಜೂನ 1984 ರಲ್ಲಿ ಸುರಪೂರ ತಾಲೂಕಿನ ಹಂದ್ರಾಳ ಗೋನಾಳ ಎಸ್.ಡಿ. ಗ್ರಾಮದಲ್ಲಿ ಜನಿಸಿರುವ ಶ್ರೀಶೈಲ ಕಲಾ ಸ್ನಾತಕೋತ್ತರ ಪದವೀಧರರು.

ನಾಡಿನ ಹೆಸರಾಂತ ಲೋಹ ಶಿಲ್ಪಿ ಮಾನಯ್ಯ ಎನ್.ಬಡಿಗೇರ ಇವರ ಗರಡಿಯಲ್ಲಿ ಪಳಗುತ್ತಿರುವ ಶ್ರೀಶೈಲ ಈಗಾಗಲೇ ತಮ್ಮ ಕಲಾಕೃತಿಗಳ ಮೂಲಕ ಗಮನ ಸೆಳೆದಿದ್ದಾರೆ. ಶಿವಲಿಂಗ ಮುಖಗಳು, ಗಣೇಶ, ಗೌರಿ, ನಂದಿ, ಶಿವ, ಲಕ್ಷ್ಮಿ, ಸರಸ್ವತಿ, ವೆಂಕಟೇಶ್ವರ, ತ್ರಿಪುರಾಂತಕಮೂರ್ತಿ ಮತ್ತು ವಿವಿಧ ಪ್ರಾಣಿ–ಪಕ್ಷಿಗಳು ಇವರು ರಚಿಸಿರುವ ಕಲಾಕೃತಿಗಳು.

ಕರ್ನಾಟಕ ಶಿಲ್ಪಕಲಾ ಅಕಾಡಮಿಯ 2005, 2006, 2007, 2010 ರ ವಾರ್ಷಿಕ ಶಿಲ್ಪಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಕಲಾಸಕ್ತರ, ವಿಮರ್ಶಕರ ಗಮನ ಸೆಳೆದಿದ್ದಾರೆ. ಶಿವಾರ ಪಟ್ಟಣದಲ್ಲಿ ಶಿಲ್ಪಾಗಮೋಕ್ತ ಪಾರಂಪರಿಕ ಏರಕದ ಲೋಹ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿ ಶಿಲ್ಪ ಶಾಸ್ತ್ರೀಯ ರೂಪ ಲಕ್ಷಣ ಮತ್ತು ಮಾನ ಲಕ್ಷಣದ ಅನುಸಾರ ಮೂರ್ತಿ ನಿರ್ಮಿಸಿ ಕೊಟ್ಟಿದ್ದಾರೆ, ಹೀಗೆ ಹಲವಾರು ಲೋಹಶಿಲ್ಪ ಶಿಬಿರಗಳಲ್ಲಿ ಭಾಗವಹಿಸಿ ಅನುಭವವನ್ನು ಪಡೆದಿದ್ದಾರೆ.

ಕರ್ನಾಟಕ ಶಿಲ್ಪಕಲಾ ಅಕಾಡಮಿಯ 2005 ರ ವಾರ್ಷಿಕ ಶಿಲ್ಪಕಲಾ ಪ್ರದರ್ಶನದ ಪ್ರಶಸ್ತಿ, ಕಲಬುರ್ಗಿಯ ಶರಣಬಸವೇಶ್ವರ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯದ 2006 ರ ವಾರ್ಷಿಕ ಚಿತ್ರಕಲಾ ಸ್ಪರ್ದೆಯ ಪ್ರಶಸ್ತಿ, 2008ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಅಂತರ ಮಹಾವಿದ್ಯಾಲಯ ಯುವಜನ ಮಹೋತ್ಸವದಲ್ಲಿ ತಾಯಿ–ಮಗು ಶಿಲ್ಪ ರಚನೆ ಸ್ಪರ್ದೆಯಲ್ಲಿ ಸುವರ್ಣ ಪದಕ ಮತ್ತು ಇನ್‌ಸ್ಟಾಲೇಶನ್ ಸ್ಪರ್ದೆಯಲ್ಲಿ ಕಂಚಿನ ಪದಕ, 2008 ರಲ್ಲಿ ಯುನಿವರ್ಸಿಟಿ ಆಫ್ ಕಾಲಿಕಟ್‌ದಲ್ಲಿ ನಡೆದ ಇಂಟರ್ ಯುನಿವರ್ಸಿಟಿ ಸೌತ್ ಜೂನ್ ಯುತ್ ಫೆಸ್ಟಿವಲ್‌ದಲ್ಲಿ ಭಾಗವಹಿಸಿದ್ದಾರೆ.

ಬಸವರಾಜ ಎಸ್.ಕಲೆಗಾರ:

ಮೂಲತಃ ಚಿತ್ರಕಲಾವಿದ ಮತ್ತು ಕಲಾ ಸಾಹಿತಿಯಾಗಿರುವ ಬಸವರಾಜ ಎಸ್ ಕಲೆಗಾರ ಅವರು ಯಾದಿಗಿರಿ ಜಿಲ್ಲೆ ಶಹಾಪುರ ತಾಲೂಕಿನ ಕೊಂಕಲ್ ಗ್ರಾಮದಲ್ಲಿ ತಳಸಮುದಾಯದ

ಕುಟುಂಬದಲ್ಲಿ ೧೯೮೪ರಲ್ಲಿ ಜನಿಸಿದ್ದಾರೆ. ಚಿತ್ರಕಲಾಕೃತಿ ಮತ್ತು ಕಲಾಸಾಹಿತ್ಯದ ರಚನೆಯ ಜೊತೆ ಜೊತೆಗೆ ಇವರು ಕೆಲವು ಮರಳು ಶಿಲ್ಪಗಳನ್ನು ನಿರ್ಮಿಸಿ ಗಮನ ಸೆಳೆದಿದ್ದಾರೆ.

ಕೊಂಕಲ್ ಗ್ರಾಮದ ಕೃಷ್ಣಾನದಿಯ ದಡದಲ್ಲಿ ವಿಶೇಷವಾಗಿ ಮರಳು ಶಿಲ್ಪರಚನೆ, ಬುದ್ಧ, ಮಹಾತ್ಮಗಾಂಧಿ, ಜಪಾನದಲ್ಲಿ ಸಂಭವಿಸಿದ ಸುನಾಮಿ ದುರಂತ, ಸ್ವಾಮಿ ವಿವೇಕಾನಂದ, ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ದೆಹಲಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರ, (ಗ್ಯಾಂಗರೇಪ್ ಪ್ರಕರಣ)ಕ್ಕೆ ಸಂಬಂಧಿಸಿದಂತೆ ಮರಳು ಶಿಲ್ಪಗಳನ್ನು ರಚಿಸಿದ್ದಾರೆ. ಈ ಮರಳು ಶಿಲ್ಪ ರಚನಾ ಕಾರ್ಯದಲ್ಲಿ ಇವರಿಗೆ ಚಿತ್ರಕಲಾವಿದ್ಯಾರ್ಥಿಯಾದ ಯಂಕಪ್ಪ ನಾಟೀಕಾರ ಸಹಾಯಕರಾಗಿ ಈರಪ್ಪ ಎಚ್, ಚಲುವಾದಿ ಮಲ್ಲೇಶ ಕರಿಗೂಳಿ ಸಹಕರಿಸಿದ್ದಾರೆ.

ಈ ಮರಳು ಶಿಲ್ಪಗಳು ಕೊಂಕಲ್ ಗ್ರಾಮದ ಜನತೆಗೆ ಹೊಸ ದೃಶ್ಯಾನುಭವ ನೀಡಿವೆ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಮರಳು ಶಿಲ್ಪಗಳ ಕೊರತೆಯಿತ್ತು. ಆ ಕೊರತೆಯನ್ನು ಬಸವರಾಜ ಎಸ್.ಕಲೆಗಾರ ಅವರು ನೀಗಿಸಿದ್ದಾರೆ. ಇವರು ನಿರ್ಮಿಸಿದ ಮರಳು ಶಿಲ್ಪಗಳು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ.

ಬಸವರಾಜ ಕಲೆಗಾರ ಅವರು ಚಿತ್ರ-ಶಿಲ್ಪಕಲೆಗೆ ಸಂಬಂಧಿಸಿದ ಹಲವಾರು ಲೇಖನಗಳನ್ನು ವಿವಿಧ ಪತ್ರಿಕೆಗಳಿಗೆ ಬರೆದಿದ್ದಾರೆ. ದೃಶ್ಯಕಲೆಗೆ ಸಂಬಂಧಿಸಿದಂತೆ ಸುಮಾರು ಐದಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ದೃಶ್ಯಕಲಾ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ ಅಧ್ಯಯನ ಮಾಡುತ್ತಿದ್ದಾರೆ.

ಗಾಯತ್ರಿ ಎ. ಶಿಲ್ಪಿ

೧೨.೦೭.೧೯೮೮ ರಂದು ಕಲಬುರಗಿಯಲ್ಲಿ ಗಾಯಿತ್ರಿ ಎ. ಶಿಲ್ಪಿ ಅವರು ಕಾಷ್ಠ ಶಿಲ್ಪ ಮತ್ತು ಲೋಹ ಮಾಧ್ಯಮದಲ್ಲಿ ಸಾಕಷ್ಟು ಪರಿಣಿತಿ ಪಡೆದುಕೊಂಡಿದ್ದಾರೆ. ಖ್ಯಾತ ಶಿಲ್ಪಕಲಾವಿದ ರಾಜ್ಯ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ವೈ. ಶಿಲ್ಪಿ ಅವರ ಮಾರ್ಗದರ್ಶನದಲ್ಲಿ ಇವರು

ಸಂಪ್ರದಾಯಿಕ ಶಿಲ್ಪಕಲಾ ಅಧ್ಯಯನ ಮಾಡಿದ್ದಾರೆ. ಇವರು ೨೦೧೩ರಲ್ಲಿ ಜನಪದ ಲೋಕ, ರಾಮನಗರ, ೨೦೧೨ರಲ್ಲಿ ಕೆನರಾ ಬ್ಯಾಂಕ್ ಅವರ ಪ್ರಾಯೋಜಕತ್ವದಲ್ಲಿ ಬೆಂಗಳೂರಿನ ಕಬ್ಬನ್ ಪಾರ್ಕನಲ್ಲಿ ಏರ್ಪಡಿಸಿದ ಶಿಲ್ಪ ಕಲಾ ಶಿಬಿರ, ಶಿಲ್ಪಕಲಾ ಅಕಾಡೆಮಿ ವತಿಯಿಂದ ೨೦೦೫ರಲ್ಲಿ ಮತ್ತು ೨೦೧೭ರಲ್ಲಿ ಕಲಬುರಗಿಯಲ್ಲಿ ಏರ್ಪಡಿಸಿದ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿ ಅತ್ಯುತ್ತಮವಾದ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ.

ಸರಸ್ವತಿ, ಕುಬೇರ್, ಗಣೇಶ, ಆನೆ, ಹಂಸ, ಕೀರ್ತಿ ಮುಖ, ಲಕ್ಷ್ಮೀ, ಸಿದ್ದೇಶ್ವರ ಮೂರ್ತಿ ಇವರು ರಚಿಸಿದ ಪ್ರಮುಖ ಕಲಾಕೃತಿಗಳು, ಇವು ಬೆಂಗಳೂರು, ಜೇವರ್ಗಿ, ಕಲಬುರಗಿ, ಮೈಸೂರು ಮತ್ತು ಹೊರದೇಶಗಳಾದ ಸ್ಕಾಟ್‌ಲ್ಯಾಂಡ್ ಮತ್ತು ಇಟಲಿಯಲ್ಲಿ ಸಂಗರಹಗೊಂಡಿವೆ.

ಪ್ರಶಸ್ತಿ ಬಹುಮಾನಗಳು: ಬಸವ ಸಮಿತಿಯ ವಿಲಾಸವತಿ ಖೂಬಾ ಅವರ ನೆರವಿನಲ್ಲಿ ನಡೆಯುವ ಅಕ್ಕನ ಸಮ್ಮೇಳನದಲ್ಲಿ ಪ್ರಶಸ್ತಿ ೨೦೦೯; ರಾಜ್ಯ ಮಟ್ಟದಲ್ಲಿ ಮಹಿಳಾ ಯುವ ಜನೋತ್ಸವದಲ್ಲಿ ಪ್ರಥಮ ಬಹುಮಾನ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೧೦ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಬಹುಮಾನ ಪಡೆದುಕೊಂಡಿದ್ದಾರೆ.

ಶಂಭುಲಿಂಗಪ್ಪ ಶಿಲ್ಪಿ

೦೭.೦೫.೧೯೬೯ರಂದು ಕಲಬುರ್ಗಿ ಜಿಲ್ಲೆಯ ಚಿತ್ತಾಪುರದಲ್ಲಿ ಜನಿಸಿದ ಶಂಭುಲಿಂಗಪ್ಪ ಶಿಲ್ಪಿ ಅವರು ಶಿಲೆ, ಲೋಹ, ಕಾಷ್ಠ, ಸಿಮೆಂಟ್ ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಲ್ಲಿ ಶಿಲ್ಪಕಲಾ ಕೃತಿಗಳನ್ನು ರಚಿಸುತ್ತಾರೆ.

ಇವರು ಅಂಬಿರ ಚೌಡಯ್ಯ, ಬಸವೇಶ್ವರ, ಎಲ್ಲಪ್ಪ ಮಹಾರಾಜ, ಹಾರಕೂಡ ಚೆನ್ನಬಸವನ ಶಿವಯೋಗಿಗಳು ಮತ್ತು ಕಾರ್ಗಿಲ್ ಯೋಧ ರಮೇಶ ಪಾಟೀಲ ಅವರ ವ್ಯಕ್ತಿಶಿಲ್ಪಗಳನ್ನು ರಚಿಸಿದ್ದಾರೆ. ಲಕ್ಷ್ಮೀ, ಸರಸ್ವತಿ, ಕಾಳಿಕಾ, ಭಾಗ್ಯವಂತಿ, ಸಿದ್ಧಲಿಂಗೇಶ್ವರ, ಸಿದ್ದರಾಮೇಶ್ವರ, ನಂದಿ, ಮಹಿಷಮರ್ದಿನಿ, ಸಿಂಹ, ಕುದುರೆ ಹೀಗೆ ಅನೇಕ ದೇವತಾ

ವಿಗ್ರಹಗಳನ್ನು ಶಿಲೆ ಮಾಧ್ಯಮದಲ್ಲಿ ರಚಿಸಿದ್ದಾರೆ. ವಿವಿಧ ಪ್ರಭಾವಳಿಗಳು, ಮುಕುಟ, ಆಭರಣಗಳು, ಮಂದಿರದ ಚೌಕಟ್ಟು ಮತ್ತು ಪಲ್ಲಕಿಗಳನ್ನು ಕಂಚು ಮತ್ತು ಬೆಳ್ಳಿ ಮಾಧ್ಯಮಗಳಲ್ಲಿ ನಿರ್ಮಿಸಿದ್ದಾರೆ. ಪ್ರಶಸ್ತಿ/ ಬಹುಮಾನಗಳು ಉತ್ತಮ ಶಿಲ್ಪಕಲಾವಿದ ಪ್ರಶಸ್ತಿ ನಿಜಶರಣ ಅಂಬಿಗರ ಚೌಡಯ್ಯ ಸಮಿತಿ, ಸನ್ಮಾನ-ಜಗಜ್ಯೋತಿ ಬಸವೇಶ್ವರ ಮೂರ್ತಿ ಪ್ರತಿಷ್ಠಾನ ಸಮಿತಿ, ಬೀದರ್-೨೦೦೫, ಸನ್ಮಾನ-ಆರ್.ಸಿ. ಲಾಹೋಟಿಯವರಿಂದ, ವಿಜ್ಞಾನೇಶ್ವರ ಹಾಗೂ ಯಾಜ್ಞವಲ್ಕ್ಯ ಮೂರ್ತಿ ಪ್ರತಿಷ್ಠಾಪನೆ ಸಂದರ್ಭ.

ಮಂಜುನಾಥ ಈ ಚಿತ್ರಗಾರ

೨೦.೧೨.೧೯೭೭ರಂದು ಕೊಪ್ಪಳ ಜಿಲ್ಲೆಯ ಕಿನ್ನಾಳದಲ್ಲಿ ಜನಿಸಿದ ಮಂಜುನಾಥ ಈ ಚಿತ್ರಗಾರ ಅವರು ಕಿನ್ನಾಳ ಶೈಲಿಯ ಹಲವಾರು ಶಿಲ್ಪಗಳನ್ನು ರಚಿಸಿದ್ದಾರೆ. ಗ್ರಾಮ ದೇವತೆಗಳು, ದ್ವಾರಪಾಲಕರು, ದಶವತಾರಗಳು, ಕಿನ್ನಾಳ ಗೌರಿ, ಉತ್ಸವ ಮೂರ್ತಿಗಳು ಮತ್ತು ಅಲಂಕಾರಿಕ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೧೨ ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನದಲ್ಲಿ ಜಾನಪದ ಪ್ರಕಾರದಲ್ಲಿ ಬಹುಮಾನ ಪುರಸ್ಕೃತರಾಗಿದ್ದಾರೆ.

ಮಹಾದೇವ ವೀರಭದ್ರಪ್ಪ ವಿಶ್ವಕರ್ಮ

ದಿನಾಂಕ: ೦೫.೦೫.೧೯೭೭ರಂದು ಕಲಬುರಗಿಯಲ್ಲಿ ಜನಿಸಿದ ಮಹಾದೇವ ವೀರಭದ್ರಪ್ಪ ವಿಶ್ವಕರ್ಮ ಅವರು ಕಾಷ್ಠ ಶಿಲ್ಪಕಲಾ ಮಾಧ್ಯಮದಲ್ಲಿ ಹಲವಾರು ಶಿಲ್ಪಗಳನ್ನು ನಿರ್ಮಿಸಿದ್ದಾರೆ.

ಲಕ್ಷ್ಮೀ ಮತ್ತು ಕೃಷ್ಣ (ಅಲ್‌ಮೇಲ) ಮರಗಮ್ಮ ಮತ್ತು ಗೌರಮ್ಮ (ವರವಿ, ವಸ್ತಾರಿ) ದೇವರ ಪಲ್ಲಕ್ಕಿ (ಔರಾದ) ಗಣೇಶ (ಶಹಾಪುರ) ದತ್ತಾತ್ರೇಯ ಮೂರ್ತಿ (ಗಾಣಗಾಪುರ) ಹೀಗೆ ಅನೇಕ ದೇವರ ಶಿಲ್ಪಗಳು, ಕುದುರೆಗಳು ಹಾಗೂ ತಲಬಾಗಿಲುಗಳನ್ನು ಕಾಷ್ಟ ಮಾಧ್ಯಮದಲ್ಲಿ ಶಿಲ್ಪಕಲಾಕೃತಿಗಳನ್ನು ನಿರ್ಮಿಸಿದ್ದಾರೆ. ಇವರು ಅನೇಕ ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿದ್ದಾರೆ.

ಬಿದರಿ ಕಲೆಗಳು ಪ್ರಮುಖ ಕುಶಲಕರ್ಮಿಗಳು:

ಬಿದ್ರಿ ಕಲೆಯ ಕರಕುಶಲಕಾರಲ್ಲಿ ಮೊದಲಿನಿಂದಲೂ ಹೆಚ್ಚಾಗಿ ಮುಸ್ಲಿಂರನ್ನೇ ಕಾಣುತ್ತೇವೆ. ಕಾರಣ ಹೈದ್ರಾಬಾದ ಕರ್ನಾಟಕ ಪ್ರಾಂತದ ಬೀದರ ಜಿಲ್ಲೆ ಸುಮಾರು ಐದಾರು ನೂರು ವರ್ಷಗಳ ಕಾಲ ಮುಸ್ಲಿಂ ಅರಸರ ಆಳ್ವಿಕೆಯಲ್ಲಿದ್ದುದು ಹಾಗೂ ಈ ಕಲೆಗೆ ಮೂಲ ಪ್ರೇರಣೆ ಸಿರಿಯಾ, ಇರಾನ ಮುಂತಾದ ಕಲೆ ಹಾಗೂ ಕರಕುಶಕರ್ಮಿಗಳ ಪ್ರಭಾವದ ಜೊತೆಗೆ ಆರಂಭದಿಂದಲೂ ಬಿದ್ರಿಕಲೆಗೆ ಉಮರ್ ಖಯಾಮ್, ರುಬಾಯತ್ ಶಿಲ್ಪ ಮಾದರಿಯ ಪರ್ಶಿಯನ್ ಸಂಪ್ರದಾಯವು ಅಚ್ಚೊತ್ತಿ ಪ್ರಮುಖವಾಗಿ ಮುಸ್ಲಿಮರನ್ನೇ ಆಕರ್ಷಿಸಿದೆ.

ಮುಸ್ಲಿಂರಲ್ಲಿ ಸ್ಥಿರಾಸ್ತಿಯನ್ನು ಹೊಂದಿದವರು ಅತ್ಯಂತ ವಿರಳ. ಹೀಗಾಗಿ ಅವರು ಉದರ ನಿಮಿತ್ತ ಇತರೆ ಉದ್ಯೋಗಗಳನ್ನು ಆಶ್ರಯಗಳನ್ನು ಹುಡುಕಿಕೊಂಡು ಹೋಗುವುದು ಅನಿವಾರ್ಯವೂ ಸಹ ಆಗಿತ್ತು. ಹೀಗಾಗಿ ಅವರ ಆಯ್ಕೆ ಶ್ರಮ ಸಂಸ್ಕೃತಿಯ ಕಸುಬನ್ನೇ ಹುಡುಕಿಕೊಂಡು ಹೋಗಿದ್ದು ಬಿದ್ರಿ ಕಲೆಯನ್ನೇ ಹಿಂದೂಗಳು ಸಹಜವಾಗಿ ಸ್ಥಿರಾಸ್ತಿಯನ್ನು ಹೊಂದಿರುವುದಿರಿಂದ ಅವರು ಬಿದ್ರಿ ಕಲೆಯಂತ ಕಸುಬಿನಿಂದ ದೂರವಿರುವುದು ಅಚ್ಚರಿಯೆನಲ್ಲ. ಹೀಗಾಗಿ ಬಿದ್ರಿ ಕಲೆಯ ಕುಶಲಗಾರರಲ್ಲಿ ಶೇ. ೮೦ರಷ್ಟು ಮುಸ್ಲಿಂರನ್ನು ಕಂಡರೆ, ಶೇ ೨೦ರಷ್ಟು ಹಿಂದೂಗಳನ್ನು ಕಾಣಬಹುದಾಗಿದೆ. ಒಟ್ಟಿನಲ್ಲಿ ಬಿದ್ರಿ ಕಲೆ ಕುಶಲ ಕರ್ಮಿಗಳು ಎಂದರೆ ಮುಸ್ಲೀಮರು ಮಾತ್ರ ಎನ್ನುವಷ್ಟು ಪ್ರಚಲಿತದಲ್ಲಿದೆ.[೧]

ಪ್ರಸ್ತುತ ಹತ್ತು ವರ್ಷದಿಂದ ಎಂಬತ್ತು ವಯಸ್ಸಿನವರೆಗೆ ಸ್ತ್ರೀಯರನ್ನು ಹೊರತುಪಡಿಸಿದಂತೆ ಬಿದ್ರಿ ಕೆಲಸ ಮಾಡುವವವರನ್ನು ಕಾಣಬಹುದಾಗಿದೆ. ಸಹಾಯಕರಾಗಿ ಸಣ್ಣ ಪುಟ್ಟ ಹುಡಗ ಹುಡುಗಿಯರು ವಿರಳವಾಗಿ ಕಂಡುಬಂದರೂ ಶ್ರೀಮತಿ ಲಕ್ಷ್ಮೀಬಾಯಿ ಮತ್ತು ಬಿದ್ರಿ

1 ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ. ಲೇಖಿನ: ಡಾ.ರೆಹಮಾನ ಪಟೇಲ, ಪು.ಸಂ. ೩೩೨ ಪ್ರ. ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಕಾಲೋನಿಯಲ್ಲಿರುವ ಫಾತಿಮಾ ಬೇಗಂ ಇವರುಗಳು ಬಿದ್ರಿಕಲೆಯಲ್ಲಿ ಪರಿಪಕ್ವತೆಯನ್ನು ಸಾಧಿಸಿ ರಾಷ್ಟ್ರೀಯವಾಗಿ ಪ್ರಚಲಿತದಲ್ಲಿದ್ದಾರೆ.

ಪ್ರಸ್ತುತ ಬಿದ್ರಿ ಕಲಾವಿದರಲ್ಲಿ ಸುಶಿಕ್ಷಿತರು ಅಪರೂಪ, ಶೇ. ೫–೬ರಷು ಜನ ಮಾತ್ರ ಶಿಕ್ಷಣ ಪಡೆದವರಿದ್ದಾರೆ. ತಾವೇ ಸೃಷ್ಟಿಸಿಕೊಂಡ ಶೆಡ್ಡುಗಳನ್ನು ಬಿದ್ರಿ ಕಾರ್ಖಾನೆ ಎಂದು ಅತ್ಯಂತ ಮುಗ್ದತೆಯಿಂದ ಹೇಳುವ ಈ ಕುಶಲಕರ್ಮಿಗಳು ಬಾಲ್ಯದಿಂದಲೇ ಪರಿಣತರ ಬಳಿ ಸಹಾಯಕರಾಗಿ, ನಂತರ ಸ್ವತಂತ್ರವಾಗಿ ಈ ವೃತ್ತಿಯನ್ನು ಆರಂಭಿಸಿದವರೇ ಬಹಳ ಹೀಗಾಗಿ ಈ ಕುಶಲಕರ್ಮಿಗಳಲ್ಲಿ ಅನಕ್ಷರತೆ ಎಂಬುದು ಶಾಪವಾಗಿ ಪರಿಣಮಿಸಿದ್ದರೂ ವ್ಯಾವಹಾರಿಕವಾಗಿ ಪಕ್ವವಾಗಿದ್ದಾರೆ.

ಪ್ರಸ್ತುತ ಬಿದ್ರಿಕಲೆಯ ಕುಶಲಕರ್ಮಿಗಳು ಇಂದು ಬೀದರ ನಗರದಲ್ಲಿ ಸುಮಾರು ೯೦೦ಕ್ಕೂ ಹೆಚ್ಚು ಜನ ಇದ್ದಾರೆ. ಇವರಲ್ಲಿ ೨೫೦ರಷ್ಟು ಜನ ಬಿದ್ರಿವೇರ್ ಕ್ರಾಫ್ಟ್ ಕಾಂಪ್ಲೆಕ್ಸನಲ್ಲಿ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನುಳಿದ ಕುಶಲಕರ್ಮಿಗಳು ಸ್ವತಂತ್ರವಾಗಿ ಬೀದರ್‌ನಲ್ಲಿ ಮತ್ತು ಹೈದ್ರಾಬಾದ್ ನಗರಗಳಲ್ಲಿ ನೆಲೆಸಿದ್ದಾರೆ.

ಹಿಂದಿನ ಶತಮಾನಗಳಲ್ಲಿ ರಾಜ ಮಹಾರಾಜರುಗಳು ಬಿದ್ರಿ ಕಲೆಯ ಕುಶಲಕರ್ಮಿಗಳನ್ನು ಪೋಷಿಸಿದ್ದು ಕಂಡುಬರುತ್ತದೆ. ಬಿದ್ರಿ ಕುಶಲಕರ್ಮಿಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ರಾಜ ಮನೆತನವೇ ಒದಗಿಸುತ್ತಿದ್ದರಿಂದ ಅವರಿಗೆ ಕಷ್ಟದ ದಿನಗಳು ಬರಲಿಲ್ಲ. ಜೊತೆಗೆ ಉತ್ತಮವಾದ ಕಲಾಕೃತಿಯೊಂದನ್ನು ನಿರ್ಮಿಸಿದರೆ ರಾಜ ಮನ್ನಣೆಯೂ ದೊರಕುವುದರೊಂದಿಗೆ ಮತ್ತು ರತ್ನಾದಿಗಳನ್ನು ಪಡೆದುಕೊಂಡು ಸತ್ಕರಿಸಲ್ಪಡುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ಹಾಗಿಲ್ಲ. ಕಚ್ಚಾ ವಸ್ತುಗಳನ್ನು ತಾವೇ ತಂದುಕೊಂಡು, ಕಲಾಕೃತಿಯೊಂದನ್ನು ನಿರ್ಮಿಸಿದ ಮೇಲೆ ಅದನ್ನು ಮಾರಲು ಗ್ರಾಹಕರಿಗಾಗಿ ಪರದಾಡಬೇಕಾಗಿದೆ. ಅಷ್ಟು ಕಷ್ಟಪಟ್ಟು ರಚಿಸಿದ ಕಲಾಕೃತಿಗೆ ಇರುವ ಮೌಲ್ಯದಲ್ಲಿ ಶೇ. ೫ರಷ್ಟು ಲಾಭ ಇವರಿಗಾದರೆ, ಬಹುತೇಕ ಲಾಭವನ್ನು ಮಧ್ಯವರ್ತಿಗಳೇ

ನುಂಗುವ ಬಗೆಯಿಂದ ಈ ಕುಶಲಕರ್ಮಿಗಳ ಬದುಕು ಬರ್ಬರವಾಗಿರುವುದು ದಿಟ. ಕೇಂದ್ರ ಮತ್ತು ಭಾರತ ಸರಕಾರದ ಕರಕುಶಲ ಮಂತ್ರಾಲಯಗಳು ನೀಡುವ ಪ್ರೋತ್ಸಾಹ, ಸಹಾಯಧನ, ಮಾರಾಟ ಬೆಂಬಲಗಳೇ ಇವರಿಗೆ ಜೀವನಾಧಾರ.

ಮಾಣಿಕಪ್ಪನವರು: ಬೀದರಿನ ಬಿದ್ರಿ ಕುಶಲಕರ್ಮಿಗಳಾದ ಮಾಣಿಕಪ್ಪನವರು ಬಿದ್ರಿಕಲೆಯಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದ ನರಸಪ್ಪನವರ ಮನೆತನದಲ್ಲಿ ಜನಿಸಿದವರು, ರಾಜಾಶ್ರಯದಲ್ಲಿದ್ದ ನರಸಪ್ಪನವರು ಬಿದ್ರಿ ಕಲೆಯ ಕರ್ಮದೊಡನೆ, ಪೋಷಣೆ ಮಾಡಿದವರು. ಬೀದರನಲ್ಲಿ ನೆಲೆಸಿದ್ದ ನರಸಪ್ಪನವರಿಗೆ ನಾಲ್ಕು ಜನ ಮಕ್ಕಳಲ್ಲಿ ನರಸಪ್ಪನವರ ನೆರಳಲ್ಲಿದ್ದುಕೊಂಡು ಬಿದ್ರಿಕಲೆಯನ್ನು ಕರಗತ ಮಾಡಿಕೊಂಡವರು.

ನಿರಂತರ ಕಲಿಕೆ ಮತು ಸೃಜನಶೀಲ ನೈಪುಣ್ಯತೆಯನ್ನು ಸಾಧಿಸಿದ್ದ ಬಸಪ್ಪನರಿಗೆ ಕರ್ನಾಟಕ ಸರಕಾರ ೧೯೭೦ರಲ್ಲಿ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ದೇಶದಾದ್ಯಂತ ಅನೇಕ ಪ್ರಮುಖ ನಗರಗಳಲ್ಲಿ ತಮ್ಮ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿ ಗೌರವಗಳಿಗೆ, ಪ್ರಶಂಸೆಗಳಿಗೆ ಪಾತ್ರರಾಗಿದ್ದಾರೆ. ಬಸಪ್ಪನವರು ದಿವಂಗತರಾದ ನಂತರ ಪತ್ನಿ ಅಡೆಮ್ಮಾ ಅವರಿಗೆ ಸರಕಾರಿ ಪಿಂಚಣಿ ಸೌಲಭ್ಯ ದೊರಕಿದೆ. ಈ ಬಸಪ್ಪನವರಿಗೆ ನಾಲ್ಕು ಜನ ಮಕ್ಕಳಿದ್ದು ಅವರಲ್ಲಿ ಕುಶಲಕರ್ಮಿ ಮಾಣಿಕಪ್ಪನವರು ದ್ವಿತೀಯ ಪುತ್ರರಾಗಿ ೧೮.೦೯.೧೯೪೧ರಲ್ಲಿ ಬೀದರ ನಗರದಲ್ಲಿ ಜನಿಸುತ್ತಾರೆ.

ತಂದೆ ಬಸಪ್ಪನವರ ಬಿದ್ರಿ ಗರಡಿಯಲ್ಲಿ ಪಳಗಿದ ಮಾಣಿಕಪ್ಪನವರು, ಚಿಕ್ಕಂದಿನಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ, ಕುತೂಹಲಗಳನ್ನು ಮೇಳೈಸಿಕೊಂಡದ್ದರಿಂದ ಬಿದ್ರಿ ಕಲೆಯಲ್ಲಿ ಪರಿಪಕ್ವತೆಯನ್ನು ಹೊಂದುತ್ತಾರೆ. ಕಳೆದ ನಲವತ್ತೇಳು ವರ್ಷಗಳಿಂದ ಬಿದ್ರಿ ಕಲಾವಸ್ತುಗಳನ್ನು ಸಿದ್ಧಪಡಿಸುತ್ತಿರುವ ಇವರು ತಮ್ಮ ಕುಟುಂಬದ ಎಲ್ಲರನ್ನು ತಮ್ಮ ಕಸುಬುಗಳಲ್ಲಿ ಭಾಗಿಗಳನ್ನಾಗಿಸಿ ಅವರನ್ನು ಸಹ ಬಿದ್ರಿ ಕಲೆಯ ಕುಶಲಕರ್ಮಿಗಳನ್ನಾಗಿ ರೂಪಿಸಿದ ಹೆಗ್ಗಳಿಕೆಗೆ ಪಾತ್ರರಾಗುತಾರೆ.

ಮಾಣಿಕಪ್ಪನವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿಯವರು ಪುರುಷ ಕುಶಲಕರ್ಮಿಗಳಿಗೆ ಸಮಾನವಾಗಿಯೇ ಬಿದ್ರಿ ಕುಶಲ ವಸ್ತುಗಳನ್ನು ರೂಪಿಸುವುದಲ್ಲಿ ಸಿದ್ಧಹಸ್ತರು! ಹಾಗೆಯೇ ಅವರ ಪುತ್ರ ಮಲ್ಲಿಕಾರ್ಜುನ ಅವರು ಡಿ.ಪಿ.ಸಿ ಕರಕುಶಲ ಯೋಜನೆಯಲ್ಲಿ ಭಾಗಿಯಾಗಿ ದ್ವಿತಿಯ ಬಹುಮಾನದ ಗೌರವಕ್ಕೆ ಭಾಜನರಾಗಿದ್ದಾರೆ. ತಮ್ಮ ಬಿಡುವಿನ ವೇಳೆಯಲ್ಲಿ ತಂದೆಗೆ ಸಹಕರಿಸುವ ಜೊತೆಗೆ ಬಿದ್ರಿ ಕುಶಲ ವಸ್ತುಗಳನ್ನು ತಯಾರಿಸುವ ಇವರು ಬೀದರಿನ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಇನಸ್ಟ್ರಕ್ಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮಾಣಿಕಪ್ಪನವರು ಖಡ್ಗ, ಹುಕ್ಕಾ, ಆಭರಣ ಪೆಟ್ಟಿಗೆ, ನೀರಿನ ಬಟ್ಟಲು, ತಟ್ಟೆ, ಹೂವಿನ ಕುಂಡಲ, ಅಂಗಿಯ ಗುಂಡಿಗಳು, ಕತ್ತರಿ, ಅಜಂತಾ ಮಾದರಿ, ಹುಕ್ಕಾ, ಪೇಪರ್ ಕ್ಲಿಪಗಳು ಇನ್ನು ಹಲವಾರು ಬಗೆಯ ಬಿದ್ರಿ ಕಲಾವಸ್ತುಗಳನ್ನು ರಚಿಸಿದ್ದಾರೆ. ಭಾರತದ ಪ್ರಥಮ ರಾಷ್ಟ್ರಪತಿಗಳಾದ ಡಾ.ರಾಜೇಂದ್ರ ಪ್ರಸಾದ ಅವರು ೧೯೫೦ರಲ್ಲಿ ಬೀದರಿಗೆ ಭೇಟಿಕೊಟ್ಟಾಗ ಮಾಣಿಕಪ್ಪನವರ ಬಿದ್ರಿ ಕಾರ್ಖಾನೆಗೂ ಬಂದು ಮಾಣಿಕಪ್ಪನವರು ತಯಾರಿಸಿದ ಬಿದ್ರಿ ಕಲಾವಸ್ತುಗಳನ್ನು ನೋಡಿ ಪ್ರಶಂಸಿದ್ದಾರೆ. ೧೯೭೫ರಲ್ಲಿ ರಾಜ್ಯ ಪ್ರಶಸ್ತಿ, ೧೯೮೦ರಲ್ಲಿ ಕರ್ನಾಟಕ ಸರಕಾರದ ಸಚಿವರಾಗಿದ್ದ ಜನಾರ್ಧನ ಪೂಜಾರಿ ಇವರು ಮಾಣಿಕಪ್ಪನವರ ಬಿದ್ರಿ ಕಲಾವಸ್ತುಗಳನ್ನು ನೋಡಿ ಪ್ರಶಂಸಿದಲ್ಲದೇ, ಕೇಂದ್ರ ಸರಕಾರದಿಂದ ಆರ್ಥಿಕ ಸಹಾಯವನ್ನು ಮಾಡಿದರು. ತ್ರಿವೇಂದ್ರಂ, ದಹೆಲಿ, ಮೈಸೂರು ದಸರಾ ವಸ್ತು ಪ್ರದರ್ಶನ, ಮುಂಬಯಿ, ಚೆನ್ನೈ, ಬೆಂಗಳೂರು ಇನ್ನೂ ಮುಂತಾದ ಸ್ಥಳಗಳಲ್ಲಿ ಮಾಣಿಕಪ್ಪನವರು ತಾವು ರಚಿಸಿದ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಮುಂಬಯಿ, ಬೆಂಗಳೂರು, ಹೈದ್ರಾಬಾದ್, ಮೈಸೂರು, ನವದೆಹಲಿಯಲ್ಲಿ ವಸ್ತುಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡು ಇಂದಿನ ಪೀಳಿಗೆಗೆ ಬಿದ್ರಿಕಲೆಯ ಅಂದ-ಚೆಂದವನ್ನು ಪ್ರದರ್ಶಿಸುತ್ತಲಿವೆ.

ಮೊಹಮ್ಮದ್ ಷರೀಫ್: ಮೊಹಮ್ಮದ ಷರೀಫ್ ಅವರೂ ಸಹ ಪ್ರಮುಖ ಬಿದ್ರಿ ಕುಶಲಕರ್ಮಿಗಳು, ೧೯೩೭ರಲ್ಲಿ ಬೀದರನಲ್ಲಿ ಹುಟ್ಟುಪಡೆದ ಇವರ ತಂದೆ ಸುಲ್ತಾನ ಸಾಹೇಬ

ಷರೀಫ್. ಸುಲ್ತಾನ ಸಾಹೇಬರ ಕುಟುಂಬ ಆರ್ಥಿಕವಾಗಿ ತುಂಬ ದುರ್ಬಲವಾದ ಕುಟುಂಬ. ಇಂತಹ ಕುಟುಂಬದಲ್ಲಿ ಜನಿಸಿದ ಇವರು ರಾಷ್ಟ್ರೀಯಮಟ್ಟದಲ್ಲಿ ಗೋಚರಿಸುವ ಹಿನ್ನಲೆಯಲ್ಲಿ ಅವರು ರಚಿಸಿದ ಬಿದ್ರಿ ಕಲಾವಸ್ತುಗಳೇ ಕಾರಣವೆನ್ನಬಹುದು. ವೃತ್ತಿಯಲ್ಲಿ ಶ್ರದ್ಧೆಯನ್ನಿಟ್ಟುಕೊಂಡ ಷರೀಫರು ಬಿದ್ರಿ ಕಲೆಯ ತಂತ್ರ, ಶೈಲಿಗಳನ್ನು ಆಳವಾಗಿ ಅಧ್ಯಯನ ಮಾಡಿಕೊಡವರು. ಬಾಲ್ಯದಲ್ಲಿಯೇ ಅಬ್ದುಲ್ ಗಫರ್ ಅವರು ಷರೀಪರಿಗೆ ಆಶ್ರಯ ನೀಡಿದವರು. ಅವರಲಿಯೇ ಬಿದ್ರಿ ಕಲೆಯ ಪೆಟ್ಟಗಳನ್ನು ಹಂತಹಂತವಾಗಿಕ ಲಿಯುತ್ತ, ೧೫ನೇಯ ವಯಸ್ಸಿನಲ್ಲಿಯೇ ಬಿದ್ರಿ ಕಲೆಯ ಕಲಾವಸ್ತುಗಳನ್ನು ಪ್ರಬುದ್ಧವಾಗಿ ರಚಿಸಿದ ಇವರು ಮೂರು ಶೈಲಿಯಲ್ಲಿ ಬಿದ್ರಿ ಕಲಾವಸ್ತುಗಳನ್ನು ರಚಿಸುವ ಪ್ರಾವಿಣ್ಯತೆಯನ್ನು ಹೊಂದಿದ್ದಾರೆ. ಷರೀಫರ ಜನಪ್ರಿಯ ಬಿದ್ರಿ ಕಲಾವಸ್ತುಗಳೆಂದರೆ ಫೂಲ್ ಜಡಿ, ಗೋಲಾಕಾರದ ಸೂರಾಯಿ, ಮಹತಾಬಿ ಇನ್ನೂ ಮುಂತಾದವು. ಉಮರ್ ಖಯಾಂ ದೃಶ್ಯಾವಳಿಗಳನ್ನು ಹೊಂದಿದ ಹೂಜಿಗಳು ಇವರ ಕೀರ್ತಿ ಹೆಚ್ಚಿಸಿದ್ದು, ಇದರಲ್ಲಿ ಬೆಳ್ಳಿಯತಂತಿಗಳನ್ನು ಹುದುಗಿಸಿ ರಚಿಸಿದ್ದಾರೆ. ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮವಾಗಿ ರಚಿಸಿದ ಈ ಹೂಜಿ ಇವರ ಸಂಗ್ರಹದಲ್ಲಿದೆ. ಇವರು ತಮ್ಮ ಬಿದ್ರಿ ಕಲಾವಸ್ತುಗಳನ್ನು ಬೆಂಗಳೂರು, ಬೆಳಗಾವಿ, ಕನ್ಯಾಕುಮಾರಿ, ಕೋಲ್ಕೋತಾ, ಭುವನೇಶ್ವರ, ಚೆನ್ನೈ, ಪಾಂಡಿಚೇರಿ, ರಾಜಸ್ಥಾನ, ಮಂಗಳೂರು ಇನ್ನೂ ಮುಂತಾದ ಕಡೆಗಳಲ್ಲಿ ಪ್ರದರ್ಶಿಸಿದ್ದಾರೆ.

ಲಕ್ಷ್ಮೀಬಾಯಿ: ಬಿದ್ರಿಕಲೆಯಲ್ಲಿ ಪ್ರಥಮ ಬಾರಿಗೆ ೨೦೦೪-೦೫ರ ರಾಜ್ಯ ಪ್ರಶಸ್ತಿ ಪಡೆದಿರುವ ಲಕ್ಷ್ಮೀಬಾಯಿಗೆ ಈಗ ೫೫ರ ಹರೆಯ. ಬೀದರನಲ್ಲಿ ಜನಿಸಿದ ಇವರು ೫ನೇ ತರಗತಿಯವರೆಗೆ ಓದಿದ್ದು, ಕಳೆದ ನಲವತ್ತು ವರ್ಷದಿಂದ ಈ ಬಿದ್ರಿ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಹುತೇಕವಾಗಿ ಬಿದ್ರಿಯ ಎಲ್ಲ ಬಗೆಯ ವಸ್ತುಗಳನ್ನು ಉತ್ಪಾದಿಸುವ ಇವರು ಮಹಿಳೆಯರು ಧರಿಸಿಕೊಳ್ಳುವ ಬಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುತ್ತಾರೆ. ೧೯೯೯ರಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಲವು ಬೀದರನಲ್ಲಿ ನಡೆಸಿದ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ೨೦೦೫ರಲ್ಲಿ ಪಟಿಯಾಲಾ ಹೆರಿಟೇಜ್ ಫೆಸ್ಟಿವಲ್‌ನ ಕ್ರಾಫ್ಟ್

ಮೇಳದಲ್ಲಿ ತಮ್ಮ ಬಿದ್ರಿ ವಸ್ತುಗಳನ್ನು ಪ್ರದರ್ಶಿಸಿದ್ದಾರೆ. ೬ ತಿಂಗಳ ಕಾಲ ಭಾರತ ಸರಕಾರದ ಅಂಬೇಡ್ಕರ್ ಹಸ್ತಶಿಲ್ಪ ವಿಕಾಸ ಯೋಜನೆಯ ತರಬೇತಿಯನ್ನು ಸಹ ಪಡೆದಿದ್ದಾರೆ. ಲಕ್ಷ್ಮೀಬಾಯಿವರ ಮಗ ಪ್ರಭಾಕರ್‌ರಾವ್ ಪಿಸೆ ಅವರೂ ಸಹ ತಾಯಿಗೆ ಸಹಕರಿಸುತ್ತಾ, ಯುವ ಕಲಾವಿದರ ಸಾಲಿನಲ್ಲಿ ಹೆಸರು ಪಡೆದಿದ್ದಾರೆ. ೩೫ರ ವಯಸ್ಸಿನ ಇವರಿಗೆ ೧೯೯೮ರಲ್ಲಿ ಕಮಲಾದೇವಿ ಚಟ್ಟೋಪಾಧ್ಯಯ ವಿಶ್ವಕರ್ಮ ಪ್ರಶಸ್ತಿ ಹಾಗೂ ೨೦೦೦ರಲ್ಲಿ ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕದ ಪ್ರಶಸ್ತಿಯನ್ನು ಸಹ ಪಡೆದಿದ್ದಾರೆ. ಪ್ರತಿ ತಿಂಗಳು ೧೫ ರಿಂದ ೨೦ಸಾವಿರದವರೆಗೆ ಗಳಿಸುತ್ತಾರೆ.

ಅಬ್ದುಲ್ ಖಾದೀರ್: ಖ್ಯಾತ ಬಿದ್ರಿ ಕಲಾವಿದ ಮೊಹಮದ ಸುಲ್ತಾನ ಅವರ ಮಗನಾದ ಅಬ್ದುಲ್ ಖಾದೀರ ಇವರಿಗೆ ೫೦ ವರ್ಷ. ಬಿದ್ರಿ ಕಲೆಯ ಬಹುತೇಕ ಕಲಾಕೃತಿಗಳನ್ನು ರಚಿಸುವ ಇವರು ಬುಧಾ ಬಿದ್ರಿ ಕೃತಿಗಳನ್ನು ರಚಿಸುವಲ್ಲಿ ಪರಿಣಿತರು. ತಂದೆಯೇ ಗುರುವನ್ನಾಗಿಸಿಕೊಂಡು ಬಿದ್ರಿ ಕಲೆಯಲ್ಲಿ ಪಳಗಿದ ಇವರು ಕಳೆದ ೩೦ ವರ್ಷಗಳಿಂದ ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ಮೂರು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳಿದ್ದು ಅವರಲ್ಲಿ ಸುಲತಾನಾ ಅವಳು ಸಹ ಸೀಟ್ ವರ್ಕನಲ್ಲಿ ಪರಿಣಿತಿಯನ್ನು ಹೊಂದಿದ್ದಾಳೆ. ಇವರು ಬಿದ್ರಿ ಕಲೆಯನ್ನು ರಚಿಸುವ ಚಿತ್ರವು ವರ್ಲ್ಡ್ ಕ್ರಾಫ್ಟ್ ೧೯೯೯–೨೦೦೦ರ ಸಂಚಿಕೆಯ ಮುಖಪುಟದಲ್ಲಿ ಮುದ್ರಣವಾಗಿದೆ. ಇವಳಂತೆಯೇ ಖಾದೀರ್ ಕುಟುಂಬದ ಪರಿವಾರದವರೆಲ್ಲ ಬಿದ್ರಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೀದರನ ವಾಯುಪಡೆಯ ಕೇಂದ್ರದಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆಯನ್ನು ನೀಡಿ ಮೆಚ್ಚುಗೆ ಪಡೆದಿದ್ದಾರೆ.

ಮೊಹಮ್ಮದ ಉಸ್ಮಾನ: ೧೧ನೇಯ ವಯಸ್ಸಿನಲ್ಲಿಯೇ ಬಿದ್ರಿ ಕಲೆಯನ್ನು ಅಭ್ಯಸಿಸತೊಡಗಿದ ಮೊಹಮ್ಮದ್ ಉಸ್ಮಾನ ಅವರಿಗೆ ಈಗ ೬೧ ವರ್ಷ. ಬೀದರ ನಗರದಲ್ಲಿ ಜನಿಸಿದ ಇವರು ೭ನೆಯ ತರಗತಿವರೆಗೆ ವ್ಯಾಸಾಂಗ ಮಾಡಿದ್ದಾರೆ. ಇವರ ಪತ್ನಿ ಸುಫಿಯಾ ಬೇಗಂ ಮನೆಯ ಕಾರ್ಯದಲ್ಲಿ ತೊಡಗಿಸಿಕೊಂಡರೆ, ಇವರಿಗೆ ೮ ಜನ ಮಕ್ಕಳಿದ್ದು ಅವರೆಲ್ಲರೂ

ತಂದೆಯ ವೃತ್ತಿಯಲ್ಲಿ ಸಹಾಯಕರಾಗಿ ದುಡಿಯುತ್ತಿದ್ದಾರೆ. ಉಸ್ಮಾನ ಅವರು ಎಲ್ಲ ತರಹದ ಬಿದ್ರಿ ಕಲಾಕೃತಿಗಳನ್ನು ರಚಿಸಬಲ್ಲವರಾಗಿದ್ದು, ಶೀಟ್ ವರ್ಕನಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ ಇವರಿಗೆ ೨೦೦೩ರಲ್ಲಿ ರಾಜ್ಯ ಪ್ರಶಸ್ತಿ ದೊರಕಿದೆ. ೧೯೯೧-೯೩ರಲ್ಲಿ ಅಖಿಲ ಭಾರತೀಯ ಕರಕುಶಲ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಅದೇ ರೀತಿ ೨೦೦೭ರಲ್ಲಿ ದಿಲ್ಲಿ ಹಾತ್, ಬೆಂಗಳೂರಿನ ರೀಜನಲ್ ಡಿಸೈನ್ ಅಂಡ್ ಟೆಕ್ನಿಕಲ್ ಡೆವೆಲಪಮೆಂಟ್ ಸೆಂಟರನಲ್ಲಿ ನಡೆಯುವ ಶಿಬಿರಗಳಲ್ಲಿ ಭಾಗಿಯಾಗಿದ್ದಾರೆ. ಬೆಂಗಳೂರಿನ ಕಾವೇರಿ ಎಂಪೋರಿಯಮ್ ಮುಖಾಂತರ ಅನೇಕ ಕಲಾಕೃತಿಗಳನ್ನು ಮಾರಾಟ ಮಾಡಿರುವ ಇವರಿಗೆ ಕೆಲಸಕ್ಕೆ ತಕ್ಕ ಸಂಭಾವನೆ ದೊರಕುವುದಿಲ್ಲ ಎಂಬ ಕೊರತೆ ಕಾಡುತ್ತಿರುವುದು ಬಿದ್ರಿ ಕಲಾವಿದರ ಸ್ಥಿತಿಯ ಪ್ರತಿಬಿಂಬ.

ಮೊಹಮ್ಮದ್ ಫೈಜುದ್ದೀನ್: ಕಳೆದ ೫೫ ವರ್ಷಗಳಿಂದ ಬಿದ್ರಿ ಕಲೆಯಲ್ಲಿ ಕೆಲಸ ಮಾಡುತ್ತಿರುವ ಮೊಹಮ್ಮದ್ ಫೈಜುದ್ಧಿನ್ ಇವರಿಗೆ ಈಗ ೭೦ರ ವಯೋಮಾನ ಬಿದ್ರಿ ಕಲೆಯ ಎಲ್ಲ ತಂತ್ರಗಳನ್ನು ಬಲ್ಲಿದ ಇವರು ೪ನೇಯ ತರಗತಿಯವರೆಗೆ ಅಭ್ಯಾಸ ಮಾಡಿ ಬಿದ್ರಿಕಲೆಯ ಕೆಲಸದಲ್ಲಿ ತೊಡಗಿಸಿಕೊಂಡವರು. ಆರು ಜನ ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳನ್ನು ಹೆತ್ತ ಇವರು, ೪೦ ವರ್ಷದ ಮೊಹಮ್ಮದ್ ಹುಸೇನ್, ೩೬ ವರ್ಷದ ಮೊಹಮ್ಮದ್ ಮೋಯಿನ್ ಮೊಹಮ್ಮದ್ ಶಫಿ, ಮೊಹಮ್ಮದ್ ಖಮರುದ್ದಿನ್, ಇವರುಗಳು ಬಿದ್ರಿ ಕೆಲಸವನನು ತ್ಯಜಿಸಿ ಬೇರೆ ಉದ್ಯೋಗವನ್ನು ಅರಸಿಕೊಂಡು ಹೋಗಿದ್ದಾರೆ. ಫೈಜುದ್ದೀನ್ ಇವರು ೨೦೦೬ರ ಮೈಸೂರು ದಸರಾ, ೨೦೦೪ರಲ್ಲಿ ಮುಂಬಯಿ ಹಾಗೂ ೨೦೦೩ರಲ್ಲಿ ಬೆಂಗಳೂರಿನಲ್ಲಿ ನಡೆದ ಕ್ರಾಫ್ಟ್ ಮೇಳದಲ್ಲಿ ಪಾಲ್ಗೊಂಡಿದ್ದಾರೆ.

ಗುಲಾಮ ಸಮದ್ ಸಿದ್ಧಿಕಿ: ಬಿದ್ರಿ ಕಾಲನಿಯಲ್ಲಿರುವ ಗುಲಾಮ ಸಮದ್ ಸಿದ್ದಿಕಿಯವರ ೧೧೦ನೆಯ ಸಂಖ್ಯೆಯ ಮನೆಗೆ ಒಂದು ವಿಶೇಷತೆ ಇದೆ. ಈ ಮನೆಯಲ್ಲಿರುವ ೭೦ರ ಹಿರಿಯ ಜೀವ ಬಿದ್ರಿ ಕಲೆಯ ಅರಗಿಸಿಕೊಂಡು ಅದನ್ನೇ ಬದುಕಿನ ಮೂಲಾಧಾರವಾಗಿಸಿಕೊಂಡು ಬದುಕಿದ ಪ್ರಸಿದ್ಧ ಕುಶಲಕರ್ಮಿ ಇವರನ್ನು ಕಾಲನಿಯಲ್ಲಿ 'ಆಲ್ ರೌಂಡ ಮಾಸ್ಟರ್' ಎಂದು

ಕರೆಸಿಕೊಳ್ಳುವ ಇವರಿಗೆ ಬಿದ್ರಿಯ ಎಲ್ಲ ಪ್ರಕಾರಗಳು, ಅವುಗಳ ರಚನಾ ತಂತ್ರಗಳು ಸಹ ಕರಗತವಾಗಿವೆ.

ಸಿದ್ದಿಕಿಯವರ ತಂದೆಯವರಾದ ಗುಲಾಂ ಅಬ್ಬಾಸ್ ಸಿದ್ದಿಕಿ ಅವರ ಜೊತೆ ಚಿಕ್ಕಂದಿನಲ್ಲಿಯೇ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡ ಸಮದ್ ಅವರು ಈಗಲೂ ಬಿದ್ರಿ ಕೆತ್ತನೆಗೆ ಮುಂಚಿನ ಹಂತವಾದ ಸೂಕ್ಷ್ಮ ರೇಖೆಗಳನ್ನು ಎಳೆದುಕೊಡುತ್ತಾರೆ. ಇವರ ಎಲ್ಲ ಮಕ್ಕಳೂ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ. ೨೦೦೪ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಬಿದ್ರಿ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿರುವುದಲ್ಲೇ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆಯನ್ನು ಸಹ ತಮ್ಮ ಮಗನಾದ ಜಾಫರನೊಂದಿಗೆ ನಾಲ್ಕು ದಿನ ನಡೆಸಿಕೊಟ್ಟರು. ೧೯೮೯ರಲ್ಲಿ ರಾಜ್ಯ ಪ್ರಶಸ್ತಿ, ಬಿದ್ರಿ ಎನಿಸಿಯೆಂಟ್ ಎಂಬ ಕ್ಯಾಟ್‌ಲಾನಲ್ಲಿ ಇವರ ಭಾವಚಿತ್ರ ಪ್ರಕಟವಾಗಿದೆ. ಸಿದ್ದಿಕಿಯವರ ಐದು ಜನ ಗಂಡು ಮಕ್ಕಳಲ್ಲಿ ಗುಲಾಂ ಯಾಸಿನ್ ಸಿದ್ದಿಕಿ ಇವರು ಸ್ವಸಹಾಯ ಗುಂಪಿನ ಸಹಾಯವನ್ನು ಪಡೆದುಕೊಂಡು ತಮ್ಮ ಕಾರ್ಖಾನೆಯಲ್ಲಿ ಅವರ ಅಣ್ಣ ತಮ್ಮ ಹಾಗೂ ಸ್ನೇಹಿತರೊಂದಿಗೆ ಬಿದ್ರಿ ಕಲಾಕೃತಿಗಳನ್ನು ರಚಿಸುತ್ತಾರೆ.

ಶಹಾ ಮಜೀದ್ ಖಾದ್ರಿ: ಖಾದ್ರಿ ಪರಿವಾರ ಬೀದರಿನ ಬಿದ್ರಿ ಪರಂಪರೆಯಲ್ಲಿ ದೊಡ್ಡ ಹೆಸರು. ೧೯೮೦ರಲ್ಲಿ ನಿಧನರಾದ ಮಜೀದ ಅವರ ತಂದೆ ಶಹಾ ಮುಸ್ತಫಾ ಖಾದ್ರಿ ಅವರು ಬಿದ್ರಿ ಕಲೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟವರು. ಎಸ್.ಎಸ್.ಎಲ್.ಸಿ. ವರೆಗೆ ವ್ಯಾಸಂಗ ಮಾಡಿರುವ ಮಜೀದ ಖಾದ್ರಿ ಅವರು ತಮ್ಮ ೧೨ನೆಯ ವಯಸ್ಸಿನಲ್ಲಿಯೇ ವಿಭಿನ್ನ ಬಗೆಯ ವಿನ್ಯಾಸಗಳನ್ನು ಹುಟ್ಟುಹಾಕಿದರು. ಬಿದ್ರಿಕಲೆಯಲ್ಲಿ ಹೊಸಬಗೆಯ ವಿನ್ಯಾಸಗಳಿಗೆ ನಿರಂತರ ಹುಡುಕಾಟ ನಡೆಸುವ ಇವರು ದೇಶದ ವಿವಿಧೆಡೆ ತಮ್ಮ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಗುವಾಹಾಟಿಯ ಕ್ರುಫಟ್ ಬಜಾರ, ಬೆಂಗಳೂರಿನ ಮಾರ್ಕೆಟ್ ಮೀಟ್, ದೆಹಲಿಯ ಹಾತ್ ಫೆಸ್ಟಿವಲ್‌ನಲ್ಲಿ ಇವರ ಬಿದ್ರಿ ಕಲಾಕೃತಿಗಳು ಪ್ರದಶನ ಕಂಡಿವೆ. ೨೦೦೧ರಲ್ಲಿ ಭಾರತ ಸರಕಾರದ ಕರಕುಶಲ ನಿಮಗದಿಂದ ರಾಷ್ಟ್ರೀಯ ಮೆರಿಟ್ ಪ್ರಶಸ್ತಿಯನ್ನು ಪಡೆದಿರುವ ಇವರಿಗೆ ೨೦೦೨ರಲ್ಲಿ

ರಾಜ್ಯ ಸರಕಾರದಿಂದ ರಾಜ್ಯ ಪ್ರಶಸ್ತಿಯೂ ಸಹ ಬಂದಿದೆ. ಸದ್ಯ ಮಜೀದ ಅವರು ನೋವೆಲ್ ಬಿದ್ರಿ ಕರಕುಶಲ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮೊಹಮ್ಮದ್ ಅಬ್ದುಲ್ ರೌಫ್: ೫೦ರ ಹರೆಯದ ರೌಫ್ ಅವರು ಕಳೆದ ೪೨ ವರ್ಷಗಳಿಂದ ಬಿದ್ರಿ ಕಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೂವರು ಗಂಡು ಮಕ್ಕಳು ಹಾಗೂ ಮೂವರು ಹೆಣ್ಣುಮಕ್ಕಳನ್ನು ಸಲಹುತ್ತಿರುವ ರೌಫ್ ಅವರು ಮಕ್ಕಳನ್ನು ವಿದ್ಯಾವಂತರಾಗಿಸಿದ್ದಾರೆ. ರೌಫ್ ಅವರ ಮನೆತನದ ವೃತಿಯೇ ಬಿದ್ರಿ ಕಲೆ. ಅವರ ತಂದೆ ಶೇಕ್ ಅಹಮದ್ ಅವರೇ ಗುರುವಾಗಿದ್ದರು. ತಾತನವರೂ ಸಹ ಬಿದ್ರಿ ಕಲೆಯ ಹಳೆಯ ತಲೆಮಾರುಗಳಲ್ಲಿ ಒಬ್ಬರಾಗಿದ್ದರು. ಹೀಗಾಗಿ ಬಾಲ್ಯದಲ್ಲಿಯೇ ಬಿದ್ರಿ ಕೆಲಯಲ್ಲಿ ಆಸಕ್ತಿ ತಳೆದ ಇವರು ತಮ್ಮ ಮುಂದಿನ ದಿನಗಳಲ್ಲಿ ಎತ್ತರದ ವ್ಯಕ್ತಿತ್ವವನ್ನು ಹೊಂದಿದರು. ಬೀದರ ನಗರದ ಕುಲ್‌ಸುಮ್ ಗಲ್ಲಿಯಲ್ಲಿ ನೆಲೆಸಿರುವ ಇವರು ೧೯೭೬-೮೨ರ ಅವಧಿಯಲ್ಲಿ ಎಚ್.ಎಂ.ಟಿ ಕೈಗಡಿಯಾರ ಕಂಪನಿಗೆ ಹಾಗೂ ೧೯೯೯-೨೦೦೧ರಲ್ಲಿ ಟೈಟನ್ ಕಂಪನಿಗೆ ಕೈಗಡಿಯಾರದ ಕೇಸ್‌ಗಳನ್ನು ಮಾಡಿಕೊಡುವುದರ ಮೂಲಕ ಬಿದ್ರಿ ಕೆಲಯನ್ನು ಆಧುನಿಕವಾಗಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಪ್ರಾಥಮಿಕ ಶಿಕ್ಷಣದ ಜೊತೆಗೆ ಬಿದ್ರಿ ಕಲೆಯನ್ನೂ ಅಧ್ಯಯನ ಮಾಡಿದ ಇವರು ೧೯೯೨ರಲ್ಲಿ ಚೀನಾ ಪ್ರವಾಸವನ್ನು ಕೈಗೊಂಡು ಜೂನ್ ೨೭ರಿಂದ ಜುಲೈ ೧೦ವವರೆಗೆ ಬೀಜಿಂಗ್ ನಗರದಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆ ನಡೆಸಿಕೊಟ್ಟು ವಿಶ್ವದ ಗಮನವನ್ನು ಸೆಳೆದಿದ್ದಾರೆ. ಇವರು ಎರಡು ತಿಂಗಳ ಕಾಲ ಶ್ರಮಿಸಿ ಸಿದ್ಧಪಡಿಸಿದ 'ಕಠೋರಿ ಸುರಯಿ ಮತ್ತು ಪ್ಲೇಟ್' ಗಳು ಅವರಿಗೆ ಕರಕುಶಲ ಕ್ಷೇತ್ರದಲ್ಲಿ ನೀಡಲಾಗುವ ರಾಷ್ಟ್ರ ಪ್ರಶಸ್ತಿಯನ್ನು ೨೦೦೪ರಲ್ಲಿ ತಂದುಕೊಟ್ಟಿತು.

ಈ ಪ್ರಶಸ್ತಿಯು ೫೦,೦೦೦/- ರೂಪಾಯಿಗಳ ನಗದು ಹಾಗೂ ತಾಮ್ರಪತ್ರನ್ನು ಒಳಗೊಂಡಿದೆ. ೧೯೯೧ರಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯ ಪ್ರಶಸ್ತಿ, ಪಡೆದ ಇವರು ಮಾಸಿಕವಾಗಿ ೧೦ರಿಂದ ೨೦ ಸಾವಿರ ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತಾರೆ.

ಮೊಹಮ್ಮದ್ ಷಫಿಯುದ್ದಿನ್: ಸುಪ್ರೀಮ್ ಬಿದ್ರಿಕಲೆ ಎಂಬ ಮಾರಾಟ ಮಳಿಗೆಯನ್ನು ಚೌಬಾರಾ ರಸ್ತೆಯಲ್ಲಿ ಹೊಂದಿರುವ ಶಫಿಯುದ್ದಿನ್ ಅವರು ೧೯೫೫ರಲ್ಲಿ ಜನಿಸಿದ್ದಾರೆ. ಬಾಲ್ಯದಿಂದಲೇ ಬಿದ್ರಿಕಲೆಯಲ್ಲಿ ತೊಡಗಿಸಿಕೊಂಡಿದ್ದ ಶಫಿಯುದ್ದಿನ್ ಬೀದರ ನಗರದ ಅಂತರಾಷ್ಟ್ರೀಯ ಮನ್ನಣೆ ಗಳಿಸಿದ ಕುಶಲಕರ್ಮಿಗಳಲಿ ಒಬ್ಬರೆನಿಸಿಕೊಂಡಿದ್ದಾರೆ. ಬಹುತೇಕವಾಗಿ ವಿದೇಶಗಳಲಿಯೇ ಇವರ ಪ್ರತಿಭೆಗೆ ಸೂಕ್ತ ವೇದಿಕೆ ದೊರಕಿದ್ದಕ್ಕೆ ಅವರು ನಡೆದ ಹಾದಿಯೇ ಸಾಕ್ಷಿ. ೧೯೮೬ರಲ್ಲಿ ನಾಲ್ಕು ತಿಂಗಳ ಕಾಲ ವಾಷಿಂಗಟನ್‌ನಲಿ ಅತಿಥಿಯಾಗಿದ್ದ ಇವರು ಅಲ್ಲಿ ನಡೆದ ಅಂತರಾಷ್ಟ್ರೀಯ ವಿಜ್ಞಾನ ಪ್ರದರ್ಶನಕೆ ಆಮಂತ್ರಿತರಾಗಿ ತಮ್ಮ ಬಿದ್ರಿಕಲೆಯನ್ನು ಪ್ರದರ್ಶಿಸಿದ್ದುಂಟು. ಅಲ್ಲಿ ಅವರಿಗೆ ಪ್ರತಿ ತಿಂಗಳು ೧೨೦೦ ಡಾಲರ್‌ಗಳನ್ನು ಗೌರವ ಸಂಭಾವನೆಯಾಗಿ ನೀಡಿತ್ತು. ಅದೇ ರೀತಿ ಜಪಾನ್ ಮತ್ತು ಕೆನಡಾ ದೇಶಗಳಿಗೂ ಭೇಟಿ ನೀಡಿ ಬಿದ್ರಿ ಕಲೆಯನ್ನು ಅಲ್ಲಿನವರಿಗೆ ಪರಿಚಯಿಸಿದ್ದಾರೆ. ಕೋಲ್ಕೊತಾದ ನ್ಯಾಷನಲ್ ಕೌನ್ಸಿಲ್ ಆಫ್ ಮ್ಯೂಸಿಯಮ್ಸ್ ಇವರನ್ನು ವಾಷಿಂಗಟನ್‌ಗೆ ಕಳುಹಿಸಿಕೊಡಲು ಶಿಫಾರಸ್ಸು ಮಾಡಿತ್ತು.

೧೯೯೯ರಲ್ಲಿ ಕ್ರಾಫ್ಟ್ ಫೇರ್ ರಿಪಬ್ಲಿಕನಲ್ಲಿ ೧೯೯೨ರಲ್ಲಿ ಸಿಟಿ ಕ್ರಾಫ್ಟ್ ಮೇಳ, ನಾಗಪುರದ ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರ, ೨೦೦೧ರಲ್ಲಿ ಸೂರಜಕುಂಡ ಕ್ರಾಫ್ಟ್ ಮೇಳ, ಹರಿಯಾಣ ಪ್ರವಾಸೋದ್ಯಮ ಇಲಾಖೆಯ ಪ್ರದರ್ಶನ ಹಾಗೂ ಚಂಡಿಗಢದಲಿ ನಡೆದ ಕ್ರಾಫ್ಟ್ ಮೇಳಗಳಲ್ಲಿ ತಮ್ಮ ಬಿದ್ರಿಕಲೆಗಳನ್ನು ಪ್ರದರ್ಶಿಸಿದ್ದಾರೆ. ೧೯೮೭ರಲ್ಲಿ ಉತ್ತರ ಪ್ರದೇಶ ಮಾರ್ಕೆಟಿಂಗ್ ಹಾಗೂ ಮ್ಯಾನೇಜಮೆಂಟ್ ಇನ್‌ಸ್ಟಿಟ್ಯೂಟ್ ಆಯೋಜಿಸಿದ್ದ ತರಬೇತಿಯಲ್ಲಿಯೂ ಇವರು ಭಾಗವಹಿಸಿದ್ದಾರೆ. ಶಫಿಯುದ್ದಿನ್ ಇವರ ಕಾರ್ಯಾಗಾರದಲ್ಲಿ ನಿತ್ಯವೂ ಬಿದ್ರಿ ಕಲಾವಸ್ತುಗಳ ತಯಾರಿಕೆ ನಿರಂತರವಾಗಿ ನಡೆಯುತ್ತದೆ. ವಿಶೇಷವಾಗಿ ಘುಲಝುಡಿ ಮಹತಾಬಿ ಶೈಲಿಯ ವಿನ್ಯಾಸಗಳನ್ನು ಹೊಂದಿದ ಬಿದ್ರಿ ವಸ್ತುಗಳನ್ನು ಸಿದ್ಧಪಡಿಸುತ್ತಾರೆ. ಈ ವೃತ್ತಿಯಿಂದ ಕೀರ್ತಿಯನ್ನು ಪಡೆದಿರುವ ಶಫಿಯುದ್ದಿನ್ ಇವರು ಬರುವ ಆದಾಯವು ತೃಪ್ತಿಕರವಾಗಿಲ್ಲವೆಂಬುದನ್ನು ನುಡಿಯುತ್ತಾರೆ.

ಮೊಹಮ್ಮದ್ ಮೊಯಿಜುದ್ದೀನ್: ೨೦೦೩ರಲ್ಲಿ ಭಾರತದ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರಿಮದ ರಾಷ್ಟ್ರಪಸ್ರಶಸ್ತಿ ಪಡೆದ ಮೊಯಿಜುದ್ದೀನ್ ಅವರಿಗೆ ಈಗ ೪೨ರ ವಯೋಮಾನ. ೧೯೬೫ರಲ್ಲಿ ಜನಿಸಿದ ಇವರಿಗೆ ಬಾಲ್ಯದಿಂದಲೇ ಬಿದ್ರಿಕಲೆಯಲ್ಲಿ ಆಸಕ್ತಿ. ಮಹತಾಬಿ ಶೈಲಿಯ ವಿನ್ಯಾಸಗಳನ್ನು ಆಕರ್ಷಕವಾಗಿ ದುಡಿಸಿಕೊಳ್ಳುವ ಇವರು ಶೀಟ್‌ವರ್ಕನಲ್ಲಿ ಪರಿಣಿತರು. ಬಿ.ಎ. ಮತ್ತು ಟಿ.ಸಿ.ಎಚ್. ಶೈಕ್ಷಣಿಕ ಅರ್ಹತೆಗಳನ್ನು ಪಡೆದಿರುವ ಇವರು ಸ್ವಯಂ ಸಿದ್ಧಪಡಿಸಿದ ಕಲಾಕೃತಿಗಳನ್ನು ತಾವೇ ಮಾರಾಟ ಮಾಡುವ ವ್ಯವಸ್ಥೆಯನ್ನು ಹೊಂದಿದ್ದಾರೆ. ೧೯೯೭ರಲ್ಲಿ ನವದೆಹಲಿಯ ಇಂಡಿಯನ್ ಕೌನ್ಸಿಲ್ ಫಾರ್ ಸ್ಮಾಲ್ ಅಂಡ್ ಮಿಡಿಯಮ್ ಎಕ್ಸಪೋರ್ಟರ್ಸ್ ಅವರಿಂದ ಎಕ್ಸಲೆನ್ಸ್ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ, ೧೯೯೫ರಲ್ಲಿ ಕರ್ನಾಟಕ ಸರಕಾರದ ಮೆರಿಟ್ ಪ್ರಶಸ್ತಿ ಹಾಗೂ ಕರ್ನಾಟಕ ಸರಕಾರದಿಂದ ೨೦೦೨ರಲ್ಲಿ ರಾಜ್ಯ ಪ್ರಶಸ್ತಿಗಳನ್ನು ಪಡೆದಿದಾರೆ. ಮೊಯಿಜುದ್ದೀನ್ ಅವರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಕರಕುಶಲ ಮೇಳಗಳ್ಲಿ ತಮ್ಮ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿ ಅಪಾರ ಜನಮನ್ನಣೆ ಪಡೆದಿದ್ದಾರೆ. ಅದರಲ್ಲಿ ಪ್ರಮುಖವಾದುದು ಇಂಡಿಯನ್/ಮಲೇಶಿಯಾ ಕ್ರಾಫ್ಟ್-ಎಕ್ಸಚೇಂಜ್ ವರ್ಕಶಾಪ್ ಇನ ಸರವಾಕ್ ಮಲೇಶಿಯಾ ಬೈ ಸೊಸಾಯಿಟಿ ಅಟೆಲಿಯರ್ ಸರವಾಕ್‌ನಲ್ಲಿ ಭಾಗವಹಿಸಿದ್ದಾರೆ.

ಮೊಹಮ್ಮದ್ ಖಾಜಾ ಮೊಯಿನುದ್ದೀನ್: ಬಾಲ್ಯದಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ ತಳೆದ ಮೊಹಮ್ಮದ್ ಖಾಜಾ ಮೊಯಿನುದ್ದೀನ್ ಅವರಿಗೆ ಮೂವರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದು ಹಿರಿಯ ಮಗ ಮೊಹಮ್ಮದ್ ಸಲೀಂಮೊದ್ದೀನ ಬಿದ್ರಿ ಕಲೆಯಲ್ಲಿ ಮಾಸ್ಟರ್ ಆಗಿದ್ದಾರೆ. ಇವರ ಸ್ವಂತ ಕಾರ್ಖಾನೆ ಹಾಗೂ ಮಾರಾಟ ಮಳಿಗೆಯನ್ನು ಹೊಂದಿದ್ದು, ಅವುಗಳನ್ನು ೧೫ ಜನರಿಗಿಂತ ಹೆಚ್ಚು ಕುಶಲಕರ್ಮಿಗಳು ಬಿದ್ರಿ ವಸ್ತುಗಳನ್ನು ರಚಿಸುತ್ತಿದ್ದಾರೆ. ೬೦ರ ಹರೆಯದ ಖಾಜಾ ಅವರಿಗೆ ೧೯೮೮ರಲ್ಲಿ ರಾಜೀವ ಗಾಂಧಿ ಪ್ರಶಸ್ತಿ ಬಂದಿದೆ. ಸಲೀಂ ಅವರಿಗೆ ೧೯೯೭ರಲ್ಲಿ ಜಿಲ್ಲಾ ಪ್ರಶಸ್ತಿ, ೧೯೮೮ರಲ್ಲಿ ಕರ್ನಾಟಕ ಸರಕಾರದ ರಾಜ್ಯ ಪ್ರಶಸ್ತಿ, ೧೯೯೯ರಲ್ಲಿ ಭಾರತ ಸರಕಾರದಿಂದ ಯುವ ಕುಶಲಕರ್ಮಿ ರಾಷ್ಟ್ರ ಪ್ರಶಸ್ತಿಗಳಿಗೆ ಪ್ರಾಪ್ತವಾಗಿದ್ದಾರೆ. ಇವರ

ಸಹೋದರರಾದ ಸಿರಾಜುದೀನ್ ವೈದ್ಯರಾಗಿ, ಸೈದುದ್ದೀನ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶಹಾ ರಷೀದ್ ಖಾದ್ರಿ: ಬೀದರ ನಗರದಲ್ಲಿ ಇಂದಿಗೂ ಬಿದ್ರಿ ಕಲೆಯನ್ನು ಪೋಷಿಸುತ್ತ ಬಂದಿರುವ ಸುಪ್ರಸಿದ್ಧ ಕುಶಲಕರ್ಮಿ ಎಂದರೆ ಶಹಾ ರಷೀದ್ ಖಾದ್ರಿ ಅವರು. ಇವರು ಮೂರನೆಯ ತಲೆಮಾರಿನ ಕುಶಲಕರ್ಮಿ. ಇವರ ತಂದೆ ಶಹಾ ಮುಸ್ತಫಾ ಖಾದ್ರಿ, ತಾತ ಶಹಾ ಮಹಮ್ಮದ್ ಖಾದ್ರಿ ಅವರ ಗರಡಿಯಲ್ಲಿ ಪಳಗಿದ ರಶೀದ್ ಅವರು ಬಾಲ್ಯದಲ್ಲಿಯೇ ಬಿದ್ರಿ ಕಲೆಯ ತಂತ್ರಗಳನ್ನು ಅರಿತುಕೊಂಡವರು. ೧೯೭೦ರಲ್ಲಿಯೇ ಸ್ವಂತ ಘಟಕವನ್ನು ಹೊಂದಿದ್ದ ರಶೀದ್ ಅವರು ಕರ್ನಾಟಕದ ಬಿದ್ರಿ ಕಲೆಯನ್ನು ಪ್ರಚುರಗೊಳಿಸುತ್ತಿರುವ ಶ್ರಮಿಕ ಜೀವಿ. ಎಲ್ಲೇ ಪ್ರದರ್ಶನಗಳು, ಮೇಳಗಳು ಇರಲಿ ಅಲ್ಲಿ ರಶೀದ್ ಅವರ ಕಲಾಕೃತಿಗಳು ಪ್ರದರ್ಶನಗೊಳ್ಳುತ್ತವೆ.

ಬಿದ್ರಿ ಕಲೆಯಲ್ಲಿ ಹೊಸತನವನ್ನು ಕಂಡುಕೊಂಡು, ಈ ಕಲೆಯನ್ನು ಜನಪ್ರಿಯಗೊಳಿಸಿರುವ ಇವರ ಬದುಕಿನ ಒಟ್ಟು ಸಾಧನೆಗೆ ದೇಶ ತಲೆದೂಗಿದೆ. ಹಿಂದಿನ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರಿಂದ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ೧೯೮೪ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, ೧೯೯೭ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಗೂ ಭಾಜನರಾಗಿರುವುದು ಕರ್ನಾಟಕಕ್ಕೆ ಸಂದ ಗೌರವವಾಗಿದೆ.

೧೯೮೭ರಲ್ಲಿ ಅಮೇರಿಕಾದ ಬೋಸ್ಟನ್‌ನಲ್ಲಿ ನಡೆದ ಅಂತರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ಭಾಗವಹಿಸಿ ಬಿದ್ರಿ ಕಲೆಯ ವೈಜ್ಞಾನಿಕ ರಚನಾ ತಂತ್ರವನ್ನು ವಿಶ್ವದ ವಿಜ್ಞಾನಿಗಳಿಗೆ ತಿಳಿಯಪಡಿಸಿದ ಇವರು ಇಟಲಿಯ ರೋಮ್ ನಗರದಲ್ಲಿ ನಡೆದ ಇಂಡಿಯಾ ಪ್ರಮೋಷನ್ ಪ್ರೋಗ್ರಾಮ್‌ನಲ್ಲಿ ಆಹ್ವಾನಿತ ಕುಶಲಕರ್ಮಿಯಾಗಿ ಭಾಗಿಯಾಗಿದ್ದಾರೆ. ಸಿಂಗಾಪುರದಲ್ಲಿ ನಡೆದ 'ಸಿಂಗಾಪುರ–ಭಾರತ ವಾಣಿಜ್ಯೋದ್ಯಮ ಸಂಸ್ಥೆ'ಯ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ಹಾಲೆಂಡ್‌ನಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆ ನೀಡಿ ಅಲ್ಲಿನ ಕುಶಲಕರ್ಮಿಗಳಿಗೆ ಗುರುವಾಗಿ ಕಾರ್ಯನಿರ್ವಹಿಸಿದ್ದಾರೆ.

ದೆಹಲಿಯ ಅಪ್ನಾ ಉತ್ಸವದಲ್ಲಿ ಇವರ ಬಿದ್ರಿ ಕಲಾಕೃತಿಗಳು ಪ್ರದರ್ಶಿತಗೊಂಡು ಭಾರೀ ಜನಮನ್ನಣೆ ಗಳಿಸಿವೆ. ಓರಿಸ್ಸಾ ಆದಿವಾಸಿ ಉತ್ಸವ, ರಾಷ್ಟ್ರೀಯ ಪ್ರಶಸ್ತಿ ವಿಜೇತರ ಕರಕುಶಲ ಉತ್ಸವದಲ್ಲಿ ಇವರನ್ನು ಸನ್ಮಾನಿಸಿ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಅಷ್ಟೇ ಅಲ್ಲದೆ ಕ್ರಾಫ್ಟ್ ಸ್ಕಿಲ್ ಉತ್ಸವ, ವಸಂತಪಿಝಾ ಸಾಂಸ್ಕೃತಿಕ ಪ್ರದರ್ಶನ ಹೀಗೆ ಹಲವಾರು ಕಡೆಗಳಲ್ಲಿ ನಿರಂತರವಾಗಿ ತಮ್ಮ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಇಷ್ಟೆಲ್ಲ ಪುರಸ್ಕಾರಗಳನ್ನು ಪಡೆದಿದ್ದರೂ ರಶೀದ್ ಅವರ ಆರ್ಥಿಕ ಸ್ಥಿತಿ ಸುಧಾರಿಸಿಲ್ಲವೆಂಬುದು ಒಂದೆಡೆಯಾದರೆ ಇನ್ನೊಂದೆಡೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದರೂ ನಾನು ರಚಿಸಿದ ಬಿದ್ರಿ ಕೃತಿಗಳಿಗೆ ಹೆಚ್ಚಿನ ದರವನ್ನು ಯಾರೂ ನೀಡಿ ಕೊಂಡುಕೊಂಡ ಉದಾಹರಣೆಗಳು ಇಲ್ಲವೆನ್ನುತ್ತಾರೆ ರಶೀದ್ ಅವರು. ಹೀಗಾಗಿ ಕನಿಷ್ಟ ಲಾಭದಲ್ಲಿ ಈ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು, ಇದು ನನ್ನ ತಲೆಮಾರಿಗೆ ಕೊನೆಯಾಗಲಿದೆ ಎಂದು ಭವಿಷ್ಯವನ್ನು ಸಹ ನುಡಿಯುತ್ತಾರೆ.

ಮೊಹಮ್ಮದ್ ಆರೀಫುದ್ದೀನ್: ದಿವಂಗತ ಮೊಹಮ್ಮದ ರಷಿದ್ದುದ್ದಿನ್‌ರವರ ಪುತ್ರರಾದ ಮೊಹಮ್ಮದ ಆರಿಫ್‌ಉದ್ದೀನ್ ೧೯೬೭ರಲ್ಲಿ ಬೀದರ ನಗರದಲ್ಲಿ ಜನಿಸಿದರು. ೧೦ನೇ ತರಗತಿಯವರೆಗೆ ಓದಿದ, ೪೨ರ ವಯೋಮಾನದ ಈ ಕಲಾವಿದರು ಬಿದ್ರಿಕಲೆಯಲ್ಲಿ ೧೫ ವರ್ಷಗಳ ಕಾಲ ತಮ್ಮ ತಂದೆಯ ಜೊತೆಗೆ ದುಡಿದಿದ್ದಾರೆ. ಫೂಲಝುಡಿಯಲ್ಲಿ ವಿನ್ಯಾಸ ಹೊಂದಿರುವ ಹೂಜಿಗೆ ೨೦೦೩ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. ೧೯೯೨-೯೩ರಲ್ಲಿ ಬೀದರನಲ್ಲಿ ನಡೆದ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿಯ ನಿಗಮದವರು ಏರ್ಪಡಿಸಿದ ತರಬೇತಿಯಲ್ಲಿ ಸಹ ಪಾಲ್ಗೊಂಡಿದ್ದಾರೆ. ೧೯೯೭ರಲ್ಲಿ ಕಾವೇರಿ ಎಂಪೋರಿಯಮ್‌ನವರು ನವದೆಹಲಿ ಮತ್ತು ಚಂಡೀಗಢದಲ್ಲಿ ಏರ್ಪಡಿಸಿದ ಪ್ರದರ್ಶನದಲ್ಲಿ ಅದೇ ವರ್ಷ ಪುಣೆಯಲ್ಲಿ

ಪಾತ್ಯಕ್ಷಿಕೆ ನೀಡಿದ್ದಾರೆ. ೨೦೦೨ರಲ್ಲಿ ಶಂಕರ ಫೌಂಡೇಶನ್ ಅವರು ಬೆಂಗಳೂರಿನಲ್ಲಿ ಏರ್ಪಡಿಸಿದ ಪ್ರದರ್ಶನದಲ್ಲಿ ಸದರಿಯವರ ಕಲಾಕೃತಿಗಳು ಪ್ರದರ್ಶನಗೊಂಡು ಜನಮೆಚ್ಚುಗೆ ಪಡೆದಿವೆ.

ಅಬ್ದುಲ್ ಹಮಿದ್ : ಬಿದ್ರಿ ಕಲೆಯಲ್ಲಿ ಹೆಸರಾಂತರಾದ ಗುಲಾಂ ದಾವರ್ ಸಿದ್ದಿಕಿ ಹಾಗೂ ಅಬ್ದುಲ್ ಗಫಾರ್ ಶಿಷ್ಯರಾದ ಅಬ್ದುಲ್ ಹಮೀದ್ ಬೀದರನಲ್ಲಿ ೧೯೬೦ರಲ್ಲಿ ಜನಿಸಿದವರು. ೮ನೆಯ ತರಗತಿಯವರೆಗೆ ಒದಿದ ಇವರು ಕಿರಿಯ ವಯಸ್ಸಿನಲ್ಲಿಯೇ ಬಿದ್ರಿ ಕಲೆಗಳನ್ನು ಉತ್ಪಾದಿಸುವ ಕಾರ್ಯಕ್ಕೆ ಮುಂದಾದವರು. ವಿಶೇಷವಾಗಿ ಅಬ್ದುಲ್ ಹಮೀದ್ ಅವರು ಹೊಸ ಹೊಸ ವಸ್ತುಗಳನ್ನು ತಯಾರಿಸುತ್ತಿದ್ದು, ವಿಶೇಷವಾಗಿ ಫೂಲ್‌ಝುಡಿ ಹಾಗೂ ಮಹತಾಬಿ ಶೈಲಿಯಲ್ಲಿ ಹೆಚ್ಚಿನ ಒಲವು. ೨೦೦೩ರಲ್ಲಿ ಇವರಿಗೆ ರಾಜ್ಯ ಪ್ರಶಸ್ತಿಯನ್ನು ಸಹ ಪಡೆದಿರುವ ಇವರು, ೧೯೭೭ರಿಂದ ೧೯೭೯ರ ವರೆಗೆ ಬಿದ್ರಿಕಲೆಯ ತರಬೇತಿಯನ್ನು ಪಡೆದಿದ್ದಾರೆ. ೨೦೦೬ರಲ್ಲಿ ನೆಹರು ಸೈನ್ಸ್ ಸೆಂಟರ್, ಮುಂಬಯಿಯಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ. ೨೦೦೪ರಲ್ಲಿ ವರ್ಲ್ಡ್ ಕ್ರಾಫ್ಟ್ ಕೌನ್ಸಿಲ್ ಅವರು ಆಯೋಜಿಸಿದ್ದ ಶಿಬಿರದಲ್ಲಿ ಸಹ ಪಾಲ್ಗೊಂಡಿದ್ದಾರೆ.

ಅಬ್ದುಲ್ ಹಕೀಂ: ಅಬ್ದುಲ್ ಹಕೀಂ ಅವರಿಗೆ ಈಗ ೫೮ರ ಹರೆಯ ಐದನೇ ತರಗತಿಯವರೆಗೆ ಓದಿದ ಇವರು ನಂತರದಲ್ಲಿ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡವರು ೩೫ ವರ್ಷ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡ ಇವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ೧೯೭೭ರಲ್ಲಿ ಬಿದ್ರಿ ವರ್ಕಸ್ ಯುನಿಯನ್‌ದಿಂದ ಬೆಸ್ಟ್ ಕ್ರಾಫ್ಟ್ ಮೆನ್‌ಶಿಪ್ ಪ್ರಮಾಣ ಪತ್ರವನ್ನು ಸಹ ಪಡೆದಿದ್ದಾರೆ. ೧೯೮೭ರಲ್ಲಿ ಕರ್ನಾಟಕ ಸರಕಾರದ ಮೆರಿಟ್ ಪ್ರಶಸ್ತಿ, ೧೯೯೩ರಲ್ಲಿ ರಾಜ್ಯ ಪ್ರಶಸ್ತಿ ಬಂದಿದೆ. ೧೯೯೩ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ೨೦೦೮ರಲ್ಲಿ ಸೂರಜಕುಂಡ್‌ದಲ್ಲಿ ನಡೆದ ಕ್ರಾಫ್ಟ್ ಮೇಳ ಹಾಗೂ ದಿಲ್ಲಿ ಹಾತ್‌ನಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ.

ಮೊಹಮ್ಮದ್ ಅನಿಸ್ ಅಹ್ಮದ್: ಖ್ಯಾತ ಬಿದ್ರಿ ಕಲಾವಿದರಾದ ಗನಿ ಅಹಮ್ಮದ್‌ರ ಪುತ್ರರಾದ ಅನಿಸ್ ಅಹಮ್ಮದ್ ಹೈದ್ರಾಬಾದನಲ್ಲಿ ಜನಿಸಿದರು. ಬಾಲ್ಯದಿಂದಲೇ ಇವರು ಈ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಪದವಿ ಪಡೆದಿರುವ ಇವರು ಬಿದ್ರಿಕಲೆಯನ್ನು ತಮ್ಮ ವೃತ್ತಿಯಾಗಿಸಿಕೊಂಡಿದ್ದಾರೆ. ಹೈದರಾಬಾದಿನಲ್ಲಿ ನೆಲೆಸಿದ ಇವರು ಅಲ್ಲಿಯೇ ತಮ್ಮ ಕಾರ್ಯಗಾರವನ್ನು ಸ್ಥಾಪಿಸಿದ್ದಾರೆ. ಅಲ್ಲಿಯೇ ಅನೇಕ ತರಹದ ಬಿದ್ರಿ ವಸ್ತುಗಳನ್ನು ಉತ್ಪಾದಿಸಿ ದೇಶದ ಬೇರೆ ಬೇರೆ ಮಾರಾಟ ಕೇಂದ್ರಗಳಿಗೆ ತಮ್ಮ ಉತ್ಪನ್ನಗಳನ್ನು ಒದಗಿಸುತ್ತಾರೆ. ಹೈದ್ರಾಬಾದಿನ ಪ್ರಸಿದ್ಧ ಕಲಾವಿದರಲ್ಲಿ ಇವರೂ ಒಬ್ಬರಾಗಿದ್ದಾರೆ.

ಅಧ್ಯಾಯ–೫

ಹೈದ್ರಾಬಾದ–ಕರ್ನಾಟಕದ ತಳಸಮುದಾಯದ ಶಿಲ್ಪಕಲೆ: ಸಮಕಾಲೀನತೆ

ಸಮಕಾಲೀನ ಶಿಲ್ಪಕಲೆಯು ಶೈಕ್ಷಣಿಕ ಹಿನ್ನೆಲೆಯಲ್ಲಿ ಗಮನೀಕರಿಸಿದಂತಹ ಶಿಲ್ಪಕಲೆಯ ಕ್ಷೇತ್ರವನ್ನು ಆಯಾ ಕಾಲಕ್ಕೆ ತಕ್ಕಂತೆ ಪ್ರಾಪಂಚಿಕ ಆಗುಹೋಗುಗಳ ಸೃಜನಶೀಲ ಕಲಾ ಸಂಸ್ಕೃತಿಯಲ್ಲಿ ಉತ್ತಮವಾದ ನೆಲಗಟ್ಟನ್ನು ಹಾಕಿ ಮುಂದೆ ಸಾಗಿಸುತ್ತಿರುವ ಶಿಲ್ಪಕಲಾ ಕ್ಷೇತ್ರದ ಜೀವನಾಡಿಯಾಗಿದೆ. ನವ್ಯ ಎಂದರೆ ಬಿಟ್ಟುಕೊಡುವುದು. ರೂಢಿಗತವಾಗಿ ಬಂದಿರುವ ಅಂಶಗಳನ್ನು ಕಾಲ, ಸಮಯ, ಪರಿಸರಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದು ರೂಢಿಗತವಾಗಿ ಬಂದಿರುವ ವಸ್ತು ವಿಷಯಗಳನ್ನು ವೈಯಕ್ತಿವಾಗಿ, ಸಾಮೂಹಿಕವಾಗಿ ನೋಡುವ ಬಗೆಯಲ್ಲಿ ಅಥವಾ ಅಸ್ವಾದಿಸುವ ಬಗೆಯಲ್ಲಿ ಆಗುವ ಬದಲಾವಣೆಯೇ ನವ್ಯ. ಒಂದು ಪ್ರಾಂತ್ಯದ ಸಂಸ್ಕೃತಿಯೊಂದಿಗೆ ಇನ್ನೊಂದು ಪ್ರಾಂತ್ಯದ ಸಂಸ್ಕೃತಿಯ ವಸ್ತು, ವಿಷಯ, ದೃಶ್ಯಭಾಷೆ ಬೆಸೆದುಕೊಂಡಾಗಲೂ ನವ್ಯವಾಗುತ್ತದೆ.[1]

1 ವಿಜಯರಾವ್: ಶಿಲ್ಪಕಲೆ: ಪು.ಸಂ. ೨೫

ಭಾರತಕ್ಕೆ ಬ್ರಿಟಿಷರ ಆಗಮನದಿಂದ ದೃಶ್ಯಕಲೆ ಹಂತ ಹಂತದ ಶೈಕ್ಷಣಿಕ ಅಭ್ಯಾಸವಾಗಿ ಜೀವನೋಪಾಯದ ಮಾರ್ಗವಾಗಿ ಬೆಳೆಯ ತೊಡಗಿತು. ೨೦ನೆಯ ಶತಮಾನದ ಮಧ್ಯಭಾಗದಲ್ಲಿ ಶಿಲ್ಪಿಯು ಹೊಸದನ್ನು ತೋರಬೇಕೆಂಬ ಹಂಬಲ, ಅಂತರರಾಷ್ಟ್ರೀಯ ಕಲಾ ಪ್ರವಾಹದಲ್ಲಿ ಒಂದಾಗಬೇಕೆನ್ನುವ ಆಸೆ. ಅನನ್ಯತೆ ಶಿಲ್ಪಿಯ ಸ್ಪರ್ಧಾತ್ಮಕ ದೃಷ್ಟಿ ನವ್ಯತೆಗೆ ಮೂಲ ಕಾಣರಗಳಾದವು. ಶಿಲ್ಪ ಎಂದರೇನು? ಶಿಲ್ಪಕ್ಕೆ ಇರಬೇಕಾದ ಗುಣಲಕ್ಷಣಗಳೇನು? ಎಂಬ ಅನೇಕ ಪಾಶ್ಚಾತ್ಯ ಅಭಿಪ್ರಾಯಗಳು ಅನುಕರಣೆಯಾಗತೊಡಗಿದವು. ವೈಜ್ಞಾನಿಕ ಆವಿಷ್ಕಾರಗಳೊಂದಿಗೆ ಹೊಸ ಹೊಸ ಮಾಧ್ಯಮಗಳಲ್ಲಿ ಶಿಲ್ಪಗಳು ಅರಳುತ್ತ ನಡೆದಿರುವುದೇ ನವ್ಯ ಶಿಲ್ಪಿಗಳ ವೈಶಿಷ್ಟ್ಯ.

ನವ್ಯ ಶಿಲ್ಪಕಲೆ ಕಲ್ಲು, ಮಣ್ಣು, ಮರ, ಲೋಹ, ಲೋಹದ ತುಂಡುಗಳು, ಗೋಣಿ ತಟ್ಟು, ಫೈಬರ್ ಗ್ಲಾಸ್, ರಬ್ಬರ್, ಪ್ಲಾಸ್ಟಿಕ್, ಪ್ಲಾಸ್ಟರ್ ಆಫ್ ಪ್ಯಾರಿಸ್ ಇತ್ಯಾದಿ ಘನಾಕಾರ ಪಡೆಯುವ ಯಾವುದೇ ಪದಾರ್ಥದಲ್ಲಿ ಅರಳಬಹುದು. ಎಲ್ಲಾ ಶಿಲ್ಪಗಳನ್ನು ಶಿಲ್ಪಿ ಕೈಯಿಂದಲೇ ಮಾಡಬೇಕೆಂಬ ಕಡ್ಡಾಯವೇನಿಲ್ಲಾ. ತನ್ನ ಸುತ್ತಲಿರುವ, ರೆಡಿಮೇಡ್ ಆಗಿಸಿಗುವ ವಸ್ತುಗಳನ್ನು ತಂದು, ಅರ್ಥ, ಕಲ್ಪನೆ ಕೆರಳುವ ಹಾಗೆ ಪ್ರದರ್ಶಿಸಿದರೆ ಅದು ರೆಡಿಮೇಡ್ ಶಿಲ್ಪ ಪ್ರಕಾರವಾಗುತ್ತದೆ. ಶಿಲ್ಪಿಗೆ; ಇದು ಶಿಲ್ಪವೆಂದು ಹೇಳುವಷ್ಟು; ಸಹೃದಯಿ ನೋಡುಗ ಅದನ್ನು ಶಿಲ್ಪವೆಂದು ಅಸ್ವಾದಿಸುವಷ್ಟು ಅಂಶ ಅದರಲ್ಲಿದರೆ ಸಾಕು, ಅದೊಂದು ಶಿಲ್ಪ ಎನ್ನುವ ಅಭಿಪ್ರಾಯಗಳು ಇವೆ.

ಕಾಲ ಬದಲಾದ ಹಾಗೆಲ್ಲಾ ಪರಂಪರೆಗಳು, ವಿನ್ಯಾಸಗಳು, ಶಿಲ್ಪ ಮಾಧ್ಯಮಗಳು, ಕಾಲಕ್ಕೆ ಅನುಗುಣವಾಗಿ ಬದಲಾಗುವುದು ಸ್ವಾಭಾವಿಕ. ಏಕೆಂದರೆ ಪ್ರತಿಯೊಂದರಲ್ಲಿಯೂ ಬದಲಾವಣೆ ಸ್ವಾಭಾವಿಕ. ಏಕೆಂದರೆ ಪ್ರತಿಯೊಂದರಲ್ಲಿಯೂ ಸಮಕಾಲೀನತೆಯ ಅಂಶ ಇರಬೇಕೆಂದು ಬಯಸುವುದು ಸಹಜ. ಆದರೆ ಈ ಬದಲಾವಣೆ ಹೆಚ್ಚು ಕಡಿಮೆ ಮೂಲಭೂತ ಪರಂಪರೆಯ ಚೌಕಟ್ಟಿನಲ್ಲೇ ನಡೆಯುತ್ತದೆ. ಕೈಯಿಂದ ಉಪಯೋಗಿಸಲಾಗುವ ಸರಳ ಉಪಕರಣಗಳ ಜೊತೆಗೆ

ವಿದ್ಯುತ್ತಿನಿಂದ ಕೆಲಸ ಮಾಡುವ ಸಣ್ಣ ಸಣ್ಣ ಯಂತ್ರಗಳು ಬೆಳಕಿಗೆ ಬಂದಿವೆ. ಇದರಿಂದ ಶಿಲ್ಪಕಲಾವಿದರು ಅಲ್ಪಕಾಲದಲ್ಲಿ ಹೆಚ್ಚು ಶಿಲ್ಪಗಳನ್ನು ಸಿದ್ಧಪಡಿಸಲು ಅನುಕೂಲವಾಗುವುದು.

ಮುಂಬಯಿ ಪ್ರತಿಷ್ಠಿತ ಜೆ.ಜೆ. ಕಲಾಶಾಲೆಯಲ್ಲಿ ಶಿಲ್ಪಕಲಾ ವಿಭಾಗದ ಡೀನರಾಗಿದ್ದ ಕಲಬುರಗಿಯ ಧನಂಜಯ ಶಿಲ್ಪಿ ಅವರು ಭಾವಶಿಲ್ಪಗಳ ರಚನೆಯೊಂದಿಗೆ ಹಲವಾರು ಆಧುನಿಕ–ಸಮಕಾಲೀನ ಶಿಲ್ಪಗಳನ್ನು ನಿರ್ಮಿಸಿದ್ದಾರೆ.

ಕಲಬುರಗಿಯ ಬಾಬುರಾವ.ಎಚ್. ಚಿತ್ರ–ಪ್ರಿಂಟಗಳ ಜೊತೆಗೆ ಶಿಲ್ಪಕಲೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಇವರು ಆಲಮಟ್ಟಿಯ ಶಿಲ್ಪವನಕ್ಕಾಗಿ ಎರಡು ಬೃಹತ್ ಗಾತ್ರದ ನವ್ಯ ಶಿಲ್ಪಗಳನ್ನು ಸಿಮೆಂಟ್ ಮಾಧ್ಯಮದಲ್ಲಿ ರಚಿಸಿದ್ದಾರೆ. ರಾಮನಗರದ ಜನಪದ ಲೋಕದಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಏರ್ಪಡಿಸಿದ ಶಿಬಿರದಲ್ಲಿ ಮಿಶ್ರ ಮಾಧ್ಯಮದ ಸಮಕಾಲೀನ ಶಿಲ್ಪವನ್ನು ಅತ್ಯಂತ ಮಾರ್ಮಿಕವಾಗಿ ರಚಿಸಿದ್ದಾರೆ.

ಮೂಲತಃ ಕಲಬುರಗಿಯವರಾದ ಜಗನ್ನಾಥ ಜಕ್ಕೆಪಲ್ಲಿ ಅವರು ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಜಕ್ಕೆಪಲ್ಲಿಯವರು ಹಲವು ಭಾವಶಿಲ್ಪ, ಪೂರ್ಣಶಿಲ್ಪಗಳನ್ನು ಸೃಷ್ಟಿಸಿದವರು. ಬುದ್ಧಿ ಮತ್ತು ಭಾವಗಳನ್ನು ಬೆಸೆದ ಗ್ರಹಿಕೆ ಇವರ ಶಿಲ್ಪಗಳಲ್ಲಿ ಕಾಣಬಹುದು. ಮೈ ಕಂಪ್ಯೂಟರ್, ಥಿಂಕಿಂಗ್ ಶೀರ್ಷಿಕೆಯ ಶಿಲ್ಪಗಳು ಸಮಕಾಲೀನವಾಗಿ ಗಮನ ಸೆಳೆಯುತ್ತವೆ.

ಆನಂದಬಾಬು ಅವರು ಲೋಹ ಮತ್ತು ಟೇರಾಕೋಟಾ ಮಾಧ್ಯಮದಲ್ಲಿ ಸೃಜನಾತ್ಮಕ ಹಲವು ಸಮಕಾಲೀನ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ.

ಕಲಬುರಗಿಯ ವೀರಣ್ಣ ಕಂಬಾರ ಅವರು ಕಲಬುರಗಿಯ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯಲ್ಲಿ ೨೦೦೫ರಲ್ಲಿ ಕರ್ನಟಕದ ಶಿಲ್ಪಕಲಾ ಅಕಾಡೆಮಿ ಏರ್ಪಡಿಸಿದ ಸಮಕಾಲೀನ ಶಿಲ್ಪಕಲಾ ಶಿಬಿರದಲ್ಲಿ ರಚಿಸಿದ ಶಿಲ್ಪವೊಂದರಲ್ಲಿ ಜಾನಪದ ಸೊಗಡಿನಲ್ಲಿ ತಾಯಿ ಮತ್ತು ಮಗುವಿನ ಆಕೃತಿಗಳನ್ನ ದುಡಿಸಿಕೊಂಡಿದ್ದಾರೆ. ಈ ಶಿಲ್ಪದಲ್ಲಿ ತಾಯಿ ಮತ್ತು ಮಗುವಿನ ಆಕೃತಿಗೆ ಒಂದೇ

ತಲೆ ನಿರ್ಮಿಸಿ. ಹೆಚ್ಚು ಕುತೂಹಲವನ್ನುಂಟು ಮಾಡಿದ್ದಾರೆ. ಇನ್ನುಳಿದಂತೆ ಮಹೇಶ ತಳವಾರ, ನಿಂಗಣ್ಣ ಡಿ.ಕೇರಿ, ನಟರಾಜ ಶಿಲ್ಪಿ, ಆನಂದ ಬಾಬು, ರಾಜೇಶ.ಡಿ ಮುಂತಾದವರು ಸಮಕಾಲೀನವಾಗಿ ಗುರುತಿಸಿಕೊಂಡಿದ್ದಾರೆ.

ಇನಸ್ಟಾಲೇಷನ್ ಅಭಿವ್ಯಕ್ತಿಗಳು:

ಕರ್ನಾಟಕ ಸಮಕಾಲೀನ ದೃಶ್ಯಕಲಾ ಕ್ಷೇತ್ರದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ವಿಶಿಷ್ಟವಾದ ಸ್ಥಾನವಿದೆ. ಕಲಬುರಗಿಯ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯು ಭಾರತದ ದೃಶ್ಯಕಲಾ ಪರಂಪರೆಯಲ್ಲಿ ತನ್ನ ಕಲಾ ಚಟುವಟಿಕೆಗಳಿಂದ ಚಿರಪರಿಚಿತವಾಗಿದೆ. ದಿ.ಐಡಿಯಲ್ ಫೈನ್ಆರ್ಟ್ ಸಂಸ್ಥೆಯು ತನ್ನ ವಾಷಿರ್ಕ ಕಲಾ ಪ್ರದರ್ಶನವನ್ನು ೧೯೭೭ರಿಂದ ನಿರಂತರವಾಗಿ ಪ್ರತಿವರ್ಷ ನಡೆಸಿಕೊಂಡು ಬಂದಿರುವುದು ವಿಶೇಷ. ಈ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಚಿತ್ರ-ಶಿಲ್ಪ, ಪ್ರಿಂಟ್, ಛಾಯಾಚಿತ್ರಗಳೊಂದಿಗೆ, ಸಾಕಷ್ಟು ಇನ್‌ಸ್ಟಾಲೇಷನ್ ಕಲಾಕೃತಿಗಳು ನಿರ್ಮಾಣಗೊಂಡು, ಪ್ರದರ್ಶನಗೊಂಡಿವೆ.

ಕಲೆ ಮುಚ್ಚಿಡುವ ವಸ್ತುವಲ್ಲ, ಹಾಗೆ ಸುಲಭವಾಗಿ ತೆರೆದಿಡುವುದು ಸಾಮಾನ್ಯದ ಕೆಲಸವಲ್ಲ, ಒಂದು ಕಲಾಕೃತಿ ಕಣ್ಣಿಗೆ ಗೋಚರಿಸಿ ಆ ಕ್ಷಣಕ್ಕೆ ಖುಷಿಕೊಡುವ ಸಂಗತಿಯಾದರೆ, ಮತ್ತೊಂದು ಇರುವುದನ್ನೇ ಅನವಾರಣಗೊಳಿಸಿ, ಚಿಂತನೆಗೆ ಹಚ್ಚುವುದು ವಿಶೇಷ, ಹೀಗೆ ನೋಡುಗರನ್ನು ಒಂದಷ್ಟು ಹೊತ್ತು ಯೋಚಿಸುವಂತೆ ಮಾಡುವ ಕೆಲ ಸಮಸ್ಯೆಗಳತ್ತ ಚಿಂತಿಸುವಂತೆ ಮಾಡು ಇನ್‌ಸ್ಟಾಲೇಷನ್, ಕಲಾ ಕೃತಿಗಳು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಸಾಕಷ್ಟು ಸೃಷ್ಟಿಗೊಂಡು ಹೊಸ ಅನುಭವ ನೀಡಿವೆ. "ತನ್ನ ಕಾಲಮಾನಕ್ಕೆ ಪ್ರತಿಯೊಂದು ಕಲಾ ಪ್ರಕರವು ತನ್ನ ಶೈಲಿ ಹಾಗೂ ಉದ್ದೇಶಗಳಲ್ಲಿ ಬದಲಾವಣೆ ಆಗುವುದು ಸಮಕಾಲೀನ ಕಲೆಯ ಗುಣಧರ್ಮ" ಎಂಬ ಧೋರಣೆಗೆ ಸಾಕ್ಷಿಯಾಗಿದೆ.

ವಿರೇಂದ್ರ ಶಾಹ, ಶಶಿಕಾಂತ ಮಾಶಾಳಕರ್, ಗಣೇಶ ಎಂ.ಜಿ, ಗಿರೀಶ ಬಿ.ಕುಲಕರ್ಣಿ, ಸಂತೋಷ ರಾಠೋಡ್, ರೇವಣಸಿದ್ದ ಶೀಲವಂತ, ಚಂದ್ರಕಾಂತ್ ಎಸ್.ಕೆ, ಶಫೀಕ್.ಜಿ. ಮಾಶಾಳಕರ್, ಭಾವನಾ ಘಂಟಿ, ನಾರಾಯಣ, ಎಂಪಳ್ಳಿ, ಮಲ್ಲಮ್ಮ ಪಾಟೀಲ್, ಪರಶುರಾಮ್.ಪಿ, ಶಿವಾನಂದ ಎಸ್.ಡಿ, ಪ್ರಿತಮ್ ಸಿಂಗ್, ನಾಗರಾಜು ಕುಂಬಾರ್, ಆಶ್ವಿನಿ ಕಾರಟಮಲ್, ಪ್ರದೀಪಸಿಂಗ, ಬೈಸ, ಸ್ಮೀತಾ, ಭಾಗ್ಯಶ್ರೀ ಕಟ್ಟಿಮನಿ, ಸೋಮನಾಥ ಜಾಧವ, ಮನೋಜಕುಮಾರ, ಶರಣು ಸಿಂಪಿ, ಪ್ರತಿಭಾ ಈರಣ್ಣ ಕಂಬಾರ, ಬಿ. ಶ್ರೀನಿವಾಸ ರೆಡ್ಡಿ, ಹುಚ್ಚಪ್ಪಾ ಕೊಟೆ, ಶಿವಪ್ರಸಾದ ಎಸ್.ಬನ್ನಟ್ಟಿ, ನಯನಾ. ಬಿ, ಶ್ರೀಕಾಂತ ಭೋಗಶೆಟ್ಟಿ.

ಹೀಗೆ ಅನೇಕರು ಇನ್‌ಸ್ಟಾಲೆಷನ್ ಕಲಾಪ್ರಕಾರದಲ್ಲಿ ಸಂದರ್ಭನುಸಾರವಾಗಿ ಅಭಿವ್ಯಕ್ತಿಸಿದ್ದಾರೆ. ಇವರು ಇನ್‌ಸ್ಟಾಲೇಷನ್ ಕಲಾಕೃತಿಗಳಲ್ಲಿ ಮೊಬೈಲ್, ಸಿಮ್‌ಕಾರ್ಡ, ಪ್ಲಾಸ್ಟಿಕ್ ಚೀಲ, ದಾರ, ಟೇಬಲ್ ಲ್ಯಾಂಪ್, ನ್ಯೂಸ್ ಪೇಪರ್, ನಾಣ್ಯ, ಮತ್ತು ನೋಟಗಳು, ಮಕ್ಕಳ ಆಟಿಕೆಗಳು, ಮುಖವಾಡಗಳ, ಗಾಜಿನ ಟ್ಯೂಬ್, ಹೂವುಗಳು, ಫೋಟೋಗ್ರಾಫಿ, ಪುಸ್ತಕಗಳು, ಕೌದ್ಗಿ, ಛತ್ರಿ, ಫೈಬರ್ ಗ್ಲಾಸ್, ಪೇಪರ್ ಪಲ್ಪ್ ಹೀಗೆ ನೀವು ಊಹಿಸದ ಎಷ್ಟೋ ಪದಾರ್ಥಗಳನ್ನು ದುಡಿಸಿಕೊಂಡಿದ್ದಾರೆ.

ನೀರಿನ ರಕ್ಷಣೆ, ಪ್ಲಾಸ್ಟಿಕ್ ಸಂಸ್ಕೃತಿಯನು ವಿರೋಧಿಸುವ, ಬಾಲಕಾರ್ಮಿಕ ಸಮಸ್ಯೆ, ನಗರ ಪ್ರದೇಶಗಲ್ಲಿ ಪಕ್ಷಿಗಳು ಎದುರಿಸುತ್ತಿರುವ ಸಮಸ್ಯೆ, ಇಂಡಿಯಾದ ಬದುಕನ್ನು ಹೀನಸ್ಥಿತಿಗೆ ತಂದ ಇಲ್ಲಿನ ಮೂಢನಂಬಿಕೆಗಳು, ಬದಲಾಗುತ್ತಿರುವ ಆಹಾರ ಸಂಸ್ಕೃತಿ, ಸ್ತ್ರೀ ಸಂವೇದನೆ, ದಲಿತ ಸಂವೇದನೆ, ಹೀಗೆ ಹಲವಾರು ವೈವಿಧ್ಯಮಯ ವಿಷಯಗಳ ಕುರಿತು ಇನ್‌ಸ್ಟಾಲೇಷನ ಕಲಾಕೃತಿಗಳು ಮೂಡಿಬಂದಿವೆ.

ಹೈದ್ರಾಬಾದ ಕರ್ನಾಟಕ ಪ್ರದೇಶದ ದೃಶ್ಯಕಲಾವಿದರು ಅಭಿವ್ಯಕ್ತಿಸುವ ಹೆಚ್ಚಿನ ಇನ್‌ಸ್ಟಾಲೆಷನ್, ಕಲಾಕೃತಿಗಳಲ್ಲಿ ಜನಪದ ಅಥವಾ ಜನಪದ ವಸ್ತು–ವಿಷಯಗಳ ಅತಿಯಾದ

ಪ್ರಭಾವವನ್ನು ಕಾಣಬಹುದು. ಇಲ್ಲಿನ ಬಹುತೇಕ ಕಲಾವಿದರು ಗ್ರಾಮೀಣ ಪ್ರದೇಶದವರಾಗಿದ್ದು, ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಜನಪದ ಕಲಾ ಪ್ರಕಾರಗಳನ್ನು ನೋಡಿರುವುರಿಂದ ಸಹಜವಾಗಿಯೇ ಜನಪದ ಶಿಲ್ಪ, ವಾಸ್ತುಶಿಲ್ಪ, ಮತ್ತು ಜನಪದ ಪ್ರದರ್ಶನ ಕಲೆಗಳ ಪ್ರಭಾವವನ್ನು ಇವರ ಇನಸ್ಟಾಲೇಷನ ಕಲಾಕೃತಿಗಳಲ್ಲಿ ಕಾಣಬಹುದಾಗಿದೆ.

ಸಾರ್ವಜನಿಕ ಶಿಲ್ಪಗಳು:

ಸಾರ್ವಜನಿಕ ಶಿಲ್ಪಕಲೆಗೆ ನಮ್ಮಲ್ಲಿ ಸಾವಿರಾರು ವರ್ಷಗಳ ಇತಿಹಾಸವಿದೆ. ಮೂಲತಃ ವಾಸ್ತುಶಿಲ್ಪದೊಂದಿಗೆ ಹೊಂದಿಕೊಂಡ, ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸುವ ಶಿಲ್ಪ ಇತ್ಯಾದಿಗಳ ಪರಂಪರೆ ಇಂದಿಗೂ ಮುಂದುವರೆದಿದೆ.

ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆಯನ್ನು ನೀಡಿದ ಮಹಾನ್ ವ್ಯಕ್ತಿಗಳಿಗೆ ಗೌರವ ಸೂಚಿಸುವುದಕ್ಕಾಗಿ ಕರ್ನಾಟಕದ ಪ್ರತಿ ಜಿಲ್ಲೆಗಳ ಸಾರ್ವಜನಿಕ ವೃತ್ತ, ಚೌಕ್, ಉದ್ಯಾನವನ ಮತ್ತು ಸರ್ಕಾರದ ಕಛೇರಿಗಳ ಪ್ರಾಂಗಣಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ, ವೀರ ವ್ಯಕ್ತಿಗಳ, ಸಮಾಜ ಸುಧಾರಕರ, ಧೀಮಂತ ರಾಜಕಾರಣೀಗಳ ಮತ್ತು ಸಾಹಿತಿಗಳ ಪ್ರತಿಮೆಗಳನ್ನು ನಿರ್ಮಿಸಲಾಗಿದೆ. ಹೈದ್ರಾಬಾದ ಕರ್ನಾಟಕದ ಪ್ರತಿ ಜಿಲೆಗಳಲ್ಲಿ ಏಳೆಂಟು ಸಾರ್ವಜನಿಕ ಶಿಲ್ಪಗಳು ಇವೆ. ಕಲಬುರಗಿ ಮತ್ತು ಬಿದರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾರ್ವಜನಿಕ ಶಿಲ್ಪಗಳು ಕಂಡು ಬಂದಿವೆ.

ಸಾಮಾನ್ಯವಾಗಿ ಪಾಶ್ಚಿಮಾತ್ಯ ಜನರ ಜೀವನ ಶೈಲಿಯನ್ನು ಅವಲೋಕಿಸಿದಾಗ, ಅಲ್ಲಿನ ಪರಿಸರ ಮತ್ತು ಅಲ್ಲಿರುವ ಸಾರ್ವಜನಿಕ ಸ್ಥಳಗಳಲ್ಲಿ ಶಿಲ್ಪಗಳನ್ನು ನಿರ್ಮಿಸಿರುವುದು ಪಾಶ್ಚಿಮಾತ್ಯರಿಂದಲೇ ನಮಗೆ ತಿಳಿದು ಬಂದಿದೆ.

ಭಾರತದಲ್ಲಿ ಬ್ರಿಟಿಷ ಆಳ್ವಿಕೆಯ ಸಂದರ್ಭದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಲೆಯೂ ವಿಜೃಂಭಿಸಿತು. 20ನೇ ಶತಮಾನದಲ್ಲಿ ಸಮಕಾಲೀನ ದೃಷ್ಟಿಯ ಶಿಲ್ಪ–ವಾಸ್ತು ಶಿಲ್ಪಗಳ ಕಸಿಯಂಥ

ಕಲೆಗೆ ಸರ್ಕಾರದ ಆಸರೆ ಕಡಿಮೆಯಾದರೂ, ಖಾಸಗಿ ವಲಯದ ಕಂಪನಿಗಳು ಪೋಷಣೆ ನೀಡಿದವು. ಖಾಸಗಿ ಕಾರ್ಖಾನೆ, ಶಾಲೆಗಳು, ಕೆಲವೊಮ್ಮೆ ಸರ್ಕಾರಿ ಪೋಷಿತ ಕಾರ್ಖಾನೆಗಳ ಜತೆಗೆ ಖಾಸಗಿ ಚಲನಚಿತ್ರ ಮಂದಿರಗಳು, ಬ್ಯಾಂಕಗಳು ನಮ್ಮ ಚಿತ್ರ–ಶಿಲ್ಪಕಲಾವಿದರನ್ನು ಒಪ್ಪಿಸಿ, ಹಣ ನೀಡಿ ಅವರ ಕಲೆಯನ್ನು ಸಾರ್ವಜನಿಕವಾಗಿಸಿದವು.

ಹೈದ್ರಾಬಾದ–ಕರ್ನಾಟಕ ಪ್ರದೇಶದಲ್ಲಿ ಧನಂಜಯ ಶಿಲ್ಪಿ ಅವರು ನಿರ್ಮಿಸಿದ ಹಲವಾರು ಶಿಲ್ಪಗಳು ಕಂಡುಬರುತ್ತವೆ. ಇವರು ಮಹಾದೇವಪ್ಪ ರಾಂಪುರೆ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶಿಕ್ಷಣ ಶಿಲ್ಪಿ ಮಾಹಾದೇವಪ್ಪ ರಾಂಪುರೆ ಅವರ ವ್ಯಕ್ತಿ ಶಿಲ್ಪವನ್ನು ಅತ್ಯಂತ ಆಕರ್ಷಕವಾಗಿ ನಿರ್ಮಿಸಿದ್ದಾರೆ. ಈ ವ್ಯಕ್ತಿ ಶಿಲ್ಪವನ್ನು ಪಂಚಲೋಹ ಮಾಧ್ಯಮದಲ್ಲಿ ನಿರ್ಮಿಸಲಾಗಿದ್ದು, ಆರು ಅಡಿ ಎತ್ತರವಿದೆ.

ಇನ್ನೂಳಿದಂತೆ ಕಲಬುರಗಿ ನಗರದ ಉದ್ಯಾನವನಗಳಲಿ, ಸಾರ್ವಜನಿಕ ಚೌಕಗಳಲ್ಲಿ ರಾಜಕಾರಣಿಗಳ, ಸಾಮಾಜಿಕ ಸುಧಾರಕರ, ಹೋರಾಟಗಾರರ, ವೀರ ವ್ಯಕ್ತಿಗಳ ಸಾಹಿತಿಗಳ ಕಲಾವಿದರ ಪ್ರತಿಮೆಗಳನ್ನು ನಿರ್ಮಿಸಲಾಗಿದೆ. ಈ ಪ್ರತಿಮಾಗಳ ವಿವಿರ ಹೀಗಿದೆ. 1) ಡಾ.ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್‌ರ ವ್ಯಕ್ತಿಶಿಲ್ಪ. (ಅಂಬೇಡ್ಕರ್ ವೃತ್ತ) ಸರ್ದಾರ ವಲ್ಲಭ ಭಾಯಿ ಪಟೇಲ್ ವ್ಯಕ್ತಿಶಿಲ್ಪ (ತಿಮ್ಮಾಪುರ ಸರ್ಕಲ್) ವಿಶ್ವಗುರು ಬಸವಣ್ಣನವರ ವ್ಯಕ್ತಿಶಿಲ್ಪ (ಜಗತ್ ವೃತ್ತ) ಮಹಾತ್ಮ ಗಾಂಧೀಜಿ, ಜವಾಹರ ಲಾಲ್ ನೆಹರು, ಲೋಕಮನ್ಯ ಬಾಲಗಂಗಾಧರ ತಿಲಕ ಮತ್ತು ಜಯಪ್ರಕಾಶ ನಾರಾಯಣರವರ ಭಾವಶಿಲ್ಪಗಳು (ಕಲಬುರಗಿ) ಮಹಾನಗರ ಪಾಲಿಕೆಯ ಇಂದಿರಾ ಸ್ಮಾರಕ ಭವನ (ಎದುರುಗಡೆ) ಚಂದ್ರಶೇಖರ್ ಪಾಟೀಲರ ಭಾವಶಿಲ್ಪ (ಚಂದ್ರಶೇಖರ ಪಾಟೀಲ್ ಶಿಕ್ಷಣ ಸಂಸ್ಥೆಯ ಆವರಣ) ಮಹಾದೇವಪ್ಪ ರಾಂಪುರೆ ಭಾವಶಿಲ್ಪ ಎಂ. ಆರ್. ಮೆಡಿಕಲ್ ಕಾಲೇಜು, ಆವಣರ ಕಲಬುರಗಿ, ಕಲಬುರಗಿ ಮಹಾನಗರ ಪಾಲಿಕೆಯ ಉದ್ಯಾನವನದಲ್ಲಿರುವ ಬೃಹತ್ ಗಾತ್ರದ ಡೈನೋಸಾರಸ್ ಶಿಲ್ಪ, ಗುಲಬರ್ಗಾ ವಿಶ್ವವಿದ್ಯಾಲಯ ಕಾರ್ಯಸೌಧ ಎದುರುಗಡೆ ಇರುವ ಜಿರಾಫೆ, ಆನೆ, ಮತ್ತು ಡೈನೊಸಾರಸಗಳ ಶಿಲ್ಪ, ಐವಾನ–

ಇ-ಶಾಹಿ ಉದ್ಯಾನವನದಲ್ಲಿರುವ ಕುದುರೆ ಶಿಲ್ಪ. ಕಲಬುರಗಿಯ ವಿಜ್ಞಾನ ಕೇಂದ್ರದ ಆವರಣದಲ್ಲಿರುವ ವಿವಿಧ ಪ್ರಬೇಧದ ಡೈನೋಸಾರಸಗಳ ಶಿಲ್ಪ ಕೇಂದ್ರ ಬಸ್ ನಿಲ್ದಾಣದ ಆವರನದಲ್ಲಿರುವ ಮಿಶ್ರ ಮಾಧ್ಯಮ ಶಿಲ್ಪಗಳು ಹಿಗೆ ಹಲವಾರು ಸಾರ್ವಜನಿಕ ಶಿಲ್ಪಗಳು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ನೋಡಲು ಸಿಗುತ್ತವೆ.

ಧನಂಜಯ ಶಿಲ್ಪಿ, ಶಾಂತಲಿಂಗಪ್ಪ ಪಾಟೀಲ್, ಎಸ್.ಎಸ್.ಸಿಂಪಿ, ಮಾನಯ್ಯ ಬಡಿಗೇರ್, ನಾಗಪ್ಪ ಪ್ರಧಾನಿ, ಬಾಬುರಾವ ಎಚ್, ವಿವೇಕರಾವ್, ಜಗನ್ನಾಥ ಜಕ್ಕೆಪಲ್ಲಿ, ನಿಂಗಣ್ಣ ಪಿ.ಕೇರಿ, ಮಹೇಶಕುಮಾರ ತಳವಾರ, ವಿಶ್ವೇಶ್ವರಯ್ಯ ಟಿ.ಎನ್, ರಮೇಶ ಯಳಸಂಗಿಕರ್, ಗೌರಿ ಶಂಕರ ಬಿ.ಜಿ. ಪರಶುರಾಮ.ಪಿ, ಮುಂತಾದ ಹೈದ್ರಾಬಾದ ಕರ್ನಾಟಕದ ಪ್ರದೇಶದ ಚಿತ್ರ-ಶಿಲ್ಪಕಲಾವಿದರು ಸಾರ್ವಜನಿಕ ಶಿಲ್ಪಕಲಾ ಪ್ರಕಾರಕ್ಕೆ ಗಣನೀಯವಾದ ಕೊಡುಗೆ ನೀಡಿದ್ದಾರೆ.

ನಮ್ಮ ನಾಡಿನ ಮತ್ತ ದೇಶದ ಮಹಾನ್ ದೇಶ ಪ್ರೇಮಿಗಳು ಮತ್ತು ಭಾರತಕ್ಕೆ ಸ್ವಾತಂತ್ರ್ಯ ಸಿಗುವಲ್ಲಿ ಪ್ರಮುಖ ಪಾತ್ರವಹಿಸಿದ ಮಹಾನ್ ವ್ಯಕ್ತಿಗಳಾದ ಮಹಾತ್ಮ ಗಾಂಧೀಜಿ, ಡಾ.ಬಾಬಾ ಸಾಹೇಬ್ ಅಂಬೇಡ್ಕರ್, ಸುಭಾಶಚಂದ್ರ ಬೋಸ್, ಛತ್ರಪತಿ ಶಿವಾಜಿ, ಕಿತ್ತೂರ ರಾಣಿ ಚೆನ್ನಮ್ಮ, ವೀರ ಮದಕರಿ ನಾಯಕ, ಒನಕೆ ಓಬವ್ವ, ಲೋಕಮಾನ್ಯ ಬಾಲ ಗಂಗಾಧರ ತಿಲಕ, ಸಂಗೋಳ್ಳಿ ರಾಯಣ್ಣ, ಟಿಪ್ಪು ಸುಲ್ತಾನ, ಭಗತಸಿಂಗರಂತಹ ಹಲವಾರು ಮಹಾನ ವ್ಯಕ್ತಿಗಳ ಮತ್ತು ಶ್ರೇಷ್ಠ ಪ್ರಜೆಗಳ, ಮಾನವತಾವಾದಿಗಳ, ಬುದ್ಧಿ ಜೀವಿಗಳ, ವಿಚಾರವಾದಿಗಳ, ಕಲಾವಿದ-ಕವಿ, ನಾಟಕಕಾರರ, ಸಾಹಿತಿಗಳ ವ್ಯಕ್ತಿ ಶಿಲ್ಪಗಳು ನಗರದ ದೊಡ್ಡ ದೊಡ್ಡ ವೃತ್ತ, ಚೌಕ್, ಸರ್ಕಾರಿ ಕಟ್ಟಡಗಳ, ಸಿನಿಮಾ-ರಂಗಮಂದಿರಗಳ ಮುಂದೆ, ಉದ್ಯಾನವನಗಳಲ್ಲಿ ಮತ್ತು ಸರ್ಕಾರಿ ಕಟ್ಟಡಗಳ ಮುಂದೆ ನಿರ್ಮಾಣಗೊಂಡಿವೆ. ಸಾರ್ವಜನಿಕ ಶಿಲ್ಪಗಳ ಪ್ರತಿಷ್ಠಾಪನೆ ಜನಸಾಮಾನ್ಯರಿಗೆ ಹೊಸ ಅನುಭವ ನೀಡಿವೆ. ಸಾರ್ವಜನಿಕ ಶಿಲ್ಪಗಳನ್ನು ವಿಶೇಷವಾಗಿ ಶಿಲೆ, ಲೋಹ, ಫೈಬರ್‌ಗ್ಲಾಸ್ ಮತ್ತು ಸಿಮೆಂಟ್ ಮಾಧ್ಯಮದಲ್ಲಿ ಹೆಚ್ಚಾಗಿ ನಿರ್ಮಿಸಲಾಗುತ್ತದೆ. ಈ ಸಾರ್ವಜನಿಕ ಶಿಲ್ಪಗಳು ನಗರದ ವಿವಿಧ ಸ್ಥಳಗಳಲ್ಲಿ ನಿರ್ಮಾಣಗೊಂಡು, ಆ ಪ್ರದೇಶದ ಲ್ಯಾಂಡಮಾರ್ಕಗಳಾಗಿ

ಗುರುತಿಸಿಕೊಂಡಿವೆ. (ಉದಾಃ ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ಸಂಗೋಳ್ಳಿ ರಾಯಣ್ಣ ಚೌಕ್, ಶ್ರೀ ಬಸವೇಶ್ವರ ವೃತ್ತ ಇತ್ಯಾದಿ.)

ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ನಮ್ಮ ಮಹಾನಗರಗಲ್ಲಿ ಹೊಸ ಹೊಸ ದೇವಾಲಯಗಳು, ಉದ್ಯಾನವನಗಳು, ಸಿನಿಮಾ–ರಂಗಮಂದಿರಗಳು, ಮಾಲ್‌ಗಳು, ಐಟಿ–ಬಿಟಿ ಕಂಪನಿಗಳು, ದೊಡ್ಡ ದೊಡ್ಡ ಸಾರ್ವಜನಿಕ ಕಟ್ಟಡಗಳು, ಧಾರ್ಮಿಕ ಕೇಂದ್ರಗಳು, ಶಿಲ್ಪಕಲೆಗೆ ಹೊಸ ಹೊಸ ಅವಕಾಶಗಳನ್ನು ಕೊಡುತ್ತಿವೆ. ಇಂತಹ ಅವಕಾಶಗಳಿಗೆ ಸಮರ್ಥವಾಗಿ ಸ್ಪಂದಿಸುವ ಶಿಲ್ಪಿಗಳ ಸಮೂಹವೇ ಕರ್ನಾಟಕದಲ್ಲಿದೆ. ಸಂಪ್ರದಾಯ, ವ್ಯಕ್ತಿ ಶಿಲ್ಪ (ರೂಪಶಿಲ್ಪ) ಆಧುನಿಕ, ಸಮಕಾಲೀನ, ಇನ್‌ಸ್ಟಾಲೇಷನ್ ಹೀಗೆ ಎಲ್ಲಾ ಶೈಲಿಗಳ ಶಿಲ್ಪಗಳ ಸೃಷ್ಟಿ ನಿರಂತರವಾಗಿ ಮುಂದುವರೆದಿದೆ.

ಒಟ್ಟಾರೆ ವಿಭಿನ್ನ ಸಂಸ್ಕೃತಿಗಳು ಮತ್ತು ಸವಾಲುಗಳ ನಡುವೆಯೂ ನಮ್ಮ ಹೈದ್ರಾಬಾದ–ಕರ್ನಾಟಕದ ಹಲವು ಹಿರಿ–ಕಿರಿಯ ಶಿಲ್ಪಿಗಳು ಎಲ್ಲವನ್ನೂ ಅರಗಿಸಿಕೊಂಡು ಸ್ವಂತಿಕೆಯನ್ನು ಮೆರೆಯುವುದರೊಂದಿಗೆ ಇಂದು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವಲ್ಲಿ ಸಾಮರ್ಥ್ಯವನ್ನು ತಮ್ಮ ಶಿಲ್ಪಗಳ ಮೂಲಕ ತೋರ್ಪಡಿಸಿವರು.

ಸಾರ್ವಜನಿಕ ಸ್ಥಳಗಳು ಮತ್ತು ಉದ್ಯಾನಗಳಲ್ಲಿ ರೈಲು ನಿಲ್ದಾಣಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ವಿಮಾನ ನಿಲ್ದಾಣಗಳಲ್ಲಿ ಆಧುನಿಕ–ಸಮಕಾಲೀನ ದೃಷ್ಟಿಯ ಶಿಲ್ಪಕಲಾಕೃತಿಗಳನ್ನು ಹೆಚ್ಚು ಹೆಚ್ಚಾಗಿ ಪ್ರತಿಷ್ಠಾಪಿಸುವ ಪ್ರಯತ್ನಗಳು ತೀವ್ರಗೊಳ್ಳಬೇಕಿದೆ. ಅಲ್ಲದೆ ಕಲಾ ಸಂಗ್ರಹಕಾರು ಸಮಕಾಲೀನ ಶಿಲ್ಪಕಲಾಕೃತಿಗಳನ್ನು ಕೊಂಡು ಸಂಗ್ರಹಿಸುವ ಆರಾಧಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕಾದದು ಶಿಲ್ಪಕಲೆಯ ಬೆಳವಣಿಗೆಯ ದೃಷ್ಟಿಯಿಂದ ತೀರಾ ಅಗತ್ಯವಾಗಿದೆ.

ಕಲಬುರಗಿಯಲ್ಲಿ ಸಮಕಾಲೀನ ಶಿಲ್ಪಕಲೆಗೆ ಸಂಬಂಧಿಸಿದಂತೆ ಬೃಹತ್ ಪ್ರಮಾಣದ ಮೂರು ಅಂತರಾಷ್ಟ್ರೀಯ ಶಿಬಿರಗಳು ನಡೆದಿವೆ. ಒಂದು ದಿ ಐಡಿಯಲ್ ಫೈನ್ ಆರ್ಟ್‌ನಲ್ಲಿ

ಅಂದಾನಿ ಅವರ ನೇತೃತ್ವದಲ್ಲಿ ನಡೆದ ಸಿಂಪೋಸಿಯಂ ಇನ್ನೊಂದು ಎಸ್.ಬಿ.ಉಪ್ಪಿನ ಅವರ ಸಂಚಾಲಕತ್ವದಲ್ಲಿ ಅವರ ತೋಟದ ಮನೆಯಲ್ಲಿ ನಡೆಯಿತು. ೨೦೧೧ರಲ್ಲಿ ಕಲಬುರಗಿಯ ಶ್ರೀ ಗುರುವಿದ್ಯಾಪೀಠದಲಿ ಅಂತರಾಷ್ಟ್ರೀಯ ಶಿಲ್ಪ-ಚಿತ್ರಗಳ ಸಿಂಪೊಸಿಯಂ ನಡೆಯಿತು. ಈ ಸಿಂಪೋಸಿಯಂನಲ್ಲಿ ಜರ್ಮನಿ, ಸೆರಬ್ಯೆ, ಇಟಲಿ ದೇಶದ ಶಿಲ್ಪ ಕಲಾವಿದರೊಂದಿಗೆ ಕರ್ನಾಟಕದ ವೆಂಕಟಚಲಾಪತಿ, ಕನಕಾಮೂರ್ತಿ, ಮಾನಯ್ಯ ನಾ. ಬಡಿಗೇರ್, ನಂದಕುಮಾರ, ರಮೇಶ ರಚಿನಾಳ, ಲಕ್ಷ್ಮೀಕಾಂತ ಮನೋಕರ, ಮಧುಕುಮಾರ ಎನ್, ಮಹಾದೇವ್, ಶ್ರೀಶೈಲ ಬಡಿಗೇರ್, ವಿವೇಕರಾವ್, ಗೌರಿಶಂಕರ, ಶಿವಪ್ಪ ಬಡಿಗೇರ್, ವರದರಾಜ್ ಬಡಿಗೇರ್, ಭಾಗವಹಿಸಿದ್ದರು. ಇವರೊಂದಿಗೆ ಭಾರತದ ಬೇರೆ-ಬೇರೆ ರಾಜ್ಯದ ಶಿಲ್ಪಕಲಾವಿದರಾದ ಅಜಿಂಕನಯ (ಮುಂಬಯಿ) ಬಾನುರಾಮ ವೈದ್(ಬಸ್ತಾರ್) ಹಿಟ್ಲರ್ (ನವದೆಹಲಿ) ತ್ರಿವೇದಿ ಬಾನುರಾಮ್ (ಬಸ್ತಾರ್) ಮಹೇಶ ಪ್ರಜಾಪತಿ (ಗ್ವಾಲಿಯರ್) ಭೂಷನ ಅನಿಲ್ ಮಾನೆಕರ್ (ಮುಂಬಯಿ) ಪಂಕಜ ಗನೋರಕರ್ (ಮುಂಬಯಿ) ವಿಬಿನ ಜಾರ್ಜ (ಬರೋಡಾ) ಮೃಥುನ ಸಮದ್ದಾರ್ (ಗ್ವಾಲಿಯರ್) ಮೂರಗನ್ ರಾಠೋಡ್ (ಬರೋಡಾ), ಉಪೇಂದ್ರ ಬಾನುರಾಮ್ (ಬಸ್ತಾರ್) ಶಿಬಿರದಲ್ಲಿ ಭಾಗವಹಿಸಿ ಬೃಹತ್ ಗಾತ್ರ, ಶಿಲ್ಪ-ಇನಸ್ಟಾಲೇಷನ್ ಶಿಲೆ, ಲೋಹ, ಮರ, ಮಿಶ್ರ ಮಾಧ್ಯಮಗಲ್ಲಿ ನಿರ್ಮಿಸಿದ್ದಾರೆ.

ಬಾಬುರಾವ ಎಚ್ ಮತ್ತು ವಿರೇಂದ್ರ ಶಾಹ ಅವರು ಈ ಸಿಂಪೋಸಿಯಂ ಸಂಚಾಲಕರಾಗಿ ಕಾರ್ಯ ನಿರ್ವಹಿಸಿದ್ದರು. ಸರ್ಕಾರ ಮಾಡದಿರುವ ಇಂತಹ ಕೆಲಸಗಳನ್ನು ಖಾಸಗಿಯಾಗಿ ಇವರುಗಳು ಮಾಡಿದ್ದು, ಪ್ರಶಂಶನೀಯವಾದ ದಾಖಲಾರ್ಹ ಸಾಧನೆಯಾಗಿದೆಯೆಂದರೆ ತಪ್ಪಲ್ಲ.

ಇತ್ತೀಚಿನ ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಆಧುನಿಕ ಸಮಕಾಲೀನ ಶಿಲ್ಪಕಲಾ ಶಿಬಿರಗಳನ್ನು ಸಾಕಷ್ಟು ಪ್ರಮಾಣದಲ್ಲಿ ನಡೆಸಿದುದು. ಸಮಕಾಲೀನ ಶಿಲ್ಪಕಲೆಗಳನ್ನು ಬೆಳವಣಿಗೆಗೆ ಒತ್ತು ನೀಡಿದಂತಾಗಿದೆ.

ಟಿಪ್ಪಣಿಗಳು


೧) ಸಮಕಾಲೀನ ಶಿಲ್ಪಕಲೆಯ ಬೆಳವಣಿಗೆಯ ದೃಷ್ಟಿಯಿಂದ ಹೈದ್ರಾಬಾದ-ಕರ್ನಾಟಕದಲ್ಲಿನ ದೃಶ್ಯಕಲಾ ಕಾಲೇಜಗಳ ಕೊಡಗೆಯೂ ಸ್ಮರಿಸುವಂತಹುದಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆಗೊಂಡಿರುವ ದೃಶ್ಯಕಲಾ ಕಾಲೇಜುಗಳಲ್ಲಿ ಕೆಲವೇ ಕೆಲವು ಕಾಲೇಜುಗಳು ವಿದ್ಯಾರ್ಥಿಗಳಿಗೆ ಸಮಕಾಲೀನ ಶಿಲ್ಪಕಲೆಯನ್ನು ವ್ಯಾಸಂಗ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿವೆ.
ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಕಲಬುರಗಿಯ ಎಂ.ಎಂ.ಕೆ ಕಾಲೇಜ ಆಫ್ ವಿಜ್ಯುವಲ್ ಆರ್ಟ್ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲಾ ಅಧ್ಯಯನ ವಿಭಾಗ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಬಾದಾಮಿ ಶಾಖೆ, ಈ ಸಂಸ್ಥೆಗಳಲ್ಲಿ ಶಿಲ್ಪಕಲಾ ವ್ಯಾಸಂಗಕ್ಕೆ ಪ್ರತ್ಯೇಕ ವಿಭಾಗಗಳಿದ್ದು, ಈ ವಿಭಾಗಗಳಿಂದ ಈವರೆಗೆ ಶಿಲ್ಪಕಲೆಯಲ್ಲಿ ಅನೇಕರು ಪದವಿ, ಸ್ನಾತಕೋತ್ತರ ಪದವಿಗಳನ್ನು ಪಡೆದುಕೊಂಡಿದ್ದಾರೆ.

೨) ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಮತ್ತು ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ ಇವುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ: ೦೯.೦೨.೨೦೧೫ರಿಂದ ೧೮.೦೨.೨೦೧೫ರವರೆಗೆ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಭಿತ್ತಿಶಿಲ್ಪ ಶಿಬಿರ ಏರ್ಪಡಿಸಿತ್ತು. ಈ ಶಿಬಿರದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಡಾ.ಪರಶುರಾಮ.ಪಿ, ವಿಶ್ವೇಶ್ವರಯ್ಯ ಟಿ.ಎನ್, ಡಾ. ಮೋಹನ ಪಂಚಾಳ ಮತ್ತು ಪ್ರದೀಪಸಿಂಗ್ ಬೈಸ್ ಅವರು ಭಾಗವಹಿಸಿ ಪ್ಲೈವುಡ್ ಮಾಧ್ಯಮದಲ್ಲಿ ಸಮಕಾಲೀನ ಭಿತ್ತಿಶಿಲ್ಪಗಳನ್ನು ರಚಿಸಿದ್ದಾರೆ.

೩) ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು, ಮತ್ತು ಕಲ್ಯಾಣ ಕರ್ನಾಟಕ, ಸಾಂಸ್ಕೃತಿಕ ಪರಿಷತ್ತು, ಕಲಬುರಗಿ ಇವುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ:

೦೮.೦೯.೨೦೧೬ರಿಂದ ೨೨.೦೯.೨೦೧೬ರವರೆಗೆ ರಾಜ್ಯ ಮಟ್ಟದ ಸಂಪ್ರದಾಯ ಮತ್ತು ಸಮಕಾಲೀನ ಶಿಲಾ ಶಿಲ್ಪಕಲಾ ಶಿಬಿರ ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಕಲಬುರಗಿಯ ನಟರಾಜ್.ಎಂ. ಶಿಲ್ಪಿ, ನಿಂಗಪ್ಪ ಡಿ.ಕೇರಿ ಮತ್ತು ಹಣಮಂತ ಬಾಡದ ಅವರು ಭಾಗವಹಿಸಿ ಸಮಕಾಲೀನ ಶಿಲ್ಪ ಕಲಾಕೃತಿಗಳನ್ನು ರಚಿಸಿದ್ದಾರೆ.





ದಿ. ಧನಂಜಯ ಶಿಲ್ಪಿ

ಧನಂಜಯ ಶಿಲ್ಪಿ ಅವರು
ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಲ್ಲಿ
ನಿರ್ಮಿಸಿದ 'ಸರಸ್ವತಿ'ಯ ಶಿಲ್ಪ.



ಧನಂಜಯ ಶಿಲ್ಪಿ ಅವರು
ಶಿಲೆ ಮಾಧ್ಯಮದಲ್ಲಿ ನಿರ್ಮಿಸಿದ
'ತಾಯಿ-ಮಗುವಿನ' ಶಿಲ್ಪ.



ಕಲಬುರಗಿಯ ವಿ.ಜಿ. ಮಹಿಳಾ ಮಹಾವಿದ್ಯಾಲಯದಲ್ಲಿ ನಿಂಗಣ್ಣ ಡಿ. ಕೇರಿ ಅವರು ಶಿಲಾ ಮಾಧ್ಯಮದಲ್ಲಿ ನಿರ್ಮಿಸಿದ ಒಂದು ಶಿಲ್ಪ.



ಮಹೇಶಕುಮಾರ ಡಿ. ತಳವಾರ ಅವರ 'ತಾಯಿ. ಮತ್ತು ಮಗು' ಶೀರ್ಷಿಕೆಯ ಒಂದು ಶಿಲ್ಪ.



ಡಾ. ಶಿವಾನಂದ ಬಂಟನೂರ ಅವರ
ಸಮಕಾಲೀನ ಶಿಲ್ಪಕಲಾಕೃತಿ.



ನಟರಾಜ ಎಂ. ಶಿಲ್ಪಿ ಅವರ ಸಮಕಾಲೀನ ಅಭಿವ್ಯಕ್ತಿ.



ತಾವು ನಿರ್ಮಿಸಿದ ವರಕವಿ ದ.ರಾ. ಬೇಂದ್ರೆ ಅವರ ಭಾವಶಿಲ್ಪದೊಂದಿಗೆ ಜಗನ್ನಾಥ ಜಕ್ಕೆಪಳ್ಳಿ.



ಜಗನ್ನಾಥ ಜಕ್ಕೆಪಳ್ಳಿ ಅವರ ಒಂದು ಸಮಕಾಲೀನ ಅಭಿವ್ಯಕ್ತಿ.



2011 ರಲ್ಲಿ ಕಲಬುರಗಿಯ
ಶ್ರೀ ಗುರು ವಿದ್ಯಾ ಪೀಠದಲ್ಲಿ ಏರ್ಪಡಿಸಿದ
ಅಂತರರಾಷ್ಟ್ರೀಯ ಸಿಂಪೋಸಿಯಂನಲ್ಲಿ
ರೂಪಗೊಂಡ ಒಂದು ಸಮಕಾಲೀನ ಶಿಲ್ಪ.



2011 ರಲ್ಲಿ ಕಲಬುರಗಿಯ
ಶ್ರೀ ಗುರು ವಿದ್ಯಾ ಪೀಠದಲ್ಲಿ ಏರ್ಪಡಿಸಿದ
ಅಂತರರಾಷ್ಟ್ರೀಯ ಸಿಂಪೋಸಿಯಂನಲ್ಲಿ
ರೂಪಗೊಂಡ ಒಂದು ಫೈಬರ್ ಮಾಧ್ಯಮದ ಶಿಲ್ಪ.



ಕಲಬುರಗಿಯ ದಿ ಆರ್ಟ್ ಇಂಟಿಗ್ರೇಷನ್ ಫೈನ್ ಆರ್ಟ್ ಕಾಲೇಜಿನಲ್ಲಿ ನಯನಾ ಬಿ. ಅವರು ನಿರ್ಮಿಸಿದ ಒಂದು ಇನ್‌ಸ್ಟಾಲೇಷನ್ ಕಲಾಕೃತಿ.



ಡಾ. ಪರಶುರಾಮ ಪಿ. ಅವರ 'ಸ್ಪೀಕಿಂಗ್ ವಾಲ್' ಶೀರ್ಷಿಕೆಯ ಒಂದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ.



ಕಲಬುರಗಿಯ ಎಂ.ಎಂ.ಕೆ. ಕಾಲೇಜಿನಲ್ಲಿ 2007ರಲ್ಲಿ
ಚಂದ್ರಕಾಂತ ಅವರು ನಿರ್ಮಿಸಿದ ಒಂದು ಇನ್‌ಸ್ಟಾಲೇಷನ್ ಕಲಾಕೃತಿ.




ಕಲಬುರಗಿಯ ಎಂ.ಎಂ.ಕೆ. ಕಾಲೇಜಿನ ವಿಜ್ಯುವಲ್ ಆರ್ಟ್‌ನಲ್ಲಿ
ಶಫೀಕ್ ಜಿ. ಮಾಶಾಳಕರ್ ಅವರು ನಿರ್ಮಿಸಿದ ಒಂದು ಇನ್‌ಸ್ಟಾಲೇಷನ್ ಕಲಾಕೃತಿ.



ಸುರಪುರದ ಬಸ ನಿಲ್ದಾಣದ ಪಕ್ಕದಲ್ಲಿರುವ
ಡಾ. ಬಾಬಾ ಸಾಹೇಬ್ ಬಿ.ಆರ್. ಅಂಬೇಡ್ಕರ
ಅವರ ವ್ಯಕ್ತಿ ಶಿಲ್ಪ.



ಕಲಬುರಗಿಯ ನಗರದ ವೃತ್ತವೊಂದರಲ್ಲಿರುವ
ಸರದಾರ ವಲ್ಲಬಾಯಿ ಪಟೇಲ್ ಅವರ ವ್ಯಕ್ತಿ ಶಿಲ್ಪ.





ಕಲಬುರಗಿಯ ಮಹಾನಗರ ಪಾಲಿಕೆಯ
ಇಂದಿರಾ ಸ್ಮಾರಕ ಭವನದ ಎದುರುಗಡೆ ಇರುವ
ಮಹಾತ್ಮಾ ಗಾಂಧಿಜೀಯವರ ಭಾವಶಿಲ್ಪ

ಕಲಬುರಗಿಯ ಮಹಾನಗರ ಪಾಲಿಕೆಯ
ಇಂದಿರಾ ಸ್ಮಾರಕ ಭವನದ ಎದುರುಗಡೆ ಇರುವ
ಜವಹಾರಲಾಲ್ ನೆಹರು ಅವರ ಭಾವಶಿಲ್ಪ





ಕಲಬುರಗಿಯ ಮಹಾನಗರ ಪಾಲಿಕೆಯ
ಇಂದಿರಾ ಸ್ಮಾರಕ ಭವನದ ಎದುರುಗಡೆ ಇರುವ
ಲೋಕಮಾನ್ಯ ಬಾಲ ಗಂಗಾಧರ ತಿಲಕ ಅವರ ಭಾವಶಿಲ್ಪ

ಚಂದ್ರಶೇಖರ ಪಾಟೀಲ ಅವರ ಭಾವಶಿಲ್ಪ
(ಚಂದ್ರಶೇಖರ ಪಾಟೀಲ ಆಂಗ್ಲ ಮಾಧ್ಯಮ ಶಾಲೆಯ
ಆವರಣ, ಕಲಬುರಗಿ)



ಕಲಬುರಗಿಯ ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ಅನುಪಯುಕ್ತ ವಸ್ತುಗಳಿಂದ ನಿರ್ಮಿಸಿದ ಒಂದು ಸಾರ್ವಜನಿಕ ಶಿಲ್ಪಗಳು



ಕಲಬುರಗಿಯ ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ಅನುಪಯುಕ್ತ ವಸ್ತುಗಳಿಂದ ನಿರ್ಮಿಸಿದ ಒಂದು ಸಾರ್ವಜನಿಕ ಶಿಲ್ಪಗಳು



ಕಲಬುರಗಿಯ ಶ್ರೀ ಗುರು ವಿದ್ಯಾಪೀಠದ ಆವರಣದಲ್ಲಿ
ಬಾಬುರಾವ್ ಎಚ್. ಅವರು ನಿರ್ಮಿಸಿದ ಒಂದು ಸಾರ್ವಜನಿಕ ಶಿಲ್ಪ.



ಆಲಮಟ್ಟಿಯ ಉದ್ಯಾನವನದಲ್ಲಿ
ಬಾಬುರಾವ್ ಎಚ್. ಅವರು ನವ್ಯ ಶೈಲಿಯಲ್ಲಿ ನಿರ್ಮಿಸಿದ ಒಂದು ಸಾರ್ವಜನಿಕ ಶಿಲ್ಪ



ಕಲಬುರಗಿ ನಗರದ ಹೊರವಲಯದಲ್ಲಿರುವ ಬೌದ್ಧ ವಿಹಾರದ ಒಂದು ನೋಟ



ಬೌದ್ಧ ವಿಹಾರದ ಆವರಣದಲ್ಲಿರುವ ಲೋಹ ಮಾಧ್ಯಮದ ಶಿಲ್ಪಗಳು
(ಡಾ. ಬಾಬಾಸಾಹೇಬ್ ಬಿ.ಆರ್. ಅಂಬೇಡ್ಕರ ಬೌದ್ಧ ಧರ್ಮ ಸ್ವೀಕರಿಸಿದ ಸಂದರ್ಭದ ಸನ್ನಿವೇಶ)



ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದ ಎದುರುಗಡೆ ಇರುವ
ಸಿಮೆಂಟ್ ಮಾಧ್ಯಮದ ಆನೆಯ ಶಿಲ್ಪಗಳು.



ಕೆಸರಟಗಿಯ ಉದ್ಯಾನವನದಲ್ಲಿರುವ ಸಿಮೆಂಟ್ ಮಾಧ್ಯಮದ ಜಿರಾಫೇಯ ಶಿಲ್ಪಗಳು.



ಬಾಬುರಾವ್ ಎಚ್. ಅವರು ಕಲಬುರಗಿ ಮಹಾನಗರ ಪಾಲಿಕೆಯ ಉದ್ಯಾನವನದಲ್ಲಿ ಸಿಮೆಂಟ್ ಮಾಧ್ಯಮದಲ್ಲಿ ನಿರ್ಮಿಸಿದ ಡೈನೋಸಾರಸ್.



ಬೆಂಗಳೂರಿನ ಗಾಂಧಿ ಭವನದಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಏರ್ಪಡಿಸಿದ ಸಿಮೆಂಟ್ ಮಾಧ್ಯಮದ ಶಿಲ್ಪಕಲಾ ಶಿಬಿರದಲ್ಲಿ ಬಾಬುರಾವ್ ಎಚ್. ಅವರು ನಿರ್ಮಿಸಿದ ಗಾಂಧಿಜೀಯ ಶಿಲ್ಪ.

ಅಧ್ಯಾಯ–6

ಸಮಾರೋಪ

ಇಂದಿನ ಸಮಕಾಲೀನ ಜಾಗತೀಕರಣದ ಸಂದರ್ಭದಲ್ಲಿಯೂ ಜನಪದ ದೃಶ್ಯಕಲಾ ಪ್ರಕಾರಗಳು ಎಲ್ಲಾ ನವೀನ ಕಲೆಗಳಿಗೆ ಭದ್ರಬುನಾದಿಯನ್ನು ಹಾಕಿಕೊಟ್ಟಿವೆ. ಕರ್ನಾಟಕದ ಪ್ರತಿ ಜಿಲ್ಲೆಗಳಲ್ಲಿಯೂ ಆಯಾ ಪ್ರಾದೇಶಿಕ ವಿಭಿನ್ನತೆಗೆ ತಕ್ಕಂತೆ ತಳ ಸಮುದಾಯಗಳ ಜನರ ಭಾಷೆ, ಉಡುಗೆ–ತೊಡುಗೆ, ಆಚಾರ–ವಿಚಾರ, ಸಾಂಸ್ಕೃತಿಕ ಒಡಂಬಡಿಕೆಗಳು ಹಾಸು ಹೊಕ್ಕಾಗಿರುವುದರಿಂದ ಇಲ್ಲಿಯ ಕಲಾ ಪ್ರಕಾರಗಳಲ್ಲಿಯೂ ವಿಶಿಷ್ಟತೆಯ ಹಲವಾರು ಶೈಲಿಗಳನ್ನು ಕಾಣುತ್ತೇವೆ. ಭೌಗೋಳಿಕ ರಚನೆಯ ವ್ಯತ್ಯಾಸ ವಾತಾವರಣದ ಏರುಪೇರುಗಳನ್ನು ಸ್ವಾಭಾವಿಕ ಪರಿಸರದೊಂದಿಗೆ ರೂಢಸಿಕೊಂಡಿರುವ ಸಾಂಸ್ಕೃತಿಕ ಜನಜೀವನ ವ್ಯವಸ್ಥೆಯೂ ಪ್ರತಿ ಜಿಲ್ಲಗಳಲ್ಲಿಯೂ ವಿಶೇಷತೆಗೆ ಒಳಗಾಗಿವೆ. ಆದರೆ ಕೂಡುಕೊಳ್ಳುವಿಕೆಯಿಂದ ಪ್ರಾದೇಶಿಕ ವ್ಯತಾಸಗಳು ಹಲವಾರು ಸಂದರ್ಭಗಳಲ್ಲಿ ಸಮ್ಮಿಶ್ರ ಬದುಕಿಗೆ ಅವಕಾಶ ಮಾಡಿಕೊಟ್ಟಿದೆ.

ದಲಿತ ಕೆಳಸ್ತರದ ಸಮುದಾಯಗಳ ಸಂಸ್ಕೃತಿಯು ಉಚ್ಚ ಜಾತಿಗಳ ಅಸಮಾನತಾವಾದಿ ಸಂಸ್ಕೃತಿಗಿಂತಲೂ ಜನಪರವೂ ಮತ್ತು ವಿಶಾಲತೆಯಿಂದಲೂ ಕೂಡಿದೆ. ತಳ ಸಮುದಾಯಗಳ ಸಾಂಸ್ಕೃತಿಕ ಜಗತ್ತು ಸಮೃದ್ಧವಾಗಿದೆ. ಅಲಿ ಮಾನವೀಯ ಆಶಯಗಳಿವೆ. ಹೀಗಿದ್ದೂ ಅವು ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿವೆ. ಆಧುನಿಕ ಪ್ರಜಾಪ್ರಭುತ್ವದಲ್ಲಿ ಅದಕ್ಕೆ ಸೂಕ್ತ ಪಾಲುದಾರಿಕೆ ಇಲ್ಲ; ಅದಕ್ಕೆ ರಾಜಕೀಯ ಸಾಮಾಜಿಕ ನ್ಯಾಯಬೇಕಿದೆ; ಇದಕ್ಕೆ ಬೇಕಾದ ಪ್ರಜ್ಞೆ ಮತ್ತು ಪರಂಪರೆಯನ್ನು ಕಟ್ಟಿಕೊಳ್ಳಲು ತಳಸಮುದಾಯಗಳ ರೂಪುಗೊಂಡ ದೃಶ್ಯಕಲೆಗಳ ಕುರಿತು ಸಮಗ್ರ ಅಧ್ಯಯನವಾಗಬೇಕಾಗಿದೆ.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ತಳಸಮುದಾಯಗಳು ನೆಲೆಸಿದ್ದ ವಿವಿಧ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿ ದೃಶ್ಯಕಲೆಗಳು ಮೂಡಿ ಬಂದ ಪರಿಸರದ ಹಿನ್ನೆಲೆಯಲ್ಲಿ ವಿವೇಚಿಸುತ್ತಾ ಕಾಲದಿಂದ ಕಾಲಕ್ಕೆ ಆ ನೆಲೆಗಳಲ್ಲಿ ಯಾವ ರೀತಿ ಬದಲಾವಣೆಗಳಾದವು ಮತ್ತು ಆ ಇಡೀ ಸಂಸ್ಕೃತಿ ಯಾವ ರೀತಿ ಬೆಳವಣಿಗೆಯಾಗಿ ವಿವಿದೆಡೆ ಪಸರಿಸಿತು ಎಂಬುದನ್ನು ಮೊದಲ ಬಾರಿಗೆ ಈ ಪ್ರಬಂಧದಲ್ಲಿ ವಿವೇಚಿಸಲಾಗಿದೆ.

ಪ್ರಸ್ತುತ ಈ ಸಂಶೋಧನಾ ಅಧ್ಯಯನವು ಅಧ್ಯಯನದ ಅನುಕೂಲತೆಗಾಗಿ ಆರು ಅಧ್ಯಾಯಗಳಲ್ಲಿ ಕವಲೊಡೆದಿದೆ. ಈ ಎಲ್ಲಾ ಅಧ್ಯಾಯಗಳ ಫಲಿತಗಳ ಸಮೀಕ್ಷೆಯನ್ನು ಈ ಅಧ್ಯಯನ ಹೊಂದಿದೆ.

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಅದರ ಸ್ವರೂಪ, ವ್ಯಾಪ್ತಿ ಮತ್ತು ಇದುವರೆಗೆ ಈ ಕ್ಷೇತ್ರದಲ್ಲಾದ ಸಂಶೋಧನ ಅಧ್ಯಯನದ ಸಿಂಹಾವಲೋಕನ ಮತ್ತು ಪ್ರಸ್ತು ಅಧ್ಯಯನದ

ಉದ್ದೇಶ, ಸ್ವರೂಪ, ವ್ಯಾಪ್ತಿ, ಮತ್ತು ವೈಧಾನಿಕತೆಯನ್ನು ಈ ಅಧ್ಯಾಯದಲ್ಲಿ ವಿವರವಾಗಿ ಹೇಳಲಾಗಿದೆ.

ಅಧ್ಯಾಯ: ಎರಡು

ಕಲೆ ಮತ್ತು ತಳಸಮುದಾಯಗಳು: ಒಂದು ಐತಿಹಾಸಿಕ ನೋಟ

ಎರಡನೆಯ ಅಧ್ಯಾಯದಲ್ಲಿ ವಿವಿಧ ತಳಸಮುದಾಯಗಳಲ್ಲಿ ಕಲೆಯು ಅಭಿವ್ಯಕ್ತಗೊಂಡ ಐತಿಹಾಸಿಕ ಹಿನ್ನೋಟವನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ: ಮೂರು

ತಳಸಮುದಾಯಗಳು: ಜನಪದೀಯ ಶಿಲ್ಪಗಳು

ಮೂರನೆಯ ಅಧ್ಯಾಯದಲ್ಲಿ ಜನಪದ ಶಿಲ್ಪಕಲೆ ಆಯಾ ಪ್ರದೇಶಗಳಿಗನುಗುಣವಾಗಿ ತಳಸಮುದಯಗಳ ಆಚರಣೆಗಳಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತವೆ. ಎಂಬುದನ್ನು ವಿವರಗಳೊಂದಿಗೆ ವಿವಿಧ ಮಾಧ್ಯಮದ ಜನಪದ ಶಿಲ್ಪಗಳ ಮಹತ್ವದ ಅಂಶಗಳನ್ನು ವಿಶ್ಲೇಷಿಸಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ: ನಾಲ್ಕು

ಹೈದ್ರಾಬಾದ ಕರ್ನಾಟಕದ ತಳಸಮುದಾಯಗ ಶಿಲ್ಪಕಲಾವಿದರು

ಈ ಅಧ್ಯಾಯದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಒಳಪಡುವ ಜನಪದ, ಸಂಪ್ರದಾಯ ಮತ್ತು ಸಮಕಾಲೀನ ಶಿಲ್ಪಕಲಾವಿದರ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ.

ಅಧ್ಯಾಯ: ಐದು

ಹೈದ್ರಾಬಾದ-ಕರ್ನಾಟಕ ತಳಸಮುದಾಯದ ಶಿಲ್ಪಕಲೆ: ಸಮಕಾಲೀನತೆ

ತಳ ಸಮುದಾಯಗಳಲ್ಲಿರುವ ಪರಿಚಿತ ಶೈಲಿಗಳನ್ನು ಅಳವಡಿಸಿಕೊಂಡು ಅವುಗಳಿಗೆ ಹೋಲುವಂತಹ ಜನಪದ ಶಿಲ್ಪಕಲೆಯ ಸೃಜನಾತ್ಮಕ ಅಂಶಗಳನ್ನು ಅಳವಡಿಸಿಕೊಂಡು ರಚಿಸಿರುವ ಸಮಕಾಲೀನ ಶಿಲ್ಪ ಕಲಾವಿದರ ಶಿಲ್ಪಕಲೆಯ ವಿವಿಧ ಮಾಧ್ಯಮಗಳ ಪ್ರೇರಣೆ, ಶೈಲಿಗಳ ಪ್ರಭಾವ ಮುಂತಾದವುಗಳನ್ನು ಇಲ್ಲಿ ಅರ್ಥಪೂರ್ಣವಾಗಿ ವಸ್ತುನಿಷ್ಠ ವಿಚಾರ ವಿಮರ್ಶೆಯ ಮೂಲಕ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ: ಆರು

ಸಮಾರೋಪ

ಪ್ರಸ್ತುತ ಅಧ್ಯಾಯದಲ್ಲಿ ನಿರ್ದಿಷ್ಟ ಉದ್ದೇಶದ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾದಂತಹ, ಪ್ರಮುಖ ಉದ್ದೇಶಗಳು ವಿವಿಧ ಅಧ್ಯಾಯಗಳ ಮೂಲಕ ಇಲ್ಲಿ ಸಾಕಾರಗೊಂಡಿದ್ದು, ಐದು ಅಧ್ಯಾಯಗಳ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಯನದ ಫಲಿತಗಳು:

1) ಜಾಗತೀಕರಣ, ಖಾಸಗೀಕರಣ, ಆಧುನಿಕತೆ ಇವೆಲ್ಲಾ ಇದ್ದರೂ ತಳಸಮುದಾಯಗಳ ದೃಶ್ಯ ಸಂಸ್ಕೃತಿ ಯಾವುದೋ ಒಂದು ರೂಪದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ.
2) ಮನುಷ್ಯ ಬದುಕಿನ ಭಾವಾನುಭಾವಗಳು, ಮಾನವೀಯ ಸಂವೇದನೆಗಳನ್ನು ಅತ್ಯಂತ ತೀವ್ರವಾಗಿ ಪರಿಚಯಿಸುವ ತಳಸಮುದಾಯಗಳ ಕಲೆಗಳು ಒಂದು ದೇಶದ ಒಂದು ಜನಾಂಗದ ಅಪ್ಪಟ ಸಂಸ್ಕೃತಿಯಲ್ಲಿ ಪ್ರತಿನಿಧಿಸುತ್ತವೆ.

3) ಯಾವುದೇ ಒಂದು ಸಮುದಾಯದ ಆಚಾರ–ವಿಚಾರಗಳು ರೂಢಿ ನಡಾವಳಿಗಳು, ಸಂಪ್ರದಾಯ ಪರಂಪರೆಗಳನ್ನು ಆಯಾ, ಆಯಾ ಜನಾಂಗದಲ್ಲಿ ರೂಪುಗೊಂಡ ಕಲೆಗಳು ಪ್ರತ್ಯಕ್ಷೀಕರಿಸುವುದರಿಂದ ಜನಜೀವನಕ್ಕೂ ಕಲೆಗಳಿಗೂ ಅವಿನಾಭಾವ ಸಂಬಂಧವಿದೆ.

4) ಗ್ರಾಮದೇವತೆಗಳ ಹೆಸರಿಗೆ ತಕ್ಕಂತಹ ರೂಪವನ್ನು ಆಕಾರವನ್ನು ಆಯುಧಗಳನ್ನು ಶಿಲ್ಪಿಯೇ ನಿರ್ಮಿಸಿರುತ್ತಾನೆ. ರೂಪದ ವಿಶೇಷಗಳೇ ದೇವತೆಯ ಪ್ರತಾಪವನ್ನು ವ್ಯಕ್ತಪಡಿಸುವ ಹಾಗೆ ವಿವರಿಸುವ ಕೆತ್ತನೆಯಾಗಿರುತ್ತದೆ. ಗ್ರಾಮದೇವತೆಯ ಕಲ್ಪನೆಯಲ್ಲಿ ಪುರಾಣ ಮತ್ತು ಆಚರಣೆಗಳಲ್ಲಿ ನಮ್ಮ ತಳ ಸಮುದಾಯದ ಶಿಲ್ಪಕಲಾವಿದರು ತಮ್ಮ ಮನಸ್ಸಿನ ದುಃಖ ದುಮ್ಮಾನಗಳನ್ನು, ಉಲ್ಲಾಸ ಸಂಭ್ರಮಗಳನ್ನು ಶಿಲ್ಪಕಲಾಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

5) ತಳಸಮುದಾಯಗಳಲ್ಲಿ ತಲೆತಲಾಂತರಗಳಿಂದ ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮನಿಗೆ, ಪೂರ್ವಿಕರಿಂದ ಮುಂದಿನವರೆಗೆ ಬೆಳೆದು ಬಂದ ಶಿಲ್ಪಕಲೆಯ ಜನಪದ ಶೈಲಿಯು ಕಾಲಕ್ಕನುಗುಣವಾಗಿ ಕರಕುಶಲ ಮರುಪ್ರತಿ ವೃತ್ತಿಗೆ ಒದಗಿಸಿಕೊಂಡ ಬದುಕಿನ ಸ್ಥಿತ್ಯಂತರಗಳ ಜೊತೆಗಿನ ಸಾಮಾಜಿಕ ನಡೆಯಡೆಗೆ ಸವೆಸಿಕೊಂಡ ದೀರ್ಘ ಪಯಣದ ಹಂತ ಹಂತಗಳ ಬದಲಾವಣೆಗಳನ್ನು ಪ್ರಸ್ತುತ ಅಧ್ಯಯನ ಗುರುತಿಸಿದೆ.

6) ಬುಟ್ಟಿ ಹೆಣೆಯವರು, ಚಮ್ಮಾರರು, ಕಂಬಾರರು, ಕುಂಬಾರರು, ಮೂರ್ತಿಕಾರರು ತಮ್ಮ ಮೂಲವೃತ್ತಿಯನ್ನು ಬಿಟ್ಟು ಬಂಡವಾಳಶಾಹಿಗಳ ಕೈಕೆಳಗೆ ದುಡಿಯುವುದಕ್ಕೆ ಪ್ರಾರಂಭಿಸಿದ್ದಾರೆ. ಇದರಿಂದಾಗಿ ಅವರ ಮೂಲಕವೇ, ಕರಕುಶಲ ವಸ್ತುಗಳು, ಹಾಡುಗಳು, ಕುಣಿತ ಇವುಗಳೆಲ್ಲ ಮರೆಯಾಗುತ್ತಿವೆ. ಆದರೆ ಈ ಕಲಾ ಪ್ರಕಾರಗಳು ರೂಪಾಂತರ ಆಗುತ್ತಿವೆಯೇ ಹೊರತು ಪೂರ್ಣ ನಶಿಶಿ ಹೋಗುತ್ತಿಲ್ಲ.

ತಳಸಮುದಾಯಗಳ ಎಲ್ಲಾ ಪ್ರಕಾರದ ಕಲೆಗಳು ಬದಲಾಗುವುದರೊಂದಿಗೆ ಬೆಳೆಯುತ್ತಿದೆ.

7) ಹೈದ್ರಾಬಾದ-ಕರ್ನಾಟಕದ ಸಾಂಸ್ಕೃತಿಕ ಅಧ್ಯಯನಕ್ಕೆ ತಳ ಸಮುದಾಯಗಳ ಕಲೆ ಮತ್ತು ಆಚರಣೆಗಳು ಮೂಲ ಆಕರಗಳು ಇವುಗಳ ಶೋಧನೆಯಿಂದ ಶ್ರಮಿಕ ವರ್ಗದ ಜನರ ಚರಿತ್ರೆಯ ನಿರ್ಮಾಣ ಸಾಧ್ಯವಾಗುತ್ತದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಹೈದ್ರಾಬಾದ-ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಜನಪದ ಚಿತ್ರ-ಶಿಲ್ಪ ಪ್ರಕಾರಗಳು ಹೆಚ್ಚು ವೈವಿಧ್ಯಮಯವಷ್ಟೇ ಅಲ್ಲ; ಸಂಖ್ಯೆಯಲ್ಲಿಯೂ ಹೆಚ್ಚಿವೆ. ಇದಕ್ಕೆ ಕಾರಣ ಈ ಭಾಗದ ಸಾಂಸ್ಕೃತಿಕ ಪರಂಪರೆ ಮತ್ತು ಭೌಗೋಳಿಕ ಹಿನ್ನೆಲೆ ಎನ್ನಬಹುದು.

8) ತಳ ಸಮುದಾಯಗಳಲ್ಲಿ ಚಿತ್ರ-ಶಿಲ್ಪಗಳು, ಕರಕುಶಲ ಕಲೆಗಳು ವೃತ್ತಿಯಾಗಿ ನಂತರ ಅದೊಂದು ಪರಂಪರೆಯಾಗಿ ಬೆಳೆದಿದ್ದು, ಒಂದು ಬಗೆಯಾದರೆ; ಇರುವ ವ್ಯವಸ್ಥೆಗೆ ಪ್ರತಿಭಟನೆಯಾಗಿ ಹೊಸ ಕಲೆಗಳು ಹುಟ್ಟಿಕೊಂಡಿದ್ದು ಮತ್ತೊಂದು ಬಗೆ. ಹೀಗೆ ಹಲವು ಕುತೂಹಲಗಳನ್ನು ಕೆರಳಿಸುವ ಹೈದ್ರಬಾದ-ಕರ್ನಾಟಕ ಪ್ರದೇಶದ ಅನೇಕ ತಳಸಮುದಾಯಗಳಲ್ಲಿ ಮೂಡಿದ ಕಲೆಗಳು ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಪ್ರಧಾನ ಆಕಾರಗಳಾಗುತ್ತವೆ. ಇಂಥ ಕಲೆಗಳ ಶೋಧನೆಯಿಂದ ಬಹುತೇಕ ತಳಸಮುದಾಯಗಳ ದುಡಿಯುವ ಜನರು ದೃಶ್ಯಪರಂಪರೆಯನ್ನು ನಿಜ ಸ್ವರೂಪದಲ್ಲಿ ಅರ್ಥೈಸಿಕೊಳ್ಳಲು ಸಾಧ್ಯ. ಅಲ್ಲದೇ, ಈ ಮೂಲಕ ಹೈದ್ರಾಬಾದ-ಕರ್ನಾಟಕ ಪ್ರದೇಶದ ದೃಶ್ಯಕಲಾ ಇತಿಹಾಸವನ್ನು ಕೂಡ ಸತ್ಯದ ಒರೆಗಲ್ಲಿಗೆ ಹಚ್ಚಿ ಪುನರ್ ರೂಪಿಸಬಹುದಾಗಿದೆ.

9) ತಳಸಮುದಾಯಗಳ ಶ್ರಮಿಕ ಜನರಿಂದ ನಿರ್ಮಾಣಗೊಳ್ಳುವ ಕರಕುಶಲ ಕಲೆಗಳು ಜನತೆಯ ನೈಜ ಸಂಸ್ಕೃತಿಯ ತರಂಗಗಳು ಅಷ್ಟೇ ಅಲ್ಲ ನಿರ್ದಿಷ್ಟ ಜೀವನ ರೀತಿಯ

ಸೂಕ್ಷ್ಮಚಿತ್ರಣವನ್ನು ಕೊಡುತ್ತವೆ. ಎಂಬ ಶ್ರೀ ರಂಗಾರೆಡ್ಡಿ ಕೋಡಿರಾಮಪುರ ಅವರ ಮಾತುಗಳು ತುಂಬಾ ಅರ್ಥಪೂರ್ಣವಾದವುಗಳಾಗಿವೆ. ಮತ್ತು ಕರಕುಶಲ ಕಲೆಗಳ ಅಧ್ಯಯನದ ಮಹತ್ವವನ್ನು ತಿಳಿಸುತ್ತದೆ. ನಮ್ಮ ಭಾವನೆಗಳ ವಿಕಾಸಕ್ಕೆ ಕೇಂದ್ರ ನೆಲೆಯಾಗಿ ನಿಲ್ಲಬಲ್ಲ. ಮತ್ತು ಮೂಲ ಪ್ರೇರಣೆಗಳನ್ನು, ಅನುಭವಗಳನ್ನು ಮೂಡಿಸುವ ಕಲಾವಸ್ತುಗಳು ಕರಕುಶಲ ಕಲೆಗಳಲ್ಲಿಯೂ ನಿರ್ಮಾಣವಾಗುತ್ತಿವೆ. ಕಲಾಭಿಜ್ಞೆ, ಅಭಿವ್ಯಕ್ತಿಯ ಶಿಸ್ತು, ರಸಾನುಭವದ ಸತ್ವ, ಇವೆಲ್ಲ ಕರಕುಶಲ ಕಲೆಯಲ್ಲಿ ಎಷ್ಟು ನಯಜಾತ್ಮಕವಾಗಿ (ಒರಿಜಿನಾಲಿಟಿ) ಮೂಲದ ದೃಷ್ಟಿಯಿಂದ ಬಂದಿವೆ. ಎಂಬುದು ಚರ್ಚೆಗೆ ಒಳಪಡಬೇಕಾದ ವಿಷಯ. ಹಾಗೇಯೇ ಕರಕುಶಲ ಕಲೆಗಳನ್ನು ಕಲೆಯ ದೃಷ್ಟಿಯಿಂದ ನೋಡುವ ದೃಷ್ಟಿಕೋನ ನಮ್ಮಲ್ಲಿ ಬೆಳವಣಿಗೆಯಾಗಬೇಕಾಗಿದೆ.

ಈ ಸಂಶೋಧನೆಯು ಹೈದ್ರಾಬಾದ–ಕರ್ನಾಟಕ ಪ್ರದೇಶದ ತಳಸಮುದಾಯ ಶಿಲ್ಪಕಲೆ ಹುಟ್ಟು, ಬೆಳವಣಿಗೆ, ಇತಿಹಾಸ, ಸಮಕಾಲೀನತೆ ಕುರಿತಾದ ತನ್ನ ಮಾದರಿಯಲ್ಲಿ ಮೊದಲನೆಯದಾಗಿರಬಹುದು. ಆದರೆ ಅದು ಕೊನೆಯದಾಗಬಾರದು! ಇದು ಚೊಚ್ಚಿಲು ಪ್ರಯತ್ನವಾಗಿರುವುದರಿಂದ ಸಮಗ್ರವೂ ಎಂದು ಹೇಳಲು ಸಾಧ್ಯವಿಲ್ಲ. ಅಜ್ಞಾನದಿಂದಲೋ, ಸಮಯದ ಅಭಾವದಿಂದಲೋ, ಆಕಸ್ಮಿಕ ಪ್ರಮಾದದಿಂದಾಗಿಯೇ ಕೆಲವಾರು ವಿಷಯಗಳು ಇಲ್ಲಿ ಒಳಗೊಳ್ಳದಿರುವ ಸಾಧ್ಯತೆ ಇದ್ದಿತು. ಅಂತಹ ಅಲ್ಲೇಖಾರ್ಹ ಸಂಗತಿಗಳೇನಾದರೂ ಸಹೃದಯರು ಓದುಗರು ತಿಳಿಸಿಕೊಟ್ಟರೆ ಪರಿಷ್ಕೃತ ಆವೃತ್ತಿಯಲ್ಲಿ ಅದನ್ನು ಅಳವಡಿಸಿಕೊಳ್ಳಬಹುದು.

ಅನುಬಂಧ-೧

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ವಾರ್ಷಿಕ ಕಲಾ ಪ್ರದರ್ಶನದ ಬಹುಮಾನ ಪಡೆದ ಹೈದ್ರಾಬಾದ ಕರ್ನಾಟಕದ ಶಿಲ್ಪಕಲಾವಿದರ ವಿವರ

ವ್ಯಕ್ತಿಯ ಪ್ರತಿಭೆ ಸೇವೆ, ಕಾರ್ಯ, ಕೃತಿ, ಯಾವುದೇ ರಂಗದಲ್ಲಿಯ ಸಾಧನೆಗಳನ್ನು ಗುರುತಿಸಿ ಅವರಿಗೆ ಸರಕಾರ ಅಥವಾ, ಅಕಾಡೆಮಿಗಳು, ಸಂಘ ಸಂಸ್ಥೆಗಳು ಪ್ರೋತ್ಸಾಹದಾಯಕ ಅಥವಾ ಮೆಚ್ಚುಗೆ ಸೂಚಿಸಲು ಕೊಡುವ ಪುರಸ್ಕಾರಕ್ಕೆ ಪ್ರಶಸ್ತಿಯೆಂದು ಸಾಮಾನ್ಯವಾಗಿ ಕರೆಯುವರು, ಇಂದು ಕೃಷಿ, ಕ್ರೀಡೆ, ಶೌರ್ಯ, ಸಾಹಸ ಪ್ರತಿಯೊಂದು ಸಮಾಜದ ಕಾರ್ಯ ಚಟುವಟಿಕೆಗಳಿಗೆ ಪ್ರೋತ್ಸಹ ನೀಡಲು, ಆ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿಗಳನ್ನು ಸರಕಾರವೆ ನೀಡುತ್ತದೆ. ಅದರಂತೆಯೇ ಆಯಾ ಪ್ರದೇಶದ ಸಾಮಾಜಿಕ ಸಂಘ, ಸಂಸ್ಥೆಗಳು, ಅಕಾಡೆಮಿಗಳು ಪ್ರಶಸ್ತಿಯನ್ನು ನೀಡಿ ಗೌರವಿಸುವ ಸಂಸ್ಕೃತಿಯು ಬೆಳೆದು ಬಂದಿದ್ದನ್ನು ಕಾಣುತ್ತೇವೆ.

ಹಾಗೆಯೇ ಕಲೆ, ಸಾಹಿತ್ಯ, ನೃತ್ಯ, ಸಂಗೀತ ಮುಂತಾದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಪರಿಣಿತರಿಗೂ ಪ್ರಶಸ್ತಿ ನೀಡಿ ಸನ್ಮಾನಿಸುವುದು ಆ ನಾಡಿನ ಸಾಂಸ್ಕೃತಿಕ ಬದುಕಿಗೆ ನೀಡಿದ ಗೌರವವೆನಿಸುತ್ತದೆ. ಏಕೆಂದರೆ ಸಾಹಿತಿ ಅಥವಾ ಕಲಾವಿದೆ ಸಮಾಜದ ಒಂದು ಅಂಗವೇ

ಆಗಿರುತ್ತಾನೆ. ತನ್ನಲ್ಲಿದ್ದ ಪ್ರತಿಭೆಯನ್ನು ಗುರುತಿಸಿ ಆತನ ಕಲಾಕೌಶಲ್ಯ, ಆತನಿಗೆ ವ್ಯಕ್ತಿಗತವಾಗಿ ಬಂದಿದ್ದರೂ ಆತನ ಕಲೆಗೆ ಅಥವಾ ಕೃತಿಗೆ ಸಿಗುವ ಪ್ರಶಸ್ತಿ, ಮನ್ನಣೆ ಆತನಿಗಷ್ಟೇ ಅಲ್ಲದೆ ಆ ನಾಡಿಗೆ ಸಂದುವ ಗೌರವವಾಗಿರುತ್ತದೆ.

ಆದ್ದರಿಂದ ಸಾಹಿತಿ ಅಥವಾ ಕಲಾವಿದರಿಗೆ ಕೊಡುವ ಕಾಣಿಕೆ ಉಳಿದವರಿಗಿಂತಲೂ ತೀರ ಭಿನ್ನವಾಗಿರುತ್ತದೆ. ಒಂದು ದೇಶದ ಸಾಂಸ್ಕೃತಿಕ ಕೊಡುಗೆಯಲ್ಲಿ, ಸಾಹಿತಿ, ಕಲಾವಿದರ ಕೊಡುಗೆ ಗಮನಾರ್ಹವಾದದು. ಇಂತಹ ಪ್ರತಿಭಾನ್ವಿತ ಕಲಾವಿದರಿಗೆ ಸಾಹಿತಿಗಳಿಗೆ ಸರಕಾರ ಅಥವಾ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸುವುದು ತಮ್ಮನ್ನೇ ತಾವು ಗೌರವಿಸಿಕೊಂಡಂತೆ ಆಗುತ್ತದೆ.

ಹಿಂದಿನ ಕಾಲದಲ್ಲಿ ರಾಜಮಹಾರಾಜರು ತಮ್ಮ ಆಸ್ಥಾನದಲ್ಲಿ ಪಂಡಿತ ಕಲಾವಿದರಿಗೆ ಆಶ್ರಯ ನೀಡಿ ಅವರಿಂದ ವಿವಿಧ ರೀತಿಯ ಸಾಹಿತ್ಯ, ಕಲೆ ರಚನೆಗೆ ಅನುವು ಮಾಡಿಕೊಟ್ಟು ಅವರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರಶಸ್ತಿಗಳನ್ನು ದಾನ ನೀಡುವುದು ಬೆಳೆದು ಬಂದ ರೀತಿ ನಾವು ಕಾಣಬಹುದು. ಇಂದಿನ ಕಾಲದಲ್ಲಿ ಸರ್ಕಾರ, ಅಕಾಡೆಮಿಗಳು, ಸಂಘ, ಸಂಸ್ಥೆಗಳನ್ನು ಆ ಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಲಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಪ್ರತಿವರ್ಷ ವಾರ್ಷಿಕ ಶಿಲ್ಪಕಲಾ ಸ್ಪರ್ಧೆ ಏರ್ಪಡಿಸಿ, ಅತ್ಯುತ್ತಮವಾದ ಶಿಲ್ಪಕಲಾಕೃತಿಗಳಿಗೆ ವಾರ್ಷಿಕ ಬಹುಮಾನ ನೀಡುತ್ತದೆ. ಮತ್ತು ಹಿರಿಯ ಶಿಲ್ಪಕಲಾವಿದರ ಜೀವಮಾನದ ಸಾಧನೆಯನ್ನು ಪರಿಗಣಿಸಿ ಗೌರವ ಪ್ರಶಸ್ತಿ ನೀಡುತ್ತವೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಬಹುಮಾನ ಮತ್ತು ಗೌರವ ಪ್ರಶಸ್ತಿ ಪಡೆದ ಹೈದ್ರಾಬಾದ ಕರ್ನಾಟಕದ ಶಿಲ್ಪಕಲಾವಿದರ ವಿವರವನ್ನು ಇಲ್ಲಿ ದಾಖಲಿಸಲಾಗಿದೆ.

ಕ್ರಸಂ	**ಹೆಸರು ವಿಳಾಸ**	**ಕ್ಷೇತ್ರ**	**ಬಹುಮಾನ ಪಡೆದ ವರ್ಷ**
೧	ಪ್ರಧಾನಿ ನಾಗಪ್ಪ (ರಾಯಚೂರ)	ಶಿಲೆ, ಸಮಕಾಲೀನ, ಶಿರ	೨೦೦೨

೨	ಮಲ್ಲಿಕಾರ್ಜುನ ಬಸಣ್ಣ ಚಿಕ್ಕನಹಳ್ಳಿ	ಚಕೂರ ಪಕ್ಷಿ ಸಂಪ್ರದಾಯ ಮರ ಮಾಧ್ಯಮ	೨೦೦೫
೩	ಶ್ರೀಶೈಲ್ ಬಸಣ್ಣ ಬಡಿಗೇರ್ (ಯಾದಗಿರ)	ನಂದಿ, ಲೋಹಶಿಲ್ಪ	೨೦೦೫
೪	ಅಣ್ಣಪ್ಪ ಏಗಪ್ಪ ಚಿತ್ರಗಾರ (ಕೊಪ್ಪಳ)	ಮಿಶ್ರಮಾಧ್ಯಮ ಗ್ರಾಮದೇವತೆ	೨೦೦೬
೫	ರುಕ್ಕಪ್ಪ ಕುಂಬಾರ (ಚಿಂಚೋಳಿ)	ಮರ ಮಾಧ್ಯಮ, ಕೃಷ್ಣ	೨೦೦೭
೬	ಸುರೇಂದ್ರ ಕಾಳಪ್ಪ ವಿಶ್ವಕರ್ಮ (ಯಾದಗಿರ)	ಕಲ್ಲು, (ಸಂಪ್ರದಾಯ) ಮಹಿಷಮರ್ದಿನಿ	೨೦೦೭
೭	ಆನಂದ ಬಾಬು ಅಂಬರಖಾನೆ (ಗುಲಬರ್ಗಾ)	ಮಿಶ್ರ ಮಾಧ್ಯಮ ಅನ್‌ಟೈಟಲ್	೨೦೦೭
೮	ಶಕುಂತಲಾ ಎಂ. ಬಡಿಗೇರ್ (ಗುಲಬರ್ಗಾ)	ಹಿತ್ತಾಳೆ, ಕಲಬರುಗಿ ಶರಣಬಸವೇಶ್ವರರು	೨೦೦೯
೯	ವಿಶ್ವರಾಧ್ಯ ಶ್ರೀಶೈಲಯ್ಯ ಹಿರೇಮಠ (ಕೊಪ್ಪಳ)	ಬೆಳೆಯುವ ಸಿರಿ ಮೊಳಕೆಯಲ್ಲಿ (ಮಿಶ್ರ ಮಾಧ್ಯಮ)	೨೦೦೯
೧೦	ಶ್ರೀಶೈಲ್ ಬಡಿಗೇರ್ (ಕಲಬುರಗಿ)	ಗಣೇಶ, ಪಂಚಲೋಹ,	೨೦೧೦
೧೧	ಮಹಾದೇವಪ್ಪ ಎಸ್. ಶಿಲ್ಪಿ (ಕಲಬುರಗಿ)	ಶಿಲೆ, ಏಕಶಿಲಾ ಸೂರ್ಯರಥ	೨೦೧೦
೧೨	ಯಮನಪ್ಪ (ರಾಯಚೂರ)	ಮರ, ಗ್ರಾಮ ದೇವತೆ	೨೦೧೪
೧೩	ನಿಂಗಣ್ಣ ಡಿ.ಕೇರಿ (ಕಲಬುರಗಿ)	ಶಿಲೆ	೨೦೧೫
೧೪	ಗಾಯತ್ರಿ ಶಿಲ್ಪಿ (ಕಲಬುರಗಿ)	ಶಿಲೆ	೨೦೧೫
೧೫	ವಿನೋದ ಪೊದ್ದಾರ (ಕಲಬುರಗಿ)	ಕಾಷ್ಠ ಶಿಲ್ಪ	೨೦೧೫
೧೬	ಜಕಣಾಚಾರಿ (ಕಲಬುರಗಿ)	ಶಿಲೆ	೨೦೧೬

ಅನುಬಂಧ-೨

ಗ್ರಂಥಋಣ:

೧) ಕನ್ನಡ ಶಿಲ್ಪಕಲೆ ಸಮಾಕಾಲೀನ ದೃಶ್ಯ, ಲೇ; ಕೆ.ವಿ ಸುಬ್ರಹ್ಮಣ್ಯಂ ಪ್ರ: ಕರ್ನಾಟಕದ ಶಿಲ್ಪಕಲಾ ಅಕಾಡೆಮಿ ಬೆಂಗಳೂರು-೨೦೦೭

೨) ಹೈದ್ರಾಬಾದ ಕರ್ನಾಟಕ ಜಾನಪದ ಸಾಧಕರು, ಪ್ರ.ಸಂ. ಡಾ.ಬಸವರಾಜ ಸಬರದ, ಸಂ:ಡಾ.ಬಸವರಾಜ ಪೋಲಿಸ್‌ಪಾಟೀಲ, ಕನ್ನಡ ಅಧ್ಯಯನದ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

೩) ಶಿಲ್ಪಕಲಾ ಪ್ರಪಂಚ: ಪ್ರಧಾನ ಸಂಪಾದಕರು, ಪಿ.ಆರ್.ತಿಪ್ಪೇಸ್ವಾಮಿ, ಸಂ.ಅ.ಲ.ನರಸಿಂಹನ, ಎನ್ ಮರಿಶಾಮಾಚಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೪) ಮಾಟದೊಳಗಣ ನೋಟ - ಡಾ.ಶಿವಾನಂದ.ಎಚ್. ಬಂಟನೂರ, ಪ್ರಕಾಶನ: ಯಾಜಿ ಹೊಸಪೇಟೆ, ೨೦೧೨,

೫) ದೃಶ್ಯಬೆಳಕು ಕನ್ನಡ ಮತ್ತು ಇಂಗ್ಲೀಷ ತ್ರೈಮಾಸಿಕ, ಸಂ: ಡಾ. ಪರಶುರಾಮ.ಪಿ. ಕಲಬುರಗಿ ಸಂಪುಟ-೦೧, ಸಂಚಿಕೆ-೦೧.

೬) ಕಲಾಕಂಪು, ಲೇ: ಡಾ.ಮಲ್ಲಿಕಾರ್ಜುನ.ಸಿ.ಭಾಗೋಡಿ, ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸೇಡಮ್.

೭) ಸಂಕೀರ್ಣ ವೃತ್ತಿಪದಕೋಶ, ಲೇ: ಡಾ.ಎಸ್.ಎಸ್.ಅಂಗಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೮) ದೇಸಿ–೩ ಲೇ: ಡಾ. ವೀರಣ್ಣ ದಂಡೆ, ಪ್ರ: ಸಾಗರ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯರಸ್ತ, ೮೦ ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಭಾವಿ ೨ನೇ ಹಂತ, ಬೆಂಗಳೂರು–೫೬೦೦೭೨

೯) ಕರ್ನಾಟಕದ ಶಿಲ್ಪ ಕಲಾವಿದರು, ಸಂ. ಡಾ.ಚೂಡಾಮಣಿ ನಂದಗೋಪಾಲ, ಪ್ರ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು–೨೦೦೭.

೧೦) ಬಳ್ಳಾರಿ ಜಿಲ್ಲೆಯ ಚಿತ್ರಕಲೆ –ಡಾ.ಎಚ್.ಈ ಬಸವರಾಜಪ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೧೬.

೧೧) ಕೊಪ್ಪಳ ಜಿಲ್ಲಾ ದರ್ಶನ – ಸಂ. ಪ್ರೊ.ಅಲ್ಲಮಪ್ರಭು ಬೆಟ್ಟದೂರು, ಶ್ರೀ ಎಚ್.ಎಸ್. ಪಾಟೀಲ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೨೦೦೫.

೧೨) ಹೈದ್ರಾಬಾದ ಕರ್ನಾಟಕ ಲಲಿತಕಲಾ ವಿಷಯಕೋಶ, ಸಂ: ಡಾ.ಪಿ.ಕೆ.ಖಂಡೋಬಾ, ಡಾ.ಎಸ್.ಸಿ.ಪಾಟೀಲ್, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ೨೦೧೧.

೧೩) ಸಾಂಸ್ಕೃತಿಕ ಅಧ್ಯಯನ ಲೇ: ಡಾ. ರಹಮತ್ ತರೀಕೆರೆ, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮.

೧೪) ಹೈದ್ರಾಬಾದ ಕರ್ನಾಟಕ ಮಾಧ್ಯಮ, ಲೇ: ಶ್ರೀನಿವಾಸ ಸಿರನೂರಕರ್, ಪ್ರ: ಪಾವನ ಪ್ರಕಾಶನ, ಕಲಬುರಗಿ.

೧೫) ಸುವರ್ಣ ಜಾನಪದ (ಸಂಪುಟ–೧) ಸಂ; ಡಾ.ಹಿ.ಶಿ.ರಾಮಚಂದ್ರೇಗೌಡ, ಡಾ. ಕೃಷ್ಣಮೂರ್ತಿ ಹನೂರು, ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೬) ದೃಶ್ಯಧ್ಯಾನ, ಲೇ: ಡಾ.ಪರಶುರಾಮ್.ಪಿ. ಪ್ರ: ಚಿತ್ರಾಲಯ ಪ್ರಕಾಶನ, ಕಲಬುರಗಿ.

೧೭) ವಿಜಯನಗರದ ಗಾರೆ ಶಿಲ್ಪ ಲೇ: ಡಾ.ಸಿ.ಮಹಾದೇವ, ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ

೧೮) ಮಾಟದೊಳಗಣ ನೋಟ, ಲೇ: ಶಿವಾನಂದ ಎಚ್. ಬಂಟನೂರ, ಪ್ರ: ಯಾಜಿ ಪ್ರಕಾಶನ, ಎಂ.ಪಿ.ಪ್ರಕಾಶ ನಗರ ಹೊಸಪೇಟೆ.

೧೯) ವ್ಹಿ.ಟಿ.ಕಾಳೆ, ಲೇ: ಡಾ.ಎಸ್.ಸಿ.ಪಾಟೀಲ್ ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ ಬೆಂಗಳೂರು. ೫೬೦೦೦೨

೨೦) ವಿಜಯನಗರ ಶಿಲ್ಪಕಲೆ, ಸಂಪಾದಕರು, ಡಾ.ಎಚ್.ಎಸ್.ಗೋಪಾಲ್ ರಾವ್, ಲೇಖಕರು-ಡಾ.ಅ.ಲ.ನರಸಿಂಹನ್ ಪ್ರ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೨೧) ನಮ್ಮ ಕರಕುಶಲ ವಸ್ತುಗಳು, ಲೇ: ಎಂ.ವಿ.ನಾರಾಯಣರಾವ್, ಪ್ರ: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

22) 2008 An Exhibition of Recent contemporary Sculptures, Catlouge Pub: Contemporary Sculptor's Forum.

೨೩) ನೆನಪಿನ ನೆರಳಲ್ಲಿ ಲೇ: ಡಾ.ವಿ.ಜಿ.ಅಂದಾನಿ ಪ್ರ: ನೀಲಾಂಗುರ್ ಪ್ರಕಾಶನ, ಕಲಬುರಗಿ ೨೦೧೫.

೨೪) ಕರ್ನಾಟಕ ಶಿಲ್ಪ ಸಂಚಲನ, ಸಂ:ಡಾ. ಶಿವಾನಂದ ಎಚ್. ಬಂಟನೂರ್, ಪ್ರ.ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೨೫) ಬೀದರ ಜಿಲ್ಲಾ ದರ್ಶನ, ಸಂ: ಡಾ. ಸೋಮನಾಥ ಯಾಳವಾರ, ಡಾ.ಪ್ರೇಮಾ ಸಿರ್ಶೆ, ಪು: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ೨೦೦೫.

೨೬) ದೃಷ್ಟಿ ಸೃಷ್ಟಿ, ಲೇ: ಡಾ. ಶಿವಾನಂದ ಎಚ್.ಬಂಟನೂರ, ಪ್ರ: ಅಲಖಾ ಪ್ರಕಾಶನ, ಬೈನೂರು, ಸಿಂದಗಿ, ೨೦೦೯.

೨೭) ಕರ್ನಾಟಕದ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು ಮಹಾದೇವ ಜಗತಾಪ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೨೦೦೪.

೨೮) ಕಲೆ ಮತ್ತು ಮನುಷ್ಯ ಸಂಸ್ಕೃತಿ; ಜ್ಯೋತಿ ಹೊಸೂರ (ಸಂ), ಕಾಲಗತಿ ಗ್ರಂಥಮಾಲೆ, ಬೆಂಗಳೂರು-೧೯೯೦.

೨೯) ಗ್ರಾಮೀಣ ಚಿತ್ರಗಳು, ಎಸ್.ಕೆ.ರಾಮಚಂದ್ರರಾವ, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೯೯.

೩೦) ಕುಂಬಾರಿಕೆ ವೃತ್ತಿ ಪದಕೋಶ, ಬಸವರಾಜ ಕುಂಚುರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.

೩೧) ಪಾಂಚಾಳ ವೃತ್ತಿ ಪದಕೋಶ, ಡಾ.ಡಿ.ಪಾಂಡುರಂಗ ಬಾಬು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨.

೩೨) ದಲಿತ ಚಿಂತನೆ: ಮೊಗಳ್ಳಿ ಗಣೇಶ: ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೩೩) ಕರಕುಶಲ ಕಲೆಗಳು-ಸಂ: ಕರೀಗೌಡ ಬೀಚನಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩೪) ಜಾನಪದ ಶಿಷ್ಟಪದ: ಡಾ.ಪಿ.ಕೆ.ರಾಜೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩೫) ಸಾಂಸ್ಕೃತಿಕ ಸಂವೇದನೆ ಒಂದು ಮುನ್ನೋಟ, ಡಾ. ತಾಳ್ತಜೆ ವಸಂತಕುಮಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೩೬) ಪಾರಂಪರಿಕ ಶಿಲ್ಪ ನೆನ್ನೆ-ನಾಳೆ, ಡಾ. ಜ್ಞಾನಾನಂದ, ಸಾಂಸ್ಕೃತಿಕ ಸಾಹಿತ್ಯ ಪ್ರತಿಷ್ಠಾನ, ೨೦೦೫,

೩೭) ಗಿರಿಜನ ಸಂಸ್ಕೃತಿ, ಸಂ. ಪ್ರೊ. ಕಾಳೇಗೌಡ ನಾಗವಾರ, ಎನ್ ಹುಚ್ಚಪ್ಪ ಮಾಸ್ತರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೨.

೩೮) ಬಿದರಿ ಕಲೆ, ಲೇ: ಡಾ.ರೆಹಮಾನ್ ಪಟೇಲ್, ಪ್ರ: ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಆಂಡ್ ಕಲ್ಚರ್, ಕಲಬುರಗಿ.

ಅನುಬಂಧ –೩

ಸಂಕ್ಷೇಪಗಳು

- ಕ.ಶಿ.ಅ.ಬೆಂ – ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು
- ಕ.ವಿ.ವಿ.ಧಾ – ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
- ಕ.ವಿ.ವಿ.ಹಂ – ಕನ್ನಡ ವಿಶ್ವವಿದ್ಯಾಲಯ ಹಂಪಿ
- ಗು.ವಿ.ಕ – ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ
- ಪ್ರ – ಪ್ರಕಾಶನ, ಪ್ರಕಾಶಕರು,
- ಲೇ – ಲೇಖಕರು
- ಸಂ. – ಸಂಪಾದಕರು
- ಕ.ಲ.ಕ.ಅ. – ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು
- ಜ. ಶಿ – ಜನಪದ ಶಿಲ್ಪಿ
- ಜಾ.ಲೋ – ಜಾನಪದ ಲೋಕ
- ಹೈ.ಕ – ಹೈದ್ರಾಬಾದ ಕರ್ನಾಟಕ
- ಕ.ಗ್ರಂ – ಕನ್ನಡ ಗ್ರಂಥಗಳು
- ಪು.ಸಂ – ಪುಟ ಸಂಖ್ಯೆ

ಅನುಬಂಧ –೪

ಛಾಯಾಚಿತ್ರ ಋಣ

- ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
- ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು
- ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
- ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಕಲಬುರಗಿ
- ಶ್ರೀ ಗುರುನಾಥ ಎಲ್.ಚವ್ಹಾಣ, ಕಲಬುರಗಿ
- ಶ್ರೀ ಮಾನಯ್ಯ ನಾ. ಬಡಿಗೇರ್, ಕಲಬುರಗಿ



